ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮತ್ತೆ ಗರ್ಜಿಸಿದ ಕರುಣ್ ನಾಯರ್

ಸೆಮಿಫೈನಲ್ ಪಂದ್ಯದಲ್ಲೂ 88 ರನ್ ಗಳಿಸಿದ ರಾಜ್ಯದ ಮಾಜಿ ಆಟಗಾರ ಕರುಣ್ ನಾಯರ್ ಹಜಾರೆ ಟ್ರೋಫಿ ಫೈನಲ್‌ನಲ್ಲಿ ಕರ್ನಾಟಕ ವಿರುದ್ಧ ವಿದರ್ಭ ತಂಡವನ್ನು ಮುನ್ನಡೆಸಲಿದ್ದಾರೆ. ಈ ಮೂಲಕ ತಮ್ಮನ್ನು ರಣಜಿಯಿಂದ ಕೈಬಿಟ್ಟ ರಾಜ್ಯ ತಂಡಕ್ಕೆ ತಿರುಗೇಟು ನೀಡಲು ಸಜ್ಜಾಗಿದ್ದಾರೆ.

ಪುಟ ತೆರೆದಂತೆ...

ನಮ್ಮಷ್ಟಕ್ಕೆ ನಾವೇ ಮಾತನಾಡಿಕೊಳ್ಳುವುದು ಹುಚ್ಚೇ?
ಶಿಶಿರ ಕಾಲ
ಶಿಶಿರ್ ಹೆಗಡೆ
ಸಂ.ಪುಟ | 6

ಹವ್ಯಕ ಸಂಸ್ಕೃತಿಯ ಒಳನೋಟಗಳು
ಹವ್ಯಕುಟುಂಬಿ
ಡಾ.ಆರ್.ಜಿ.ಹೆಗಡೆ
ಸಂ.ಗಮ | 7

ಮಾತಂದ್ರೆ ಮಾತು

ಕೃಷಿ ಕ್ಷೇತ್ರಕ್ಕೆ ನೀಡುವ ಯಾವುದೇ ಸಬ್ಸಿಡಿ ನೇರವಾಗಿ ರೈತರಿಗೆ ತಲುಪಬೇಕು. ರೈತರ ಸಂಕಷ್ಟ ತುರ್ತು ರಾಷ್ಟ್ರೀಯ ಗಮನ ಸೆಳೆಯುತ್ತದೆ. ರೈತರ ಕಾಳಜಿಯನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ರೈತರಿಗೆ ಆರ್ಥಿಕ ಭದ್ರತೆ ಬೇಕು. ಕಾಲಮಿತಿಯಲ್ಲಿ ರೈತರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಅಗತ್ಯವಾಗಿದೆ. ಸಕಾರಾತ್ಮಕ ಮನಸ್ಸಿನೊಂದಿಗೆ ಪರಿಹಾರ ಕಂಡುಕೊಳ್ಳಲು ಪ್ರತಿಯೊಬ್ಬರು ಒಗ್ಗಟ್ಟಿನಿಂದ ಶ್ರಮಿಸಬೇಕಾಗಿದೆ.

ಜಗದೀಪ್ ಧನ್‌ಕರ್
ಉಪರಾಷ್ಟ್ರಪತಿ

ದಾರಿದೀಪೋಕ್ತಿ

ಪರಿಸ್ಥಿತಿ ನಿಮ್ಮ ಪರವಾಗಿ ಇಲ್ಲದ ಸಮಯದಲ್ಲೂ ಮನಸ್ಸಿನ ಶಾಂತಿ ಮತ್ತು ಸಹನೆಯನ್ನು ಕಳೆದುಕೊಳ್ಳದೇ ಸಮಚಿತ್ತದಿಂದ ವರ್ತಿಸುವುದು ಅತ್ಯಂತ ಬಲಿಷ್ಠ ವ್ಯಕ್ತಿಯ ದೊಡ್ಡ ಸಾಮರ್ಥ್ಯ. ಈ ಗುಣವನ್ನು ಬೆಳೆಸಿಕೊಂಡರೆ, ಎಂಥ ಸನ್ನಿವೇಶವನ್ನಾದರೂ ಎದುರಿಸಬಹುದು.

ವಕ್ರತುಂಡೋಕ್ತಿ

ಯಾವುದೇ ಕೆಲಸವನ್ನಾದರೂ ಕೊನೇಕ್ಷಣದಲ್ಲಿ ಮಾಡುವ ಒಂದು ಪ್ರಯೋಜನವೆಂದರೆ ಅದನ್ನು ಅತ್ಯಂತ ಶೀಘ್ರವಾಗಿ ಮಾಡಿ ಮುಗಿಸಬಹುದು.

ಹೈಕಮಾಂಡ್ ವಿರುದ್ಧವೇ ಸಡ್ಡು ಹೊಡೆದ ರಾಜಣ್ಣ, ಜಾರಕಿಹೊಳಿ
ಕೆಪಿಸಿಸಿ ಅಧ್ಯಕ್ಷತೆ ಬೇಕಿದ್ದರೆ ಹೈಕಮಾಂಡ್‌ಗೆ ದೂರು ನೀಡಲಿ: ಡಿಕೆಶಿ

ಕೈ ಕದನಕ್ಕಿಲ್ಲ ವಿರಾಮ

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ಭುಗಿಲೆದ್ದಿರುವ ಬಂಡಾಯಕ್ಕೆ ಕೊನೆಯಿಲ್ಲವಾಗಿದೆ. ಅಧಿಕಾರ ಹಸ್ತಾಂತರ, ಅಧ್ಯಕ್ಷರ ಬದಲಾವಣೆಗೆ ಸಂಬಂಧಿಸಿದಂತೆ ಯಾರೂ ಮಾತನಾಡದಂತೆ ಸರಣಿ ಎಚ್ಚರಿಕೆಯ ನಡುವೆಯೂ ಕೆಲ ಸಚಿವರು ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಪಟ್ಟುಹಿಡಿದಿರುವುದು ವಿವಾದವನ್ನು ಮತ್ತಷ್ಟು ಜಟಿಲಗೊಳಿಸಿದೆ.

ಕಳೆದ 15 ದಿನಗಳಿಂದ ನಡೆಯುತ್ತಿರುವ ಪ್ರಸಹನಕ್ಕೆ ಸಂಬಂಧಿಸಿದಂತೆ ಮೊದಲ ಬಾರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ 'ಕೆಪಿಸಿಸಿ ಅಧ್ಯಕ್ಷ ಸ್ಥಾನ ಅಂಗಡಿ ಅಥವಾ ಮಾಧ್ಯಮಗಳ ಮುಂದೆ ಸಿಗುವುದಿಲ್ಲ' ಎಂದು ಅಸಮಾಧಾನ ಹೊರಹಾಕಿದ್ದಾರೆ. ಆದರೆ ಇನ್ನೊಂದೆಡೆ ಗೃಹ ಸಚಿವ ಪರಮೇಶ್ವರ ಸಚಿವ ಸ್ಥಾನ ಅಥವಾ ಕೆಪಿಸಿಸಿ ಅಧ್ಯಕ್ಷ ಸ್ಥಾನ ಎರಡನ್ನೂ ನಿಭಾಯಿಸುವುದು ಪ್ರಯಾಸದ ಕೆಲಸ. ಆದ್ದರಿಂದ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ ಎನ್ನುವ ಪರೋಕ್ಷವಾಗಿ ತಿರುಗೇಟು ಕೊಟ್ಟಿದ್ದಾರೆ. ಈ ನಡುವೆ ಸತೀಶ್ ಜಾರಕಿಹೊಳಿ ಅವರು ತಮ್ಮ ವಾದವನ್ನು ಮುಂದುವರಿಸಿದ್ದಾರೆ. ಈ ಎಲ್ಲ ಗೊಂದಲಗಳ ನಿವಾರಣೆಗೆ ಕಾಂಗ್ರೆಸ್ ಮತ್ತೊಂದು 'ಸಂಧಾನ' ಸಭೆಗೆ ವೇದಿಕೆ ಸಿದ್ಧಪಡಿಸಿ ದ್ದಾರೆ. ಗಾಂಧಿ ಭಾರತ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪೂರ್ವಭಾವಿ ಸಭೆ ನಡೆಸಲು ಬೆಳಗಾವಿಗೆ ಆಗಮಿಸುತ್ತಿರುವ ರಣದೀಪ್ ಸಿಂಗ್ ಸುರ್ಜೇವಾಲ, ಡಿ.ಕೆ.ಶಿವಕುಮಾರ್ ಹಾಗೂ ಸತೀಶ್ ಜಾರಕಿಹೊಳಿ ಅವರನ್ನು ಮುಖಾಮುಖಿ ಮಾಡಿಸಿ, ಮತ್ತೊಂದು ಸುತ್ತಿನ ಸಂಧಾನ ಸಭೆ ನಡೆಸಲು ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಟ್ಟು ಸಡಿಲಿಸದಿರಲು ನಾಯಕರ ತೀರ್ಮಾನ: ಕೆಪಿಸಿಸಿ ಅಧ್ಯಕ್ಷರನ್ನು ಬದಲಾಯಿಸಬೇಕೆಂಬ ಬೇಡಿಕೆಯನ್ನು ಈಗಾಗಲೇ ಸಿದ್ದರಾಮಯ್ಯ ಆಪ್ತ ಬಣ ಹಲವು ಸಮಯದಲ್ಲಿ ಪ್ರಸ್ತಾಪಿಸಿದೆ. ಆದರೆ ಪದೇಪದೆ ಈ ರೀತಿಯ ಹೇಳಿಕೆಯಿಂದ ಪಕ್ಷಕ್ಕಾಗುತ್ತಿರುವ ಡ್ಯಾಮೇಜ್ ಕಂಟ್ರೋಲ್ ಮಾಡಲು, ಹೈಕಮಾಂಡ್ ಸೂಚನೆ ನೀಡಿದ್ದರೂ 'ಮೌನ'ವಾಗದಿರಲು ತೀರ್ಮಾನಿಸಿದ್ದಾರೆ. ಲೋಕಸಭಾ ಚುನಾವಣೆಯ ಬಳಿಕ ಅಧ್ಯಕ್ಷ ಸ್ಥಾನ ಬದಲಾವಣೆಯ ಪ್ರಸ್ತಾಪವನ್ನು ಹೈಕಮಾಂಡ್ ಮಾಡಿರುವುದನ್ನೇ ಬ್ರಹ್ಮಾಸ್ತ್ರದ ರೀತಿಯಲ್ಲಿ ಬಳಸಿಕೊಳ್ಳಲು ಈ ಎಲ್ಲ ನಾಯಕರು ಸಜ್ಜಾಗಿದ್ದಾರೆ ಎನ್ನಲಾಗಿದೆ.

ಭಂಡಾರಿಗೆ ವರದಿ ಕೇಳಿದ ಎಐಸಿಸಿ

ಪಕ್ಷದ ಹೈಕಮಾಂಡ್ ಸೂಚನೆಯ ಬಳಿಕವೂ ಹೇಳಿಕೆ ನೀಡುತ್ತಿರುವ ಸಚಿವರ ಬಗ್ಗೆ ವರದಿ ನೀಡುವಂತೆ ಪಕ್ಷದ ಹೈಕಮಾಂಡ್ ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ್ ಭಂಡಾರಿಗೆ ಸೂಚನೆ ನೀಡಿದೆ. ಈ ಬಗ್ಗೆ ದೆಹಲಿಯಲ್ಲಿ ಮಾತನಾಡಿದ ಭಂಡಾರಿ, ಈಗಾಗಲೇ ಎಐಸಿಸಿ ಕರ್ನಾಟಕ ಉಸ್ತುವಾರಿ ರಣದೀಪ್ ಸುರ್ಜೇವಾಲ ಅವರು, ಪಕ್ಷ ತಾಯಿ ಇದ್ದಂತೆ, ಸರಕಾರ ಮಗುವಿದ್ದಂತೆ. ಯಾರೂ ಸಹ ಪಕ್ಷದ ಘನತೆಗೆ ಚ್ಯುತಿ ತರಬಾರದು ಎಂಬ ಸಂದೇಶ ನೀಡಿದ್ದಾರೆ. ಇದರ ಮಧ್ಯೆಯೂ ಕೆಲವು ನಾಯಕರು ಹೇಳಿಕೆ ನೀಡುತ್ತಿರುವುದು ಸರಿಯಲ್ಲ. ಕೆಲವು ಸಚಿವರು ಪದೇ ಪದೆ ಮಾತನಾಡುತ್ತಿದ್ದಾರೆ. ಇದು ಸರಿಯಲ್ಲ. ಆದರೆ, ಸಚಿವ ಆರ್. ಬಿ. ತಿಮ್ಮಾಪುರ, ಸತೀಶ್ ಜಾರಕಿಹೊಳಿ ಹಾಗೂ ಎಚ್.ಸಿ. ಮಹದೇವಪ್ಪ ಅವರು ಪದೇ ಪದೆ ಮಾತನಾಡುತ್ತಿದ್ದು, ಹೈಕಮಾಂಡ್ ಗಂಭೀರವಾಗಿ ಎಲ್ಲವನ್ನೂ ಗಮನಿಸುತ್ತಿದೆ. ಎಲ್ಲ ಸಚಿವರ ರಿಪೋರ್ಟ್ ಕಾರ್ಡ್‌ಗಳನ್ನು ಹೈಕಮಾಂಡ್ ಸೂಕ್ಷ್ಮವಾಗಿ ಗಮನಿಸುತ್ತಿದೆ. ನಾಯಕತ್ವದ ಬಗ್ಗೆ ಮಾತನಾಡಬಾರದು ಎಂದು ಹೈಕಮಾಂಡ್ ಸೂಚನೆ ನೀಡಿದ ಮೇಲೆಯೂ ಪಕ್ಷದ ಆದೇಶವನ್ನು ಉಲ್ಲಂಘಿಸುವವರಿಗೆ ಮುಂದಿನ ದಿನಗಳಲ್ಲಿ ಪರಿಣಾಮ ಬೀರಲಿದೆ ಪಕ್ಷದ ವರಿಷ್ಠರು ಸೂಚಿಸಿದ್ದಾರೆ ಎಂದು ಎಚ್ಚರಿಸಿದ್ದಾರೆ. ಆದರೆ ಈ ಎಚ್ಚರಿಕೆಗೆ ಬಹುತೇಕ ಸಚಿವರು ಡೋಂಟ್‌ಕೇರ್ ಎಂದಿದ್ದಾರೆ.

ಅಧ್ಯಕ್ಷ ಸ್ಥಾನದೊಂದಿಗೆ ಎರಡು ಪ್ರಮುಖ ಖಾತೆಗಳಿರುವುದರಿಂದ ಬದಲಾಯಿಸಿ, ಬೇರೆಯವರನ್ನು ಮಾಡಬೇಕೆಂದು ಕೇಳುತ್ತಾರೆ. ಈ ಹಿಂದೆ ನಾನು ಕೆಪಿಸಿಸಿ ಅಧ್ಯಕ್ಷನಾಗಿದ್ದ ಸಮಯದಲ್ಲಿಯೂ, ಇದೇ ಪರಿಸ್ಥಿತಿ ಇತ್ತು. ನಾನು ಸಚಿವ ಸ್ಥಾನದ ಬದಲಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ಆಯ್ಕೆ ಮಾಡಿಕೊಂಡಿದ್ದೆ.
– **ಡಾ.ಜಿ. ಪರಮೇಶ್ವರ,** ಗೃಹ ಸಚಿವ

ಕೆಪಿಸಿಸಿ ಅಧ್ಯಕ್ಷ ಸ್ಥಾನವಾಗಲಿ, ಪಕ್ಷದ ಯಾವುದೇ ಹುದ್ದೆಯಾಗಲಿ ಯಾವುದೋ ಅಂಗಡಿ ಅಥವಾ ಮಾಧ್ಯಮಗಳ ಮುಂದೆ ಮಾತಾಡಿದರೆ ಸಿಗುವುದಿಲ್ಲ. ನಾವು ಮಾಡುವ ಕೆಲಸ, ಶ್ರಮವನ್ನು ಪಕ್ಷದ ನಾಯಕರು ಗುರುತಿಸಿ ಅದಕ್ಕೆ ಸೂಕ್ತವಾಗಿ ಹುದ್ದೆ ನೀಡುತ್ತಾರೆ. ಏನಾದರೂ ಸಮಸ್ಯೆಯಿದ್ದರೆ ಅದನ್ನು ಹೈಕಮಾಂಡ್ ಮುಂದೆ ಹೇಳಲಿ.
– **ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಲೋಕಸಭಾ ಚುನಾವಣೆ ಬಳಿಕ ಅಧ್ಯಕ್ಷರನ್ನು ಬದಲಾಯಿಸುವುದಾಗಿ ಹೈಕಮಾಂಡ್ ಹೇಳಿತ್ತು. ಆದ್ದರಿಂದ ಈ ಗೊಂದಲ ಸೃಷ್ಟಿಯಾಗಿದೆ. ಲೋಕಸಭಾ ಚುನಾವಣೆ ನಡೆದು 6 ತಿಂಗಳು ಕಳೆದಿದೆ. ವಿಧಾನಸಭಾ ಚುನಾವಣೆವರೆಗೂ ಡಿಕೆ ಶಿವಕುಮಾರ್ ಅವರೇ, ಪೂರ್ಣ ಪ್ರಮಾಣದ ಅಧ್ಯಕ್ಷರಾಗಿ ಮುಂದುವರಿಯಲಿ. ಆದರೆ, ಹೈಕಮಾಂಡ್ ಈ ಗೊಂದಲವನ್ನು ನಿವಾರಿಸಬೇಕು.
– **ಕೆ.ಎನ್. ರಾಜಣ್ಣ,** ಸಹಕಾರ ಸಚಿವ

ನನಗೆ ನೋಟಿಸ್ ಕೊಟ್ಟರೆ ಅದರಿಂದ ಅನಾಹುತವೇನೂ ಆಗುವು ದಿಲ್ಲ, ನೋಟಿಸ್ ಕೊಡುವ ಅಧಿಕಾರ ಅವರಿಗಿದೆ, ನಾನು ಅದಕ್ಕೆ ತಕ್ಕ ಉತ್ತರ ನೀಡುತ್ತೇನೆ. ನಾನು ಅರ್ಧಗಂಟೆ ಮಾಧ್ಯಮದ ವರೊಂದಿಗೆ ಮಾತನಾಡಿದ ವಿಡಿಯೊ ಸಾಕ್ಷ್ಯ ಕೂಡ ನನ್ನ ಬಳಿ ಇದೆ. ಅದನ್ನೇ ಆಧಾರವಾಗಿಟ್ಟುಕೊಂಡು ಉತ್ತರ ನೀಡುವೆ.
– **ಸತೀಶ್ ಜಾರಕಿಹೊಳಿ,** ಲೋಕೋಪಯೋಗಿ ಸಚಿವ

ಮಧ್ಯರಾತ್ರಿ ಬಾಲಿವುಡ್ ನಟನ ಮನೆಗೆ ನುಗ್ಗಿದ ಆಗಂತುಕ, 6 ಬಾರಿ ಚಾಕು ಇರಿತ , ಶಸ್ತ್ರಚಿಕಿತ್ಸೆ ಯಶಸ್ವಿ, ಪ್ರಾಣಾಪಾಯದಿಂದ ಪಾರು

ಸೈಫ್ ಅಲಿ ಮೇಲೆ ದಾಳಿ, ತೀವ್ರ ಗಾಯ



ಮುಂಬೈ: ಮಧ್ಯ ರಾತ್ರಿ ತಮ್ಮ ಮನೆಗೆ ನುಗ್ಗಿದ ಆಗಂತುಕನೊಬ್ಬನ ಚಾಕು ದಾಳಿಗೆ ಗುರಿ ಯಾಗಿರುವ ಬಾಲಿವುಡ್ ನಟ ಸೈಫ್ ಅಲಿ ಖಾನ್ ತೀವ್ರ ಗಾಯಗೊಂಡು ಮುಂಬೈನ ಲೀಲಾವತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮಧ್ಯರಾತ್ರಿ 2.30 ರ ಸುಮಾರಿಗೆ ಸೈಫ್ ಅಲಿ ಖಾನ್ ಮನೆಗೆ ನುಗ್ಗಿದ ಆಗಂತುಕ ಸುಮಾರು ಆರು ಬಾರಿ ಸೈಫ್ ಅಲಿ ಖಾನ್ ಅವರಿಗೆ ಇರಿದಿದ್ದಾನೆ. ಕುತ್ತಿಗೆ, ಬೆನ್ನು, ಎಡಗೈ, ಬಲಗೈ ಸೇರಿದಂತೆ ದೇಹದ ಹಲವೆಡೆ ಗಂಭೀರ ಗಾಯಗೊಂಡಿರುವ ಸೈಫ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ಸೈಫ್ ಅವರ ಬೆನ್ನುಹುರಿಗೆ ಹೊಕ್ಕಿದ್ದ ನೀಡಲ್ ಅನ್ನು ಶಸ್ತ್ರಚಿಕಿತ್ಸೆ ಮಾಡಿ ಹೊರತೆಗೆಯಲಾಗಿದೆ. ಸ್ಪೈನ್ ಫ್ಲ್ಯೂಯಿಡ್ ಅನ್ನು ನಿಲ್ಲಿಸಲು ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಹಾಗೇ ಅವರ ಎಡಗೈ ಮತ್ತು ಬಲಭಾಗದ ಕುತ್ತಿಗೆಯಲ್ಲಿ ಆಳವಾದ ಗಾಯಗಳಾಗಿವೆ. ಪ್ಲಾಸ್ಟಿಕ್ ಸರ್ಜರಿ ತಜ್ಞರ ಸಹಕಾರದೊಂದಿಗೆ ಈ ಭಾಗಗಳಿಗೂ ಶಸ್ತ್ರಚಿಕಿತ್ಸೆಗೆ ಮಾಡಲಾಗಿದೆ. ಈಗ ಅವರ ಆರೋಗ್ಯವು ಸುಸ್ಥಿತಿಯಲ್ಲಿದ್ದು, ಅಪಾಯದಿಂದ ಪಾರಾಗಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

→ 4

ಆಗಿದ್ದೇನು ?

ಕರೀನಾ ಕಪೂರ್ ಅವರ ತಂಡದ ಸದಸ್ಯರು ಹೇಳಿರುವ ಪ್ರಕಾರ ಕಳೆದ ರಾತ್ರಿ ಸೈಫ್ ಅಲಿ ಖಾನ್ ಮತ್ತು ಕರೀನಾ ನಿವಾಸದಲ್ಲಿ ಕಳ್ಳತನ ಯತ್ನ ನಡೆದಿತ್ತು. ಈ ಸಂದರ್ಭದಲ್ಲಿ ಪ್ರತಿರೋಧ ಒಡ್ಡಿದ ಸೈಫ್ ಅವರ ಮೇಲೆ ಕಳ್ಳ ದಾಳಿ ನಡೆಸಿದ್ದಾನೆ. ಬುಧವಾರ ಕರೀನಾ ಸಹೋದರಿ ಕರಿಷ್ಮಾ ಕಪೂರ್ ಮತ್ತು ಆಪ್ತರಾದ ಸೋನಮ್ ಕಪೂರ್ ಮತ್ತು ರಿಯಾ ಕಪೂರ್ ಜತೆ ಡಿನ್ನರ್ ಡೇಟ್ ಮಾಡಿದ್ದರು. ಈ ಬಗ್ಗೆ ನಟಿ ಗರ್ಲ್ಸ್ ನೈಟ್ ಇನ್ ಎಂಬ ಶೀರ್ಷಿಕೆಯಡಿ ಇನ್ಸ್ಟಾಗ್ರಾಂನಲ್ಲಿ ಮಾಹಿತಿ ಹಂಚಿಕೊಂಡಿದ್ದರು. ಪಾರ್ಟಿಯಿಂದ ಹಿಂತಿರುಗಿದ ಕರೀನಾ ಕಳ್ಳನನ್ನು ನೋಡಿ ಕಿರುಚಿದ್ದಾರೆ. ಈ ವೇಳೆ ಓಡಿ ಬಂದ ಕೆಲಸದಾಕೆಯ ಮೇಲೆ ದಾಳಿ ಮಾಡಲು ಮುಂದಾಗುತ್ತಿದ್ದಂತೆ ಕರೀನಾ ಮಗ ತೈಮೂರ್‌ನನ್ನು ಕರೆದುಕೊಂಡು ರೂಮ್‌ಗೆ ಓಡಿದ್ದರು. ಕಿರುಚಾಟ ಕೇಳಿ ಕೆಲಸದಾಕೆ ರಕ್ಷಣೆಗೆ ಮುಂದಾದ ಸೈಫ್ ಮೇಲೆ ಆತ ಚಾಕುವಿನಿಂದ ಹಲ್ಲೆ ನಡೆಸಿದ್ದಾನೆ.

8ನೇ ವೇತನ ಆಯೋಗ ರಚನೆಗೆ ಕೇಂದ್ರ ಸಂಪುಟ ನಿರ್ಧಾರ

ಕೇಂದ್ರ ನೌಕರರಿಗೆ ಸಂಕ್ರಾಂತಿ ಗಿಫ್ಟ್

ದೆಹಲಿ: ಸಂಕ್ರಾಂತಿ ಹಬ್ಬದ ಬೆನ್ನಿಗೇ ಕೇಂದ್ರ ಸರಕಾರಿ ನೌಕರರಿಗೆ ಸಿಹಿ ಸುದ್ದಿ ದೊರಕಿದ್ದು, ನೌಕರರ ವೇತನ ಮತ್ತು ಪಿಂಚಣಿದಾರರ ಭತ್ಯೆಗಳನ್ನು ಪರಿಷ್ಕರಿಸಲು 8ನೇ ವೇತನ ಆಯೋಗ ರಚಿಸಲು ಕೇಂದ್ರ ಸಚಿವ ಸಂಪುಟ ಗುರುವಾರ ಅನುಮೋದನೆ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ 8ನೇ ವೇತನ ಆಯೋಗವನ್ನು ಸ್ಥಾಪಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಗುರುವಾರ ತಿಳಿಸಿದ್ದಾರೆ.

ಆಯೋಗದ ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರನ್ನು ಶೀಘ್ರದಲ್ಲೇ ನೇಮಕ ಮಾಡಲಾಗುವುದು ಎಂದು ಸಚಿವರು ತಿಳಿಸಿದರು. 2025ರ ಬಜೆಟ್ ಘೋಷಣೆಗಳಿಗೆ ಮುನ್ನವೇ ಕೇಂದ್ರ ಸರಕಾರ ಈ ನಿರ್ಧಾರ ಪ್ರಕಟಿಸಿದೆ. 7 ನೇ ವೇತನ ಆಯೋಗವನ್ನು 2016 ರಲ್ಲಿ ಸ್ಥಾಪಿಸಲಾಗಿತ್ತು. ಇದರ ಅವಧಿ 2026 ರಲ್ಲಿ ಕೊನೆಗೊಳ್ಳಲಿದೆ. 7 ನೇ ವೇತನ ಆಯೋಗದ ಅವಧಿ ಮುಗಿಯುವ ಮುನ್ನ, ಕೇಂದ್ರ ಸರ್ಕಾರಿ ನೌಕರರ ವೇತನವನ್ನು ಪರಿಷ್ಕರಿಸಲು 8 ನೇ ವೇತನ ಆಯೋಗವನ್ನು ಸ್ಥಾಪಿಸುವ ನಿರ್ಧಾರವನ್ನು ತೆಗೆದುಕೊಂಡಿದೆ. ಸಂಪ್ರದಾಯದಂತೆ 10 ವರ್ಷಗಳಿಗೊಮ್ಮೆ ಅಂದರೆ 2026ರ ಜನವರಿ 1 ರಿಂದ 8ನೇ ವೇತನ ಆಯೋಗದ ವರದಿ ಜಾರಿಗೆ ಬರಬೇಕು.

ಇಬ್ಬರ ಗುಂಡಿಕ್ಕಿ ಕೊಂದು ದರೋಡೆ

ಬೀದರ್ ಡಿಸಿ ಕಚೇರಿ ಎದುರು ಹಾಡಹಗಲೇ ಎಟಿಎಂ ಸಿಬ್ಬಂದಿಗೆ ಗುಂಡು, 93 ಲಕ್ಷ ದರೋಡೆ
ಬೈಕಿನಲ್ಲಿ ಹಣದ ಬಾಕ್ಸ್ ಒಯ್ದ ಹಂತಕರು । ಹೈದರಾಬಾದ್‌ನಲ್ಲಿ ಒಬ್ಬ ಸೆರೆ, ಮತ್ತೊಬ್ಬ ಪರಾರಿ

ಬೀದರ್: ನಗರದ ಜಿಲ್ಲಾ ನ್ಯಾಯಾಲಯ ಹಾಗೂ ಜಿಲ್ಲಾಧಿಕಾರಿ ಕಚೇರಿಗೆ ಹೊಂದಿಕೊಂಡಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್.ಬಿ.ಐ) ಸೆಕ್ಯೂರಿಟಿ ಏಜೆನ್ಸಿ ಸಿಬ್ಬಂದಿ ಮೇಲೆ ಗುರುವಾರ ಹಾಡಹಗಲೇ ಸಿನಿಮೀಯ ಶೈಲಿಯಲ್ಲಿ ದಾಳಿ ನಡೆಸಿ ಇಬ್ಬರನ್ನು ಹತ್ಯೆಗೈದು 93 ಲಕ್ಷ ರು.ಗಳ ನಗದು ಇದ್ದ ಬಾಕ್ಸ್ ಅಪಹರಿಸಿ ಪರಾರಿಯಾಗಿದ್ದ ಇಬ್ಬರು ದರೋಡೆಕೋರರ ಪೈಕಿ ಒಬ್ಬನನ್ನು ಪೊಲೀಸರು ಹೈದರಾಬಾದ್ ನಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ದುಷ್ಕರ್ಮಿಗಳ ಗುಂಡೇಟಿಗೆ ಬಲಿಯಾದ ಸಿಬ್ಬಂದಿಯನ್ನು ಗಿರೀಶ ವೆಂಕಟೇಶ್ (49) ಮತ್ತು ಶಿವಕುಮಾರ್(26) ಎಂದು ಗುರುತಿಸಲಾಗಿದೆ.

ಹೇಗೆ ನಡೆಯಿತು ದಾಳಿ.?

ಎಸ್‌ಬಿಐ ಏಜೆನ್ಸಿ ಸಿಬ್ಬಂದಿ ಬೆಳಗ್ಗೆ 10.55ರಿಂದ 11 ಗಂಟೆ ಸುಮಾರಿಗೆ ತಮ್ಮ ವಾಹನದಲ್ಲಿ ಹಣದ ಸಮೇತ ಬ್ಯಾಂಕಿಗೆ ಬಂದಿದ್ದರು. ಈ ವೇಳೆ ಬೈಕಿನಲ್ಲಿ ಬಂದ ಅಪರಿಚಿತರು ಹಣ ಕಸಿದುಕೊಳ್ಳಲು ಯತ್ನಿಸಿದ್ದಾರೆ. ಸಿಬ್ಬಂದಿ ಹಣ ಕೊಡದಿದ್ದಾಗ ಕಾರದ ಪುಡಿ ಎರಚಿ, ಬಳಿಕ ಗುಂಡಿನ ದಾಳಿ ನಡೆಸಿ, 93 ಲಕ್ಷ ರು.ಗಳೊಂದಿಗೆ ಸ್ಥಳದಿಂದ ಪರಾರಿಯಾದರು. ಈ ದಾಳಿಯಲ್ಲಿ ಗಿರೀಶ್ ವೆಂಕಟೇಶ್ ಸ್ಥಳದಲ್ಲೇ ಮೃತಪಟ್ಟರೆ, ಗಂಭೀರವಾಗಿ ಗಾಯಗೊಂಡ ಶಿವಕುಮಾರ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಬ್ಯಾಂಕಿನ ಕಚೇರಿ ಎದುರು ಗಿರೀಶ್ ದೇಹ ರಕ್ತದ ಮಡುವಿನಲ್ಲಿ ಬಿದ್ದಿತ್ತು. ನ್ಯಾಯಾಲಯ ಹಾಗೂ ಜಿಲ್ಲಾಧಿಕಾರಿ ಕಚೇರಿ ಎದುರು ಸೇರಿದ್ದ ನೂರಾರು ಜನ ಜಮಾಯಿಸಿದರು. ಸ್ಥಳಕ್ಕೆ ಧಾವಿಸಿದ ಕುಟುಂಬಸ್ಥರ ರೋದನ ಮುಗಿಲು ಮುಟ್ಟಿತ್ತು. ಬೀದರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಸೇರಿದಂತೆ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದರು.

ಪರಾರಿ ವಿಡಿಯೋ ವೈರಲ್

ದುಷ್ಕರ್ಮಿಗಳು ಎಟಿಎಂ ಸಿಬ್ಬಂದಿ ಮೇಲೆ ಗುಂಡು ಹಾರಿಸಿ ಹಣದ ಪೆಟ್ಟಿಗೆಯನ್ನು ರಾಜಾರೋಷವಾಗಿ ಬೈಕ್ ಮೇಲೆ ಇಟ್ಟುಕೊಂಡು ಪರಾರಿಯಾದ ವಿಡಿಯೋ ವೈರಲ್ ಆಗಿದೆ. ಕಪ್ಪು ಬಣ್ಣದ ಜಾಕೆಟ್ ಹಾಗೂ ಹೆಲ್ಮೆಟ್ ಧರಿಸಿದ ಕಳ್ಳರು ಬೈಕ್ ಮೇಲೆ ತೆರಳಿದ ದೃಶ್ಯ ವೈರಲ್ ಆಗಿದೆ.

ಮಿಂಚಿನ ಕಾರ್ಯಾಚರಣೆ

ಈ ಕೃತ್ಯದ ಬೆನ್ನಲ್ಲೇ ಬೀದರ್ ಪೊಲೀಸರ 9 ತಂಡಗಳು ಹೈದರಾಬಾದ್ ಹಾಗೂ ಇತರ ಸ್ಥಳಗಳಿಗೆ ಧಾವಿಸಿ ದರೋಡೆಕೋರರಿಗಾಗಿ ಶೋಧನೆ ನಡೆಸಿತು. ಹೈದರಾಬಾದ್‌ನ ಖಾಸಗಿ ಟ್ರಾವೆಲ್ಸ್ ಮೂಲಕ ಛತ್ತೀಸ್ ಗಢ ರಾಜಧಾನಿ ರಾಯಪುರಕ್ಕೆ ಟಿಕೆಟ್ ಬುಕ್ ಮಾಡಿದ್ದ ದುಷ್ಕರ್ಮಿಗಳ ಬಳಿಯಿದ್ದ ಚೀಲದ ಬಗ್ಗೆ ಮ್ಯಾನೇಜರ್ ಸಂಶಯ ವ್ಯಕ್ತಪಡಿಸಿದ್ದರು. ಇದೇ ವೇಳೆಗೆ ಪೊಲೀಸರ ತಂಡ ಅಲ್ಲಿಗೆ ತಲುಪಿದಾಗ ಗುಂಡಿನ ಚಕಮಕಿ ನಡೆಯಿತು. ಒಬ್ಬ ಸೆರೆಸಿಕ್ಕಿದರೆ ಮತ್ತೊಬ್ಬ ಪರಾರಿಯಾಗಿದ್ದಾನೆ.

ಇಸ್ರೋ ಮತ್ತೊಂದು ಐತಿಹಾಸಿಕ ಸಾಧನೆ, ಡಾಕಿಂಗ್ ಸಕ್ಸಸ್

ಇಸ್ರೋ ಸ್ಪಾಡೆಕ್ಸ್ ಯೋಜನೆ ಯಶಸ್ವಿ

ಬೆಂಗಳೂರು: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ತನ್ನ ಸ್ಪಾಡೆಕ್ಸ್ ಮಿಷನ್ ಅಡಿಯಲ್ಲಿ ದೇಶದ ಮೊದಲ ಉಪಗ್ರಹ ಡಾಕಿಂಗ್ ಪ್ರಯೋಗವನ್ನು ಗುರುವಾರ ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಇದರೊಂದಿಗೆ ಬಾಹ್ಯಾಕಾಶ ನಿಲ್ದಾಣ ನಿರ್ಮಿಸುವತ್ತ ದೇಶ ದಿಟ್ಟ ಹೆಜ್ಜೆ ಇಟ್ಟಿದೆ.

ಇದರೊಂದಿಗೆ ಅಮೆರಿಕ, ರಷ್ಯಾ ಮತ್ತು ಚೀನಾ ನಂತರ ಈ ಸಾಧನೆ ಮಾಡಿದ ನಾಲ್ಕನೇ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗಿದೆ. ಇದು ನಿಜಕ್ಕೂ ಭಾರತಕ್ಕೆ ಹೆಮ್ಮೆಯ ಕ್ಷಣ. ಈ ಐತಿಹಾಸಿಕ ಸಾಧನೆಗಾಗಿ ಇಸ್ರೋವನ್ನು ಪ್ರಧಾನಿ ಮೋದಿ ಅಭಿನಂದಿಸಿದ್ದಾರೆ. ಕಳೆದ ವರ್ಷಾಂತ್ಯ ಡಿಸೆಂಬರ್ 30ರಂದು ಪಿಎಸ್‌ಎಲ್ ವಿ-ಸಿ 60 ರಾಕೆಟ್‌ನಲ್ಲಿ ಉಡಾವಣೆಯಾದ ಎರಡು ಉಪಗ್ರಹಗಳಾದ ಎಸ್‌ಡಿಎಕ್ಸ್ 01 ಮತ್ತು ಎಸ್‌ಡಿಎಕ್ಸ್ 02 ಡಾಕಿಂಗ್‌ನಲ್ಲಿ ಒಳಗೊಂಡಿತ್ತು. ಸತತ ಪ್ರಯತ್ನಗಳ ನಂತರ ಉಪಗ್ರಹಗಳನ್ನು ಯಶಸ್ವಿಯಾಗಿ ಡಾಕಿಂಗ್ ಮಾಡಲಾಯಿತು. ಬಾಹ್ಯಾಕಾಶ ನೌಕೆ ಡಾಕಿಂಗ್ ಯಶಸ್ವಿಯಾಗಿ ಪೂರ್ಣ ಗೊಂಡಿದೆ. ಇದು ಒಂದು ಐತಿಹಾಸಿಕ ಕ್ಷಣ ಎಂದು ಇಸ್ರೊ ಪ್ರಕಟಿಸಿದೆ.

ವಿವರಪುಟ → 12

ಚಾಮುಂಡಿ ದರ್ಶನ ಪಡೆದ ದರ್ಶನ್

ಮೈಸೂರು: ನಟ ದರ್ಶನ್ ಗುರುವಾರ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದರು.

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಸಿಲುಕಿ ಜೈಲುಸೇರಿದ ಬಳಿಕ ಮೈಸೂರಿನತ್ತ ಸುಳಿದಿರಲಿಲ್ಲ. ಇತ್ತೀಚೆಗಷ್ಟೇ ಜಾಮೀನು ದೊರೆತ ಹಿನ್ನೆಲೆಯಲ್ಲಿ ಬೆಟ್ಟಕ್ಕೆ ಪತ್ನಿ ವಿಜಯಲಕ್ಷ್ಮಿ ಹಾಗೂ ಸ್ನೇಹಿತರ ಸಮೇತ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಕಳೆದ ಕೆಲ ದಿನಗಳಿಂದ ಟೆಂಪಲ್ ರನ್ ಮಾಡುತ್ತಿರುವ ನಟ ದರ್ಶನ್ ಆಗಮನದ ಮಾಹಿತಿ ಸಿಗುತ್ತಿದ್ದಂತೆ ನಿತ್ಯ ಭಕ್ತರ ಹೊರತಾಗಿ ಅಭಿಮಾನಿ ಬಳಗ ಕೂಡ ದೇವಸ್ಥಾನದ ಆವರಣದಲ್ಲಿ ಜಮಾಯಿಸಿತ್ತು.

ಫನ್‌ತರಂಗ
- ರಘುಪತಿ ಶೃಂಗೇರಿ -

ಎರಡಕ್ಕಿಂತ ಹೆಚ್ಚು ಮಕ್ಕಳಿದ್ದರೆ ಮಾತ್ರಾ ಸ್ಥಳೀಯ ಚುನಾವಣೆಗೆ ಸ್ಪರ್ಧೆ ಮಾಡಲು ಅವಕಾಶ ನೀಡಲಾಗುವುದು – ಆಂಧ್ರ ಸಿಎಂ



ಮುಂದಿನ ಸಂಪುಟದಲ್ಲಿ ಜಾತಿಗಣತಿ ವರದಿ ಮಂಡನೆ: ಪಾಟೀಲ್

ಬೆಂಗಳೂರು: ಬಹುನಿರೀಕ್ಷಿತ ಜಾತಿಗಣತಿಯನ್ನು ಮುಂದಿನ ಸಚಿವ ಸಂಪುಟ ಸಭೆ ಯಲ್ಲಿ, ಸಂಪುಟದ ಮುಂದಿಡಲು ತೀರ್ಮಾನಿ ಸಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಸ್ಪಷ್ಟಪಡಿಸಿದರು.

ಕಾಂತರಾಜು ಸಮಿತಿ 2015ರಲ್ಲಿ ಮಂಡಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಬಹಿರಂಗಪಡಿಸಬೇಕು ಎನ್ನುವ ಆಗ್ರಹ ಹಲವು ದಿನಗಳಿಂದ ಇದೆ. ಆದರೆ ಜಾತಿ ಗಣತಿ ಬಹಿರಂಗಕ್ಕೆ ಪರ-ವಿರೋಧ ಮಾತಿರುವುದರಿಂದ ಈ ಹಿಂದಿನ ಸರಕಾರಗಳು ಸಾಹಸಕ್ಕೆ ಕೈಹಾಕಿಲ್ಲ. ಆದರೀಗ ಸಿದ್ದರಾಮಯ್ಯ ಅವರು ಮುಂದಿನ ಸಂಪುಟದಲ್ಲಿ ಮಂಡಿಸಲು ತೀರ್ಮಾನಿಸಿದ್ದಾರೆ. ಗುರುವಾರ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟದ ಅಜೆಂಡಾ ಕಾಪಿಯಲ್ಲಿ ಜಾತಿಗಣತಿಯನ್ನು ಮುಚ್ಚಿದ ಲಕೋಟೆಯಲ್ಲಿ ಬಹಿರಂಗಪಡಿಸಬೇಕು ಎನ್ನುವ ವಿಷಯವಿತ್ತು. ಮುಂದಿನ ವಾರ ಬೆಳಗಾವಿಯಲ್ಲಿ ಗಾಂಧಿ ಭಾರತ ಕಾರ್ಯಕ್ರಮವಿರುವ ಸಮಯದಲ್ಲಿ ಗೊಂದಲ ಬೇಡವೆಂದು ಅಜೆಂಡಾವನ್ನು ಮುಂದಿನ ಸಚಿವ ಸಂಪುಟ ಸಭೆಗೆ ಮುಂದೂಡಲು ತೀರ್ಮಾನಿಸಲಾಗಿದೆ ಎಂದು ತಿಳಿದುಬಂದಿದೆ.

ಪ್ರಾದೇಶಿಕ ಪಕ್ಷಕ್ಕೂ ಬೇಕಿದೆ ಜಾರಕಿಹೊಳಿ ಸಹೋದರರು

ರಾಜ್ಯ ರಾಜಕಾರಣ: ಮತ್ತೆ ಸಾಹುಕಾರ್ ದರ್ಬಾರ್

ಬೆಂಗಳೂರು: ಎರಡು ರಾಷ್ಟ್ರೀಯ ಪಕ್ಷಗಳು ಸೇರಿದಂತೆ ಪ್ರಾದೇಶಿಕ ಪಕ್ಷಕ್ಕೆ ಬೆಳಗಾವಿಯೇ ಚಟುವಟಿಕೆಯ ಕೇಂದ್ರ ಸ್ಥಾನವಾಗಿದೆ. ಪ್ರತಿಪಕ್ಷಗಳಲ್ಲಿದ್ದರೂ ಜಾರಕಿಹೊಳಿ ಸಹೋದರರೇ ಈ ಮೂರು ಪಕ್ಷಗಳಿಗೂ ಹೈಕಮಾಂಡ್ ಎನ್ನುವಂತಾಗಿದ್ದು, ಅವರ ಸುತ್ತಲೇ ರಾಜ್ಯ ರಾಜಕಾರಣ ಗಿರಕಿ ಹೊಡೆಯುವಂತಾಗಿದೆ.

ವಿಶ್ವವಾಣಿ ವಿಶೇಷ

ಬಿಜೆಪಿಯಲ್ಲಿದ್ದ ಬಣ ಬಡಿದಾಟ ಈಗ ಕಾಂಗ್ರೆಸಿಗೂ ವಕ್ಕರಿಸಿಕೊಂಡಿದ್ದು ಗದ್ದುಗೆ ಗುದ್ದಾಟ ಕಳೆದ ವಾರದಿಂದ ತಾರಕಕ್ಕೇರಿದೆ. ಇತ್ತ ಪ್ರಾದೇಶಿಕ ಪಕ್ಷ ಜೆಡಿಎಸ್ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಮತ್ತದೇ ಜಾರಕಿಹೊಳಿ ಕುಟುಂಬವನ್ನು ಆಶ್ರಯಿಸಿದಂತಾಗಿದೆ. ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷದ ರಾಜ್ಯ ಅಧ್ಯಕ್ಷರ ಸ್ಥಾನದ ಮೇಲೆ ಜಾರಕಿಹೊಳಿ ಬ್ರದರ್ಸ್ ಕಣ್ಣಿಟ್ಟಿದ್ದಾರೆ. ಕೆಪಿಸಿಸಿ ಅಧ್ಯಕ್ಷರು ನಾನಾಗಲಿ ಎಂದು ಕೆಲವರ ಆಶಯವಾಗಿದೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದರೆ, ಇತ್ತ ಬಿಜೆಪಿಯಲ್ಲಿ ರಾಜ್ಯಾಧ್ಯಕ್ಷರನ್ನೇ ಬದಲಾಯಿಸಿ , ಹೊಸ ಅಧ್ಯಕ್ಷರ ನೇಮಿಸಿ ಎಂಬ ಹೋರಾಟದಲ್ಲಿ ರಮೇಶ್ ಜಾರಕಿಹೊಳಿ ತಂತ್ರ ಹೂಡಿದ್ದಾರೆ.

ಕೆಪಿಸಿಸಿ ಅಧ್ಯಕ್ಷತೆ ಮೇಲೆ ಜಾರಕಿಹೊಳಿ ಕಣ್ಣು..? ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಸಿಎಂ ಬದಲಾವಣೆ / ಇಲ್ಲವೇ ಒಪ್ಪಂದವಾಗಿದೆ ಎನ್ನಲಾದ ವಿಚಾರ ಸಂಬಂಧ ಕಳೆದ 15 ದಿನಗಳಿಂದ ನಡೆದಿರುವ ಚರ್ಚೆ ತಾರಕ್ಕೇರಿದೆ. ಇದೇ ವೇಳೆ ಡಿಸಿಎಂ ಹುದ್ದೆ ಹಾಗೂ ಕೆಪಿಸಿಸಿ ಅಧ್ಯಕ್ಷರ ಪಟ್ಟ ಹಾಗೂ ಸಚಿವ ಸ್ಥಾನವೂ ಈಗ ಚರ್ಚಿತ ವಿಚಾರವಾಗಿದೆ. ಹೈಕಮಾಂಡ್ ಮುಂದೆ ನಡೆದ ಒಪ್ಪಂದದಂತೆ ಸಿಎಂ ಬದಲಾವಣೆಯ ವಿಚಾರ ಬಂದಾಗ , ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಈಗ ಹೊಂದಿರುವ ಹುದ್ದೆಗಳ ಮೇಲೂ ಚರ್ಚೆಯಾಗುತ್ತಿದೆ. ಕಾಂಗ್ರೆಸ್‌ನಲ್ಲಿ ಒಬ್ಬರಿಗೆ ಒಂದು ಹುದ್ದೆ ಎಂಬ ವಿಚಾರ ಮುನ್ನಲೆಗೆ ಬಂದಿದ್ದು ಕೆಪಿಸಿಸಿ ಅಧ್ಯಕ್ಷ ಪಟ್ಟದ ಮೇಲೆ ಈಗ ಸಚಿವ ಸತೀಶ್ ಜಾರಕಿಹೊಳಿ ಕಣ್ಣಿಟ್ಟಿದ್ದಾರೆ.

ಈ ಸಮಯದಲ್ಲೇ ಹುದ್ದೆ ಹಾಗೂ ಪಕ್ಷದ ವಿಚಾರವಾಗಿ ಬಹಿರಂಗ ಹೇಳಿಕೆ ನೀಡುವಂತಿಲ್ಲ ಹಾಗೂ ಡಿನ್ನರ್ ಪಾಲಿಟಿಕ್ಸ್ ಮಾಡುವಂತಿಲ್ಲ ಎಂದು ಹೈಕಮಾಂಡ್ ಸೂಚಿಸಿದ್ದರೂ, ಕೆಪಿಸಿಸಿಗೆ ಪೂರ್ಣಾವಧಿ ಅಧ್ಯಕ್ಷರ ನೇಮಕ ಆಗಲಿ ಎಂದು ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

→ 4

ಬಣ ಬಡಿದಾಟ ನಿರಂತರ

ಬಿಜೆಪಿಯಲ್ಲಿ ಬಣ ಬಡಿದಾಟ ಆರಂಭವಾಗಿ ಆರು ತಿಂಗಳಾಗಿದೆ. ಮೊದಲಿಗೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ರಾಜ್ಯಾಧ್ಯಕ್ಷರ ಬದಲಾವಣೆಗೆ ಕೂಗು ಹಾಕಿದ್ದರು. ನಂತರ ಈ ವಿಚಾರ ಕೇಂದ್ರದ ಶಿಸ್ತು ಸಮಿತಿಯ ಮುಂದೆ ಹೋಗಿತ್ತಾದರೂ, ವಕ್ಫ್ ಹೋರಾಟವೇ ಪ್ರಮುಖವಾಗಿತ್ತು. ಇನ್ನು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಬದಲಾವಣೆ ಆಗಲೇಬೇಕು ಎಂದು ಯತ್ನಾಳ್ ಹೇಳಿದ್ದಲ್ಲದೆ ಪ್ರತ್ಯೇಕವಾಗಿ ಬಣ ಮಾಡಿಕೊಂಡು ವಕ್ಫ್ ಹೋರಾಟ ಮಾಡಿದ್ದರು. ಇದಾದ ನಂತರ ರಾಜ್ಯಾಧ್ಯಕ್ಷರ ಬಣ ಬಿಜೆಪಿ ಕಚೇರಿ ಸೇರಿದಂತೆ ಹಲವೆಡೆ ಸರಣಿ ಸಭೆಗಳನ್ನು ಮಾಡಿ ತಮಗಿರುವ ಬಲ ಪ್ರದರ್ಶಿಸಿಕೊಂಡಿತ್ತು. ಅಲ್ಲದೆ ಕೇಂದ್ರದ ನಾಯಕರು ಮಧ್ಯ ಪ್ರವೇಶಿಸಿ ರಾಜ್ಯ ಘಟಕದಲ್ಲಾಗಿರುವ ಸಮಸ್ಯೆ ಬಗೆಹರಿಸಬೇಕೆಂದು ಮನವಿ ಮಾಡಿದ್ದರು. ಇದೇ ವೇಳೆ ಮಾಜಿ ಸಿಎಂ ಯಡಿಯೂರಪ್ಪ ಅಖಾಡಕ್ಕಿಳಿದಾಗ ಹೊಸ ಬಿಜೆಪಿ ರಾಜ್ಯಾಧ್ಯಕ್ಷರ ನೇಮಕಕ್ಕೆ ಬಿಎಸ್‌ವೈ ಸಹಕರಿಸಲಿ ಎಂದು ರಮೇಶ್ ಆಗ್ರಹಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ವಿಜಯೇಂದ್ರ, ಬಿಎಸ್‌ವೈ ಬಗ್ಗೆ ಮಾತನಾಡುವ ಹಕ್ಕು ರಮೇಶ್‌ಗಿಲ್ಲ ಎಂದು ಎಚ್ಚರಿಕೆ ಕೊಟ್ಟಿದ್ದರು. ಬಿಜೆಪಿಯ ಕೇಂದ್ರ ನಾಯಕರನ್ನು ವಿಜಯೇಂದ್ರ ಹಾಗೂ ಭಿನ್ನ ಬಣದ ನಾಯಕರು ಭೇಟಿಯಾಗಿದ್ದರೂ ಕೂಡ ರಾಜ್ಯದಲ್ಲಿ ಬಣ ಬಡಿದಾಟ ನಿಂತಿಲ್ಲ. ಬಿಜೆಪಿಯಲ್ಲಿ ಪ್ರಮುಖ ನಾಯಕರಿದ್ದರೂ ಕೂಡ ಇಲ್ಲೂ ರಮೇಶ್ ಜಾರಕಿಹೊಳಿ ಅವರ ಅಬ್ಬರ ಮುಂದುವರೆದಿದೆ.

ಏ.16, 17ಕ್ಕೆ ಸಿಇಟಿ ಪರೀಕ್ಷೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ 2025ರ ಸಿಇಟಿ ಪರೀಕ್ಷೆ ದಿನಾಂಕವನ್ನು ಪ್ರಕಟಿಸಿದ್ದು, ಏಪ್ರಿಲ್ 16 ಹಾಗೂ 17 ರಂದು ಸಿಇಟಿ ಪರೀಕ್ಷೆ ನಡೆಯಲಿದೆ ಎಂದು ಮಾಹಿತಿ ನೀಡಿದೆ. ಜನವರಿ 23ರಿಂದ ಅರ್ಜಿ ಸಲ್ಲಿಕೆ ಆರಂಭವಾಗಲಿದ್ದು, ಈ ವರ್ಷದಿಂದ ಆಯಾ ಕಾಲೇಜುಗಳಲ್ಲಿ ದಾಖಲೆ ಪರಿಶೀಲನೆ ನಡೆಯಲಿದೆ ಎಂದು ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಏಪ್ರಿಲ್ 16ರಂದು ಬೆಳಿಗ್ಗೆ 10.30ರಿಂದ ಭೌತವಿಜ್ಞಾನ, ಮಧ್ಯಾಹ್ನ 2.30ರಿಂದ ರಸಾಯನ ವಿಜ್ಞಾನ ಪರೀಕ್ಷೆ ನಡೆಯಲಿದೆ. ಏಪ್ರಿಲ್ 17ರಂದು ಬೆಳಿಗ್ಗೆ ಗಣಿತ ಮತ್ತು ಮಧ್ಯಾಹ್ನ ಜೀವವಿಜ್ಞಾನ ವಿಷಯಗಳ ಪರೀಕ್ಷೆಗಳು ನಡೆಯಲಿವೆ. ಏ.18ರಂದು ಹೊರನಾಡು ಮತ್ತು ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ ಎಂದು ಕೆಇಎ ಮಾಹಿತಿ ನೀಡಿದೆ.

ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಉನ್ನತ ಶಿಕ್ಷಣ ಸಚಿವ ಎಂಸಿ ಸುಧಾಕರ್, ''ಇದೇ ಮೊದಲ ಭಾರಿಗೆ ವರ್ಷದಲ್ಲಿ ನಡೆಯುವ ಎಲ್ಲಾ ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪರೀಕ್ಷೆಗಳ ಬಗ್ಗೆ ಒಮ್ಮೆಲೇ ಮಾಹಿತಿ ನೀಡಲಾಗಿದೆ'' ಎಂದು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಕೃಷಿ ಸಚಿವರ ಜಿಲ್ಲಾ ಪ್ರವಾಸ ಇಂದು

ಚಿತ್ರದುರ್ಗ: ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಜ.17ರಂದು ಚಿತ್ರದುರ್ಗ ಜಿಲ್ಲಾ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಸಚಿವರು ಅಂದು ಬೆಳಿಗ್ಗೆ 10ಕ್ಕೆ ಹೊಸದುರ್ಗ ತಾಲೂಕು ಶ್ರೀರಾಂಪುರ ಹೋಬಳಿ ಮಲ್ಲಿಹಳ್ಳಿ ಗ್ರಾಮಕ್ಕೆ ಆಗಮಿಸಿ, ಮಲ್ಲಿಹಳ್ಳಿ ಗ್ರಾಮದ ಪ್ರಭುಲಿಂಗಪ್ಪ ಬಿನ್ ಎ.ಎನ್.ಗಂಗಾಧರಪ್ಪ ಸಿರಿಧಾನ್ಯ ರೈತರ ಒಕ್ಕಲು ಕಣ ಮತ್ತು ಕ್ಷೇತ್ರ ಭೇಟಿ ಮಾಡುವರು. ನಂತರ ಬೆಳಿಗ್ಗೆ 11.45ಕ್ಕೆ ಶ್ರೀರಾಂಪುರದ ದುರ್ಗದ ಸಿರಿಧಾನ್ಯ ರೈತ ಉತ್ಪಾದಕ ಕಂಪನಿ ಲಿಮಿಟೆಡ್‌ನ ಸಿರಿಧಾನ್ಯ ಸಂಸ್ಕರಣಾ ಘಟಕಕ್ಕೆ ಭೇಟಿ ಹಾಗೂ ರೈತರೊಂದಿಗೆ ಸಂವಾದ ನಡೆಸುವರು. ನಂತರ ಶ್ರೀರಾಂಪುರ ನಾಡಕಚೇರಿ ಆವರಣದಲ್ಲಿ ಸಿರಿಧಾನ್ಯ ರೈತರು, ವರ್ತಕರು ಹಾಗೂ ರೈತ ಮುಖಂಡರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 1.15ಕ್ಕೆ ಹೊಸದುರ್ಗಕ್ಕೆ ಆಗಮಿಸುವರು. ಮಧ್ಯಾಹ್ನ 1.45ಕ್ಕೆ ಹೊಸದುರ್ಗದಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಕೃಷಿ ಸಚಿವರ ಆಪ್ತ ಕಾರ್ಯದರ್ಶಿ ತಿಳಿಸಿದ್ದಾರೆ.

ಹಲವಡೆ ವಿದ್ಯುತ್ ವ್ಯತ್ಯಯ ಇಂದು

ದಾವಣಗೆರೆ: ಆನಗೋಡು ಮತ್ತು ಅತ್ತೀಗೆರೆ ವಿದ್ಯುತ್ ಕೇಂದ್ರದ ಮಾರ್ಗ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ, ಜ.17 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಆನಗೋಡು ಫೀಡರ್ ವ್ಯಾಪ್ತಿಯ ಹನುಮನಹಳ್ಳಿ, ಕೊಗ್ಗನೂರು, ಹನುಮನಹಳ್ಳಿ, ಆನಗೋಡು, ಹೆಬ್ಬಾಳು, ನೀರ್ಥಡಿ, ಶಿವಪುರ, ಹಾಲುವರ್ತಿ, ಗಂಗನಕಟ್ಟೆ, ನೇರ್ಲಿಗಿ, ಚಿನ್ನಸಮುದ್ರ, ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು ಮತ್ತು ಆರಾಧ್ಯಾ ಕೈಗಾರಿಕೆ. ಅತ್ತಿಗೆರೆ ಫೀಡರ್ ವ್ಯಾಪ್ತಿಯ ಅತ್ತಿಗೆರೆ, ಕುರ್ಕಿ, ಬಾಡ, ಕಬ್ಬೂರು, ಹೀರೆತೊಗಲೇರಿ, ಗೋಪಾನಾಳು, ಕಂದ್ಗಲ್, ರಾಮಗೊಂಡನಹಳ್ಳಿ, ಕಾಶೀಪುರ ಗ್ರಾಮ ಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಘನತ್ಯಾಜ್ಯ ವಿಲೇವಾರಿ ನಿರ್ಬಂಧಿತ ಪ್ರದೇಶ

ದಾವಣಗೆರೆ: ಅವರಗೊಳ್ಳ ಗ್ರಾಮದ ಹತ್ತಿರ ಇರುವ ಮಹಾನಗರಪಾಲಿಕೆ ಒಡೆತನದಲ್ಲಿರುವ 33 ಎಕರೆ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿ ಪ್ರದೇಶಗಳು ಸಂಪೂರ್ಣವಾಗಿ ನಿರ್ಬಂಧಿತ ಪ್ರದೇಶವೆಂದು ಘೋಷಿಸಲಾಗಿದೆ. ಯಾವುದೇ ಅನಧಿಕೃತ ವಾಹನಗಳಾಗಲಿ, ವ್ಯಕ್ತಿ ಗಳಾಗಲಿ, ಜಾನುವಾರುಗಳಾಗಲಿ ಪೂರ್ವಾನುಮತಿ ಇಲ್ಲದೇ ಪ್ರವೇಶವಿರುವುದಿಲ್ಲ, ಒಂದು ವೇಳೆ ಯಾವುದೇ ವ್ಯಕ್ತಿ, ವಾಹನ, ಜಾನುವಾರುಗಳು ಮಹಾನಗರಪಾಲಿಕೆಯ ಅನುಮತಿ ಇಲ್ಲದೆ ಅನಧಿಕೃತವಾಗಿ ಪ್ರವೇಶಿಸುವುದು ಹಾಗೂ ನುಸುಳಿ ಯಾವುದೇ ರೀತಿಯ ಅನಾಹುತಕೊಳಗಾದಲ್ಲಿ ಪಾಲಿಕೆ ಜವಾಬ್ದಾರಿಯಾಗಿರುವುದಿಲ್ಲ ಎಂದು ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.

ದೇವದಾಸಿಯರಿಗೆ ಅರಿವು ಇಂದು

ದಾವಣಗೆರೆ: ಜ.17 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಗಾಂಧಿನಗರದಲ್ಲಿರುವ ಅಂಬೇಡ್ಕರ್ ಭವನದಲ್ಲಿ ದೇವದಾಸಿ ಸಮರ್ಪಣೆ ನಿಷೇಧ ಕುರಿತು ಮಾಜಿ ದೇವದಾಸಿ ಮಹಿಳೆಯರಿಗೆ ಅರಿವು ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಾನಾಯ್ಕ ತಿಳಿಸಿದ್ದಾರೆ.

ಕ್ಷಯ ಮುಕ್ತ ಭಾರತ ನಿರ್ಮಿಸಿ

ಚಿತ್ರದುರ್ಗ: ದುಶ್ಚಟಗಳಿಂದ ದೂರವಿದ್ದು, ಆದರ್ಶ ಬದುಕು ಕಟ್ಟಿಕೊಳ್ಳುವ ಮೂಲಕ ಕ್ಷಯ ಮುಕ್ತ ಭಾರತ ನಿರ್ಮಿಸಿ ಎಂದು ಚಿತ್ರದುರ್ಗ ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಎನ್.ಎಸ್.ಮಂಜು ನಾಥ್ ಹೇಳಿದರು. ನಗರದ ಡಾನ್ ಬಾಸ್ಕೋ ಪ್ರೌಢಶಾಲೆ ಯಲ್ಲಿ 100 ದಿನಗಳ ಟಿಬಿ ನಿಯಂತ್ರಣ ಅಭಿ ಯಾನ ಕಾರ್ಯಕ್ರಮದಲ್ಲಿ ಪ್ರೌಢಶಾಲಾ ವಿದ್ಯಾರ್ಥಿ ಗಳಿಗೆ ಟಿಬಿ ನಿಯಂತ್ರಣದಲ್ಲಿ ವಿದ್ಯಾರ್ಥಿ ಗಳ ಪಾತ್ರ ಕುರಿತು ಮಾಹಿತಿ ಶಿಕ್ಷಣ ಸಂವಹನ ಕಾರ್ಯಕ್ರಮದಲ್ಲಿ ಮಾತನಾಡಿದರು. ಕ್ಷಯ ರೋಗವು ಸೂಕ್ಷ್ಮಾಣು ಜೀವಿ ಟ್ಯೂಬರ್ ಕ್ಲೊಸಿಸ್‌ನಿಂದ ಸೋಂಕು ತಗಲುತ್ತದೆ. ಕ್ಷಯ ರೋಗಿಯು ಕೆಮ್ಮಿದಾಗ ಸೀನಿದಾಗ ತುಂತುರು ಹನಿಗಳ ಮೂಲಕ ಕ್ಷಯ ರೋಗದ ಕ್ರಿಮಿ ವಾತಾವರಣ ಸೇರುತ್ತದೆ. ಉಸಿರಾಟದ ಮೂಲಕ ದೇಹ ಪ್ರವೇಶಿಸುತ್ತದೆ ಎಂದು ಸಲಹೆ ನೀಡಿದರು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಕೃಷ್ಣನಾಯಕ್ ಮಾತನಾಡಿದರು. ಡಾ.ಸುರೇಂದ್ರ, ಆರೋಗ್ಯ ನಿರೀಕ್ಷಣಾಧಿಕಾರಿ ಶ್ರೀನಿವಾಸ್, ಅಧಿಕಾರಿ ನಾಗರಾಜ್, ಸಂತೋಷ್, ಲೋಕೇಶ್, ಡಾನ್ ಬಾಸ್ಕೋ ವಿದ್ಯಾ ಸಂಸ್ಥೆಯ ಕೋ ಆರ್ಡಿನೇಟರ್ ಮಂಜುನಾಥ್, ಉಪಸ್ಥಿತರಿದ್ದರು.

{ ಪ್ರತಾಪ್ ಸಿಂಹ, } ಮಾಜಿ ಸಂಸದ

ಸಿದ್ದರಾಮಯ್ಯರನ್ನು ಬಲವಂತದಿಂದ ಕೆಳಗೆ ಇಳಿಸಿದರೆ ಕಾಂಗ್ರೆಸ್ ಇಬ್ಭಾಗ ಮಾಡುತ್ತಾರೆ. ಇಬ್ಭಾಗವಾದ ಕಾಂಗ್ರೆಸ್‌ಗೆ ಹಸುವಿನ ಕೆಚ್ಚಲು ಕೊಯ್ಯುವ ಸಾಬಿಯ ಚಿತ್ರವನ್ನೇ ಪಕ್ಷದ ಚಿಹ್ನೆ ಮಾಡಿಕೊಳ್ಳುತ್ತಾರೆ. ಪರಮೇಶ್ವರ್ ಈ ರಾಜ್ಯದ ಅಸಹಾಯಕ ಗೃಹ ಸಚಿವ.

ಮಹಾನಗರ ಪಾಲಿಕೆಯ ಸಾಮಾನ್ಯ ಸಭೆ | ಕಾಂಗ್ರೆಸ್ ವಿರುದ್ಧ ಬಿಜೆಪಿ ಆಕ್ರೋಶ

ಮೇಯರ್ ನೇತೃತ್ವದ ಸಭೆಗೆ ಬಿಜೆಪಿ ಸದಸ್ಯರ ವಿರೋಧ

ದಾವಣಗೆರೆ: ನಗರದ ಮಹಾನಗರ ಪಾಲಿಕೆಯ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಗೆ ಕಾಂಗ್ರೆಸ್ ಸದಸ್ಯರು ಆಗಮಿಸಿದ ಹಿನ್ನಲೆಯಲ್ಲಿ ಬಿಜೆಪಿ ಸದಸ್ಯರು ಆಡಳಿತ ನೀಡುವಲ್ಲಿ ಕಾಂಗ್ರೆಸ್ ವಿಫಲವಾಗಿದೆ ಎನ್ನುವ ಘೋಷಣೆಗಳು ಕೂಗಿದರು.

ಮೇಯರ್ ಚಮನ್ ಸಾಬ್ ಅಧ್ಯಕ್ಷತೆಯಲ್ಲಿ ಸಭೆ ಏರ್ಪಡಿಸಲಾಗಿತ್ತು. ಆದರೆ, ಸ್ಥಾಯಿ ಸಮಿತಿಗಳ ಅಧ್ಯಕ್ಷರು ಮತ್ತು ಕೆಲವು ಸದಸ್ಯರು ಮುನಿಸಿಕೊಂಡು ಸಭೆಗೆ ಹಾಜರಾಗಿರಲಿಲ್ಲ. ಕೊನೆಗೆ ಸಭೆಯನ್ನು ಮುಂದೂಡಿ ಸಂಧಾನ ನಡೆಯಿತು.

ಆಡಳಿತ ಪಕ್ಷ ಕಾಂಗ್ರೆಸ್‌ಗೆ ಮುಜುಗರ ಉಂಟು ಮಾಡಿದ ಪ್ರಸಂಗ ನಡೆಯಿತು. ಪಾಲಿಕೆ ಆಡಳಿತ ನಡೆಸುವಲ್ಲಿ ಕಾಂಗ್ರೆಸ್ ಸಂಪೂರ್ಣ ಸೋಲು ಕಂಡಿದೆ ಎಂದು ಬಿಜೆಪಿ ಸದಸ್ಯರು ರಿಪೋರ್ಟ್ ಕಾರ್ಡ್ ಪ್ರದರ್ಶಿಸಿದರು.

ಮೇಯರ್ ಚಮನ್ ಸಾಬ್, ಹಿರಿಯ ಸದಸ್ಯ ಎ. ನಾಗರಾಜ್, ಗಡಿಗುಡಾಳ್ ಮಂಜುನಾಥ ಮತ್ತಿತರರು ಪಕ್ಷದ ಸಾಧನೆಗೆ ಸಮರ್ಥಿಸಿಕೊಳ್ಳಲು ಮುಂದಾದರೂ ಸ್ವಪಕ್ಷೀಯರ ನಡೆವಳಿಕೆ ಮುಜುಗರ ಉಂಟು ಮಾಡಿತ್ತು.

ಪಾಲಕೆ ಸಾಮಾನ್ಯ ಸಭೆ ಬೆಳಗ್ಗೆ 11 ಗಂಟೆಗೆ ಕರೆಯಲಾಗಿತ್ತು. ಬೆಳಗ್ಗೆ 11.30ಕ್ಕೆ ಮೇಯರ್, ಕೆಲವು ಕಾಂಗ್ರೆಸ್ ಸದಸ್ಯರು ಮತ್ತು ಬಿಜೆಪಿ ಎಲ್ಲಾ ಸದಸ್ಯರು ಸಭೆಗೆ ಆಗಮಿಸಿದ್ದರು. ಪಾಲಿಕೆ ಸ್ಥಾಯಿ ಸಮಿತಿ ಸದಸ್ಯರು ಮತ್ತಿತರೇ ಸದಸ್ಯರು ಸಭೆ ಭಾಗವಹಿಸಿರಲಿಲ್ಲ. ಸಭೆ ನಡೆಯತ್ತದೆಯೋ ಇಲ್ಲವೋ ಅನ್ನುವ ಅನುಮಾನ ನಡುವೆ ಬಿಜೆಪಿ ಸದಸ್ಯರ ಹಠದಿಂದ ಸಭೆ ಪ್ರಾರಂಭ ಮಾಡಲಾ ಯಿತು. ಈ ವೇಳೆ ಬಿಜೆಪಿ ಸದಸ್ಯರು ಪಾಲಿಕೆ ಆಡಳಿತದಲ್ಲಿ ಕಾಂಗ್ರೆಸ್ ಸಂಪೂರ್ಣ ವಿಫಲವಾಗಿದೆ ಎಂದು ಭಿತ್ತಿ ಪತ್ರ ಪ್ರದರ್ಶಿಸಿದರು.ಸಭೆಯಲ್ಲಿ ಉಪಮೇಯರ್ ಸೋಗಿ ಶಾಂತಕುಮಾರ್, ಸದಸ್ಯರಾದ ಎ. ನಾಗರಾಜ್, ಮಂಜುನಾಥ ಗಡಿಗುಡಾಳ್, ಸವಿತಾ ಗಣೇಶ್ ಹುಲ್ಲಮನಿ, ಆಶಾ ಉಮೇಶ್, ಪಾಲಿಕೆ ವಿರೋಧ ಪಕ್ಷದ ನಾಯಕ ಆರ್.ಎಲ್ ಶಿವಪ್ರಕಾಶ್ ಮತ್ತಿತರರಿದ್ದರು.

ಇದು ಒಂದು ವಾರ್ಡ್‌ನ ಕಥೆಯಲ್ಲ ಎಲ್ಲರಿಗೂ ಇದರ ಬಿಸಿ ತಟ್ಟುತ್ತಿದೆ. ಜಲಸಿರಿ ಅಧಿಕಾರಿಗಳು ಕೆಲಸ ಮಾಡುವಾಗ ಸರಿಯಾಗಿ ಮಾಡಬೇಕು. ಇಲ್ಲವಾದರೂ ಮುಂದೆ ಎಲ್ಲಾ ಸದಸ್ಯರು ಪ್ರತಿಭಟನೆ ಮಾಡುವ ಪ್ರಸಂಗ ಒದಗಬಹುದು. ಎಚ್ಚರಿಕೆಯಿಂದ ಸಮರ್ಪಕವಾಗಿ ಶೀಘ್ರ ಜಲಸಿರಿ ಯೋಜನೆಯನ್ನು ಮುಗಿಸುವಂತೆ ಜಲಸಿರಿ ಅಧಿಕಾರಿಗಳಿಗೆ ತಾಕೀತು ಮಾಡಿದರು.
-ಚಮನ್ ಸಾಬ್, ಮೇಯರ್

ನಗರದ ಮಹಾನಗರ ಪಾಲಿಕೆಯ ಸಭಾಂಗಣದಲ್ಲಿ ಮೇಯರ್ ಚಮನ್ ಸಾಬ್ ಅಧ್ಯಕ್ಷತೆಯಲ್ಲಿ ಸಭೆ ಸಾಮಾನ್ಯ ಸಭೆ ನಡೆಯಿತು.

ಅನುದಾನ ಸಮರ್ಪಕವಾಗಿ ಹಂಚಿಕೆ ಮಾಡಿ

ಅನುದಾನವನ್ನು ಸಮರ್ಪಕವಾಗಿ ವಿತರಣೆ ಮಾಡಬೇಕು ಎಂದು ಆಗ್ರಹಿಸಿ ಮಹಾನಗರಪಾಲಿಕೆ ಬಿಜೆಪಿ ಸದಸ್ಯರು ಆಡಳಿತ ಪಕ್ಷವನ್ನು ಒತ್ತಾಯಿಸಿದರು. ಸಾಮಾನ್ಯ ಸಭೆಯಲ್ಲಿ ವಿರೋಧ ಪಕ್ಷದ ಸದಸ್ಯರು ಎದ್ದು ನಿಂತು, ನಮ್ಮ ವಾರ್ಡ್‌ಗಳಿಗೆ ಅನುದಾನ ಸಮರ್ಪಕವಾಗಿ ನೀಡುತ್ತಿಲ್ಲ. ತಾರತಮ್ಯ ಅನುಸ ರಿಸಲಾಗುತ್ತಿದೆ. ಕನಿಷ್ಠ 50 ಲಕ್ಷ ರು. ಅನುದಾನ ಕೊಡು ವಂತೆ ಆಗ್ರಹಿಸಿದರು. ವಿರೋಧ ಪಕ್ಷ ಸದಸ್ಯರಿಗೆ ಮೇಯ ರ್ ಚಮನ್ ಸಾಬ್ ತಿರುಗೇಟು ನೀಡಿ, ಎಲ್ಲಿ ಅಗತ್ಯತೆ ಇತ್ತು. ಅಲ್ಲಿ ಅನುದಾನ ನೀಡಿದ್ದೇವೆ. ಯಾವುದೇ ತಾರ ತಮ್ಯ ಮಾಡಿಲ್ಲ. ಇಲ್ಲಿ ನಿಂತಿರುವ ಪೈಲ್ವಾನ್ ಕೆ.ಎಂ.ವೀರೇಶ್ ಅವರ ವಾರ್ಡ್‌ಗೆ ಅನುದಾನ ನೀಡಿಲ್ಲವೇ ಎಂದು ಉತ್ತ ರಿಸಿದಾಗ ಕೆ.ಎಂ. ವೀರೇಶ್ ಅವರು ನೀಡಿದ್ದನ್ನು ಒಪ್ಪಿಕೊಂಡು, ನಮಗೆ 2-3 ಲಕ್ಷ ಕೊಟ್ಟಿದ್ದೀರಾ. ಎಲ್ಲರಿಗೂ ಈ ಹಿಂದೆ ಕೊಟ್ಟ ಭರವಸೆಯಂತೆ ನೀಡುವಂತೆ ಆಗ್ರಹಿಸಿದರು.ಮೇಯರ್ ಚಮನ್ ಸಾಬ್ ಅವರು ಉತ್ತರಿಸುತ್ತಿದ್ದಾಗ, ಮಹಾನಗರ ಪಾಲಿಕೆಗೆ 60 ಕೋಟಿ ಸಾಲ ಇದೆ. ಸ್ಥಿತಿ-ಗತಿ ನೋಡಿ ಕೊಂಡು ಅನುದಾನ ಹಂಚಿಕೆ ಮಾಡೋಣ. ಮುಂದೆ ಪಾಲಿಕೆಗೆ ಬಾಗಿಲು ಹಾಕುವ ಪರಿಸ್ಥಿತಿ ಬರಲಿದೆ ಎಂದು ಹೇಳಿದರು. ವಿರೋಧ ಪಕ್ಷ ಪ್ರಸನ್ನ ಕುಮಾರ್, ಎಸ್.ಟಿ.ವೀರೇಶ್ ಅವರು ಜಲಸಿರಿ ಯೋಜನೆಯ ನೀರು ಸಮರ್ಪಕವಾಗಿ ನೀಡುತ್ತಿಲ್ಲ. ನೀರಿನ ಬಿಲ್ ನೋಡಿದರೆ ಬರಸಿಡಿಲು ಬಡಿದಂತೆ ಆಗಿದೆ ಎಂದು ಜನರಿಗೆ ಬಂದಂತಹ ಬಿಲ್‌ಗಳನ್ನು ಪ್ರದರ್ಶಿಸಿದರು. 1ಲೀ. ಗೆ 226 ರು. ಬಿಲ್ ಬಂದರೆ, ಮತ್ತೊಬ್ಬ ರಿಗೆ 228 ಲೀ. ನೀರು ಬಳಕೆ ಮಾಡಿಕೊಂಡಿ ವುದಕ್ಕೆ 20727 ರು. ಬಿಲ್ ನೀಡಲಾಗಿದೆ.

ಸಣ್ಣ ಸಮುದಾಯಗಳ ಪರಿಗಣನೆಗೆ ಆಗ್ರಹ

ಚಿತ್ರದುರ್ಗ: ರಾಜಕೀಯ ಪಕ್ಷಗಳು ನಮ್ಮ ಸಮುದಾಯವನ್ನು ಪರಿಗಣಿಸಿಲ್ಲ, ಸಣ್ಣ ಸಮುದಾಯವಾದ ನಮ್ಮನ್ನು ನಿರ್ಲಕ್ಷ್ಯ ಮಾಡಿದೆ. ಇದರಿಂದಾಗಿ ನಾವು ಇಂದಿಗೂ ಎಲ್ಲರಿಂದಲೂ ಸಹಾ ನಿರ್ಲಕ್ಷ್ಯಕ್ಕೆ ಒಳಗಾಗಿದ್ದೇವೆ ಎಂದು ಕರ್ನಾಟಕ ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಪ್ರತಾಪ್ ಕುಮಾರ್ ಒ.ಜೋಗಿ ದೂರಿದ್ದಾರೆ.

ಚಿತ್ರದುರ್ಗ ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕೀಯ ಪಕ್ಷಗಳು ಹಾಗೂ ನಮ್ಮನ್ನಾಳುವ ಸರಕಾರಗಳು ನಮ್ಮ ಸಮುದಾಯಕ್ಕೆ ನ್ಯಾಯವನ್ನು ನೀಡುವಲ್ಲಿ ವಿಫಲವಾಗಿದೆ. ನಮ್ಮ ಸಮುದಾಯದವರು ಇನ್ನೂ ಸಹಾ ಚಿಂದಿಯನ್ನು ಆಯುವ ಕೆಲಸವನ್ನು ಮಾಡುತ್ತಲೇ ಶಿಕ್ಷಣ ಇಲ್ಲದೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಲೆದಾಡುತ್ತಾ ಜೀವನ ನಡೆಸುತ್ತಿದ್ದಾರೆ. ಸರಕಾರಗಳಾಗಲಿ, ರಾಜಕೀಯ ಪಕ್ಷಗಳಾಗಲಿ ನಮ್ಮನ್ನು ಸರಿಯಾದ ರೀತಿಯಲ್ಲಿ ಪರಿಗಣಿಸಿಲ್ಲ, ಸಣ್ಣ ಸಮುದಾಯ ಎಂದು ನಿರ್ಲಕ್ಷ್ಯ ಮಾಡುತ್ತಿವೆ.

ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ಸಹಾ ನಮ್ಮನ್ನು ನಿರ್ಲಕ್ಷ್ಯ ಮಾಡಿವೆ. ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು ರಾಜ್ಯ ಮುಖ್ಯಮಂತ್ರಿಗಳು ಸಹಾ ನಮ್ಮ ಸಮುದಾಯವನ್ನು ನಿರ್ಲಕ್ಷ್ಯ ಮಾಡಿದೆ ನಮ್ಮ ಸಮುದಾಯದ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸರಕಾರ ಮುಂದಾಗಿಲ್ಲ ನಮ್ಮ ಸಮುದಾಯ ಸಮಾವೇಶಕ್ಕೆ ಹಿಂದಿನ ಹಾಗೂ ಇಂದಿನ ಮುಖ್ಯಮಂತ್ರಿಗಳನ್ನು ಆಹ್ವಾನ ಮಾಡಿದ್ದರು ಸಹಾ ಬಂದಿಲ್ಲ ಎಂದು ನುಡಿದರು.

ಗೋಷ್ಠಿಯಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳ ಒಕ್ಕೂಟದ ಗೌರವಾಧ್ಯಕ್ಷ ರಾಮು ಗೋಸಾಯಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ರವಿದಾಸರ್, ರಾಜು ಉಪಾಧ್ಯಕ್ಷ ಜ್ಯೋತಿ ದಾಸರ್, ಅಭಿಷೇಕ್, ಹೇಮಣ್ಣ ಭಾಗವಹಿಸಿದ್ದರು.

ಅಲೆಮಾರಿ ಮತ್ತು ಅರೆ ಅಲೆಮಾರಿಯಲ್ಲಿ 46 ಜಾತಿಗಳು ಬರಲಿದ್ದು, ಇದರಲ್ಲಿ ಬಹಳಷ್ಟು ಜನಾಂಗದವರು ನಮ್ಮ ಕುಲದ ವೃತ್ತಿಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ ಸಮಾಜದ ಮುಖ್ಯವಾಹಿನಿಗೆ ಬಂದಿಲ್ಲ, ಜನಾಂಗದವರಿಗೆ ಮೂಲಸೌಕರ್ಯವಾದ ವಸತಿ, ಶಿಕ್ಷಣ, ಸಮುದಾಯ ಭವನ ನಿರ್ಮಾಣ, ರುದ್ರಭೂಮಿ, ಸಿಕ್ಕಿಲ್ಲ, ಒಂದು ಜಾಗದಲ್ಲಿ 10 ವರ್ಷ ಟೆಂಟ್ ಹಾಕಿ ವಾಸವಾಗಿದ್ದವರಿಗೆ ಆ ಜಾಗವನ್ನು ನೀಡುವಂತೆ ಸರಕಾರಕ್ಕೆ ಮನವಿ ಮಾಡಲಾಗಿದೆ.
-ಪ್ರತಾಪ್ ಕುಮಾರ್ ಒ.ಜೋಗಿ, ಪ್ರಧಾನ ಕಾರ್ಯದರ್ಶಿ

ನಗರದ ಪ್ರವಾಸಿ ಮಂದಿರದ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಪ್ರತಾಪ್ ಕುಮಾರ್ ಒ.ಜೋಗಿ ಮಾತನಾಡಿದರು.

ಜನರಿಗೆ ಶುದ್ಧ ಕುಡಿವ ನೀರು ಕೊಡಿ

ಚಳ್ಳಕೆರೆ : ಗ್ರಾಮೀಣ ಭಾಗದ ಜನರಿಗೆ ಶುದ್ಧ ಕುಡಿಯುವ ನೀರು ಅಗತ್ಯವಾಗಿ ಕೊಡಬೇಕು. ಸುಖಾ ಸುಮ್ಮನೆ ಗುತ್ತಿಗೆದಾರರ ನೆಪ ಹೊಡ್ಡಿ ನೀರು ಕೊಡುವುದು ನಿಲ್ಲಿಸಬೇಡಿ ಎಂದು ತಾಲೂಕು ಪಂಚಾಯತಿ ಆಡಳಿತ ಅಧಿಕಾರಿ ಮಂಜುನಾಥ್ ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ನಗರದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಆಯೋಜಿಸಿದ್ದ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿಕೊಂಡು ಮಾತನಾಡಿದರು.

ಜಲಜೀವನ ಮೀಷನ್ ಯೋಜನೆಯ ಕುಡಿಯುವ ನೀರು ಜನವರಿ ತಿಂಗಳ ಅಂತ್ಯಕ್ಕೆ ನೀರು ಹೊದಗಿಸಲು ಸಜ್ಜಾಗಿರುವುದು ಇಲಾಖೆ ಅಗತ್ಯ ಕ್ರಮಗಳನ್ನು ಪಾಲಿಸಬೇಕು ಎಂದು ಕುಡಿಯುವ ನೀರು ಸರಬರಾಜು ಇಲಾಖೆ ಎಇಇ ದಯಾನಂದ ಸ್ವಾಮಿಗೆ ಸೂಚಿಸಿದರು.

ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಎಚ್.ಶಶಿಧರ್ ಮಾತನಾಡಿ, ಶಾಲಾ ಕಟ್ಟಡ ಸಮುದಾಯ ಭವನ ಹಾಗೂ ಇನ್ನಿತರೆ ಸರಕಾರಿ ಕಟ್ಟಡಗಳಲ್ಲಿ ನಡೆಯುವಂತಹ ಅಂಗನವಾಡಿ ಕೇಂದ್ರಗಳನ್ನು ಸ್ವಂತ ಕಟ್ಟಡಗಳನ್ನಾಗಿ ಪರಿವರ್ತನೆ ಮಾಡಿ ಇಲಾಖೆಗೆ ವಹಿಸಿಕೊಳ್ಳಿ. ತಾಲೂಕಿನಲ್ಲಿ ಈಗಾಗಲೇ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ತಾಲೂಕಿನಲ್ಲಿ 14 ಮಕ್ಕಳುಗಳಿವೆ. ಅವುಗಳನ್ನು ಗುರುತಿಸಿ ಈಗಾಗಲೇ ಪೌಷ್ಟಿಕತೆಗೆ ಬೇಕಾದಂತಹ ಚಿಕಿತ್ಸೆ,ಆಹಾರ, ಸೌಲಭ್ಯಗಳನ್ನು ಇಲಾಖೆ ವತಿಯಿಂದ ತಾಯಿ ಹಾಗೂ ಮಗುವಿಗೆ ಸೂಚನೆಗಳನ್ನು ನೀಡುತ್ತಾ, ಅಪೌಷ್ಟಿಕತೆ ಹೋಗಲಾಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿದರು.ಇದೇ ಸಂಧರ್ಭದಲ್ಲಿ ಎಸ್ಎಸ್ಎಲ್‌ಸಿ ಫಲಿತಾಂಶ ಕಳೆದ ಬಾರಿಗಿಂದ ಈ ಬಾರಿ ನೀರಿಕ್ಷೆ ಪ್ರಮಾಣದಲ್ಲಿ ಬರಬೇಕು, ಮಕ್ಕಳಿಗೆ ಈಗಿನಿಂದಲೆ ತಯಾರಿ ಮಾಡಬೇಕು ಎಂದು ಆಡಳಿತ ಅಧಿಕಾರಿ ಮಂಜುನಾಥ್, ಬಿಇಒ ಸುರೇಶ್‌ಗೆ ಸೂಚಿಸಿದರು.

ಸಭೆಯಲ್ಲಿ ಕೃಷಿ ಸಹಾಯಕ ನಿರ್ದೇಶಕ ಅಶೋಕ್, ಪಶು ಸಂಗೋಪನೆ ಇಲಾಖೆ ಡಾ.ರೇವಣ್ಣ, ನಿರ್ಮಿತಿ ಕೇಂದ್ರದ ಇಂಜಿನಿಯರ್ ಸಿದ್ದೇಶ್, ಬೆಸ್ಕಾಂ ಎಇಇ ಶಿವ ಪ್ರಸಾದ್, ತಳಕು ಬೆಸ್ಕಾಂ ಎಇಇ ಮಮತಾ, ಇನ್ನಿತರೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದರು.

ನಗರದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಅಧಿಕಾರಿಗಳ ಪ್ರಗತಿ ಪರೀಶಿಲನೆ ಸಭೆಯಲ್ಲಿ ತಾಲೂಕು ಪಂಚಾಯತಿ ಆಡಳಿತ ಅಧಿಕಾರಿ ಮಂಜು ನಾಥ್ ಮಾತನಾಡಿದರು.

ತಾಲೂಕಿನಲ್ಲಿ 530 ಅಂಗನವಾಡಿ ಕೇಂದ್ರಗಳಿವೆ. ಅವುಗಳಲ್ಲಿ 139 ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡವಿಲ್ಲದೆ ಬಾಡಿಗೆ ಕಟ್ಟಡ, ಸಮುದಾಯ ಭವನ, ಶಾಲಾ ಕೊಠಡಿ, ಹೀಗೆ ಇನ್ನಿತರೆ ಬಾಡಿಗೆ ಕಟ್ಟಡದಲ್ಲಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗಿದೆ ಆದ್ದರಿಂದ ಅತೀ ತುರ್ತಾಗಿ 139 ಅಂಗನವಾಡಿ ಕೇಂದ್ರಗಳಿಗೆ ತುರ್ತು ಇದೆ.
-ಹರಿಪ್ರಸಾದ್, ಶಿಶು ಅಭಿವೃದ್ಧಿ ಮಕ್ಕಳ ಕಲ್ಯಾಣ ಅಧಿಕಾರಿ

ಪ್ರಾಂತ ಸಮ್ಮೇಳನ ಪೋಸ್ಟರ್ ಬಿಡುಗಡೆ

ಚಿತ್ರದುರ್ಗ: ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತದ 44ನೇ ಪ್ರಾಂತ ಸಮ್ಮೇಳನ ಜ. 31 ಫೆ. 1, 2 ರಂದು ಶಿವಮೊಗ್ಗದಲ್ಲಿ ಜರುಗ ಲಿದ್ದು, ಇದರ ಪೋಸ್ಟರ್‌ನ್ನು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಚಿತ್ರದುರ್ಗದ ವತಿಯಿಂದ ಮಾದಾರ ಗುರುಪೀಠದ ಶ್ರೀಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಅವರು ಮಠದ ಆವರಣದಲ್ಲಿ ಬಿಡುಗಡೆ ಮಾಡಿದರು.

ಕಳೆದ ಭಾರಿ 43ನೇ ಪ್ರಾಂತ ಸಮ್ಮೇಳನ ನವದೆಹಲಿಯಲ್ಲಿ ನಡೆದಿತ್ತು. 2016 ರಲ್ಲಿ ನಡೆದ 35ನೇ ರಾಜ್ಯ ಸಮ್ಮೇಳನದ ಉದ್ಘಾಟನೆಯನ್ನು ಶ್ರೀಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ನೆರವೇರಿಸಿದ್ದರು. 44ನೇ ಪ್ರಾಂತ ಸಮ್ಮೇಳನ ಶಿವಮೊಗ್ಗದಲ್ಲಿ ನಡೆಯಲಿರುವ ಪೋಸ್ಟರ್‌ನ್ನು ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಬಿಡುಗಡೆ ಮಾಡಿ ಕಾರ್ಯಕ್ರಮ ಯಶಸ್ವಿಯಾಗಲಿ ಎಂದು ಆರ್ಶಿವದಿಸಿದರು. ಇದೇ ಸಂದರ್ಭದಲ್ಲಿ ಚಿತ್ರದುರ್ಗ ನಗರದ ವಿವಿಧ ಕಾಲೇಜಿನಲ್ಲಿ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಡಾ.ಸ.ರಾ. ಲೇಪಾಕ್ಷ, ಗೋಪಿ, ಕನಕರಾಜ್ ಕೋಡಿಹಳ್ಳಿ, ಸಂಜಯ್, ತಿಪ್ಪೇಶ್, ಚರಣ್, ವಿಕಾಸ್, ಮಧು ,ಮನೋಜ್,ಜೀವನ್ ಭಾಗವಹಿಸಿದ್ದರು.

44ನೇ ಪ್ರಾಂತ ಸಮ್ಮೇಳನ ಪೋಸ್ಟರ್‌ನ್ನು ಶ್ರೀಬಸವ ಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಬಿಡುಗಡೆ ಮಾಡಿದರು.

ಕೆಪಿಎಸ್‌ಸಿ ಪರೀಕ್ಷಾ ಮಾರ್ಗಸೂಚಿ ಪಾಲನೆಗೆ ಸೂಚನೆ

ಚಿತ್ರದುರ್ಗ: ಜ.19 ಮತ್ತು 25 ರಂದು ಕೆಪಿ ಎಸ್‌ಸಿ ವತಿಯಿಂದ ವಿವಿಧ ಇಲಾಖೆಗಳ ಗ್ರೂಪ್ ಬಿ ಉಳಿಕೆ ಮೂಲ ವೃಂದದಲ್ಲಿನ ಹುದ್ದೆಗಳ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದೆ. ಅಭ್ಯರ್ಥಿಗಳು ಕಡ್ಡಾಯವಾಗಿ ಕೆಪಿಎಸ್‌ಸಿ ಹೊರಡಿಸಿರುವ ಪರೀಕ್ಷಾ ಮಾರ್ಗಸೂಚಿಗಳನ್ನು ಪಾಲಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಸೂಚಿಸಿದರು.

ಈ ಕುರಿತು ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜರುಗಿದ ಪೂರ್ವ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪರೀಕ್ಷಾ ಅಕ್ರಮಗಳನ್ನು ತಡೆಯುವ ದೃಷ್ಟಿಯಿಂದ ಕೆಪಿಎಸ್‌ಸಿ ಅಭ್ಯರ್ಥಿಗಳು ಪಾಲಿಸ ಬೇಕಾದ ಪರೀಕ್ಷಾ ಮಾರ್ಗಸೂಚಿಗಳನ್ನು ರೂಪಿಸಿದೆ. ಆನ್‌ಲೈನ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವ ಪ್ರವೇಶ ಪತ್ರದಲ್ಲಿ ಅಭ್ಯರ್ಥಿಗಳು ಈ ಸೂಚನೆಗಳು ಓದಿ ಪಾಲಿಸಬೇಕು. ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಂಡ ಪ್ರವೇಶ ಪತ್ರವನ್ನು ಹಾಗೂ ಅಭ್ಯರ್ಥಿಯ ಭಾವಚಿತ್ರವಿರುವ ಚುನಾವಣಾ ಐಡಿ, ಆಧಾರ್ ಕಾರ್ಡ್, ಡ್ರೈವಿಂಗ್ ಲೈಸನ್ಸ್, ಪ್ಯಾನ್ ಕಾರ್ಡ್, ಪಾಸ್‌ಪೋರ್ಟ್, ಸರಕಾರಿ ನೌಕರರ ಮೂಲ ಗುರುತಿನ ಚೀಟಿ ಪರಿಶೀಲನೆ ನಂತರವೇ ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ನೀಡಲಾಗುವುದು. ಕೊಠಡಿಯೊಳಗೆ ಯಾವುದೇ ಆಧುನಿಕ ಉಪಕರಣಗಳಾದ ಮೊಬೈಲ್, ಬ್ಲೂಟೂತ್, ಕ್ಯಾಲ್ಕು ಲೇಟರ್, ವೈಟ್ ಫ್ಲೂಯಿಡ್, ವೈರ್‌ಲೆಸ್ ಸೆಟ್ಸ್, ಪೇಪರ್, ಬುಕ್‌ಗಳನ್ನು ತೆಗೆದುಕೊಂಡು ಹೋಗುವಂತಿಲ್ಲ, ಎಚ್ಚರಿಕೆಯಿಂದ ಪರೀಕ್ಷಾ ಕಾರ್ಯ ನಿರ್ವಹಿಸಲು

ನಿರ್ದೇಶನ: ಸ್ಪರ್ಧಾತ್ಮಕ ಪರೀಕ್ಷೆ ನಿರ್ವಹಣೆ ಕಾರ್ಯ ಅತಿ ಸೂಕ್ಷ್ಮವಾದದ್ದು, ಅಭ್ಯರ್ಥಿಗಳ ಭವಿಷ್ಯ ಇದರಲ್ಲಿ ಅಡಗಿದೆ. ಅಕ್ರಮಗಳಿಗೆ ಅವಕಾಶ ಮಾಡಿಕೊಡದಂತೆ ಎಚ್ಚರಿಕೆಯಿಂದ, ಪರೀಕ್ಷಾ ಕಾರ್ಯ ನಿರ್ವಹಿಸಬೇಕು. ಪ್ರಾಮಾಣಿಕ ಅಭ್ಯರ್ಥಿಗಳಿಗೆ ಅನ್ಯಾಯವಾಗಬಾರದು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ನಿರ್ದೇಶನ ನೀಡಿದರು.

ಜಾಮರ್ ಅಳವಡಿಕೆ: ಮೊಬೈಲ್ ಬ್ಲೂಟೂತ್ ಮತ್ತು ಇತರೆ ಆಧುನಿಕ ಸಂವಹನ ಉಪಕರಣಗಳನ್ನು ಬಳಸಿ ಪರೀಕ್ಷೆಯಲ್ಲಿ ಅಕ್ರಮಗಳನ್ನು ಎಸಗುವುದನ್ನು ತಡೆಯಲು ಪರೀಕ್ಷಾ ಕೇಂದ್ರಗಳಲ್ಲಿ ಜಾಮರ್ ಅಳವಡಿಕೆ ಮಾಡಲಾಗುವುದು. ಪ್ರತಿ ಕೊಠಡಿಯಲ್ಲಿ ಸಿಸಿ ಟಿವಿ ಕ್ಯಾಮೆರಾ ಅಳವಡಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರೇಣುಪ್ರಸಾದ್, ಜಿಲ್ಲಾ ಖಜಾನಾಧಿಕಾರಿ ರಮೇಶ್ ಅರೆ ಮಲ್ಲಾಪುರ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜರುಗಿದ ಪೂರ್ವ ಸಿದ್ದತಾ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಮಾತನಾಡಿದರು.

ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ

ಪರೀಕ್ಷಾ ಪಾವಿತ್ರ್ಯತೆ ಕಾಪಾಡುವ ದೃಷ್ಟಿಯಿಂದ ಜ.19 ಹಾಗೂ 25 ರಂದು ಪರೀಕ್ಷೆ ನಡೆಯುವ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ವ್ಯಾಪ್ತಿ ಪ್ರದೇಶದಲ್ಲಿ ಸೆಕ್ಷನ್ 114 ವಿಧಿಸಿ ನಿಷೇ ಧಾಜ್ಞೆ ಜಾರಿ ಮಾಡಿ, ಆದೇಶ ಹೊರಡಿಸ ಲಾಗು ವುದು. ಪರೀಕ್ಷಾ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುವ ಜೆರಾಕ್ಸ್, ಕಂಪ್ಯೂಟರ್ ಹಾಗೂ ಇಂಟರ್‌ನೆಟ್ ಸೆಂಟರ್‌ಗಳನ್ನು ತೆರೆಯುವುದನ್ನು ನಿಷೇಧಿ ಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಹೇಳಿದರು.

ಆಧುನಿಕ ತಂತ್ರಜ್ಞಾನದ ಬಳಸಿ ಪರೀಕ್ಷಾ ಅಕ್ರಮ ಎಸಗುವುದನ್ನು ತಡೆಯುವ ನಿಟ್ಟಿನಲ್ಲಿ ಮೆಟಲ್ ಡಿಟೆಕ್ಟರ್ ಹಾಗೂ ಎಲ್ಇಡಿ ಬ್ಯಾಟರಿ ಬಳಸಿ ಅಭ್ಯರ್ಥಿಗಳನ್ನು ತಪಾಸಣೆ ನಡೆಸಲಾಗುವುದು. ಪುರುಷ ಮತ್ತು ಮಹಿಳಾ ಭದ್ರತಾ ಸಿಬ್ಬಂದಿಗಳಿಂದ ಫ್ರಿಸ್ಕಿಂಗ್ ಕಾರ್ಯವನ್ನು ನೆರವೇರಿಸಲಾಗುವುದು. ಆದ್ದರಿಂದ ಅಭ್ಯರ್ಥಿಗಳು ಪರೀಕ್ಷೆ ಪ್ರಾರಂಭವಾಗುವ 02 ಗಂಟೆ ಮೊದಲು ಕಡ್ಡಾಯವಾಗಿ ಪರೀಕ್ಷಾ ಕೇಂದ್ರದಲ್ಲಿ ಹಾಜರಿರಬೇಕು.
-ಬಿ.ಟಿ.ಕುಮಾರಸ್ವಾಮಿ, ಅಪರ ಜಿಲ್ಲಾಧಿಕಾರಿ

ಹೊಳಲ್ಕೆರೆ ಪಿಲ್‌ಡಿ ಬ್ಯಾಂಕ್ ಚುನಾವಣೆ ನಿಗದಿಯಾಗಿದ್ದು ಜ.28 ರಂದು ಚುನಾವಣೆ ನಡೆಯಲಿದ್ದು, ನಾಮಪತ್ರ ಸಲ್ಲಿಕೆಗೆ ಅತಿ ಹೆಚ್ಚು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುತ್ತಿದ್ದಾರೆ. ಗುರುವಾರ ಹೊಳಲ್ಕೆರೆ ಪಟ್ಟಣದ ನಾಗರಾಜ್ ಹದಡಿ ಸಾಲಗಾರರಲ್ಲದ ಕ್ಷೇತ್ರಕ್ಕೆ ನಾಮಪತ್ರ ಸಲ್ಲಿಸಿದರು. ಸೂಚಕರಾಗಿ ಎಸ್, ವೇದಮೂರ್ತಿ ಹಾಗೂ ರಾಷ್ಟ್ರಪ್ರಶಸ್ತಿ ವಿಜೇತ ಚಿತ್ತಪ್ಪನವರು, ಬ್ಯಾಂಕ್ ವ್ಯವಸ್ಥಾಪಕ ರಾಘವೇಂದ್ರ ರೆಡ್ಡಿ ಅವರಿಗೆ ನಾಮಪತ್ರ ಸಲ್ಲಿಸಿದರು.

ಜ.21ಕ್ಕೆ ಕಾಂಗ್ರೆಸ್ ಶತಮಾನೋತ್ಸವ

ಹರಿಹರ : ಬೆಳಗಾವಿಯಲ್ಲಿ ಜ.21ರಂದು ಜರುಗಲಿರುವ ಕಾಂಗ್ರೆಸ್ ಪಕ್ಷದ ಜೈ ಬಾಪು,ಜೈ ಭೀಮ್, ಜೈ ಸಂವಿಧಾನ ಕಾಂಗ್ರೆಸ್ ಶತಮಾನೋತ್ಸವ ಬೃಹತ್ ಸಮಾವೇಶಕ್ಕೆ ಹರಿಹರ ವಿಧಾನಸಭಾ ಕ್ಷೇತ್ರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಲಾಗುವುದು ಎಂದು ಕಾಂಗ್ರೆಸ್ ಮುಖಂಡ, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ನಂದಿಗಾವಿ ಎನ್.ಎಚ್. ಶ್ರೀನಿವಾಸ್ ತಿಳಿಸಿದರು. ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಆದೇಶದ ಮೇರೆಗೆ ಬೆಳಗಾವಿಗೆ ತೆರಳಲಿರುವ ಎಲ್ಲಾ ಕಾರ್ಯಕರ್ತರು ತಮ್ಮದೇ ಆದ ಸ್ವಂತ ಖರ್ಚಿನಲ್ಲಿ, ಸ್ವಂತ ವಾಹನದಲ್ಲಿ ತೆರಳಿ ತಮ್ಮ ಪಕ್ಷ ನಿಷ್ಠೆಯನ್ನು ಮೆರಸುವಂತೆ ತಿಳಿಸಿದ್ದಾರೆ ಎಂದು ಹೇಳಿದರು. ಮಾಜಿ ಶಾಸಕ ಎಸ್.ರಾಮಪ್ಪ ಮಾತನಾಡಿ, ಕಳೆದ ಡಿಸೆಂಬರ್‌ನಲ್ಲಿ ನಡೆದ ವಿಧಾನಸಭಾ ಅಧಿವೇಶನದ ಸಂದರ್ಭದಲ್ಲಿ ನಡೆಯಬೇಕಾಗಿದ್ದ ಕಾಂಗ್ರೆಸ್ ಸಮಾವೇಶವು ಮಾಜಿ ಪ್ರಧಾನಿ ಮನಮೋಹನ್ ಸಿಂಗರವರ ನಿಧನರಾದ ಹಿನ್ನೆಲೆಯಲ್ಲಿ ಮುಂದೂಡಲಾಗಿದ್ದ ಅಧಿವೇಶನವನ್ನು ಜ.21ರಂದು ಆಯೋಜನೆ ಮಾಡಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ಕಾರ್ಯದರ್ಶಿ ಹಾಗೂ ಹರಿಹರ ವಿಧಾನಸಭಾ ಕ್ಷೇತ್ರದ ಉಸ್ತುವಾರಿ ವಿಜಯಕುಮಾರ್ ಮಾತನಾಡಿದರು.

ಸರಕಾರಿ ಜಾಹೀರಾತು ದರ ಪರಿಷ್ಕರಣೆಗೆ ಹೋರಾಟ

ದಾವಣಗೆರೆ: ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ಕಳೆದ ಹಲವು ವರ್ಷಗಳಿಂದ ಬಾಕಿ ಇರುವ ಜಾಹೀರಾತು ದರ ಶೀಘ್ರದಲ್ಲಿಯೇ ಸರಕಾರ ಪರಿಷ್ಕರಣೆ ಮಾಡದಿದ್ದರೆ ಹೋರಾಟ ಅನಿವಾರ್ಯ ಎಂದು ಕರ್ನಾಟಕ ಕಾರ್ಯನಿರತ ದಿನ ಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯಾಧ್ಯಕ್ಷ ಎ.ಸಿ. ತಿಪ್ಪೇಸ್ವಾಮಿ ತಿಳಿಸಿದರು.

ದಾವಣಗೆರೆಯಲ್ಲಿ ಬಂಟರ ಭವನದಲ್ಲಿ ನಡೆದ ಕರ್ನಾಟಕ ಕಾರ್ಯನಿರತ ದಿನ ಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯ ಕಾರ್ಯಕಾರಿಣಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಾಹೀರಾತು ನೀತಿ 2013 ಅನುಷ್ಠಾನ ನಿಯ ಮಗಳು 2014ರ ಪ್ರಕಾರ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳ ಜಾಹೀರಾತು ದರ ಪ್ರತಿ ಎರಡು ವರ್ಷಕ್ಕೊಮ್ಮೆ ಶೇ. 12ರಷ್ಟು ಹೆಚ್ಚಳ ಮಾಡಬೇಕು. ಆದರೆ, ಕಳೆದ 4 ವರ್ಷದಿಂದ ಹೆಚ್ಚಳ ಮಾಡಿಲ್ಲ. ಇದರಿಂದ ಶೇ. 24ರಷ್ಟು ಜಾಹೀರಾತು ದರ ಈಗ ಹೆಚ್ಚಳವಾಗಬೇಕಾಗಿದೆ ಎಂದರು.

ಸಂಘದ ರಾಜ್ಯ ಉಪಾಧ್ಯಕ್ಷ ಮಂಜುನಾಥ ಬಿ.ಅಬ್ಬಿಗೇರಿ, ಸಂಘದ ರಾಜ್ಯ ಉಪಾಧ್ಯಕ್ಷ ಭೀಮ ರಾಯ ಹದ್ದಿನಾಳ ಮಾತನಾಡಿದರು.ರಾಜ್ಯ ಘಟಕದ ಪದಾಧಿಕಾರಿಗಳು ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಬರುವ 7 ಜಿಲ್ಲೆಗಳ ಜಿಲ್ಲಾ ಘಟಕಗಳ ಪದಾಧಿಕಾರಿಗಳನ್ನು ಒಳಗೊಂಡು ಹೋರಾಟಕ್ಕೆ ನಿರ್ಧರಿಸಲಾಯಿತು. ಸಂಘದ ಬಲವ ರ್ಧನೆ, ಸದಸ್ಯತ್ವ ಹಾಗೂ ಉಳಿದ ಜಿ ಲ್ಲಾ ಘಟಕಗಳ ರಚನೆ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷ ರಾಮಕೃಷ್ಣ ಮಾಮರ, ಗೋವಿಂದಪ್ಪ, ಮಹ್ಮದ್ ಯುನೂಸ್, ಎಚ್.ಎಸ್. ಹರೀಶ, ರಾಜ್ಯ ಸಮಿತಿ ಸದಸ್ಯ ಆಶೋಕ ಕರಂಜಿ, ಜಿಲ್ಲಾಧ್ಯಕ್ಷ ಸುರೇಶ ಆರ್. ಕುಣಿಬೆಳಕೆರೆ ಉಪಸ್ಥಿತರಿದ್ದರು. ರಾಜ್ಯ ಖಜಾಂಚಿ ಎಸ್.ಟಿ. ವೇದಮೂರ್ತಿ ಸ್ವಾಗತಿಸಿದರು.

ದಾವಣಗೆರೆಯಲ್ಲಿ ಬಂಟರ ಭವನದಲ್ಲಿ ಕರ್ನಾಟಕ ಕಾರ್ಯನಿರತ ದಿನ ಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯ ಕಾರ್ಯಕಾರಿಣಿ ಸಭೆ ಉದ್ಘಾಟಿಸಿದರು.

ರಾಜ್ಯದಲ್ಲಿ ಇರುವ ಎಲ್ಲ ಪತ್ರಿಕೆಗಳಿಗೆ ಮಾಧ್ಯಮ ಪಟ್ಟಿಗೆ ಸೇರಿ 5 ವರ್ಷ ಪೂರೈಸಿದ್ದರೆ ಅಂತಹ ಪತ್ರಿಕೆಗಳಿಗೆ ಸರಕಾರ ಪ್ರತಿ ತಿಂಗಳು 2 ಪುಟಗಳ ಜಾಹೀರಾತು ನೀಡುತ್ತಿದೆ. ಅದೇ ರೀತಿ ಒಬಿಸಿ ಬ್ರಾಹ್ಮಣ ಸಮುದಾಯದ ಪತ್ರಿಕೆಗಳಿಗೂ ಮಾಧ್ಯಮ ಪಟ್ಟಿಗೆ ಸೇರಿ 5 ವರ್ಷದೊಳಗೆ ಇದ್ದರೆ ಇವುಗಳಿಗೂ 1 ಪುಟ ಜಾಹೀರಾತು ನೀಡಿ ಪ್ರೋತ್ಸಾಹಿಸಬೇಕು.
-ಎ.ಸಿ.ತಿಪ್ಪೇಸ್ವಾಮಿ, ದಿನ ಪತ್ರಿಕೆ ಸಂಪಾದಕರ ಸಂಘದ ರಾಜ್ಯಾಧ್ಯಕ್ಷ

ನಾವು ದರ್ಶನ್ ಮನೆಗೆ ಹೋಗಿಲ್ಲ: ಕಾಶಿನಾಥ್

ಚಿತ್ರದುರ್ಗ: ಫೇಸ್‌ಬುಕ್‌ನಲ್ಲಿ ಕೆಲವು ವಿಚಾರಗಳು ಹರಡುತ್ತಿರುವುದು ನಮ್ಮ ಮನಸ್ಸಿಗೆ ನೋವುಂಟಾಗಿದೆ ಎಂದು ದರ್ಶನ್ ಗ್ಯಾಂಗ್‌ನಿಂದ ಕೊಲೆಗೀಡಾಗಿರುವ ಚಿತ್ರದುರ್ಗದ ರೇಣುಕಾಸ್ವಾಮಿ ತಂದೆ ಕಾಶಿನಾಥ ಶಿವನಗೌಡ್ರು ದುಃಖ ತೋಡಿಕೊಂಡರು. ತುರುವನೂರು ರಸ್ತೆಯಲ್ಲಿರುವ ತಮ್ಮ ನಿವಾಸದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ನಟ ದರ್ಶನ್ ಮನೆಗೆ ಹೋಗಿದ್ದೆವು. ದರ್ಶನ್ ನಮ್ಮ ಮನೆಗೆ ಬಂದಿದ್ದ ಎಂಬ ಸುದ್ದಿ ಫೇಸ್‌ಬುಕ್‌ನಲ್ಲಿ ಕೆಲವರು ಹರಡುತ್ತ ನಮ್ಮ ಕುಟುಂಬವನ್ನು ಕೆದಕಿ ನೋವುಂಟು ಮಾಡುತ್ತಿದ್ದಾರೆ. ನಾವು ಯಾರನ್ನು ಭೇಟಿಯಾಗಿಲ್ಲ. ಹೊಸ ಕಾರ್ ಬುಕ್ ಮಾಡಿದ್ದೇವೆಂಬ ವಿಚಾರಗಳು ಸುಳಿದಾಡುತ್ತಿವೆ. ಮಗನನ್ನು ಕಳೆದುಕೊಂಡಿರುವ ನಾವುಗಳು ಕಾರ್ ತೆಗೆದುಕೊಂಡು ಏನು ಮಾಡುವುದು. ಒಂದು ವೇಳೆ ಸರಕಾರ ನೌಕರಿ ಕೊಡದಿದ್ದರೆ ರೇಣುಕಾಸ್ವಾಮಿ ಪತ್ನಿ ಹಾಗೂ ಮಗು ಬೀದಿ ಪಾಲಾಗುತ್ತಾರೆ. ನಮ್ಮ ಮನವಿಯನ್ನು ಸರಕಾರ ಪುನರ್ ಪರಿಶೀಲಿಸಿ ಸರಕಾರಿ ನೌಕರಿ ಕೊಡುವಂತೆ ಕಾಶಿನಾಥ ಶಿವನಗೌಡ್ರು ಮನವಿ ಮಾಡಿದರು. ರೇಣುಕಾಸ್ವಾಮಿ ಚಿಕ್ಕಪ್ಪ ಎಸ್.ಷಡಾಕ್ಷರಯ್ಯ ಮಾತನಾಡಿ ಫೇಸ್‌ಬುಕ್‌ನಲ್ಲಿ ಎಲ್ಲೆಡೆ ಹರಡುತ್ತಿರುವ ಫೇಕ್ ಸುದ್ದಿಯಿಂದ ನಮ್ಮ ಮನಸ್ಸಿಗೆ ನೋವಾಗುತ್ತಿದೆ. ಟ್ರಯಲ್ ಕೋರ್ಟ್‌ನಿಂದ ಫಾಸ್ಟ್ ಟ್ರಾಕ್‌ಗೆ ವರ್ಗಾಯಿಸಿ ಕೊಲೆ ಆರೋಪಿಗಳಿಗೆ ತಕ್ಕ ಶಿಕ್ಷೆಯಾಗಬೇಕು. ರೇಣುಕಾಸ್ವಾಮಿ ಪತ್ನಿಗೆ ಸರಕಾರಿ ನೌಕರಿ ಕೊಡಬೇಕೆಂದು ಕೇಳಿದ್ದೇವೆ. ಅವಕಾಶವಿಲ್ಲವೆಂದು ಸರಕಾರ ಹೇಳಿದೆ.

ಸಮಾಚಾರ ಸಣ್ಣದಲ್ಲ

ವಿದ್ಯಾ ಭವನದ ವಿದ್ಯಾರ್ಥಿಗಳ ಸಾಧನೆ

ಮಂಗಳೂರು: ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯ ಮೈಸೂರು ನಡೆಸಿದ ಕರ್ನಾಟಕ ಶಾಸ್ತ್ರೀಯ ಸಂಗೀತ ಜೂನಿಯರ್ ಪರೀಕ್ಷೆಯಲ್ಲಿ ಭಾರತೀಯ ವಿದ್ಯಾ ಭವನ ಮಂಗಳೂರು ಇಲ್ಲಿಯ ವಿದ್ಯಾರ್ಥಿನಿಯರಾದ ಸೌಜನ್ಯ ಎಂ. ಪ್ರಭು (ಶೇ.94.25), ಶ್ರಾವ್ಯ .ಆರ್. ರಾಜ್ (ಶೇ.89.5), ರಾಶಿ ಯು. ಶೆಟ್ಟಿ (ಶೇ.88), ವೈಷ್ಣವಿ ಎಂ. ಆರ್ . (ಶೇ.86.5), ಚೈತ್ರ ಆರ್. ನಾಯ್ಕ್ (ಶೇ.85.5), ಸಾನ್ವಿ ಎಂ. ಕುಲಾಲ್ (77.5) ಇವರು ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಇವರು ಸಂಧ್ಯಾ ಗಣೇಶ್ ಅವರ ಶಿಷ್ಯೆಯಂದಿರು. ಹಿಂದೂಸ್ತಾನಿ ತಾಳವಾದ್ಯ (ತಬಲಾ) ಜೂನಿಯರ್ ಪರೀಕ್ಷೆಯಲ್ಲಿ ಕೆ. ಶ್ರೇಯಾಂಕ್ ಹಾಗೂ ಸಾಕ್ಷತ್. ಆರ್. ಉಳ್ಳಾಲ್ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರು ದೇವದತ್ತ ಪ್ರಭು ಅವರ ಶಿಷ್ಯರು.

ಸೋಮವಾರ

ಗಾಳಿಪಟ ಉತ್ಸವ ಜ.18ರಿಂದ

ತಣ್ಣೀರುಬಾವಿಯಲ್ಲಿ ಕೈಟ್ ಉತ್ಸವ | 11 ದೇಶಗಳ ಗಾಳಿಪಟ ತಂಡಗಳು ಭಾಗಿ

ಮಂಗಳೂರು: ಕಡಲ ಕಿನಾರೆ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವಕ್ಕೆ ಸಜ್ಜಾಗಿದೆ. ಈಗಾಗಲೇ ದೇಶ ವಿದೇಶದಲ್ಲಿ ಗಾಳಿಪಟಗಳ ಮೂಲಕ ಖ್ಯಾತಿ ಪಡೆದಿರುವ ಟೀಮ್ ಮಂಗಳೂರು ನೇತೃತ್ವದಲ್ಲಿ ಜ. 18 ಮತ್ತ 19ರಂದು ಅಂತಾರಾಷ್ಟ್ರೀಯ ಗಾಳಿ ಪಟ ಉತ್ಸವ ತಣ್ಣೀರುಬಾವಿ ಬೀಚ್‌ನಲ್ಲಿ ನಡೆಯಲಿದೆ.

11 ದೇಶಗಳು ಗಾಳಿಪಟ ತಂಡಗಳ ಜತೆಗೆ ಒರಿಸ್ಸಾ, ಕೇರಳ, ತೆಲಂಗಾಣ, ರಾಜಸ್ತಾನ, ಮಹಾರಾಷ್ಟ, ಗುಜರಾತ್ ನ ಗಾಳಿಪಟ ತಂಡಗಳೂ ವೈವಿಧ್ಯಮಯ ಗಾಳಿಪಟಗಳೊಂದಿಗೆ ಮಂಗಳೂರಿನ ಕಡಲ ಬಾನಂಗಳದಲ್ಲಿ ಎರಡು ದಿನಗಳ ಕಾಲ ಚಿತ್ತಾರ ಮೂಡಿಸಲಿದ್ದಾರೆ.

ಮಂಗಳೂರಿನ ಅಶೋಕ ನಗರದ ಸರ್ವೇಶ್ ರಾವ್ ತನ್ನ ವೃತ್ತಿ ಜೊತೆಗೆ ಗಾಳಿಪಟ ಹಾರಿಸುವುದು ಪ್ರವೃತ್ತಿ. ಪರಿಸರ ಪ್ರೇಮಿ ಸರ್ವೇಶ್ ಚಾರಣಕ್ಕೆ ತೆರಳಿದ್ದ ವೇಳೆ ಬೆಟ್ಟದ ಮೇಲೆ ಗಾಳಿಪಟ ಹಾರಿಸುತ್ತಿದ್ದನ್ನು ಕಂಡು ಚಾರಣಿಗ ಹಾಗೂ ಚಿತ್ರ ಕಲಾವಿದರೂ ಆಗಿರುವ ದಿನೇಶ್ ಹೊಳ್ಳ ಗಾಳಿಪಟ ವಿನ್ಯಾಸಕರರಾಗಿ ಸರ್ವೇಶ್ ಜತೆಗೂಡಿದರು.

ಇವರ ಜತೆ ಗಿರಿಧರ್ ಕಾಮತ್, ಪ್ರಶಾಂತ್ ಉಪಾಧ್ಯಯ, ವಿ.ಕೆ.ಸನಿಲ್, ಸತೀಶ್ ರಾವ್, ನರೇಂದ್ರ, ಅರುಣ್‌ರನ್ನು ಒಳಗೊಂಡ ಸಮಾನ ಮನಸ್ಕರ ಟೀಮ್ ಮಂಗಳೂರು ಹವ್ಯಾಸಿ ಗಾಳಿಪಟ ತಂಡವಾಗಿ ರೂಪುಗೊಂಡಿತು. ಆರಂಭದಲ್ಲಿ ಸಣ್ಣ ಸಣ್ಣ ಗಾಳಿಪಟ ಮಾಡುತ್ತಿದ್ದ ತಂಡವು ಗುಜರಾತ್ ನ ಅಂತರ್ ರಾಷ್ಟ್ರೀಯ ಗಾಳಿಪಟ ಉತ್ಸವಕ್ಕೆ ಹೋಗಲು ಆರಂಭವಾದ ನಂತರ ದೊಡ್ಡ ಗಾತ್ರದ ಮತ್ತು ಹಾರಿಸುವ ತಂತ್ರಗಾರಿಕೆಯನ್ನೂ ಕಲಿತುಕೊಂಡು ವಿದೇಶೀ ಗಾಳಿಪಟ ತಂಡಗಳ ಪರಿಚಯ ಬೆಳೆಸಿತು.

ಅಂತಾರಾಷ್ಟ್ರೀಯ ಗಾಳಿಪಟ ಉತ್ಸವ

18 ಸೂತ್ರ ಕಟ್ಟಿ ಪಣಂಬೂರು ಕಡಲ ಕಿನಾರೆಯಲ್ಲಿ ಪ್ರಾಯೋಗಿಕ ಹಾರಾಟ ನಡೆಸಿದಾಗ ಕಥಕಳಿ ಬಾನಿನ ಎತ್ತರದಲ್ಲಿ ಹಾರುತ್ತಾ ಸಾಗಿತು. ಈ ಕಥಕಳಿ ಗಾಳಿಪಟವು 2005 ರಲ್ಲಿ ಭಾರತದಲ್ಲೇ ಅತೀ ದೊಡ್ಡ ಗಾಳಿಪಟವೆಂದು ಲಿಮ್ಕಾ ಬುಕ್ ಆಫ್ ರೆಕಾರ್ಡ್ ನಲ್ಲಿ ದಾಖಲೆ ಸೃಷ್ಟಿಸಿತು. ಈ ದಾಖಲೆಯು ಟೀಮ್ ಮಂಗಳೂರು ತಂಡದ ವರ್ಚಸ್ಸನ್ನು ಬದಲಿಸಿ, 2006 ರಿಂದ ನಿರಂತರವಾಗಿ ಫ್ರಾನ್ಸ್ (7 ಬಾರಿ) ಇಂಗ್ಲೆಂಡ್, ಕೆನಡಾ, ಇಟಲಿ, ದಕ್ಷಿಣ ಕೊರಿಯಾ, ಹಾಂಗ್ ಕಾಂಗ್, ಥೈಲ್ಯಾಂಡ್, ಇಂಡೋನೇಷ್ಯ, ಶ್ರೀಲಂಕಾ, ದುಬಾಯಿ, ಕತಾರ್ ದೇಶಗಳ ಅಂತರ್ ರಾಷ್ಟ್ರೀಯ ಗಾಳಿಪಟ ಉತ್ಸವಗಳಲ್ಲಿ ಭಾಗವಹಿಸಿ ಭಾರತೀಯ ಸಂಸ್ಕೃತಿಯನ್ನು (ಯಕ್ಷಗಾನ, ಪುಷ್ಪಕ ವಿಮಾನ, ಭರತನಾಟ್ಯಮ್, ಕೋಳಿ ಕಟ್ಟ, ಗಣಪತಿ, ಭಾರತೀಯ ದಂಪತಿ, ಗರುಡ, ಭೂತದ ಕೋಲ ಮೊದಲಾದ ಬೃಹತ್ ಗಾಳಿಪಟಗಳ ಮೂಲಕ) ವಿದೇಶಗಳ ಬಾನಿನಲ್ಲಿ ಹಾರಿಸಿದ ತಂಡವು ಅಂತಾರಾಷ್ಟ್ರೀಯವಾಗಿ ಮನ್ನಣೆ ಪಡೆಯಿತು.

36 ಅಡಿ ಎತ್ತರದ ಗಾಳಿಪಟ ರಚನೆ

ಎಲ್ಲರೂ ದೊಡ್ಡದೊಂದು ಗಾಳಿಪಟ ಮಾಡಬೇಕೆಂಬ ಮಾತುಕತೆ ನಡೆದು 36 ಅಡಿ ಎತ್ತರದ ಬೃಹತ್ ಗಾಳಿಪಟ ರಚಿಸಲು ನಿರ್ಧರಿಸಿದರು. ಅಲ್ಲಿವರೆಗೆ ಕೊಡೆಗಾಗಿ ಉಪಯೋಗಿಸುವ ಬಟ್ಟೆಯಲ್ಲಿ ಗಾಳಿಪಟ ಮಾಡುತ್ತಿದ್ದ ತಂಡಕ್ಕೆ ಗಾಳಿಪಟ ರಚಿಸಲು ರಿಪ್ ಸ್ಟಾಪ್ ನೈಲಾನ್ ಎಂಬ ಬಟ್ಟೆ ಯುರೋಪ್ ದೇಶಗಳಲ್ಲಿ ಸಿಗಲಿದೆ ಎಂಬುವುದು ತಿಳಿಯಿತು. ಸರ್ವೇಶ್ ಅದನ್ನು ಅಲ್ಲಿಂದ ತರಿಸಿಕೊಂಡರು. ದಿನೇಶ್ ಹೊಳ್ಳ ಕಥಕಳಿ ವಿನ್ಯಾಸ ಮತ್ತು ಬಣ್ಣ ಸಂಯೋಜನೆ ಮಾಡಿದರೆ, ಪ್ರಶಾಂತ್ ಬಾನಂಗಳದಲ್ಲಿ ಗಾಳಿಪಟ ಹಾರಿಕೆಯ ಲೆಕ್ಕಾಚಾರವನ್ನು ಪೂರ್ಣಗೊಳಿಸಿದರು. ಗಿರಿಧರ್ ಕಾಮತ್ ಮೇಲ್ವಿಚಾರಕರಾಗಿ ಗಾಳಿಪಟ ರಚನೆ ಆರಂಭಗೊಂಡಿತು. ರಿಪ್ ಸ್ಟಾಪ್ ಬಟ್ಟೆಯನ್ನು ಆಕಾರಕ್ಕೆ ತಕ್ಕ ಕತ್ತರಿಸಿ ಅಂಟಿಸಿ, ಹೊಲಿದು ಮಾಡುವ ಈ ಆಪ್ಲಿಕ್ (ಕೋಲಾಜ್) ಕೆಲಸ ಸತತವಾಗಿ ಒಂದು ತಿಂಗಳು (ರಾತ್ರಿ ಮಾತ್ರ) ನಡೆಯಿತು.

ಸಾರ್ವಜನಿಕರ ನೆಲೆಯಲ್ಲಿ 1ನೆ ತರಗತಿಯ ಪುಟಾಣಿಯೂ ಗಾಳಿಪಟ ಹಾರಿಸಲು ಸಿದ್ದತೆ ನಡೆಸಿದ್ದಾಳೆ.

ಕೆಎಸ್‌ಆರ್‌ಟಿಸಿ ಉದ್ಯೋಗಿಯಾಗಿರುವ ಸುರತ್ಕಲ್‌ನ ಅಮಿತ್ ಕುಮಾರ್ ಅವರ ಪುತ್ರಿ ಅಕ್ಷರ ಎಂಬಾಕೆಯೂ ತಂದೆಯ ಜತೆ ಸೇರಿ ಪುಟ್ಟ ಗಾಳಿಪಟವನ್ನು ತಯಾರಿಸಿದ್ದು, ಉತ್ಸವದಲ್ಲಿ ಹಾರಿಸಲಿದ್ದಾರೆ ಎಂದು ಟೀಮ್ ಮಂಗಳೂರು ತಂಡದ ಕಲಾವಿದ ದಿನೇಶ್ ಹೊಳ್ಳ ತಿಳಿಸಿದ್ದಾರೆ.

ಹಾಸ್ಟೆಲ್ ಸೌಲಭ್ಯಕ್ಕೆ ಆದ್ಯತೆ

ಮಂಗಳೂರು: ಮಂಗಳೂರು ನಗರ ಶಿಕ್ಷಣದ ಕೇಂದ್ರವಾಗಿರುವ ಹಿನ್ನೆಲೆಯಲ್ಲಿ ಇಲ್ಲಿಗೆ ದ.ಕ. ಜಿಲ್ಲೆಯ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಮತ್ತು ರಾಜ್ಯದ ವಿವಿಧ ಜಿಲ್ಲೆಗಳ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ಆಗಮಿಸುತ್ತಿದ್ದಾರೆ. ಹೀಗಾಗಿ ಇಲ್ಲಿ ಇನ್ನಷ್ಟು ಹಾಸ್ಟೆಲ್‌ಗಳ ಆವಶ್ಯಕತೆ ಇದೆ. ಆದ ಕಾರಣ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಐದು ವರ್ಷಗಳಿಗೆ ಯೋಜನೆ ತಯಾರಿಸುವಂತೆ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಶಾಸಕ ಡಾ. ವೈ .ಭರತ್ ಶೆಟ್ಟಿ ಸೂಚನೆ ನೀಡಿದ್ದಾರೆ. ಮಂಗಳೂರು ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ನಡೆದ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಾಸ್ಟೆಲ್ ಸೀಟ್‌ಗಳಿಗೆ ಬೇರೆ ಕಡೆಗಳಿಂದ ಬರುವ ವಿದ್ಯಾರ್ಥಿಗಳಿಂದ ಸಿಗುತ್ತಿಲ್ಲ ಎಂಬ ಕೊರಗು ಇದೆ. ಅದನ್ನು ನಿವಾರಿ ಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ ಎಂದರು.

ಚಿಕ್ಕಮಗಳೂರು ಬೆಂಗಳೂರಿನಲ್ಲಿ ನಡೆದ 20ನೇ ರಾಷ್ಟ್ರಮಟ್ಟದ ಅಬಕಾಸ್ ಸ್ಪರ್ಧೆಯ ಲ್ಲಿ ನೂರರ ಮೊತ್ತದ ಲೆಕ್ಕಾಚಾರವನ್ನು ಕೇವಲ ಐದು ನಿಮಿಷದಲ್ಲಿ ಪರಿಹರಿಸಿದ ತಾಲೂಕಿನ ಸೆಂಟ್ ಮೇರಿಸ್ ಶಾಲೆಯ ವಿದ್ಯಾರ್ಥಿಗಳಾದ ಎಂ.ಸಿ.ಸಮೃದ್ಧ ಪ್ರಥಮ ಸ್ಥಾನ ಹಾಗೂ ಎಂ.ಸಿ.ನಿಶಾಂತ್ ಚಾಂಪಿಯನ್ಸ್ ಆಫ್ ಚಾಂಪಿಯನ್‌ನ್ನಾಗಿ ಹೊರಹೊಮ್ಮಿದ್ದಾರೆ. ಇಬ್ಬರು ಮಕ್ಕಳು ಜಿಲ್ಲಾ ಸಹಾಯಕ ಖಜಾನಾಧಿಕಾರಿ ಎಂ.ಆರ್.ಚೇತನ್ ಮತ್ತು ಎಂ.ಎಂ.ವನಜಾಕ್ಷಿ ಪುತ್ರರು. ಐಡಿಯಲ್ ಪ್ಲೇ ಅಬಕಾಸ್ ಸಂಸ್ಥೆಯಿಂದ ಇಬ್ಬರು ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ನಾಟಕಗಳಿಂದ ಮೌಲ್ಯಾಧಾರಿತ ಸಮಾಜ ಸೃಷ್ಟಿ ಸಾಧ್ಯ

ಕಡೂರು: ಆಧುನಿಕ ಭರಾಟೆಯಲ್ಲಿ ತಂತ್ರಜ್ಞಾನ ಅಳವಡಿಕೆ ಮತ್ತು ಸಿನಿಮಾಗಳ ಹಾವಳಿಯಿಂದ ಗ್ರಾಮೀಣ ಸೊಗಡಿನ ನಾಟಕಗಳು ಕಣ್ಮರೆಯಾಗುತ್ತಿರುವುದು ವಿಷಾದನೀಯ ಎಂದು ಕರ್ನಾಟಕ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಜಿ.ಬಿ.ಸುರೇಶ್ ತಿಳಿಸಿದರು.

ತಾಲೂಕಿನ ಗರ್ಜೆ ಗ್ರಾಮದಲ್ಲಿ ಮಂಗಳವಾರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಶ್ರೀ ಬನಶಂಕರಿ ಕೃಪಾಪೋಷಿತ ನಾಟಕ ಮಂಡಳಿ ವತಿಯಿಂದ ಏರ್ಪಡಿಸಿದ್ದ ಶ್ರೀದೇವಿ ಮಹಾತ್ಮೆ ಮಹಿಷಾಸುರ ಮತ್ತು ರಕ್ತಬೀಜ ಸುರರ ಪ್ರತಾಪದ ಪೌರಾಣಿಕ ನಾಟಕವನ್ನು ಉದ್ಘಾಟಿಸಿ ಮಾತನಾಡಿದರು.

ಜಾನಪದ ಸೊಗಡಿನ ನೈಜ ಪರಂಪರೆ, ಸಂಸ್ಕೃತಿ ಬಿಂಬಿಸುವ ನಾಟಕಗಳು ಪುರಾಣವನ್ನು ಆಧಾರಿಸಿ ರಚನೆಯಾಗಿವೆ. ಈ ಹಿಂದೆ ಪೂರ್ವಿಕರು ತಮ್ಮ ಮನರಂಜನೆಗಾಗಿ ಅರ್ಥಗರ್ಭಿತ ನಾಟಕಗಳ ಪ್ರದರ್ಶನ ಮತ್ತು ಸಂಗೀತ, ಕಲೆ ಸಾಹಿತ್ಯಕ ಅಭಿರುಚಿಯೊಂದಿಗೆ ಹೆಚ್ಚು ತೊಡಗಿಸಿಕೊಂಡು ಗ್ರಾಮದ ಒಗ್ಗಟ್ಟಿನೊಂದಿಗೆ ಆರೋಗ್ಯಕರ ಸಮಾಜ ನಿರ್ಮಿಸುವಲ್ಲಿ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದರು. ಮೌಲ್ಯಾಧಾರಿತ ಸಮಾಜ ನಿರ್ಮಾಣ ಮಾಡುವಲ್ಲಿ ಬಯಲು ನಾಟಕಗಳು ಪ್ರಮುಖ ಪಾತ್ರ ವಹಿಸುತ್ತವೆ. ಇಂದಿನ ಯುವಕರು ಬಯಲು ನಾಟಕ ಕಲೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕಿದೆ ಎಂದರು. ದೇವಾಂಗ ಸಮಾಜದ ಅಧ್ಯಕ್ಷ ಸುರೇಶ್ ಮಾತನಾಡಿ, ಇಂದಿನ ಸಮಾಜದ ಜನರಲ್ಲಿಧಾರ್ಮಿಕ ಸಹಿಷ್ಣತೆ ಮನೋಭಾವ, ನ್ಯಾಯ, ನೀತಿ, ತ್ಯಾಗ, ಮುಂತಾದ ಗುಣಗಳನ್ನು ಬೆಳೆಸುವಲ್ಲಿ ಬಯಲು ನಾಟಕಗಳು ಪ್ರಮುಖ ಪಾತ್ರ ವಹಿಸುತ್ತವೆ. ಈ ನಾಟಕ ಕಲೆಗಳು ಮುಂದಿನ ಪೀಳಿಗೆಗೆ ಮುಂದುವರೆದರೆ ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗುತ್ತವೆ ಎಂದರು.

ಕರ್ನಾಟಕ ಜಾನಪದ ಪರಿಷತ್ತಿನ ತಾಲೂಕು ಅಧ್ಯಕ್ಷ ಜಗದೀಶ್ವರಾಚಾರ್ ನಾಟಕವನ್ನು ನಿರ್ದೇಶಿಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಜಾನಪದ ಪರಿಷತ್ ಜಿಲ್ಲಾ ಘಟಕದ ವತಿಯಿಂದ ಕಲಾವಿದರಿಗೆ ಅಭಿನಂದನಾ ಪತ್ರವನ್ನು ನೀಡಿ ಗೌರವಿಸಲಾಯಿತು. ಗ್ರಾಮ ಪಂಚಾಯತಿ ಅಧ್ಯಕ್ಷ ಮಲ್ಲಿಕಾರ್ಜುನ, ಚೇತನ್, ಗ್ರಾಮದ ಮುಖಂಡ ಮರಳುಸಿದ್ದಪ್ಪ, ನಾಟಕ ಮಂಡಳಿ ಅಧ್ಯಕ್ಷ ಧನಂಜಯ, ಗಿರೀಶ, ಶಿವಣ್ಣ, ಜಯಣ್ಣ, ಸಾಹಿತಿ ಬಿಳಿಗಿರಿ ವಿಜಯಕುಮಾರ್, ಚಿಕ್ಕನಲ್ಲೂರು ಜಯಣ್ಣ, ಲೋಕೇಶ್, ಗ್ರಾಮದಗುಡಿ ಗೌಡರು ಹಾಗೂ ಗ್ರಾಮಸ್ಥರು ಇದ್ದರು.

'ಶ್ರೀದೇವಿ ಮಹಾತ್ಮೆ 'ಪೌರಾಣಿಕ ನಾಟಕವನ್ನುಕರ್ನಾಟಕ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಜಿ.ಬಿ.ಸುರೇಶ್ ಉದ್ಘಾಟಿಸಿದರು.

ಮೊಬೈಲ್, ಟಿವಿ, ಪ್ರಧಾನವಾಗಿರುವ ಇಂದಿನ ದಿನಗಳಲ್ಲಿ ಗರ್ಜೆ ಗ್ರಾಮಸ್ಥರು ಶ್ರೀದೇವಿ ಮಹಾತ್ಮೆ ಎಂಬ ಭಕ್ತಿ ಪೂರ್ಣ ನಾಟಕವನ್ನು ಹಮ್ಮಿಕೊಂಡು ಪೌರಾಣಿಕ ನಾಟಕಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ ಸಂಗತಿ. ಗ್ರಾಮೀಣ ಭಾಗದಲ್ಲಿ ಪೌರಾಣಿಕ ನಾಟಕಗಳು ಹೆಚ್ಚು ಹೆಚ್ಚು ನಡೆದಾಗ ಕಲಾವಿದರನ್ನು ಪ್ರೋತ್ಸಾಹಿಸಲು ಸಹಕಾರಿಯಾಗಲಿದೆ.

ಬಿ.ಪಿ.ದೇವಾನಂದ್, ಶರಣ ಸಾಹಿತ್ಯ ಪರಿಷತ್ ಮುಖಂಡ

ಮಂಗಳೂರಿನಲ್ಲಿ ಶುಕ್ರವಾರದಿಂದ ಪ್ರಾರಂಭಗೊಳ್ಳುವ ಕರ್ನಾಟಕ ಕ್ರೀಡಾಕೂಟದ ಸಿದ್ಧತೆಗಳನ್ನು ಮಂಗಳಾ ಕ್ರೀಡಾಂಗಣದಲ್ಲಿ ಜಿಲ್ಲಾಧಿಕಾರಿ ಮುಲ್ಲೈ ಮುಹಿಲನ್, ಪೊಲೀಸ್ ಕಮೀಷನರ್ ಅನುಪಮ್ ಅಗ್ರವಾಲ್ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಹಿರಿಯ ಅಧಿಕಾರಿಗಳು ಇದ್ದರು.

ಇಂಗ್ಲಿಷ್, ಡಿಜಿಟಲ್ ಜ್ಞಾನ ಅವಶ್ಯ

ಮೂಡುಬಿದಿರೆ: ವಿದೇಶಗಳಲ್ಲಿ ಕೆಲಸ ಪಡೆದುಕೊಳ್ಳಲು ಅಂತಾರಾಷ್ಟ್ರೀಯ ವ್ಯವಹಾರದ ಜೊತೆ ಇಂಗ್ಲಿಷ್ ಹಾಗೂ ಡಿಜಿಟಲ್ ಜ್ಞಾನ ಅವಶ್ಯ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ವ್ಯವಸ್ಥಾಪಕ ಟ್ರಸ್ಟಿ ವಿವೇಕ ಆಳ್ವ ನುಡಿದರು.

ಆಳ್ವಾಸ್ (ಸ್ವಾಯತ್ತ) ಕಾಲೇಜಿನ ನಿರ್ವ ಹಣಾ ವಿಭಾಗವು ಕುವೆಂಪು ಸಭಾಂಗಣದಲ್ಲಿ ಆಯೋ ಜಿಸಿದ ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಅಗತ್ಯವಾದ ವ್ಯವಹಾರ ಕೌಶಲ್ಯಗಳು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಆಳ್ವಾಸ್ ಪ್ರಗತಿಯು ಉದ್ಯೋಗ ಅವಕಾಶವನ್ನು ಕಲ್ಪಿಸುವಲ್ಲಿ ಪ್ರಮುಖ ವೇದಿಕೆಯಾಗಿ ರೂಪುಗೊಂಡಿದೆ ಎಂದರು. ಇನ್‌ಲ್ಯಾಂಡ್ ಗ್ರೂಪ್ ಎಕ್ಸಿಕ್ಯೂಟಿವ್ ಡೈರೆಕ್ಟರ್ ಮೆರಾಜ್ ಯೂಸುಫ್, ಕಾಲೇಜಿನ ಆಡಳಿತ ನಿರ್ವಹಣಾ ವಿಭಾಗದ ಮುಖ್ಯಸ್ಥೆ ಸುರೇಖಾ ರಾವ್, ಪ್ರಾಧ್ಯಾಪಕ ಸಂಯೋಜಕರಾದ ಸೋನಿ ವಿದ್ಯಾರ್ಥಿ ಸಂಯೋಜಕರಾದ ಹಾರ್ದಿಕ್ ಶೆಟ್ಟಿ ಮತ್ತು ಮೋಕ್ಷಿತ್ ಇದ್ದರು. ವಿದ್ಯಾರ್ಥಿನಿ ನಿರೀಕ್ಷಣ ನಿರೂಪಿಸಿ, ಆದರ್ಶ ವಂದಿಸಿದರು.

ಬ್ರಿಟೀಷರ ಆಳ್ವಿಕೆಯಿಂದ ಗುರುಕುಲ ಪದ್ಧತಿ ನಾಶ

ಚಿಕ್ಕಮಗಳೂರು: ಸ್ವಾತಂತ್ರ್ಯ ಪೂರ್ವದ ಮುನ್ನ ಸ್ಥಾಪಿತವಾದ ರಾಷ್ಟ್ರೀಯ ಸ್ವಯಂ ಸಂಘವು ಎರಡು ದಶಕಗಳ ಮೊದಲೇ ಉಗಮವಾಗಿದ್ದರೆ ಭಾರತ ರಾಷ್ಟ್ರವು ವಿಭಜನೆಗೊಳ್ಳದೇ ಅಖಂಡ ರಾಷ್ಟ್ರವಾಗಿ ಬೆಳಗುತ್ತಿತ್ತು ಎಂದು ಆರ್‌ಎಸ್‌ಎಸ್ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯಕಾರಿಣಿ ಸದಸ್ಯ ಮನೋಹರ್ ಹೇಳಿದರು.

ನಗರದ ಗಾಯತ್ರಿ ಸಮುದಾಯ ಭವನದಲ್ಲಿ ರಾಷ್ಟ್ರೀಯ ಸ್ವಯಂ ಸಂಘವು ಮಂಗಳವಾರ ಸಂಜೆ ಏರ್ಪಡಿಸಿದ್ದ ಸಂಕ್ರಾಂತಿ ಉತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿಶ್ವದ ಮುಂಚೂಣಿ ರಾಷ್ಟ್ರವಾದ ಭಾರತದ ಮೇಲೆ ಮೋಘಲರು ಸೇರಿದಂತೆ ಅನೇಕ ಮತಾಂಧ ಶಕ್ತಿಗಳು ಯುದ್ಧೋಪಾದಿಯಲ್ಲಿ ಆಕ್ರಮಣ ನಡೆಸಿದರೂ ಸೋತಿರಲಿಲ್ಲ. ಆದರೆ ಬ್ರಿಟಿಷರು ದೇಶದ ಅಧ್ಯಯನ ನಡೆಸಿ ಮೊದಲು ಗುರುಕುಲ ಪದ್ಧತಿ ನಾಶಕ್ಕೆ ಮುಂದಾಗಿದ ಕಾರಣ ಭಾರತೀಯ ಸಂಸ್ಕೃತಿಗೆ ಕೊಡಲಿಪೆಟ್ಟು ಬಿತ್ತು ಎಂದರು.

ಗುರುಕುಲ ಪದ್ಧತಿ ನಾಶಗೊಳಿಸಿ, ಮಕ್ಕಳಿಗೆ ಕಾನ್ವೆಂಟ್ ಪದ್ಧತಿ ಜಾರಿಗೆ ತಂದರು. ಕಾನ್ವೆಂಟ್ ಎಂದರೆ ಇಂಗ್ಲೇಡ್ ದೇಶದಲ್ಲಿ ಅಪ್ಪ, ಅಮ್ಮವಿಲ್ಲದ ಶಾಲೆಗಳು ಎಂದರ್ಥ. ಅಲ್ಲಿಂದ ಭಾರತ ಅಧಃಪತನಕ್ಕೆ ಮುಂದಾಗಿದ್ದನ್ನು ಕಂಡ ಸಂಘಟನೆ, ದೇಶಕ್ಕೆ ಔಷಧಿ ನೀಡುವ ಸಲುವಾಗಿ ರಾಷ್ಟ್ರಾದ್ಯಂತ ಶಾಖೆಗಳನ್ನು ಸ್ಥಾಪಿಸಿ ಹಿಂದೂ ಸಮಾಜದ ಏಳಿಗೆಗೆ ಶ್ರಮಿಸುತ್ತಿದೆ ಎಂದರು.

1925ರಲ್ಲಿ ಜನನಗೊಂಡ ಆರ್‌ಎಸ್‌ಎಸ್ ಸಂಘಟನೆ, ಕೇವಲ ಎರಡು ದಶಕಗಳ ಹಿಂದೆ ಜನಿಸಿದ್ದರೆ ಅಖಂಡ ಭಾರತದಲ್ಲಿ ಪಾಕಿಸ್ತಾನ ದೇಶ ಪ್ರತ್ಯೇಕವಾಗುತ್ತಿರಲಿಲ್ಲ. ಸ್ವಾತಂತ್ರ್ಯದ ಬಳಿಕ ಅಂದಿನ ಆಡಳಿತವು ಸಂಘಟನೆಯನ್ನು ಬೇರುಸಮೇತ ಕಿತ್ತೊಗೆಯಲು ಅನೇಕ ಸಂಚು ನಡೆಸಿ ವಿಫಲಗೊಂಡವು. ಆದರೀಗ ಸದೃಢವಾಗಿ ನಿಂತಿರುವ ಕಾರಣ ಜಗತ್ತಿನ ಅತಿದೊಡ್ಡ ಸಂಘಟನೆಯಾಗಿ ಹೊರಹೊಮ್ಮಿದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಸಂಘಟನೆ ಕಾರ್ಯಕರ್ತರಿಂದ ಶಾರೀರಿಕ ಮತ್ತು ದಂಡ ವ್ಯಾಯಾಮ ನಡೆ ಸಲಾಯಿತು.

ಬಳಿಕ ಶ್ಲೋಕ ಹಾಗೂ ಹಿಂದುತ್ವದ ಗೀತೆ ಹಾಡಲಾಯಿತು. ಈ ಸಂದರ್ಭದಲ್ಲಿ ಆರ್‌ಎಸ್‌ಎಸ್ ಜಿಲ್ಲಾ ಸಂಚಾಲಕ ಗನಶ್ಯಾಮ್ ಆಳ್ವ, ನಗರ ಸಂಚಾಲಕ ರಾಜರಾಮ್ ಕೋಟೆ ಸೇರಿದಂತೆ ಕುಟುಂಬಸ್ಥರು ಉಪಸ್ಥಿತರಿದ್ದರು.

ನಗರದ ಗಾಯತ್ರಿ ಸಮುದಾಯ ಭವನದಲ್ಲಿ ರಾಷ್ಟ್ರೀಯ ಸ್ವಯಂ ಸಂಘವು ಮಂಗಳವಾರ ಸಂಜೆ ಏರ್ಪಡಿಸಿದ್ದ ಸಂಕ್ರಾಂತಿ ಉತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಸದಸ್ಯ ಮನೋಹರ್ ಮಾತನಾಡಿದರು.

ಸದ್ಯದಲ್ಲೇ ಆರ್‌ಎಸ್‌ಎಸ್ ಸಂಘಟನೆ ಶತದಿನೋತ್ಸವಕ್ಕೆ ಕಾಲಿಡುತ್ತಿದೆ. ಸಂಘಟನಾ ಬಲವು ಮೇ ಲ್ನೋಟಕ್ಕೆ ಬಂಡೆಯಂತೆ ಕಾಣುತ್ತಿದೆ. ಕೆಳಹೊಕ್ಕಿ ವೀಕ್ಷಿಸಿದರೆ ಬೃಹದಾಕಾರವಾಗಿ ಬೆಳೆದಿದೆ. ಪ್ರಚಾರ ಬಯ ಸದೇ ರಾಷ್ಟ್ರ ಚಿಂತನೆಗೆ ಬೇರೂರಿರುವ ಏಕೈಕ ಸಂಘಟನೆ ಆರ್‌ಎಸ್ ಎಸ್ ಜಿಲ್ಲೆ, ತಾಲೂಕು ಮಟ್ಟದಲ್ಲಿ ಮಂಡಲಗಳನ್ನು ರಚಿಸಿಕೊಂಡು ಹಿಂದುತ್ವಕ್ಕಾಗಿ ಕೆಲಸ ಮಾಡುತ್ತಿದೆ.

– ಮನೋಹರ್, ದಕ್ಷಿಣ ಪ್ರಾಂತ ಕಾರ್ಯಕಾರಿಣಿ ಸದಸ್ಯ

ಸಮಾನ ಹಕ್ಕು ಅಧಿಕಾರಕ್ಕೆ ಬದ್ಧ

ಚಿಕ್ಕಮಗಳೂರು: ದೇಶದ ಮೂರನೇ ಅತಿದೊಡ್ಡ ಪಕ್ಷ ಬಿಎಸ್ಪಿಯಿಂದ ಮಾತ್ರ ಬಹುಸಂಖ್ಯಾತ ವರ್ಗಕ್ಕೆ ಸರ್ವ ಸಮಾನ ಹಕ್ಕು, ಅಧಿಕಾರ ಹಾಗೂ ಸಂವಿಧಾನವನ್ನು ಯಥಾವತ್ತಾಗಿ ಜಾರಿಗೊಳಿಸಲು ಸಾಧ್ಯವಾಗಲಿದೆ ಎಂದು ಬಿಎಸ್ಪಿ ರಾಜ್ಯ ಪ್ರದಾನ ಕಾರ್ಯದರ್ಶಿ ಕೆ.ಟಿ.ರಾಧಾಕೃಷ್ಣ ಹೇಳಿದರು.

ತಾಲ್ಲೂಕಿನ ಇಂದಾವರ ಗ್ರಾಮದ ಅನ್ನಪೂರ್ಣ ವೃದ್ಧಾಶ್ರಮದಲ್ಲಿ ಬಿಎಸ್ಪಿ ರಾಷ್ಟ್ರೀಯ ಅಧ್ಯಕ್ಷೆ, ಮಾಜಿ ಮುಖ್ಯಮಂತ್ರಿ ಮಾಯಾವತಿಯವರ 70ನೇ ಜನ್ಮದಿನವನ್ನು ಸ್ವಚ್ಚತಾ ಕಾರ್ಯ ಹಾಗೂ ಹಿರಿಯರಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಕಲ್ಪಿಸಿ ಅರ್ಥಪೂರ್ಣವಾಗಿ ಬುಧವಾರ ಆಚರಿಸಿ ಮಾತನಾಡಿದರು.

ಉತ್ತರ ಪ್ರದೇಶದಲ್ಲಿ ನಾಲ್ಕು ಭಾರಿ ಮುಖ್ಯಮಂತ್ರಿಗಳಾಗಿ ಅಂಬೇಡ್ಕರ್ ಆಶಯದಂತೆ ಅಧಿಕಾರ ನಿರ್ವಹಿಸಿದ ಕೀರ್ತಿ ಮಾಯಾವತಿ ಅವರಿಗೆ ಸಲ್ಲುತ್ತದೆ. ಶೋಷಿತರು, ಬಡವರು, ನಿವೇಶನ ಹಾಗೂ ಸೌಲಭ್ಯ ವಂಚಿತರಿಗೆ ನಿವೇಶನ, ನೌಕರಿ, ವಸತಿ ಹಾಗೂ ಉಳುವವನಿಗೆ ಭೂಮಿ ವ್ಯವಸ್ಥೆ ಕಲ್ಪಿಸಿಕೊಟ್ಟು ಸಹಾಯಕರಿಗೆ ಆಸರೆಯಾಗಿದ್ದರು ಎಂದರು.

ಪ್ರಸ್ತುತ ದೇಶ ಮತ್ತು ರಾಜ್ಯವನ್ನು ಆಳುತ್ತಿರುವ ಎರಡು ರಾಷ್ಟ್ರೀಯ ಪಕ್ಷಗಳು ಬಹುಸಂಖ್ಯಾತರ ಜಾತಿ ಹೆಸರೇಳಿಕೊಂಡು ಅಧಿಕಾರ ಗಿಟ್ಟಿಸಿವೆ ಹೊರತು ಸಮಗ್ರವಾಗಿ ದೊರೆಯಬೇಕಾದ ಅಧಿಕಾರ ನೀಡಿಲ್ಲ,

ದುಡಿ ಯುವ ವರ್ಗಕ್ಕೆ ನ್ಯಾಯಬದ್ಧ ಹಕ್ಕು, ಸುಸ್ಥಿರ ಜೀವನ ನೀಡದೇ ಸುಳ್ಳು ಹೇಳಿ, ಮತಪಡೆದು ದಿಕ್ಕುತಪ್ಪಿಸುವ ಕೆಲಸ ಮಾಡುತ್ತಿವೆ ಎಂದು ಹೇಳಿದರು.

ದೇಶದಲ್ಲಿ ಹಿಂದುಳಿದ ವರ್ಗಗಳಿಗೆ ಸಂವಿಧಾನ ಜಾರಿಗೊಳಿಸಿ ಭವಿಷ್ಯದಲ್ಲಿ ಸದೃಢ ದೇಶ ನಿರ್ಮಿಸಲು ಕೇಂದ್ರದಲ್ಲಿ ಮಾಯಾವತಿ ಪ್ರಧಾನಿಯಾದರೆ ಮಾತ್ರ ಸಾಧ್ಯ.

ಹೀಗಾಗಿ ಕಾರ್ಯಕರ್ತರು ಸ್ಥಳೀಯ ಮಟ್ಟದಿಂದ ಪಾರ್ಲಿಮೆಂಟ್‌ವರೆಗೂ ಶ್ರಮಿಸಬೇಕಿದ್ದು ಒಗ್ಗಟ್ಟಿನಿಂದ ಕೈಜೋಡಿಸಿ, ಆಡಳಿತ ಪಕ್ಷಕ್ಕೆ ಸರಿಯಾದ ಪಾಠ ಕಲಿಸಬೇಕಿದೆ ಎಂದರು. ಈ ಸಂದರ್ಭದಲ್ಲಿ ಬಿಎಸ್ಪಿ ರಾಜ್ಯ ಕಾರ್ಯದರ್ಶಿ ಪಿ.ವೇಲಾಯುಧನ್, ಜಿಲ್ಲಾ ಉಪಾಧ್ಯಕ್ಷೆ ಕೆ. ಎಸ್. ಮಂಜುಳಾ, ತಾಲ್ಲೂಕು ಅಧ್ಯಕ್ಷ ಹೆಚ್.ಕುಮಾರ್, ಪ್ರಧಾನ ಕಾರ್ಯದರ್ಶಿ ವಸಂತ್, ಖಜಾಂಚಿ ರತ್ನ, ಮುಖಂಡರುಗಳಾದ ವೆಂಕಟೇಶ್, ಕಿಟ್ಟು, ಗಿರೀಶ್, ಶಿವಣ್ಣ ಮತ್ತಿತರಿದ್ದರು.

70ನೇ ಜನ್ಮದಿನವನ್ನು ಸ್ವಚ್ಚತಾ ಕಾರ್ಯ ಹಾಗೂ ಹಿರಿಯರಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಕಲ್ಪಿಸಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ರಾಷ್ಟ್ರದಲ್ಲಿ ಮಾಯಾವತಿಯವರನ್ನು ಪ್ರಧಾನಿಯಾಗಿಸಲು ಅಧಿಕಾರಬಲ ಬಹಳಷ್ಟಿದೆ. ಸ್ಥಳೀಯ ಜಿ.ಪಂ. ಹಾಗೂ ತಾ.ಪಂ. ಚುನಾವಣೆಯಲ್ಲಿ ಪಕ್ಷವನ್ನು ಸದೃಢಗೊಳಿಸಿ, ಅಭ್ಯರ್ಥಿಗಳ ಗೆಲುವಿಗೆ ಸಹಕರಿಸಿದಾಗ ಮಾತ್ರ ರಾಷ್ಟ್ರೀಯ ಅ ಧ್ಯಕ್ಷ ಜನ್ಮದಿನಕ್ಕೆ ನೈತಿಕ ಅರ್ಥ ಬರಲಿದೆ.

– ಪಿ.ಪರಮೇಶ್ವರ್, ಬಿಎಸ್ಪಿ ಜಿಲ್ಲಾಧ್ಯಕ್ಷ

ಡಿಜಿಟಲ್ ಅರೆಸ್ಟ್ ವಂಚನೆ: ವೃದ್ಧೆ ಬಚಾವ್

ಮಂಗಳೂರಿನ: ಮಂಗಳೂರಿನ ಎಚ್.ಡಿ.ಎಫ್.ಸಿ. ಬ್ಯಾಂಕ್ ಕಂಕನಾಡಿ ಶಾಖೆಯ ಮ್ಯಾನೇಜರ್ ಅವರ ಸಕಾಲಿಕ ಎಚ್ಚರಿಕೆಯಿಂದ ಹಿರಿಯ ವೃದ್ಧೆಯೊಬ್ಬರು 'ಡಿಜಿಟಲ್ ಅರೆಸ್ಟ್' ವಂಚನೆಯಿಂದ ಕಳೆದುಕೊಳ್ಳುತ್ತಿದ್ದ 1.35 ಕೋಟಿ ರು. ರಕ್ಷಣೆಯಾಗಿದೆ. ಬ್ಯಾಂಕಿನ ಹಿರಿಯ ಗ್ರಾಹಕಿಯೊಬ್ಬರು ಎಚ್.ಡಿ.ಎಫ್.ಸಿ. ಬ್ಯಾಂಕ್ ಕಂಕನಾಡಿ ಶಾಖೆಯಲ್ಲಿ 1.35 ಕೋಟಿ ರು. ಫಿಕ್ಸೆಡ್ ಡಿಪಾಸಿಟ್ ಇರಿಸಿದ್ದರು. ಮತ್ತು ಬ್ರಾಂಚ್ ಮ್ಯಾನೇಜರ್ ಅವರಲ್ಲಿ ಬಂದು ತಕ್ಷಣವೇ ಹಣವನ್ನು ನೀಡುವಂತೆ ಕೋರಿದರು. ಗ್ರಾಹಕರು ಬಹಳ ಆತಂಕದಿಂದ ಇರುವುದನ್ನು ಕಂಡ ಶಾಖೆಯ ಮ್ಯಾನೇಜರ್ ಏನೋ ತಪ್ಪಾಗಿದೆ ಎಂದು ಗ್ರಹಿಸಿದರು.

ಮತ್ತೊಬ್ಬರೊಂದಿಗೆ ಗ್ರಾಹಕರು ಕರೆಯಲ್ಲಿ ನಿರತರಾಗಿದ್ದನ್ನು ಗಮನಿಸಿದ್ದು ಹಾಗೂ ಆಗಾಗ್ಗೆ ಪಾವತಿಯ ಪ್ರಗತಿಯ ಬಗ್ಗೆ ಅಪ್ಡೇಟ್ ಮಾಡುತ್ತಿದ್ದುದನ್ನು ಗಮನಿಸಿದ ಮ್ಯಾನೇಜರ್ ಅವರಿಗೆ ಅದು ಸೈಬರ್ ವಂಚನೆ (ಡಿಜಿಟಲ್ ಅರೆಸ್ಟ್) ಎಂಬ ಅನುಮಾನ ಬಂದಿತು.

ಬ್ರಾಂಚ್ ಮ್ಯಾನೇಜರ್ ಗ್ರಾಹಕಿಯೊಂದಿಗೆ ಮಾತನಾಡಿದಾಗ ಸೈಬರ್ ವಂಚಕರು ಕಾರ್ಯಾಚರಣೆ ನಡೆಸುತ್ತಿದ್ದ ಅನುಮಾನ ಬಂದಿತು, ತಕ್ಷಣವೇ ಅವರು ಮಂಗಳೂರಿನ ನಗರ ಕ್ರೈಮ್ ಬ್ರಾಂಚ್ ಸಂಪರ್ಕಿಸಿದರು. ಪೊಲೀಸರು ನಂಬರ್ ಬ್ಲಾಕ್ ಮಾಡಲು ಮತ್ತು ಪ್ರಕರಣ ವರದಿ ಮಾಡಲು ಗ್ರಾಹಕರಿಗೆ ನೆರವಾದರು.

ವಂಚಕರು ವೃದ್ಧೆ ಗ್ರಾಹಕಿಯನ್ನು ಪೊಲೀಸ್ ಅಧಿಕಾರಿಗಳು ಎಂದು ಹೇಳಿ ವಂಚಿಸಲು ಪ್ರಯತ್ನಿಸುತ್ತಿದ್ದರು.

ಅವರು ಜಾರಿ ನಿರ್ದೇಶನಾಲಯ(ಇ.ಡಿ) ದಾಳಿಯಲ್ಲಿ ಅವರು ಈ ಗ್ರಾಹಕರಿಗೆ ಸೇರಿದ 300-400 ಡೆಬಿಟ್ ಕಾರ್ಡ್ ಗಳು ಸಿಕ್ಕಿದ್ದುಅದರಲ್ಲಿ ಒಂದು ಈ ಗ್ರಾಹಕಿಗೆ ಸೇರಿದೆ ಎಂದು ಹೇಳಿದರು.

...ಮತ್ತೆ ಸಾಹುಕಾರ್ ದರ್ಬಾರ್

← ಮೊದಲಪುಟದಿಂದ

ಈ ಹಿಂದೆ ಆಯೋಜಿಸಿದ್ದ ಡಿನ್ನರ್ ಸಭೆ ಮುಂದೂಡಲಾಗಿದ್ದರೂ, ಮತ್ತೊಮ್ಮೆ ಸಮಯ ಕೋರುವ ಇರಾದೆಯನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ವ್ಯಕ್ತಪಡಿಸಿದ್ದಾರೆ. ಇವೆಲ್ಲದರ ಮದ್ಯೆ ಕೆಲ ಶಾಸಕರು ಡಿ.ಕೆ.ಶಿವಕುಮಾರ್ ಅವರನ್ನು ಬೆಂಬಲಿಸಿ ಮಾತನಾಡಿದರೆ, ಮತ್ತೆ ಹಲವರು ಸಿಎಂ ಹುದ್ದೆ / ಸಿಎಂ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಪಟ್ಟಕ್ಕೆ ಸಂಬಂಧಿಸಿದಂತೆ ಬೆಂಬಲಿಸುತ್ತಿದ್ದಾರೆ. ಮತ್ತೊಂದೆಡೆ ಬಿಜೆಪಿಯಲ್ಲಿರುವ ರಮೇಶ್ ಜಾರಕಿಹೊಳಿ ಕೂಡ ತಮ್ಮ ಸಹೋದರ ಸತೀಶ್ ರನ್ನು ಸಮರ್ಥಿಸಿಕೊಂಡು ಮೂರು ಪಕ್ಷದಲ್ಲಿ ತಮ್ಮ ಛಾಪು ಮೂಡಿಸಿ ಹೊಸ ರಾಜಕೀಯ ಲೆಕ್ಕಾಚಾರಕ್ಕೆ ಅಣಿಯಾಗಿದ್ದಾರೆ.

ಪ್ರಾದೇಶಿಕಕ್ಕೂ ರಮೇಶ್ ಆಸರೆ: ಇನ್ನು ಪ್ರಾದೇಶಿಕ ಪಕ್ಷವಾಗಿರುವ ಜೆಡಿಎಸ್ ಈಗಾಗಲೇ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಕೇಂದ್ರದ ಸಚಿವರಾಗಿದ್ದಾರೆ. ಸ್ಥಳೀಯವಾಗಿ ಜೆಡಿಎಸ್ ಕಳೆದ ಚುನಾವಣೆಯಲ್ಲಿ ಹೇಳಿಕೊಳ್ಳುವ ಸಾಧನೆ ಮಾಡದಿದ್ದರೂ, ಇಲ್ಲೂ ರಾಜ್ಯಾಧ್ಯಕ್ಷರ ಪಟ್ಟಕ್ಕೆ ಕಾದಾಟಗಳಿವೆ. ನಿಖಿಲ್ ಕುಮಾರಸ್ವಾಮಿಯನ್ನು ರಾಜ್ಯ ಘಟಕಕ್ಕೆ ನೇಮಕ ಮಾಡಲಾಗುತ್ತದೆ ಎಂಬ ಮಾತಿದ್ದರೂ ಪಕ್ಷದಲ್ಲಿ ಹಲವರ ವಿರೋಧವಿದೆ. ಇದೇ ವೇಳೆ ಪಕ್ಷವನ್ನು ಮೇಲಕ್ಕೆತ್ತಲು ಸಮರ್ಥ ಸಾರಥಿಯ ಅವಶ್ಯವಿದೆ. ಇದೇ ವೇಳೆ ರಾಜ್ಯ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ವಿಪ್ಲವಗಳು ಎದುರಾದರೆ ತಮ್ಮ ಪಕ್ಷದ ಶಾಸಕರನ್ನು ಹಿಡಿತದಲ್ಲಿಟ್ಟುಕೊಳ್ಳಬೇಕೆಂಬ ಇರಾದೆಯೂ ಪಕ್ಷದ ವರಿಷ್ಠರಲ್ಲಿದೆ.

ಇತ್ತ ಜೆಡಿಎಸ್‌ನ ಕೆಲ ಶಾಸಕರನ್ನು ಸಿಎಂ ಸಿದ್ದರಾಮಯ್ಯ, ಮತ್ತೊಂದೆಡೆ ಡಿ.ಕೆ.ಶಿವಕುಮಾರ್ ಅವರು ವೈಯುಕ್ತಿಕವಾಗಿ ಕರೆದು ಮಾತಾಡಿರುವುದು ಜೆಡಿಎಸ್ ವರಿಷ್ಠರ ಅಂಗಳಕ್ಕೆ ತಲುಪಿದೆ. ಹೀಗಾಗಿ ಪಕ್ಷದ ಶಾಸಕರನ್ನು ಉಳಿಸುವ ಕಾರ್ಯತಂತ್ರ ಭಾಗವಾಗಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಖುದ್ದಾಗಿ ರಮೇಶ್ ಜಾರಕಿಹೊಳಿ ಬಳಿ ಸಹಾಯ ಹಸ್ತ ಚಾಚಿರುವುದು ಈಗ ಗುಟ್ಟಾಗಿ ಉಳಿದಿಲ್ಲ. ಹೀಗಾಗಿ ರಾಜ್ಯ ರಾಜಕಾರಣ ಜಾರಕಿಹೊಳಿ ಸಹೋದರರ ಸುತ್ತ ಸುತ್ತುತ್ತಿದೆ.

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ಸಂಖ್ಯೆ: ಶಿಮನಪಾ/ಆ.ವಿ/ಸಿಆರ್/23/2024–25 ದಿನಾಂಕ: 13.01.2025

ಟೆಂಡರ್ ಪ್ರಕಟಣೆ

ಶಿವಮೊಗ್ಗ, ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಣ ತ್ಯಾಜ್ಯ ನಿರ್ವಹಣೆಗಾಗಿ ಮೆಟರಿಯಲ್ ರಿಕವರಿ ಫೆಸಲಿಟಿ (50 TPD& 22 TPD) ಮಿತಿಯಲ್ಲಿನ ಘಟಕಗಳಿಗೆ ಯಂತ್ರೋಪಕರಣಗಳನ್ನು ಅಳವಡಿಸಲು ಮಾನ್ಯ ಆಯುಕ್ತರು ಮಹಾನಗರ ಪಾಲಿಕ ಶಿವಮೊಗ್ಗ ಇವರಿಂದ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (https://kppp.karnataka.gov.in) ಟೆಂಡರ್ ಸಲ್ಲಿಸುವುದು.

ಕ್ರ ಸಂ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ ರೂ.	ಲೆಕ್ಕ ಶೀರ್ಷಿಕೆ
1.	Supply, Installation and commissioning of Material recovery facility Machineries for 50 TPD (Phase 1 & Phase 2) & 22 TPD (Phase 1 & Phase 2) in Shivamogga city corporation limits. (Indent No - DMA/2024-25/IND3082/CALL-2)	430.00	6,45,000	ಸ್ವಚ್ಛ ಭಾರತ್ ಮಿಷನ್ (2.0)ನಿಧಿ

1) ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭಿಕ ದಿನಾಂಕ: 15.01.2025, 2) ಪೂರ್ವಭಾವಿ ಸಭೆ (PRE-BID MEETING) : 27.01.2025 ರ ಪೂರ್ವಾಹ್ನ 11:00 ಗಂಟೆಗೆ ಮಹಾನಗರಪಾಲಿಕೆ ಶಿವಮೊಗ್ಗ. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 14.02.2025 ಸಂಜೆ 04.30 ಗಂಟೆಗೆ.

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು, ಈ ಕಛೇರಿಯ ಆರೋಗ್ಯ ವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ಇವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆಪಿಪಿ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ವಾ.ಸಾ.ಸಂ.ಇ./ಶಿ/ನಂ.73.01/ ಝೇಂಕಾರ್/2024–25

ಸಹಿ/–
ಕಾರ್ಯಪಾಲಕ ಅಭಿಯಂತರರು ಮಹಾನಗರ ಪಾಲಿಕೆ, ಶಿವಮೊಗ್ಗ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-259/2708/2024–25 ದಿನಾಂಕ: 16.01.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಶರಣ್ ಪ್ರತಾಪ್ ಬಿನ್ ಪ್ರತಾಪ್ ಜಯರಾಮ್ # 30, Promened Road, Fazer Town, Bengaluru North, Bengaluru-560 005.	ಯಲಹಂಕ	ಜಾಲ	ಚಾಗಲಟ್ಟಿ	81/11	0ಎ–17.08ಗುಂ	ವ್ಯವಸಾಯ	ವಾಣಿಜ್ಯ

ಷರಾ: ಈ ಜಮೀನಿನಲ್ಲಿ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಸದರಿ ಜಮೀನಿನಲ್ಲಿ ಸುತ್ತಮುತ್ತ ವಾಣಿಜ್ಯ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿ ಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ, ಭೂಉಪಯೋಗ ಬದಲಾವಣೆಗೊಂಡ ನಂತರ ವಾಣಿಜ್ಯ ಉದ್ದೇಶಕ್ಕೆ ಸಕ್ರಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗಿರುತ್ತದೆ, ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಾಣಿಜ್ಯ' ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಚಿಕ್ಕಪೇಟೆ ವಿಭಾಗ, ನಂ. 194, ಟಿ ಮರಿಯಪ್ಪ ರಸ್ತೆ, ಲಾಲ್‌ಬಾಗ್ ಸೌತ್ ಗೇಟ್ ಎದುರು, ಸಿದ್ದಾಪುರ ಸರ್ಕಲ್, ಬೆಂಗಳೂರು–560011

ನಂ.: ಕಾಪಾಅ/ಚಿಪೇ/ಇ–ಪ್ರೊಕ್/08/2024–25 ದಿನಾಂಕ: 16.01.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

(ಏಕ & ದ್ವಿ ಲಕೋಟೆ) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಚಿಕ್ಕಪೇಟೆ ವಿಭಾಗ), ಬಿಬಿಎಂಪಿ, ಬೆಂಗಳೂರು ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿತ ಅಥವಾ ತತ್ಸಮಾನ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್– ಕೆಡಬ್ಲ್ಯು1 & ಕೆಡಬ್ಲ್ಯು3)

ಕ್ರ. ಸಂ.	ಕಾಮಗಾರಿಯ ಹೆಸರು
1	2024–25ನೇ ಸಾಲಿನಲ್ಲಿ ಧರ್ಮರಾಯಸ್ವಾಮಿ ದೇವಸ್ಥಾನ ಉಪವಿಭಾಗದ ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್, ವಾರ್ಡ್ ನಂ. 160ರಲ್ಲಿ ರಸ್ತೆಗಳು, ಚರಂಡಿಗಳು ಹಾಗೂ ಪಾದಚಾರಿ ಮಾರ್ಗ ಕಾಮಗಾರಿ ನಿರ್ವಹಣೆ. **ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷಗಳಲ್ಲಿ):** 55.00, **ಇಎಂಡಿ (ರೂ. ಗಳಲ್ಲಿ):** 1,10,000/–, **ವರ್ಗ:** ಇತರರು.
2	2024–25ನೇ ಸಾಲಿನಲ್ಲಿ ಧರ್ಮರಾಯಸ್ವಾಮಿ ದೇವಸ್ಥಾನ ಉಪವಿಭಾಗದ ಸ್ಲಿವರ್ ಜ್ಯೂಬಿಲಿ ಪಾರ್ಕ್ ವಾರ್ಡ್, ವಾರ್ಡ್ ನಂ. 161ರಲ್ಲಿ ರಸ್ತೆಗಳು, ಚರಂಡಿಗಳು ಹಾಗೂ ಪಾದಚಾರಿ ಮಾರ್ಗ ಕಾಮಗಾರಿ ನಿರ್ವಹಣೆ. **ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷಗಳಲ್ಲಿ):** 55.00, **ಇಎಂಡಿ (ರೂ. ಗಳಲ್ಲಿ):** 1,10,000/–, **ವರ್ಗ:** ಇತರರು.
3	2024–25ನೇ ಸಾಲಿನಲ್ಲಿ ಧರ್ಮರಾಯಸ್ವಾಮಿ ದೇವಸ್ಥಾನ ಉಪವಿಭಾಗದ ಸುಂಕೇನಹಳ್ಳಿ ವಾರ್ಡ್, ವಾರ್ಡ್ ನಂ. 162ರಲ್ಲಿ ರಸ್ತೆಗಳು, ಚರಂಡಿಗಳು ಹಾಗೂ ಪಾದಚಾರಿ ಮಾರ್ಗ ಕಾಮಗಾರಿ ನಿರ್ವಹಣೆ. **ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷಗಳಲ್ಲಿ):** 55.00, **ಇಎಂಡಿ (ರೂ. ಗಳಲ್ಲಿ):** 1,10,000/–, **ವರ್ಗ:** ಇತರರು.
4	2024–25ನೇ ಸಾಲಿನಲ್ಲಿ ವಿಶ್ವೇಶ್ವರಪುರಂ ಉಪವಿಭಾಗದ ವಿ.ವಿ. ಪುರಂ ವಾರ್ಡ್, ವಾರ್ಡ್ ನಂ. 163ರಲ್ಲಿ ರಸ್ತೆಗಳು, ಚರಂಡಿಗಳು ಹಾಗೂ ಪಾದಚಾರಿ ಮಾರ್ಗ ಕಾಮಗಾರಿ ನಿರ್ವಹಣೆ. **ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷಗಳಲ್ಲಿ):** 55.00, **ಇಎಂಡಿ (ರೂ. ಗಳಲ್ಲಿ):** 55,000/–, **ವರ್ಗ:** ಪ.ಜಾ.
5	2024–25ನೇ ಸಾಲಿನಲ್ಲಿ ವಿಶ್ವೇಶ್ವರಪುರಂ ಉಪವಿಭಾಗದ ಹೊಂಬೇಗೌಡನಗರ ವಾರ್ಡ್, ವಾರ್ಡ್ ನಂ. 164ರಲ್ಲಿ ರಸ್ತೆಗಳು, ಚರಂಡಿಗಳು ಹಾಗೂ ಪಾದಚಾರಿ ಮಾರ್ಗ ಕಾಮಗಾರಿ ನಿರ್ವಹಣೆ. **ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷಗಳಲ್ಲಿ):** 55.00, **ಇಎಂಡಿ (ರೂ. ಗಳಲ್ಲಿ):** 1,10,000/–, **ವರ್ಗ:** ಇತರರು.
6	2024–25ನೇ ಸಾಲಿನಲ್ಲಿ ವಿಶ್ವೇಶ್ವರಪುರಂ ಉಪವಿಭಾಗದ ಬಿ ವೆಂಕಟರೆಡ್ಡಿ ನಗರ ವಾರ್ಡ್, ವಾರ್ಡ್ ನಂ. 165ರಲ್ಲಿ ರಸ್ತೆಗಳು, ಚರಂಡಿಗಳು ಹಾಗೂ ಪಾದಚಾರಿ ಮಾರ್ಗ ಕಾಮಗಾರಿ ನಿರ್ವಹಣೆ. **ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷಗಳಲ್ಲಿ):** 55.00, **ಇಎಂಡಿ (ರೂ. ಗಳಲ್ಲಿ):** 55,000/–, **ವರ್ಗ:** ಪ.ಜಾ.
7	2024–25ನೇ ಸಾಲಿನಲ್ಲಿ ಧರ್ಮರಾಯಸ್ವಾಮಿ ದೇವಸ್ಥಾನ ಉಪವಿಭಾಗದಲ್ಲಿ ರಸ್ತೆಗಳಿಗೆ ಪಾಟ್ ಹೋಲ್ ಫಿಲ್ಲಿಂಗ್ ಒದಗಿಸುವುದು. **ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷಗಳಲ್ಲಿ):** 45.00, **ಇಎಂಡಿ (ರೂ. ಗಳಲ್ಲಿ):** 90,000/–, **ವರ್ಗ:** ಇತರರು.
8	2024–25ನೇ ಸಾಲಿನಲ್ಲಿ ವಿಶ್ವೇಶ್ವರಪುರಂ ಉಪವಿಭಾಗದಲ್ಲಿ ರಸ್ತೆಗಳಿಗೆ ಪಾಟ್ ಹೋಲ್ ಫಿಲ್ಲಿಂಗ್ ಒದಗಿಸುವುದು. **ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷಗಳಲ್ಲಿ):** 45.00, **ಇಎಂಡಿ (ರೂ. ಗಳಲ್ಲಿ):** 90,000/–, **ವರ್ಗ:** ಇತರರು.
9	ಚಿಕ್ಕಪೇಟೆ ಕ್ಷೇತ್ರದ ಬಿಬಿಎಂಪಿ ದಾಸಪ್ಪ ಆಸ್ಪತ್ರೆಯ ಕ್ವಾಟರ್ಸ್ ಕಟ್ಟಡದ ದುರಸ್ತಿಗಳು & ನಿರ್ವಹಣೆ. **ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷಗಳಲ್ಲಿ):** 5.00, **ಇಎಂಡಿ (ರೂ. ಗಳಲ್ಲಿ):** 6,250/–, **ವರ್ಗ:** ಪ.ಪಂ.
10	ಚಿಕ್ಕಪೇಟೆ ಕ್ಷೇತ್ರದ ಬಿಬಿಎಂಪಿ ಕಟ್ಟಡಗಳಿಗೆ ಮಳೆನೀರು ಕೊಯ್ಲನ್ನು ಒದಗಿಸುವುದು. **ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷಗಳಲ್ಲಿ):** 7.00, **ಇಎಂಡಿ (ರೂ. ಗಳಲ್ಲಿ):** 17,500/–, **ವರ್ಗ:** ಇತರರು.

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯು **20.01.2025**ರ **ಮಧ್ಯಾಹ್ನ 3:00 ಗಂಟೆ**ಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಚಿಕ್ಕಪೇಟೆ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಸಿದ್ದಾಪುರ ಸರ್ಕಲ್, ಬೆಂಗಳೂರು–560011ರಲ್ಲಿ ನಡೆಯಲಿದೆ. (3) ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **27.01.2025**ರ **ಸಂಜೆ 4:00 ಗಂಟೆ**ಯೊಳಗೆ ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (4) ತಾಂತ್ರಿಕ ಬಿಡ್ ಟೆಂಡರನ್ನು ತೆರೆಯುವ ದಿನಾಂಕ **28.01.2025**ರ **ಸಂಜೆ 4:30 ಗಂಟೆ**ಗೆ. (5) ಆರ್ಥಿಕ ಬಿಡ್ ಟೆಂಡರನ್ನು ತಾಂತ್ರಿಕ ಬಿಡ್ ಅನುಮೋದನೆ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ, ಬಿಬಿಎಂಪಿ

ಐಸಿಎಆರ್ ಸಂಸ್ಥೆಯಿಂದ ರೈತರ ಅಭಿವೃದ್ಧಿ

ಧಾರವಾಡದ ಕೃಷಿ ವಿವಿ ಅಮೃತ ಮಹೋತ್ಸವದಲ್ಲಿ ಉಪರಾಷ್ಟ್ರಪತಿ ಜಗದೀಪ ಧನಕರ್ ಭಾಗಿ

ಧಾರವಾಡ: ಐಸಿಎಆರ್ ಬಹಳ ದೊಡ್ಡ ಸಂಸ್ಥೆ. ಇದನ್ನು ಬೆಳೆಸಲು ಹೆಚ್ಚುವರಿ ಅನುದಾನ ಬೇಕು. ಇದರಿಂದ ರೈತರ ಅಭಿವೃದ್ಧಿ ಆಗಲಿದೆ. ಭಾರತ ಜಗತ್ತಿನಲ್ಲೇ ಅತಿದೊಡ್ಡ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿದೆ. ಡಿಜಿಟಲ್ ಸೇರಿ ಹಲವು ವಿಚಾರದಲ್ಲಿ ನಾವು ಅಭಿವೃದ್ಧಿ ಆಗಿದ್ದೇವೆ ಎಂದು ಹೇಳಿದರು.

ಕೃಷಿ ವಿಶ್ವವಿದ್ಯಾಲಯದಲ್ಲಿ 75 ನೇ ವರ್ಷದ ಸುವರ್ಣ ಮಹೋತ್ಸವ ಹಾಗೂ ಹಳೇ ವಿದ್ಯಾರ್ಥಿಗಳ ಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೃಷಿ ವಿವಿಗೆ ಹಳೆಯ ವಿದ್ಯಾರ್ಥಿಗಳ ಕೊಡುಗೆ ಬಹುಮುಖ್ಯವಾಗಿದೆ. ಇದರಿಂದ ನಿಮ್ಮ ನಡುವೆ ಇರುವ ಸಂಬಂಧ ಸೇತುವೆ ಆಗಲಿದೆ. ಜೋಶಿ ಹಾಗೂ ಲಾಡ್ ಅವರೇ ಹಳೆಯ ವಿದ್ಯಾರ್ಥಿಗಳ ಸಮ್ಮಿಲನ ಕಾರ್ಯಕ್ರಮಕ್ಕೆ ನನ್ನನ್ನ ಕರೆದಿದ್ದು ಸಂತಸ ತಂದಿದೆ ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಏ ದಿಲ್ ಮಾಂಗೇ ಮೋರ್..: ಪ್ರಧಾನಿ ಮೋದಿಯವರು ಏ ದಿಲ್ ಮಾಂಗೆ ಮೋರ್ ಎಂದು ಹೆಚ್ಚು ಅಭಿವೃದ್ಧಿ ಕಡೆ ಗಮನ ಹರಿಸಿದ್ದಾರೆ. ಹೆಚ್ಚಾಗಿ ರೈತರ ಕಡೆ ಗಮನ ಹರಿಸಿದ್ದಾರೆ. ನೆಹರೂ ಜೈ ಜವಾನ್ ಜೈಕಿಸಾನ್ ಎಂದರು. ಮೋದಿ ಅವರು ಮುರು ಬಾರಿ ಗೆದ್ದು ಕೃಷಿ ಅನುಸಂಧಾನ ಎಂದರು. ರೈತರು ಅಭಿವೃದ್ಧಿಯತ್ತ ಸಾಗುತ್ತಿರುವುದರಿಂದ ನಾನು ಬಹಳ ಸಂತೋಷದಲ್ಲಿ ಇದ್ದೇನೆ ಎಂದು ಜಗದೀಪ ಧನಕರ್ ಬಣ್ಣಿಸಿದರು.

ಶೌಚಾಲಯ,ಗ್ಯಾಸ್,ಇಂಟರ್ನೆಟ್ ಕೊಡುಗೆಯಲ್ಲಿ ಪ್ರಗತಿ: ನನ್ನಂತಹ ಕೃಷಿಕನ ಮಗ ವ್ಯಾಪಾರಿ ಕಡೆ ಹೋಗಿ ಅರಿಶಿನ ದರ ಏನಿದೆ ಎಂದು ಕೇಳಿದರೆ, ಅದಕ್ಕೆ ಉತ್ತರ ಸಿಗೋದು ಗಾಯ ದೊಡ್ಡದಿದೆ ಎಂದು. ಅದಕ್ಕಾಗಿಯೇ ಅದಕ್ಕೊಂದು ಬೋರ್ಡ್ ಮಾಡಲಾಗಿದೆ. ರೈತರು ಮಾರುಕಟ್ಟೆ ಮೇಲೆ ಅವಲಂಬಿತರಾಗಿದ್ದಾರೆ ಎಂದರು. ರೈತರಿಗಾಗಿ ಸಮಯ ಚನ್ನಾಗಿ ಬಂದೇ ಬರುತ್ತೆ. ಸರಕಾರ ಅದಕ್ಕಾಗಿ ಕೆಲಸ ಮಾಡುತ್ತಿದೆ. ವಿಕಸಿತ ಭಾರತ ನಮ್ಮಗುರಿ. ನಾವು ಅದರಲ್ಲಿ ನಾವು ಬಹಳ ಬೇಗ ಪ್ರಗತಿ ಸಾಧಿಸಬೇಕು. ರೈತ ಅನ್ನದಾತ ಅಷ್ಟೇ ಅಲ್ಲ, ಅದಕ್ಕಿಂತ ದೊಡ್ಡ ಇದ್ದಾರೆ ಎಂದು ಹೇಳಬಯಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ಉಪರಾಷ್ಟ್ರಪತಿಯವರ ಪತ್ನಿ ಸುದೇಶ ಧನಕರ್, ಧಾರವಾಡ ಜಿಲ್ಲಾಧಿಕಾರಿ ದಿವ್ಯಪ್ರಭು, ಅಪರ ಜಿಲ್ಲಾಧಿಕಾರಿ ಗೀತಾ.ಸಿ.ಡಿ ಉಪಸ್ಥಿತರಿದ್ದರು.ಹಳೇ ವಿದ್ಯಾರ್ಥಿಗಳ ಸಂಘದ ಪದಾಧಿಕಾರಿಗಳು, ಕೃಷಿ ವಿವಿ ಉಪ ಕುಲಪತಿ.ಪಿ.ಎಲ್.ಪಾಟೀಲ್ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

ಪಿಎಂ ಕಿಸಾನ್ ಬಹಳ ರೈತರಿಗೆ ಸಿಗುತ್ತಿದೆ. ಸಬ್ಸಿಡಿ ಕೊಟ್ಟರೆ ಅದು ರೈತರಿಗೆ ಸಿಗಲಿದೆ. ಈ ಸರಕಾರ ಗೊಬ್ಬರ ಮೇಲೆ ದರ ಕಡಿಮೆ ಮಾಡಿದೆ. 1350 ರೂಪಾಯಿಯಲ್ಲಿ ಡಿಎಪಿ ಸಿಗುತ್ತಿದೆ . ರೈತರು ಈ ನಿಧಿಯನ್ನು ಬಳಸಿಕೊಳ್ಳಲಿ. ದೇಶದ ಜನರ ಆದಾಯ 8 ರಷ್ಟು ಅಭಿವೃದ್ಧಿಯಾಗಿದೆ. ನಾವು ಈಗ 6 ಜಿ ತರುವ ಸ್ಥಳದಲ್ಲಿ ಇದ್ದೇವೆ. ಭಾರತ ಈಗ ಮಹತ್ವಪೂರ್ಣ ದೇಶ ಆಗಿದೆ. ನಾವು ಅದಕ್ಕೆ ನಮ್ಮ ಅನ್ನದಾತನಿಗೆ ಧನ್ಯವಾದ ಹೇಳುತ್ತಾ, ಸೇವೆ ಮಾಡಬೇಕು.

–ಜಗದೀಪ ಧನಕರ್ ಉಪರಾಷ್ಟ್ರಪತಿ

ಕೃಷಿ ವಿಶ್ವವಿದ್ಯಾಲಯದಲ್ಲಿ 75 ನೇ ವರ್ಷದ ಸುವರ್ಣ ಮಹೋತ್ಸವ ಹಾಗೂ ಹಳೇ ವಿದ್ಯಾರ್ಥಿಗಳ ಸಮ್ಮಿಲನ ಕಾರ್ಯಕ್ರಮವನ್ನು ಉಪರಾಷ್ಟ್ರಪತಿ ಜಗದೀಪ ಧನಕರ್, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಉದ್ಘಾಟಿಸಿದರು.

ಕೃಷಿ ಕ್ಷೇತ್ರಕ್ಕೆ ಅನೇಕ ಕೊಡುಗೆ

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಮಾತನಾಡಿ, 75 ವರ್ಷ ಕೃಷಿ ಕಾಲೇಜು ಪೂರೈಸಿದೆ. ಈ ಅವಧಿಯಲ್ಲಿ ಕೃಷಿ ಕ್ಷೇತ್ರಕ್ಕೆ ಅನೇಕ ಕೊಡುಗೆ ನೀಡಿದೆ. ಜನಸಾಮಾನ್ಯರು, ಸಾಮಾನ್ಯ ರೈತರೊಂದಿಗೆ ನೇರ ಸಂಪರ್ಕ ಹೊಂದಿದ ವಿವಿ ಇದಾಗಿದೆ. ಕೃಷಿ ಹವಾಮಾನ ಕೇಂದ್ರವನ್ನು ಹಿಂದೆ ನಾವು ಕೇಳಿದ್ದೆವು. ಆ ಕೇಂದ್ರಕ್ಕೆ ಕೃಷಿ ವಿವಿ ಈಗ ಜಾಗ ಕೊಟ್ಟಿದೆ ಎಂದರು.

ಕರ್ನಾಟಕ ಸರಕಾರ (ಲೋಕೋಪಯೋಗಿ ಇಲಾಖೆ) ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2024–25/4856 ದಿನಾಂಕ: 15/01/2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (Call-1 & Call-2)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2024–25 ನೇ ಸಾಲಿನ ಲೆಕ್ಕ ಶಿರ್ಷಿಕೆ 5054–ಜಿಮುರ ಸುಧಾರಣೆ ಅಡಿ 3 ಕಾಮಗಾರಿಗಳು ಹಾಗೂ 4059–ಇಲಾಖಾ ಕಟ್ಟಡಗಳು ಅಡಿ 1 ಕಾಮಗಾರಿ, ಹೀಗೆ ಒಟ್ಟು 4 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಕನಿಷ್ಟ ಮೊತ್ತ ರೂ. 160.00 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 240.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್/ಮರುಟೆಂಡರ್ ಆವ್ಹಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:31–01–2025 ರಂದು (11.00 ಗಂಟೆಗೆ), 2)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:01–02–2025 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:03–02–2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):05–02–2025 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1476/KSMCA/2024-25

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ

ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ
ದೂರವಾಣಿ : 08354–235042, ಇ–ಮೇಲ್: bgkeezpe@yahoo.com

ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿಜಿಕೆ/ಪಿಬಿ–1/ಟೆಂಡರ್/2024–25/4168
ದಿನಾಂಕ : 15–01–2025

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಏಕ-ಲಕೋಟೆ) ಕೆ.ಡಬ್ಲ್ಯೂ. 1 & 2 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿನ ಈ ಕೆಳಕಂಡ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ. – 1 & 2 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999 – 2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಏಕ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

01) 2024–25 ನೇ ಸಾಲಿನ ಗ್ರಾಮ ಪಂಚಾಯತ (ನೀರಲಕೇರಿ ಗ್ರಾ. ಪಂ. ಬಾಗಲಕೋಟೆ ತಾ॥) ವರ್ಗ–1 ರೂ. 10.00 ಲಕ್ಷ ಮತ್ತು 15ನೇ ಹಣಕಾಸು ರೂ. 10.00 ಲಕ್ಷ ಹಾಗೂ ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯ ರೂ. 20.00 ಲಕ್ಷ ಅನುದಾನದಡಿಯ, 02) ಸನ್ 2023–24 ನೇ ಸಾಲಿನ ಮಹತ್ವಾಕಾಂಕ್ಷೆಯ ತಾಲೂಕುಗಳಲ್ಲಿ (ಐಸಿಡಿಎಸ್) ಹಾಗೂ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಒಗ್ಗೂಡಿಸುವಿಕೆಯ ಅಂಗನವಾಡಿ ಕಟ್ಟಡ ಅಭಿವೃದ್ಧಿ ಯೋಜನೆಯ ಅನುದಾನ ಅಡಿಯಲ್ಲಿ ಆಯ್ಕೆಯಾದ, 03) 2022–23 ನೇ ಸಾಲಿನ ಬಾಗಲಕೋಟೆ ಜಿಲ್ಲೆ ಹುನಗುಂದ ವಿಧಾನಸಭಾ ಕ್ಷೇತ್ರಕ್ಕೆ ಶಿಕ್ಷಣ ಇಲಾಖೆಗೆ ಮಂಜೂರಾದ ರೂ. 2.30 ಕೋಟಿ ವಿಶೇಷ ಅನುದಾನದಡಿ ಆಯ್ಕೆಯಾದ ಶಾಲೆಗಳಲ್ಲಿನ ಭೋಧನಾ ಕೊಠಡಿಗಳ ನಿರ್ಮಾಣದ ಯೋಜನೆ ಅಡಿ ಕೊಠಡಿ ನಿರ್ಮಾಣ, ದುರಸ್ತಿ ಹಾಗೂ ಇತರೆ ನಿರ್ಮಾಣದ ಅನುದಾನ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆ ಬಾಗಲಕೋಟೆ, ಹುನಗುಂದ, ಬೀಳಗಿ ತಾಲೂಕು ವ್ಯಾಪ್ತಿಯಲ್ಲಿ.

ಸಾಮಾನ್ಯ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : RDPR/2024-25/BD/WORK_INDENT12085, RDPR/2024-25/BD/WORK_INDENT12248, ಪ್ರವರ್ಗ–2(ಎ) ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : RDPR/2024-25/BD/WORK_INDENT12019 ಇದ್ದು, ಟೆಂಡರ್ ಕಾಮಗಾರಿ ವಿವರ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್‌ಗಿಟ್ಟ ಮೊತ್ತ ರೂ. 6.30 ರಿಂದ 20.00 ಲಕ್ಷಗಳ ಮಿತಿಗೊಳಪಟ್ಟು, ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

1) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್ – ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 23–01–2025 ರ ಸಂಜೆ 5.30 ಗಂಟೆವರೆಗೆ. 2) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ & ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : 25–01–2025 ರ ಬೆಳಿಗ್ಗೆ 11.00 ಗಂಟೆಯ ನಂತರ.

ಸೂಚನೆ : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ **ವೆಬ್‌ಸೈಟ್ : https://kppp.karnataka.gov.in** ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ,
ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟ/432/ಮಣಿಪಾಲ್/2024–25

ಸೈಫ್ ಮೇಲೆ ದಾಳಿ, ತೀವ್ರ ಗಾಯ

← ಮೊದಲಪುಟದಿಂದ

ಬಾಂದ್ರಾ ಪೊಲೀಸರು ಅಪರಿಚಿತ ವ್ಯಕ್ತಿಯ ವಿರುದ್ಧ ಎಫ್ಐಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಕನ್ನಡಿಗ ಅಧಿಕಾರಿ ದಯಾ ನಾಯಕ್ ಸೇರಿದಂತೆ ತನಿಖೆಗಾಗಿ 10 ತಂಡಗಳನ್ನು ರಚಿಸಲಾಗಿದೆ. ಆರನೇ ಮಹಡಿಯ ಸಿಸಿಟಿವಿ ದೃಶ್ಯಾವಳಿಗಳಲ್ಲಿ ಆರೋಪಿಯ ಮುಖ ಚಹರೆ ಪೊಲೀಸರಿಗೆ ಸಿಕ್ಕಿದ್ದು, ಸೈಫ್ ಮನೆ 12ನೇ ಮಹಡಿಯಲ್ಲಿದೆ. ಆರೋಪಿ ಫೈರ್ ಎಕ್ಸಿಟ್ ಮೆಟ್ಟಿಲುಗಳ ಮೂಲಕ ಪ್ರವೇಶಿಸಿ ಗಂಟೆಗಳ ಕಾಲ ಅಲ್ಲಿಯೇ ಇದ್ದ. ಕಳೆದೆರಡು ದಿನಗಳಿಂದ ಸೈಫ್ ಮನೆಯಲ್ಲಿ ಫ್ಲೋರಿಂಗ್ ಮತ್ತು ಫಿನಿಶಿಂಗ್‌ಗೆ ಮೂವರು ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಕೆಲಸ ಮುಗಿಸಿದ ಒಬ್ಬ ಮನೆಯೊಳಗೆ ಅಡಗಿಕೊಂಡು ಈ ಕೃತ್ಯ ಎಸಗಿದ್ದಾನೆ.

ಕರ್ನಾಟಕ ಗೃಹ ಮಂಡಳಿ

Karnataka Housing Board Building Communities

3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರಿಂದ ಹಾಗೂ ಪಡೆಯಲಿಚ್ಛಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಕರೆಯಲಾಗಿದೆ.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 29.01.2025 ಸಂಜೆ 4.00 ಗಂಟೆಗೆ

ಕ್ರ.ಸಂ.	ಕಾಮಗಾರಿಯ ಹೆಸರು
1	2023–24 ನೇ ಸಾಲಿನ ಎಸ್.ಡಿ.ಪಿ. ಯೋಜನೆಯಡಿ ವಿಜಯನಗರ ಜಿಲ್ಲೆ ಹೂವಿನಹಡಗಲಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಕಟ್ಟಡ ಕಾಮಗಾರಿ. Tender Reference Number: KHB/2024-25/BD/work_indent 408/CALL-2 & IFT No. 177/2024-25 Date: 15.01.2025. **ಟೆಂಡರಿಗಿಟ್ಟ ಮೊತ್ತ:** ರೂ. 2,28,22,550/-

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511/080–22100077 website: **https://kppp.karnataka.gov.in**

ವಾ.ಸಾ.ಸಂ.ಇ/ವಾಪ್ರ/4366/ಆಕಾರ್/2024–25

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಧಾರವಾಡ
ಕಾರ್ಯನಿರ್ವಾಹಕ ಇಂಜಿನೀಯರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಧಾರವಾಡ

ನಂ:ಕಾ.ನಿ.ಇಂ/ಗ್ರಾಕುನೀ&ನೈವಿ/ಧಾ/ಕಿಇಂ–1/ಇ–ಟೆಂಡರ/2024–25/1797 ದಿನಾಂಕ:16–01–2025

ಸಾಮಗ್ರಿ ಟೆಂಡರನ ಪ್ರಕಟಣೆ (ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

ವಿಷಯ: ಕಾಮಗಾರಿಯ ಟೆಂಡರನ ಪ್ರಕಟಣೆ ಕುರಿತು

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಡಿ ಧಾರವಾಡ ಜಿಲ್ಲೆಯ ಈ ಕೆಳಗಾಣಿಸಿದ ಕಾಮಗಾರಿಗಳ ಟೆಂಡರ ಕರೆಯಲಾಗಿದೆ.

ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

ಧಾರವಾಡ ಜಿಲ್ಲೆ: ಸಾಮಾನ್ಯ: Goods Indent No: RWSSD/2024-25/IND0205/Call-5,IND0196/Call-5, IND0206/Call-5,IND0207/Call-5,IND0203/Call-5,IND0204/Call-5 **ಕನಿಷ್ಠ ಮೊತ್ತ: 24.89ಲಕ್ಷ, ಗರಿಷ್ಠ ಮೊತ್ತ 95.04 ಲಕ್ಷ**

ಗುತ್ತಿಗೆ ಕಾರ್ಯಾಕ್ರಮದ ವಿವರಗಳು ಈ ಕೆಳಗಿನಂತಿದೆ. (Calender of Events)

(1) ಖಾಲಿ ಟೆಂಡರ ಫಾರ್ಮಗಾಗಿ ಇ–ಪ್ರೊಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿ ಗಳನ್ನು ವೆಬ್‌ಸೈಟ್ ನಲ್ಲಿ ಭರ್ತಿ ಮಾಡಿ ಸಲ್ಲಿಸಲು ಕೊನೆಯ **ದಿನಾಂಕ: 16.01.2025 ರಿಂದ 22.01.2025** ಸಾಯಂಕಾಲ 04.00 ಘಂಟೆಗೆ (2) ತಾಂತ್ರಿಕ ಬಿಡ್ ತೆರೆಯುವ ಕೊನೆಯ **ದಿನಾಂಕ:23.01.2025** ಸಾಯಂಕಾಲ 11.00 ಘಂಟೆಗೆ (3) ಆರ್ಥಿಕ ಬಿಡ್ ತೆರೆಯುವ ಕೊನೆಯ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ.

ಸದರಿ ಮೇಲೆ ತಿಳಿಸಿದ ಕಾಮಗಾರಿಯ ಅಂತಿಮ ಹೆಸರು, ಟೆಂಡರಗಿಟ್ಟ ಮೊತ್ತ, ಇ.ಎಮ್.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್ ಸೈಟ್ kppp.karnataka.gov.in ನಲ್ಲಿ ಪಡೆಯಬಹುದು. ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.

ಸಹಿ/– ಕಾಯನಿರ್ವಾಹಕ ಇಂಜಿನೀಯರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಧಾರವಾಡ

ವಾ.ಸಾ.ಇ/ಧಾ/861/ದೇಶಪಾಂಡೆಪಬ್ಲಿಸಿಟಿ/2024–25

ಕಾರ್ಯಪಾಲಕ ಇಂಜಿನಿಯರ್, ನಂ.4, ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿ (ನಿ), ತುರುವೇಕೆರೆ. ತುಮಕೂರು ಜಿಲ್ಲೆ, ಪಿನ್–572227

ಸಂ:08/2024–25 ದಿನಾಂಕ: 10.01.2025

ಕೆ.ಪಿ.ಪಿ.ಪಿ ಪೋರ್ಟಲ್ ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.04 ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿನಿ, ತುರುವೇಕೆರೆ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಇಂಡೆಂಟ್ ನಂಬರ್‌ನ ಕಾಮಗಾರಿಗಳಿಗೆ KW-1 "ಐಟಂವಾರು ಏಕ ಲಕೋಟೆ" ಪದ್ಧತಿಯಲ್ಲಿ & ನಿಬಂಧನೆಗಳೊಂದಿಗೆ ಕೆ.ಪಿ.ಪಿ.ಪಿ ಪೋರ್ಟ್‌ಲ್ ಮೂಲಕ ಆಹ್ವಾನಿಸಲಾಗಿದೆ.

General Works:- 1. Indent No : CNNL/2024-25/OW/WORK_INDENT 2399 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ: ರೂ: 15.34 ಲಕ್ಷ, ಇ.ಎಂ.ಡಿ. ಮೊತ್ತ ರೂ.38,500/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು

* ಇ–ಪೋರ್ಟಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: 21–01–2025 ಸಂಜೆ 17.00 ಗಂಟೆವರೆಗೆ. * ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:–15–01–2025 ರಿಂದ 30–01–2025 ಸಂಜೆ 17.00 ಗಂಟೆ ರವರೆಗೆ. * ಟೆಂಡರ್ ತೆರೆಯುವ ದಿನಾಂಕ:–31–01–2025 ಸಂಜೆ 17:30 ಗಂಟೆ ವರೆಗೆ. ಕಾಮಗಾರಿ ವಿವರ, ಷರತ್ತುಗಳು, ಕಾಲಾವಧಿ ಹಾಗೂ ಇನ್ನಿತರ ವಿವರಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ಸಿಸ್ಟಮ್ https://kppp.karnataka.gov.in/ ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ನಂ.4, ಹೇಮಾವತಿ
ಎಡದಂಡೆ ನಾಲಾ ವಿಭಾಗ, ಕಾನೀನಿ(ನಿ), ತುರುವೇಕೆರೆ.

DIPR/TUM/566/KSMCA/2024-25

ನೀರಿನ ಗುಂಡಿಗೆ ಬಿದ್ದು ಮಗು ಬಲಿ

ತುಮಕೂರು: ತೆಂಗಿನಕಾಯಿ ಫ್ಯಾಕ್ಟರಿಯಲ್ಲಿ ತೆಂಗಿನ ಕಾಯಿಯ ನೀರಿನ ತ್ಯಾಜ್ಯ ಸಂಗ್ರಹವಾಗುವ ಗುಂಡಿಯಲ್ಲಿ ಮಗುವೊಂದು ಬಿದ್ದು ಸಾವನ್ನಪ್ಪಿದ ಘಟನೆ ತುಮಕೂರು ಜಿಲ್ಲೆ ತಿಪಟೂರು ತಾಲೂಕಿನ ಮೀಸೆ ತಿಮ್ಮನಹಳ್ಳಿ ಬಳಿ ಇರುವ ಕೋಕನೆಟ್ ಫ್ಯಾಕ್ಟರಿಯಲ್ಲಿ ನಡೆದಿದೆ. ಇಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರ ಎರಡು ವರ್ಷದ ಹೆಣ್ಣು ಮಗು ಕಾರ್ಖಾನೆಯ ಗುಂಡಿಗೆ ಬಿದ್ದು ಮೃತಪಟ್ಟಿದೆ. ಬಿಹಾರ ಮೂಲದ ತಂದೆ ಹರೀಂದ್ರಕುಮಾರ್ ಮತ್ತು ತಾಯಿ ರೀನಾದೇವಿ ಪುತ್ರಿ ಕುಸುಮ ಕುಮಾರಿ (2) ಸಾವನ್ನಪ್ಪಿರುವ ದುರ್ದೈವಿ. ಬುಧವಾರ 2 ಗಂಟೆ ಸುಮಾರಿಗೆ ಆಟವಾಡುತ್ತಿದ್ದ ಮಗು ಕಾಣದೇ ಇದ್ದಾಗ ಪೋಷಕರು ಹುಡುಕಾಟ ನಡೆಸಿದ ಸಂದರ್ಭ ಗುಂಡಿ ಒಳಗೆ ಬಿದ್ದಿರುವುದನ್ನು ಗಮನಿಸಿ ಮಗುವನ್ನು ಮೇಲೆ ಎತ್ತಲಾಗಿದೆ. ನಂತರ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗಮಧ್ಯದಲ್ಲೇ ಕೊನೆಯುಸಿರೆಳೆದಿದೆ.

ಆಕಸ್ಮಿಕವಾಗಿ ಸಿಡಿದ ಗುಂಡು: ವ್ಯಕ್ತಿ ಸಾವು

ಮಡಿಕೇರಿ: ಬಂದೂಕಿನಿಂದ ಆಕಸ್ಮಿಕವಾಗಿ ಗುಂಡು ಹಾರಿ ವ್ಯಕ್ತಿಯೊಬ್ಬ ಸಾವಿಗೀಡಾದ ಘಟನೆ ಮಡಿಕೇರಿ ತಾಲೂಕಿನ ಚೇರಂಬಾಣೆ ಗ್ರಾಮದಲ್ಲಿ ನಡೆದಿದೆ. ಸಾವಿಗೀಡಾದ ವ್ಯಕ್ತಿಯನ್ನು ಪೊನ್ನಚೆಟ್ಟಿರ ಮಿತ್ರ ಚಂಗಪ್ಪ (49) ಎಂದು ಗುರುತಿಸಲಾಗಿದೆ. ಒಂಟಿ ನಳಿಗೆ ಬಂದೂಕಿನಿಂದ ಗುಂಡು ಹಾರಿ ಈ ದುರ್ಘಟನೆ ಸಂಭವಿಸಿದೆ. ಬಂದೂಕು ಕೆಳಕ್ಕೆ ಬಿದ್ದು ಗುಂಡು ಹಾರಿರುವ ಶಂಕೆ ವ್ಯಕ್ತವಾಗಿದೆ. ಚಂಗಪ್ಪ ಅವರು ಚೇರಂಬಾಣೆ ಪಟ್ಟಣದಲ್ಲಿ ವೈನ್ ಶಾಪ್ ಹೊಂದಿದ್ದರು. ವೈನ್ ಶಾಪ್ ಎದುರಿನಲ್ಲೇ ಮಧ್ಯರಾತ್ರಿ 12 ಗಂಟೆಗೆ ಈ ದುರ್ಘಟನೆ ಸಂಭವಿಸಿದೆ.

ಹೃದಯಾಘಾತ: ವಿದ್ಯಾರ್ಥಿ ಸಾವು

ತುಮಕೂರು: ಪ್ರಥಮ ಪಿಯುಸಿ ವಿದ್ಯಾರ್ಥಿಯೊಬ್ಬ ಹೃದಯಾಘಾತದಿಂದ ಸಾವನ್ನಪ್ಪಿದ ಘಟನೆ ಗುಬ್ಬಿ ತಾಲೂಕಿನ ನಿಟ್ಟೂರಿನ ವಿನಾಯಕ ಕಾಲೇಜಿನಲ್ಲಿ ನಡೆದಿದೆ. ಮೃತ ವಿದ್ಯಾರ್ಥಿಯನ್ನು ಶಮಂತ್ (17) ಎಂದು ಗುರುತಿಸಲಾಗಿದೆ. ಕಾಲೇಜು ಮುಂದೆ ಸ್ನೇಹಿತರೊಂದಿಗೆ ಮಾತನಾಡುತ್ತಾ ಶಮಂತ್ ನಿಂತಿದ್ದ. ಈ ವೇಳೆ ಕುಸಿದು ಬಿದ್ದಿದ್ದಾನೆ. ಆತನನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ.

ವಿಶ್ವವಾಣಿಯು ಹೀಗೆ ವಿಸ್ತರಿಸಲಿ. ದಶಕವು ರಜತವಾಗಿ, ಸುವರ್ಣವಾಗಿ, ವಜ್ರವಾಗಿ ಶತಕವಾಗಲಿ ಮತ್ತು ಇದನ್ನು ನೋಡುವ ಭಾಗ್ಯ ನಮ್ಮದಾಗಲಿ. ವಿಶ್ವವಾಣಿ ಕುಟುಂಬದ ಭಾಗವಾಗಿರುವುದು ನನ್ನ ಹೆಮ್ಮೆ.

-ಸಿದ್ದೇಶ್ ಹಾರನಹಳ್ಳಿ

ವಿಶಿಷ್ಟ ವರದಿಗಳ ಮೂಲಕ ಹಲವು ವೈವಿಧ್ಯಗಳೊಂದಿಗೆ ವಿಶ್ವವಾಣಿ ಪತ್ರಿಕೆ ಮೂಡಿಬರುತ್ತಿದೆ. ಪ್ರತಿದಿನವೂ ಪತ್ರಿಕೆ ಹೊಸತನದೊಂದಿಗೆ ಓದುಗರ ಕೈಸೇರುತ್ತಿದೆ. 10 ವರ್ಷದ ಯಶಸ್ವಿ ಹಾದಿಯಲ್ಲಿರುವ ಪತ್ರಿಕೆ ವಿನೂತನ ಪ್ರಯೋಗ ಮಾಡುವ ಮೂಲಕ ಓದುಗರನ್ನು ಸೆಳೆಯುತ್ತಿದೆ. ಪತ್ರಿಕೆ ಓದುತ್ತಾ ಹೋದರೆ ಸಮಯ ಮುಗಿಯುವುದೇ ಗೊತ್ತಾಗುವುದಿಲ್ಲ. ನೈಜ ಸುದ್ದಿಗಳು, ಧಾರ್ಮಿಕ, ಆಧ್ಯಾತ್ಮಿಕ, ಶೈಕ್ಷಣಿಕ ಸೇರಿದಂತೆ ಹತ್ತು ಹಲವು ವಿಷಯಗಳನ್ನು ಹೊತ್ತು ಓದುಗರ ಕೈಸೇರುವ ವಿಶ್ವವಾಣಿ ಇನ್ನಷ್ಟು ಹೆಮ್ಮರವಾಗಿ ಬೆಳೆಯಲಿ.

- ಶುಭಾ ಕಲ್ಯಾಣ್, ಜಿಲ್ಲಾಧಿಕಾರಿ, ತುಮಕೂರು.

ಹೊಸಬರನ್ನು ಅತ್ಯಂತ ಗೌರವಿಸುವ ವಿಶ್ವವಾಣಿ ಬಳಗದ ನೇತೃತ್ವ ವಹಿಸಿರುವ ವಿಶ್ವೇಶ್ವರ ಭಟ್ ಅವರು ಅತ್ಯಂತ ಕ್ರಿಯಾಶೀಲರು. ವಿಶ್ವವಾಣಿ ಪತ್ರಿಕೆ ಕೇವಲ ಸುದ್ದಿಗೆ ಸೀಮಿತವಾಗದೆ ಹೊಸ ಆಲೋಚನೆ ಮಾಡುವಂತೆ ಓದುಗರನ್ನು ಪ್ರೇರೇಪಿಸುತ್ತದೆ. ವಿಶ್ವೇಶ್ವರ ಭಟ್ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಪತ್ರಿಕೆ ಸುದ್ದಿಗಳನ್ನು ಮಾತ್ರವಲ್ಲದೆ ಕನ್ನಡ ನೆಲದ ಸಾಧಕರನ್ನು ಗುರುತಿಸಿ ಗ್ಲೋಬಲ್ ಆಚೀವರ್ಸ್ ಆಫ್ ಫೋರಂ ಅಡಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ನೀಡಿ ಪುರಸ್ಕರಿಸುತ್ತಿರುವುದು ಪತ್ರಿಕೋದ್ಯಮದ ಇತಿಹಾಸದಲ್ಲಿಯೇ ಹೊಸತನವಾಗಿದೆ. ಪತ್ರಿಕೆ ಇನ್ನೂ ಎತ್ತರಕ್ಕೆ ಬೆಳೆಯಲಿ.

-ಎಂ.ಎಸ್. ದಿವಾಕರ್, ಜಿಲ್ಲಾಧಿಕಾರಿ, ವಿಜಯನಗರ

ಪತ್ರಿಕೋದ್ಯಮದಲ್ಲಿ ಸಾಕಷ್ಟು ಬದಲಾವಣೆ ಜತೆಗೆ ಪತ್ರಿಕಾ ಮೌಲ್ಯಗಳನ್ನು ಕಾಪಾಡಿಕೊಂಡು ಬರುತ್ತಿರುವ ವಿಶ್ವವಾಣಿಯಲ್ಲಿ ಪ್ರಕಟವಾಗುವ ಅಂಕಣ, ಸುದ್ದಿಗಳು ಬಹಳ ಉಪಯುಕ್ತವಾಗಿವೆ. 10ನೇ ವಸಂತಕ್ಕೆ ಕಾಲಿಡುತ್ತಿರುವ ವಿಶ್ವವಾಣಿ ಬಳಗಕ್ಕೆ ಅಭಿನಂದನೆಗಳು . ಹಾಗೆಯೇ ಮುಂದಿನ ದಿನಗಳಲ್ಲಿ ಇನ್ನಷ್ಟು ಉತ್ತುಂಗದ ಶಿಖರವೇರಲಿ ಎಂದು ಶುಭ ಹಾರೈಸುವೆ.

- ಪೃಥ್ವಿಕ್ ಶಂಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಯಾದಗಿರಿ

ನವೀನ ಪ್ರಯೋಗದ ಪತ್ರಿಕೆಯ ದಶಕದ ಹೆಜ್ಜೆ

ಆರ್.ಅಶೋಕ, ಪ್ರತಿಪಕ್ಷ ನಾಯಕ

ಕನ್ನಡ ಪತ್ರಿಕೋದ್ಯಮದಲ್ಲಿ ಹೊಸ ಭರವಸೆಯನ್ನು ಮೂಡಿಸುತ್ತಾ, ನವೀನ ಪ್ರಯೋಗಗಳನ್ನು ಮಾಡುತ್ತಾ ಹೆಸರುಗಳಿಸುತ್ತಿರುವ 'ವಿಶ್ವವಾಣಿ' ಪತ್ರಿಕೆ ದಶಕದ ಮೈಲಿಗಲ್ಲನ್ನು ತಲುಪಿರುವುದು ಸಂತಸದ ಸಂಗತಿ. ಈ ಪತ್ರಿಕಾ ಬಳಗದ ಎಲ್ಲರಿಗೂ ಹಾರ್ದಿಕ ಶುಭಾಶಯಗಳು.

ಹಿರಿಯ ಪತ್ರಕರ್ತರಾದ ವಿಶ್ವೇಶ್ವರ ಭಟ್ಟರು ಕನ್ನಡ ಪತ್ರಿಕೋದ್ಯಮದಲ್ಲಿ ಪ್ರಯೋಗಶೀಲತೆಗೆ ಹಾಗೂ ನೇರವಾದ ಬರವಣಿಗೆಗೆ ಹೆಸರಾಗಿದ್ದಾರೆ. ಅವರ ನೇತೃತ್ವದಲ್ಲಿ ವಿಶ್ವವಾಣಿ ಪತ್ರಿಕೆ ಶುಭಾರಂಭ ಮಾಡಿದಾಗ ನನಗೂ ಆ ಬಗ್ಗೆ ಕುತೂಹಲ, ಆಸಕ್ತಿ ಮೂಡಿತ್ತು. ಹೊಸ ಬಗೆಯ ಬರವಣಿಗೆಯ ಶೈಲಿ, ಆಸಕ್ತಿ ಕೆರಳಿಸುವ ಸುದ್ದಿಗಳು ಹಾಗೂ ಚಿಂತನೆಗಳನ್ನು ಹುಟ್ಟುಹಾಕುವ ಅಂಕಣ ಬರಹಗಳು ಈ ಪತ್ರಿಕೆಯ ವಿಶಿಷ್ಟತೆ. ಜನಸಾಮಾನ್ಯರ ಸಂಕಷ್ಟಗಳಿಗೆ ದನಿಯಾಗುವ ಹಾಗೂ ಆಳುವ ಸರಕಾರಗಳ ಕಿವಿ ಹಿಂಡುವ ಕೆಲಸವನ್ನು ಈ ಪತ್ರಿಕೆ ನಿರಂತರವಾಗಿ ಮಾಡಿಕೊಂಡು ಬಂದಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಹಾಗೂ ಪತ್ರಿಕಾರಂಗ ನಾಲ್ಕು ಆಧಾರ ಸ್ತಂಭಗಳು. ಯಾವುದೇ ಒಂದು ಮಾಧ್ಯಮ ಆಡಳಿತರೂಢ ಪಕ್ಷಗಳ ವಕ್ತಾರಿಕೆ ಮಾಡದೇ, 'ಕಾಯಂ' ಪ್ರತಿಪಕ್ಷ ಸ್ಥಾನದಲ್ಲಿ ಕೂತು ಸರಕಾರಗಳನ್ನು ಎಚ್ಚರಿಸುವ ಕೆಲಸವನ್ನು ಮಾಡಬೇಕು. ಈ ಕೆಲಸವನ್ನು ವಿಶ್ವವಾಣಿ ಕಳೆದ ಒಂಬತ್ತು ವರ್ಷಗಳಿಂದ ಅಚ್ಚುಕಟ್ಟಾಗಿ ಮಾಡಿಕೊಂಡು ಬರುತ್ತಿದೆ.

ವಿಶ್ವೇಶ್ವರ ಭಟ್ಟರ ಸಾರಥ್ಯದ ವಿಶ್ವವಾಣಿ ಪತ್ರಿಕೋದ್ಯಮದ ವಿವಿಧ ಆಯಾಮಗಳತ್ತಲೂ ಹೆಜ್ಜೆಯಿಟ್ಟಿರುವುದು ಉತ್ತಮ ಬೆಳವಣಿಗೆ. ಡಿಜಿಟಲ್ ಟಿವಿ ಮೂಲಕ ಕ್ಷಣಕ್ಷಣದ ಸುದ್ದಿಯನ್ನು ಜನರಿಗೆ ನೀಡುತ್ತಿದೆ. ಇದರೊಂದಿಗೆ ಉತ್ತರ ಕನ್ನಡಕ್ಕೆ ಸೀಮಿತವಾಗಿದ್ದ ಲೋಕಧ್ವನಿ ಪತ್ರಿಕೆಯನ್ನು ತೆಗೆದುಕೊಂಡು ಇದೀಗ ಆ ಪತ್ರಿಕೆಯನ್ನು ರಾಜ್ಯದ ವಿವಿಧ ಜಿಲ್ಲೆಗಳಿಗೆ ವಿಸ್ತರಿಸುವ ಕಾಯಕಕ್ಕೆ ಕೈಹಾಕಿದ್ದಾರೆ.

ಜನರಿಗೆ ಅತಿ ಶೀಘ್ರದಲ್ಲಿ ನಿಖರವಾದ ಸುದ್ದಿ ತಲುಪಿಸುವ ಕೆಲಸ ಮಾಡಿ, 'ಸಮಗ್ರ ಪತ್ರಿಕೋದ್ಯಮ' ಕ್ಕೆ ಕೊಡುಗೆ ನೀಡುತ್ತಿದೆ. ಸಂಕ್ರಾಂತಿಯ ಶುಭ ಗಳಿಗೆಯಲ್ಲಿ ಪತ್ರಿಕೆಯ ಹೊಸ ಸಾಧನೆ ದಾಖಲಾಗುತ್ತಿದೆ. ಪ್ರಜಾಪ್ರಭುತ್ವದ ಆಶಯ, ಪತ್ರಿಕಾ ಮೌಲ್ಯಗಳ ರಕ್ಷಣೆ ಯೊಂದಿಗೆ ವಿಶ್ವವಾಣಿ ಮತ್ತಷ್ಟು ಜವಾಬ್ದಾರಿಯೊಂದಿಗೆ ಉತ್ಸಾಹ ದಿಂದ ಕಾರ್ಯನಿರ್ವಹಿಸಲಿ ಎಂದು ಶುಭ ಹಾರೈಸುತ್ತೇನೆ.

ನಾವೀನ್ಯದಿಂದ ಕೂಡಿರುವ ಪತ್ರಿಕೆ

- ರಾಘವೇಂದ್ರ

ದಿನಪತ್ರಿಕೆಯನ್ನು ಓದಿ ಮುಗಿಸಿ ಒರೆಸಿ ಎಸೆಯುವುದು, ಇಲ್ಲ ಎತ್ತಿಟ್ಟು ರದ್ದಿಗೆ ಕೊಡುವುದು ಅಷ್ಟೇ ಅದರ ಸಾರ್ಥಕ್ಯ ಆಗಿತ್ತು ಒಂದು ಕಾಲದಲ್ಲಿ. ಪತ್ರಿಕೆಯನ್ನು ಸಾವಕಾಶವಾಗಿ ಓದುವವರು ನಿವೃತ್ತ ಶಿಕ್ಷಕರು ಅಥವಾ ಉದ್ಯೋಗವಿಲ್ಲದ ನಿರುದ್ಯೋಗಿ ತರುಣರು ಮಾತ್ರ ಎಂಬ ಮಾತು ಇತ್ತು. ಅಂಕಣ ಬರಹಗಳು, ಅಂಕಣಕಾರರ ವಸ್ತು ವಿಷಯಗಳು ಸೀಮಿತ ಸಂಪತ್ತು ಎನ್ನುವ ವಾತಾವರಣ ಇತ್ತು. ಸುಭಾಷಿತ, ಶ್ಲೋಕ, ಚುಟುಕು ಇವುಗಳ ವಿನಾ ಮನಸೆಳೆವ ತಾಕತ್ತು ಅಂಕಿ-ಅಂಶಗಳು ಅಥವಾ ವರದಿಗಳಿಗೆ ಇಲ್ಲ ಎನ್ನುವ ನಂಬಿಕೆ ತುಂಬಿತ್ತು. ಈ ಎಲ್ಲ ಪಾರಂಪರಿಕ ಅಥವಾ ಸಾಂಪ್ರದಾಯಿಕ ಎನಿಸಿದ್ದ ಸತ್ಯಗಳನ್ನು ದಶಕದ ಹಿಂದೆ ಜನ್ಮ ತಳೆದ 'ವಿಶ್ವವಾಣಿ' ಪತ್ರಿಕೆ ಇಲ್ಲದಂತೆ ಮಾಡಿದೆ. ವಿಶ್ವವಾಣಿಯ ಮುಖಪುಟದ ಮುಖ್ಯ ಸುದ್ದಿ, ವಿನ್ಯಾಸ, ಹೂರಣದಿಂದ ಕೊನೆಯ ಪುಟದ ಕೊನೇ ಸಾಲಿನವರೆಗೂ ಏನೋ ಹೊಸತನ, ನಾವೀನ್ಯ, ಹುರುಪು ತುಂಬಿರುತ್ತದೆ .ಆ ಬಾಲವೃದ್ಧರಿಗೂ ಆಪ್ಯಾಯಮಾನವಾಗಬಲ್ಲ ಅಂಶಗಳು ಹೇರಳವಾಗಿ ಲಭ್ಯ. ಬಹುಶಃ ಚಿತ್ರಗಳನ್ನು ಕಪ್ಪು-ಬಿಳುಪು, ವರ್ಣಗಳಲ್ಲಿ ಇಷ್ಟೊಂದು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹು ದೆಂದು ತೋರಿಸಿಕೊಟ್ಟಿದ್ದು ವಿಶ್ವವಾಣಿ. ಈ ಪತ್ರಿಕೆಯನ್ನು ಸ್ವಂತ ಪತ್ರಿಕೆ ಎಂದು ಪರಿಗಣಿಸಿರುವುದರಿಂದ ಹೇಳಿದ್ದೆಲ್ಲವೂ ತನ್ನದೇ ಮುಖಸ್ತುತಿಯಾಗಿ ಬಸವಣ್ಣನವರ ವಚನದಂತೆ ಅಂತರಂಗ ಶುದ್ಧಿಗೆ ಅಪಚಾರವೆಂದಾದೀತು. ಓದುಗರಿಗೆ ಪತ್ರಿಕೆಯ ತಾಕತ್ತು, ಗತ್ತು, ಘನತೆ ಅರಿವಾಗಿಯೇ ಇರುತ್ತದೆ. ಹತ್ತೇರಿದ ಹೊತ್ತು ನೂರಾರು ಭರವಸೆಯನ್ನು ಹೊತ್ತು ಹೊಸ್ತಿಲಾಚೆ ಅಡಿಯಿರಿಸಿ ನಗುತಿದೆ. ಈ ನಗು ಕನ್ನಡನಾಡಿನ ನಗುವಾಗಿ ಮಿನುಗಲಿ ಎಂದು ಹಾರೈಸುವೆ.

ವಿಶ್ವವಾಣಿಗೆ ವಿಜಯದಶಮಿ



-ಸ್ವಾಮಿ ವೀರೇಶಾನಂದ ಸರಸ್ವತಿ

A journalist by Divine Right ಎಂಬ ಮಾತಿಗೆ ಸಾಕ್ಷಾತ್ ಉದಾಹರಣೆಯಾದ ನಮ್ಮೆಲ್ಲರ ಗೌರವಾನ್ವಿತ ವಿಶ್ವೇಶ್ವರ ಭಟ್ ಅವರಿಗೆ ಅವರ ಪತ್ರಿಕೋದ್ಯಮ ಸೇವೆಗೆ ಆತ್ಮಪೂರ್ವಕ ಅಭಿನಂದನೆಗಳು. ಶ್ರೀಯುತರ ಮಾಧ್ಯಮ ಕ್ಷೇತ್ರದಲ್ಲಿನ ಬದ್ಧತೆ, ನಿಷ್ಠೆ, ಸಂಶೋಧನಾತ್ಮಕ ಪ್ರವೃತ್ತಿ ಮತ್ತು ಮಾನವ ಅಭ್ಯುದಯದ ದೃಷ್ಟಿಕೋನ ಇವು ಮನೋಜ್ಞ ಹಾಗೂ ಸ್ತುತ್ಯರ್ಹ.ಅವರೊಬ್ಬ ಹೂಗಿಡವಾದರೆ ಅದರಲ್ಲಿ ಮೂಡಿದ್ದು ಪರಿಮಳ ಪಸರಿಸುವ ನೂರಾರು ಪುಷ್ಪಗಳು. ತಮ್ಮ ಸತ್ಯನಿಷ್ಠುರ ನಡೆ, ವಿಚಾರಗಳನ್ನು ಸತ್ಯನಿಷ್ಠವಾಗಿ ಅಕ್ಷರೀಕರಿಸುವ ಧೈರ್ಯಾದರ್ಶ.ಇವುಗಳ ಮೂಲಕ ಶ್ರೀಯುತರು ಉದಯೋನ್ಮುಖ ಸಾಹಿತಿ ಹಾಗೂ ಬರಹಗಾರರಿಗಂತೂ ಪಥದರ್ಶಿಯಾಗುವ ದರ್ಪಣ. ಶ್ರೀಯುತ ರೊಂದಿಗೆ ಸಹಕರಿಸಿದ ಪತ್ರಿಕಾ ಕಚೇರಿಯ ಸಿಬ್ಬಂದಿ ಸನ್ಮಿತ್ರರಿಗೂ ನನ್ನ ಶುಭಾಶಯಗಳು. ವಿಶ್ವವಾಣಿ ಪತ್ರಿಕೆಯು ವಿಶ್ವವ್ಯಾಪಕ ಆಗಲಿ, ವಿಶ್ವಮಾನ್ಯತೆ ಪಡೆಯಲಿ.

ವಿಶ್ವವಾಣಿ ಪತ್ರಿಕೆ ನಿಜಕ್ಕೂ ಒಂದು ಅದ್ಭುತ ಕಾವ್ಯ

ವಿ.ಆರ್. ಮುರಳೀಧರ್

ಹವ್ಯಾಸಿ ಬರಹಗಾರರು.

ನಿತ್ಯವೂ ನವವಧುವಿನಂತೆ ಕಂಗೊಳಿಸುತ್ತಾ ವೈವಿಧ್ಯಮಯವಾಗಿ ಪ್ರಕಟವಾಗಿ, ಓದುಗರ ಕೈಸೇರುತ್ತಿರುವ ವಿಶ್ವವಾಣಿ ದಿನಪತ್ರಿಕೆ ನಿಜವಾಗಿಯೂ ಒಂದು ಅದ್ಭುತ ಕಾವ್ಯ ಎಂದರೂ ತಪ್ಪಾಗಲಾರದು. ದಿವಂಗತ ಪಾಪು ಅವರ ಪ್ರಪಂಚವನ್ನು ಮತ್ತಷ್ಟು ವಿಶಾಲಮಯವನ್ನಾಗಿಸಲು ಕೈಂಕರ್ಯ ಹೊತ್ತ ವಿಶ್ವೇಶ್ವರ ಭಟ್ ಅವರು, 2016 ರಲ್ಲಿ ಅವಳಿ ನಗರಗಳಿಗೆ ಸೀಮಿತವಾಗಿದ್ದ ಪತ್ರಿಕೆಯನ್ನು ಅರಳುವ ಮಲ್ಲಿಗೆಯಂತಾಗಿಸಿ, ಆರು ನಗರಗಳಿಂದ ಏಕಕಾಲಕ್ಕೆ ಹೊರಡಿಸುತ್ತಿರುವುದು ನಿಜಕ್ಕೂ ಅಭಿಮಾನದ ಸಂಗತಿ. ವಿಶ್ವವಾಣಿ ಕೇವಲ ದಿನಪತ್ರಿಕೆಯಾಗಿ ಮಾತ್ರವೇ ಉಳಿಯದೇ, ಕಳೆದ ಒಂಬತ್ತು ವರ್ಷಗಳ ಅವಧಿಯಲ್ಲಿ, ತಂತ್ರಜ್ಞಾನದ ಫಲಶೃತಿಯಾಗಿ ದಶಾವತಾರದ ಸ್ವರೂಪಗಳಲ್ಲಿ ಅವತರಿಸುವ ಮೂಲಕವಾಗಿ, ಆಡು ಮುಟ್ಟದ ಸೊಪ್ಪಿಲ್ಲ ಅನ್ನುವ ಮಾತಿಗೆ ಸತ್ಯವಾದ ನಿದರ್ಶನ ವಾಗುತ್ತಿದೆ. ಇನ್ನು ವಿಶ್ವೇಶ್ವರ ಭಟ್ ಅವರ ಕುರಿತಾಗಿ ಒಂದೆರಡು ಮಾತಿನಲ್ಲೇ ಹೇಳುವುದಾದರೆ, ಶ್ರೀಯುತರು Jack of all but Master of none ಅನ್ನುವ ಮಾತಿಗೆ ಅಪವಾದ ಎಂದು ಒಂದೇ ಮಾತಿನಲ್ಲಿ ಮುಗಿಸಿಬಿಡಬಹುದು. ಕಾರಣ, ಅವರ ಪಾದರಸದಂತಹ ವ್ಯಕ್ತಿತ್ವದ ಫಲಿತಾಂಶದ ಪ್ರತಿರೂಪ ವಿಶ್ವವಾಣಿ ದಿನಪತ್ರಿಕೆ ಹಾಗೂ ಸಂಬಂಧಿತ ಸ್ವರೂಪಗಳಲ್ಲಿ ಎದ್ದು ಕಾಣುತ್ತದೆ. ಅವರ ವೃತ್ತಿ ಜೀವನದ ಶ್ರದ್ಧೆ ಹಾಗೂ ಆಸಕ್ತಿ ಎರಡೂ ಅವರ ಇನ್ನಿಲ್ಲದ ಉತ್ಸಾಹಕ್ಕೆ ನೀರೆರೆದು ಪೋಷಿಸುತ್ತಿರುವುದರಿಂದಾಗಿಯೇ, ವಿಶ್ವವಾಣಿ ಒಂಬತ್ತು ವರ್ಷಗಳ ಅವಧಿಯಲ್ಲಿ, ಹಲವಾರು ಆಯಾಮಗಳನ್ನು ಹೊಂದಿ, ಇಷ್ಟೆತ್ತರಕ್ಕೆ ಬೆಳೆಯಲು ಸಾಧ್ಯವಾಯಿತು ಎನ್ನುವುದು ವಾಸ್ತವಿಕ ಸತ್ಯ. ಈ ಒಂದು ಕಾರಣಕ್ಕಾಗಿಯೇ ಅವರನ್ನು ದಣಿವರಿಯದ ವ್ಯಕ್ತಿ ಎಂದರೂ ಅತಿಶಯೋಕ್ತಿಯಾಗಲಾರದು.

ಇಂದಿನ ಆಧುನಿಕ ತಂತ್ರಜ್ಞಾನ ಹಾಗೂ ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಅತ್ಯಂತ ಕಡಿಮೆ ದರದಲ್ಲಿ, ಉತ್ಕೃಷ್ಟತೆಯನ್ನು ಹೊತ್ತು, ಓದುಗರ ಮನಸೂರೆಗೊಳ್ಳುವಂತೆ ಅವರ ಕೈಯಲ್ಲಿ ಇರಿಸು ವುದು ಸಾಮಾನ್ಯ ಸಂಗತಿಯಲ್ಲ ಎನ್ನುವುದು ಸರ್ವ ವಿದಿತ. ಹಲವಾರು ಆಯಾಮಗಳಲ್ಲಿ 'ವಿಶ್ವಾಸವೇ ವಿಶ್ವ' ಅನ್ನುವ ಧ್ಯೇಯ ವಾಕ್ಯದೊಂದಿಗೆ, ಸೃಜನಶೀಲತೆಯಿಂದ ನಿತ್ಯವೂ ನಳನಳಿಸುತ್ತಾ ಹೊರಹೊಮ್ಮಿ ಬರುತ್ತಿರುವ ವಿಶ್ವವಾಣಿ ದಶಕದ ಸಂಭ್ರಮವನ್ನು ಹಲವಾರು ದಶಕಗಳ ಕಾಲ ವಿಸ್ತರಿಸಲಿ ಎಂದು ಹಾರೈಸುತ್ತೇನೆ. ಇದೇ ಸಂದರ್ಭದಲ್ಲಿ, ಪತ್ರಿಕೆಯ ಆರಂಭಿಕ ದಿನದಿಂದಲೂ ವಿಶ್ವೇಶ್ವರ ಭಟ್ ಅವರ ಬರವಣಿಗೆಯ ಶೈಲಿಯ ಓದುಗ ಅಭಿಮಾನಿಯಾದ ನಾನು, ಅವರಿಗೆ ಹೃದಯಪೂರ್ವಕ ಧನ್ಯವಾದ ತಿಳಿಸುತ್ತೇನೆ.

ವಿಶ್ವವಾಣಿ ದಶಮಾನೋತ್ಸವ ಸಂಭ್ರಮ ಎಲ್ಲ ಓದಿದೆ. ಓದಿ ಸಂತೋಷಪಟ್ಟೆ. ನಮ್ಮವರೊಬ್ಬರ ಸಾಧನೆ, ಅದಕ್ಕಿಂತ ದೊಡ್ಡ ಖುಷಿ ಮತ್ತೊಂದಿಲ್ಲ. ಹೀಗೇ ನಮಗೆಲ್ಲ ಮಾರ್ಗದರ್ಶಕರಾಗಿರಿ. ವಿಶ್ವವಾಣಿ ಸಮೃದ್ಧಿಯಾಗಿ ಸದಾ ಹೊರಬರುತ್ತಿರಲಿ ಎಂದು ಆಶಿಸುವೆವು, ಹಾರೈಸುವೆವು.

-ಶ್ರೀನಿವಾಸ ಜೋಕಟ್ಟೆ, ಮುಂಬಯಿ

ನಿಮ್ಮ ಸಾರಥ್ಯದಲ್ಲಿ ವಿಶ್ವವಾಣಿ ಪತ್ರಿಕೆ ಅದ್ಭುತವಾಗಿ ಮೂಡಿಬರುತ್ತಿದೆ. ಸುದ್ದಿಗಳಾಗಲಿ, ಅಂಕಣ ಬರಹಗಳಾಗಲಿ, ಪುಸ್ತಕ ವಿಮರ್ಶೆ ಗಳಾಗಲಿ ಎಲ್ಲವೂ ಆಸಕ್ತಿಕರವಾಗಿ ಓದುವಂತಿರುತ್ತದೆ. ನಿಮಗೆ ಅಭಿನಂದನೆಗಳು, ನಿಮಗೆ ನಿಮ್ಮ ಕೊಡುಗೆಗೆ ಅನಂತ ವಂದನೆಗಳು.

-ಹರ್ಷ, ಹರ್ಷ ಪ್ರಕಾಶನ

ದಶಕದ ಯಶಸ್ವಿ ಸಾಧನೆ ಪೂರೈಸಿದ ವಿಶ್ವವಾಣಿಗೆ ನನ್ನ ಹೃತ್ಪೂರ್ವಕ ಶುಭಾಶಯಗಳು. ಪ್ರಾಮಾಣಿಕತೆ, ಸಮರ್ಥತೆ, ಮತ್ತು ಸಮಾಜದ ಪ್ರತಿಫಲಕವಾಗಿ ನೀವು ಜನತೆಗೆ ಮಾಹಿತಿ, ಜಾಗೃತಿ ಮತ್ತು ಪ್ರೇರಣೆ ನೀಡಿದ ರೀತಿ ಶ್ಲಾಘನೀಯವಾಗಿದೆ. ಹತ್ತು ವರ್ಷಗಳ ಈ ಶ್ರೇಷ್ಠಯಾನದಲ್ಲಿ ನಿಮ್ಮ ತ್ಯಾಗ, ಪರಿಶ್ರಮ ಮತ್ತು ಬದ್ಧತೆಯ ಮಹತ್ವ ಅಮೂಲ್ಯವಾಗಿದೆ. ಭವಿಷ್ಯದಲ್ಲಿ ಮತ್ತಷ್ಟು ಉಜ್ವಲ ಸಾಧನೆಗಳನ್ನು ಬರಹಗೊಳಿಸುವ ನಿಮ್ಮ ಹೆಜ್ಜೆಗಳಿಗೆ ಶಕ್ತಿಯುಂಟಾಗಲಿ. ವಿಶ್ವವಾಣಿಯ ದಶಮಾನೋತ್ಸವ ಯಶಸ್ಸಿಗೆ ಅನೇಕ ಹಾರೈಕೆಗಳು.

-ಯಶವಂತಕುಮಾರ್ ಎಸ್.

ಹತ್ತರ ಸಂಭ್ರಮ... ನಮ್ಮೆಲ್ಲ ಓದುಗರಿಗೂ ಅತ್ಯಂತ ಸಂತಸದ ವಿಷಯ. ಪತ್ರಿಕಾರಂಗದಲ್ಲಿ ಹೊಸತೊಂದರ ಸೃಷ್ಟಿಯಲ್ಲಿ ನಿರಂತರವಾಗಿ ಯಶಸ್ಸು ಕಾಣುತ್ತಿರುವ ನಿಮಗೆ ಮನದಾಳದ ಅಭಿನಂದನೆಗಳು. ನಿಮ್ಮ ಜೊತೆ ಯಾವುದೇ ರೀತಿಯಲ್ಲಿ, ಯಾವುದೇ ಪ್ರಮಾಣದಲ್ಲಿ ಗುರುತಿಸಿಕೊಳ್ಳುವುದೇ ನಮಗೆ ಹೆಮ್ಮೆಯ ವಿಚಾರ.

- ಸತ್ಯೇಶ್ ಬೆಳ್ಳೂರು

ಪ್ರವಾಸಕ್ಕೆಂದೇ ಪ್ರತ್ಯೇಕ ಪತ್ರಿಕೆ. ನನ್ನ ಜೀವದ ಜೀವ, ಅಂಥ ಪತ್ರಿಕೆ. ನಿಮ್ಮ ಪ್ರವಾಸ ಕಥನಗಳಿಗೆ ಫಿದಾ ನಾನು. ಈಗ ಅಂಥದೊಂದು ಪತ್ರಿಕೆ.. ಮೈ ಇಂತಜಾರ್ ಕರೂ.. ಜಾತಕ ಪಕ್ಷಿಯೋಲ್. ನನಗೀಗ 74ರ ಬದಲು 24 ಆಗಿರಬಾರದಿತ್ತೇ?. ಇಂಗ್ಲಿಷಿನ ಎಲ್ಲಾ ಟ್ರಾವೆಲ್ ಮ್ಯಾಗ್‌ಝೀನ್ ಗಳನ್ನು, ಕನ್ನಡದ ಬಹುತೇಕ ಎಲ್ಲಾ ಪ್ರವಾಸಕಥನದ ಪುಸ್ತಕಗಳನ್ನು ಕೊಂಡು ಓದಿದ್ದೇನೆ.

-ಎಚ್. ಆನಂದರಾಮ ಶಾಸ್ತ್ರೀ

ವಿರಾಮ
ಪ್ರತಿ ಭಾನುವಾರ

ಟ್ವೀಟೂ-ಖಾರಾ

ಜೆಡಿಎಸ್, ಕರ್ನಾಟಕ

ಕಾಂಗ್ರೆಸ್ ಸರಕಾರದ ಯಾವ ಗ್ಯಾರಂಟಿಯೂ ಬಡವರ ನೆರವಿಗೆ ಬರುತ್ತಿಲ್ಲ. ಸಿಎಂ ಸಿದ್ದರಾಮಯ್ಯನವರ ತವರು ಜಿಲ್ಲೆಯಲ್ಲೇ ಫೈನಾನ್ಸ್ ಕಂಪನಿಗಳ ಕಾಟಕ್ಕೆ ಹೆದರಿ ಜನರು ಊರು ಬಿಡುತ್ತಿದ್ದಾರೆ.ಅನಧಿಕೃತವಾಗಿ ಬಡ್ಡಿ ವ್ಯವಹಾರ ನಡೆಸಿ ಗ್ರಾಮೀಣ ಭಾಗದ ಬಡವರ ರಕ್ತ ಹೀರುತ್ತಿರುವ ಫೈನಾನ್ಸ್ ಕಂಪನಿಗಳಿಗೆ ಕಡಿವಾಣ ಹಾಕಬೇಕಾದ ಕಾಂಗ್ರೆಸ್ ಸರಕಾರ ಜಾಣಕುರುಡು ಪ್ರದರ್ಶಿಸುತ್ತಿದೆ.

ವಿಕ್ರಮ್ ಆದಿತ್ಯ, ಬೆಂಗಳೂರು

ಕುಮಾರಣ್ಣ ಸಿಎಂ ಆಗಿದ್ದಾಗ ಮೈಕ್ರೋ ಫೈನಾನ್ಸ್, ಬ್ಯಾಂಕುಗಳು ಯಾರೂ ಸಾಲ ವಾಪಸ್ ಕೇಳ್ತಿರಲಿಲ್ಲವೇ..? ಎಲ್ಲ ನಮ್ಮಣ್ಣನೇ ಪೇ ಮಾಡ್ತಿದ್ರೂ..!



ಆರೋಪಿಗೆ ಗುಂಡೇಟು

ಬಳ್ಳಾರಿ: ಐದು ವರ್ಷದ ಮಗುವಿನ ಮೇಲೆ ಅತ್ಯಾಚಾರ ನಡೆಸಿದ್ದ ಆರೋಪಿಯು ತಪ್ಪಿಸಲೆತ್ನಿಸಿದಾಗ ಆತನ ಕಾಲಿಗೆ ಪೊಲೀಸರು ಫೈರಿಂಗ್ ನಡೆಸಿದ ಘಟನೆ ನಡೆದಿದೆ. ಆರೋಪಿ ಮಂಜುನಾಥ್ (26) ಎಂಬಾತನ ಮೇಲೆ ಫೈರಿಂಗ್ ನಡೆಸಲಾಗಿದೆ. ಬಲಗಾಲಿಗೆ ಗಾಯವಾಗಿದ್ದು, ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಳೆದ ಸೋಮವಾರ ತೋರಗಲ್ಲು ವ್ಯಾಪ್ತಿಯ ಗ್ರಾಮದಲ್ಲಿ ಬಾಲಕಿಯ ಅತ್ಯಾಚಾರ ನಡೆದಿತ್ತು.

ಎಚ್‌ಎಂಟಿ ಸ್ವಾಧೀನ 14300 ಕೋಟಿ ಮೌಲ್ಯದ ಎಚ್‌ಎಂಟಿ ಭೂಮಿ ವಾಪಸಿಗೆ ನಿರ್ಧಾರ। ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ। ಅರಣ್ಯ ಭೂಮಿ ಖಾಸಗಿಯವರಿಗೆ ಮಾರಾಟ ಆರೋಪ

ರಾಜ್ಯ-ಕೇಂದ್ರದ ನಡುವೆ ಮತ್ತೊಂದು ಸಮರ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಎಚ್‌ಎಂಟಿ ಭೂಮಿ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹಾಗೂ ರಾಜ್ಯ ಸರಕಾರದ ನಡುವೆ ವಾರ್ ಶುರುವಾಗಿದ್ದು, ಇದೀಗ ಮತ್ತೊಂದು ಹಂತ ತಲುಪುವುದು ನಿಶ್ಚಿತ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ.

ಎಚ್‌ಎಂಟಿಗೆ ನೀಡಿದ್ದ ಅರಣ್ಯ ಭೂಮಿಯನ್ನು ಖಾಸಗಿಯವರಿಗೆ ಮಾರಾಟ ಮಾಡಲಾಗಿದೆ ಎನ್ನುವ ಆರೋಪವನ್ನು ಅರಣ್ಯ ಇಲಾಖೆ ಮಾಡಿತ್ತು. ಆದ್ದರಿಂದ ಇದೀಗ 14300 ಕೋಟಿ ರು. ಮೌಲ್ಯದ ಭೂಮಿಯನ್ನು ಮರುಸ್ವಾಧೀನ ಪಡೆಸಿಕೊಳ್ಳುವ ಮಹತ್ವದ ತೀರ್ಮಾ ನವನ್ನು ಸಚಿವ ಸಂಪುಟದಲ್ಲಿ ತೆಗೆದುಕೊಳ್ಳಲಾಗಿದೆ.

ಸಚಿವ ಸಂಪುಟ ಸಭೆಯ ಬಳಿಕ ಮಾತನಾಡಿದ ಸಚಿವ ಎಚ್.ಕೆ. ಪಾಟೀಲ್, ಎಚ್‌ಎಂಟಿ ಲಿಮಿಟೆಡ್‌ನ ಸ್ವಾಧೀನದಲ್ಲಿರುವ 14300 ಕೋಟಿ ಮೌಲ್ಯದ ಅರಣ್ಯ ಭೂಮಿ ರಾಜ್ಯ ಸರಕಾರಕ್ಕೆ ಹಿಂಪಡೆಯಲು ಅಗತ್ಯ ಕ್ರಮ ಜರುಗಿಸಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ. ಎಚ್‌ಎಂಟಿ ಕಾರ್ಖಾನೆ ಬೆಂಗಳೂರಿನಲ್ಲಿ ಹೊಂದಿರುವ ಪ್ರದೇಶಗಳನ್ನು ಕೇಂದ್ರ ಸರಕಾರದ ಇತರ ಸಂಸ್ಥೆಗಳಿಗೆ ಹಸ್ತಾಂತರಿಸಲು ನಿರಾಕ್ಷೇಪಣಾ ಪತ್ರ ನೀಡುವ ಕುರಿತು ಅಧಿಕಾರಿಗಳು ತಮ್ಮದೇ ಆದ ನಿರ್ಧಾರ ತೆಗೆದುಕೊಂಡಿದ್ದು ಮತ್ತು ಸಚಿವ ಸಂಪುಟದ ಪೂರ್ವಾನುಮತಿ ಅಥವಾ ಉನ್ನತ ಮಟ್ಟದ ಸಮಿತಿಯ ಅನುಮೋದನೆಯನ್ನು ಪಡೆಯದೇ ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿಯನ್ನು ಹಿಂಪಡೆಯಲು ಸಲ್ಲಿಸಲಾಗಿರುವ ರಾಜ್ಯ ಸರಕಾರದ ಅರ್ಜಿ ಸಲ್ಲಿಕೆಗೆ ಅರಣ್ಯ ಸಚಿವರು ತೆಗೆದುಕೊಂಡಿರುವ ನಿರ್ಣಯಕ್ಕೆ ರಾಜ್ಯ ಸಚಿವ ಸಂಪುಟ ಘಟನೋತ್ತರ ಮಂಜೂರಾತಿ ನೀಡಿದೆ ಎಂದು ಸಚಿವರು ತಿಳಿಸಿದರು.

ಎಚ್‌ಎಂಟಿ ಸಂಸ್ಥೆಯು ಈ ಎಲ್ಲಾ ಭೂಮಿಯನ್ನು ಇತರೆ ಸಂಸ್ಥೆಗಳಿಗೆ ಮಾರಾಟ ಮಾಡುತ್ತಿರುವುದರಿಂದ ರಾಜ್ಯಕ್ಕೆ ಭಾರಿ ಆರ್ಥಿಕ ನಷ್ಟವನ್ನು ಉಂಟಾಗುತ್ತದೆ ಮತ್ತು ಬೆಂಗಳೂರಿಗರಿಗೆ ಶ್ವಾಸಕೋಶದ ಸ್ಥಳವನ್ನು ಕಳೆದುಕೊಳ್ಳುತ್ತದೆ ಎಂಬುದು ಕಾನೂನು ಇಲಾಖೆಯ ಅಭಿಪ್ರಾಯವಾಗಿದೆ ಎಂದು ತಿಳಿಸಿದರು.

3352 ನೌಕರರಿಗೆ ವೈದ್ಯಕೀಯ ವಿಮಾ ಸೌಲಭ್ಯ

ನರೇಗಾ ಯೋಜನೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ 3352 ಸಿಬ್ಬಂದಿಗಳಿಗೆ ಸಾಮೂಹಿಕ ವೈದ್ಯಕೀಯ ವಿಮೆ ಸೌಲಭ್ಯವನ್ನು ಒದಗಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಇದರೊಂದಿಗೆ 5ನೇ ರಾಜ್ಯ ಹಣಕಾಸು ಆಯೋಗದ ಅವಧಿ ಪ್ರಸಕ್ತ ಸಾಲಿನ ಆ.31ರವರೆಗೆ ವಿಸ್ತರಣೆ ಮಾಡಲು ನಿರ್ಧರಿಸಲಾಗಿದೆ ಎಂದು ಸಚಿವರು ತಿಳಿಸಿದರು. ಅಸ್ತಿತ್ವದಲ್ಲಿರುವ ಅಂಗಕಸಿಯೋಜನೆಗೆ ಶ್ವಾಸಕೋಶ, ಹೃದಯ ಮತ್ತು ಮೂಳೆ ಮಜ್ಜೆಯ ಕಸಿ ಸೇರಿಸಿ ಯೋಜನೆ ವಿಸ್ತರಿಸಲು ನಿರ್ಧರಿಸಲಾಗಿದೆ. ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾಗುತ್ತಿರುವ 450 ಹಾಸಿಗೆ ಸಾಮರ್ಥ್ಯದ ನೂತನ ಆಸ್ಪತ್ರೆ ಕಟ್ಟಡದ ಎರಡನೆ ಹಂತದ ಕಾಮಗಾರಿಯ 78.10 ಕೋಟಿ ರು.ಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಎಚ್.ಕೆ.ಪಾಟೀಲ್ ಹೇಳಿದರು.

ಬ್ರ್ಯಾಂಡ್ ಬೆಂಗಳೂರು ಯೋಜನೆಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಈಗಿರುವ 13 ಹೆರಿಗೆ ಆಸ್ಪತ್ರೆಗಳನ್ನು 30 ಬೆಡ್‌ಗಳ ಮತ್ತು 5 ಆಸ್ಪತ್ರೆಗಳನ್ನು 50 ಬೆಡ್‌ಗಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಲು, ಹಳೆ ಕಟ್ಟಡಗಳನ್ನು ಕೆಡವಿ 3 ಆಸ್ಪತ್ರೆಗಳಿಗೆ ಹೊಸ ಕಟ್ಟಡ ನಿರ್ಮಾಣ ಅಸ್ತಿತ್ವದಲ್ಲಿರುವ 852 ಬೆಡ್‌ಗಳ ಸಾಮರ್ಥ್ಯವನ್ನು 1122 ಬೆಡ್‌ಗಳಿಗೆ ಹೆಚ್ಚಿಸಲು ಹಾಗೂ 26 ದಂತ ಚಿಕಿತ್ಸಾಲಯ ಸ್ಥಾಪನೆಗೆ 413.71 ಕೋಟಿ ವೆಚ್ಚದ ಕ್ರಿಯಾ ಯೋಜನೆಗೆ ಸಚಿವ ಸಂಪುಟ ಅನುಮೋದನೆ ನೀಡಿದೆ.

-ಎಚ್.ಕೆ. ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

ಸಚಿವ ಸಂಪುಟದ ಪ್ರಮುಖಾಂಶ

- ಆರ್.ಐ.ಡಿ.ಎಫ್ ಯೋಜನೆಯಲ್ಲಿ ಒಬಿಸಿ ಇಲಾಖೆಯ 15 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಕಟ್ಟಡ
- ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯಲ್ಲಿ 100 ಹಾಸಿಗೆ ಸಾಮರ್ಥ್ಯದ ನ್ಯೂರಾಲಜಿ ಮತ್ತು ನ್ಯೂರೋಸರ್ಜರಿ ವಿಭಾಗದ ಕಟ್ಟಡ ನಿರ್ಮಾಣ ಕಾಮಗಾರಿಗೆ 33.77 ಕೋಟಿಗೆ ಆಡಳಿತಾತ್ಮಕ ಅನುಮೋದನೆ.
- ಸಂಜಯ್‌ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ಆವರಣದಲ್ಲಿನ ಕ್ರೀಡಾ ಮತ್ತು ರೋಬೋಟಿಕ್ ಶಸ್ತ್ರ ಚಿಕಿತ್ಸಾ ವಿಭಾಗದ ವೈದ್ಯಕೀಯ ಉಪಕರಣ, ಪೀಠೋಪಕರಣ ಖರೀದಿಗೆ 14 ಕೋಟಿ ರು. ಅನುಮೋದನೆ.
- ಪ್ರಧಾನ ಮಂತ್ರಿ ಆವಾಸ್ ಯೋಜನೆಯಲ್ಲಿ ಸ್ಥಗಿತಗೊಂಡಿದ್ದ 61,894 ಮನೆಗಳ ಪುನರ್ ಪ್ರಾರಂಭಿಸಲು 2643.67 ಕೋಟಿ ರು. ಭರಿಸಲು ಸಂಪುಟ ಒಪ್ಪಿಗೆ.
- ಮಂಡ್ಯದಲ್ಲಿ 285 ಕೋಟಿ ರು. ವೆಚ್ಚದಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಸ್ಥಾಪನೆಗೆ ಒಪ್ಪಿಗೆ.
- ''ಆಶಾಕಿರಣ'' ಯೋಜನೆಯನ್ನು 2024-25ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಉಚಿತವಾಗಿ ಸಮಗ್ರ ನೇತ್ರ ತಪಾಸಣೆ ಮತ್ತು ಕಣ್ಣಿನ ಶಸ್ತ್ರಚಿಕಿತ್ಸೆ ಹಾಗೂ ಕನ್ನಡಕಗಳನ್ನು ವಿತರಿಸುವ ಕಾರ್ಯಕ್ರಮಕ್ಕೆ 13.30 ಕೋಟಿ ಅನುದಾನಕ್ಕೆ ಒಪ್ಪಿಗೆ.

ಅರಮನೆ ಮೈದಾನ; ಮೇಲ್ಮನವಿ ಸಲ್ಲಿಸಲು ಸರಕಾರ ತೀರ್ಮಾನ

ಬೆಂಗಳೂರು ಅರಮನೆಯನ್ನು ವಶಪಡಿಸಿಕೊಂಡಿರುವ 1997ರ ಕಾಯಿದೆಯ ಸಿಂಧುತ್ವವನ್ನು ಎತ್ತಿ ಹಿಡಿಯಲು ಸುಪ್ರೀಂ ಕೋರ್ಟ್ ಮುಂದೆ ಸರಕಾರ ಮೇಲ್ಮನವಿ ಅರ್ಜಿಯನ್ನು ತುರ್ತು ವಿಚಾರಣೆಗೆ ಕೋರಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ.

ಸುಪ್ರೀಂ ಕೋರ್ಟ್‌ನ ಬೆಂಗಳೂರು ಅರಮನೆ ಮೈದಾನಕ್ಕೆ ಸೇರಿದ 15 ಎಕರೆ 17.5 ಗುಂಟೆ ಜಮೀನನ್ನು ಉಪಯೋಗಿಸಿಕೊಳ್ಳುವುದಕ್ಕೆ ನಿಗದಿಪಡಿಸಿದ ಟಿಡಿಆರ್ ದರದ ಬಗ್ಗೆ ಸಚಿವ ಸಂಪುಟ ಚರ್ಚಿಸಿದೆ. ನ್ಯಾಯಾಂಗ ನಿಂದನೆ ಅರ್ಜಿಯ ವಿಷಯದಲ್ಲಿ ಕಾನೂನಿನ ಪ್ರಕಾರ ಅಗತ್ಯ ಕ್ರಮ ವಹಿಸಲು ಸಚಿವ ಸಂಪುಟವು ಸಂಬಂಧಪಟ್ಟ ಇಲಾಖೆಗೆ ನಿರ್ದೇಶಿಸಿತು. ಸುಪ್ರೀ ಕೋರ್ಟ್ ಆದೇಶಾನುಸಾರ ಪ್ರತಿ ಚದರ ಮೀಟರ್‌ಗೆ ಬಳ್ಳಾರಿ ರಸ್ತೆಯಲ್ಲಿ 2,83,500 ರು. ಮತ್ತು ಜಯಮಹಲ್ ರಸ್ತೆಯಲ್ಲಿ 2,04,000 ರು.ನಂತೆ 3011.00 ಕೋಟಿ ಪರಿಹಾರ ನೀಡಬೇಕಿತ್ತು. ಇದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗಿತ್ತು. ಆದ್ದರಿಂದ ಇದೀಗ ಈ ಅರ್ಜಿ ವಿಚಾರಣೆಯನ್ನು ತುರ್ತಾಗಿ ನಡೆಸುವಂತೆ ಕೋರಲು ತೀರ್ಮಾನಿಸಲಾಗಿದೆ.

ಹುದ್ದೆ ಬೇಕಿದ್ದರೆ ಹೈಕಮಾಂಡ್ ಬಳಿ ಕೇಳಿ ಪಡೆಯಿರಿ: ಡಿಸಿಎಂ ಡಿಕೆಶಿ ತಿರುಗೇಟು

ಅಂಗಡಿ, ಮಾಧ್ಯಮದಲ್ಲಿ ಅಧ್ಯಕ್ಷ ಸ್ಥಾನ ಸಿಗಲ್ಲ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಸ್ಥಾನವಾಗಲಿ, ಪಕ್ಷದ ಯಾವುದೇ ಹುದ್ದೆಯಾಗಲಿ ಯಾವುದೋ ಅಂಗಡಿ ಅಥವಾ ಮಾಧ್ಯಮಗಳ ಮುಂದೆ ಮಾತಾಡಿದರೆ ಸಿಗುವುದಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷ ಹುದ್ದೆ ಬದಲಾವಣೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ನಾವು ಮಾಡುವ ಕೆಲಸ, ಶ್ರಮವನ್ನು ಪಕ್ಷದ ನಾಯಕರು ಗುರುತಿಸಿ ಅದಕ್ಕೆ ಸೂಕ್ತವಾಗಿ ಹುದ್ದೆ ನೀಡುತ್ತಾರೆ. ಮಾಧ್ಯಮಗಳ ಮುಖಾಂತರ ಯಾರಾದರೂ ಹುದ್ದೆ ಕೇಳುತ್ತಾರೆಯೇ? ಇದನ್ನೆಲ್ಲಾ ಹೊಸದಾಗಿ ಕೇಳುತ್ತಿರುವೆ ಎಂದರು.

ಪಕ್ಷದ ವಿಚಾರದ ವಿಚಾರವಾಗಿ ಯಾವುದೇ ಬೆಳವಣಿಗೆ ಇದ್ದರೂ ನಾನೇ ಸುದ್ದಿಗೋಷ್ಠಿ ಕರೆದು ಮಾಹಿತಿ ನೀಡುತ್ತೇನೆ. ಈಗ ನಮ್ಮ ಪಕ್ಷ ಸಂಘಟನೆ ಮಾಡಿ, ಪಕ್ಷ ಉಳಿಸಿ, ಬೆಳೆಸುವ ಕೆಲಸ ಮಾಡಬೇಕು. ಪಕ್ಷದಲ್ಲಿ ಎಲ್ಲರೂ ಶಿಸ್ತು ಕಾಪಾಡಬೇಕು ಎಂದು ನಮ್ಮ ಮುಖ್ಯಮಂತ್ರಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು ಬುದ್ದಿವಾದ ಹೇಳಿದ್ದಾರೆ. ಯಾವುದೇ ವಿಚಾರವಾಗಿ ಬಹಿರಂಗವಾಗಿ ಚರ್ಚೆ ಮಾಡದಂತೆ ಸೂಚಿಸಿದ್ದಾರೆ ಎಂದು ತಿಳಿಸಿದರು.

ಪಕ್ಷದ ವಿಚಾರ ಮಾಧ್ಯಮಗಳ ಮುಂದೆ ಮಾತನಾಡುವಂತಹದಲ್ಲ. ಏನೇ ಇದ್ದರೂ ಎಐಸಿಸಿ ಅಧ್ಯಕ್ಷರು, ರಾಹುಲ್ ಗಾಂಧಿ, ಮುಖ್ಯಮಂತ್ರಿ ಅಥವಾ ನನ್ನ ಬಳಿ ಬಂದು ಮಾತನಾಡಲಿ. ಇದು ಕೇವಲ ಕಾಂಗ್ರೆಸ್ ಮಾತ್ರವಲ್ಲ, ಬಿಜೆಪಿ, ಜೆಡಿಎಸ್, ರೈತ ಸಂಘ ಸೇರಿದಂತೆ ಯಾವುದೇ ಪಕ್ಷವಾದರೂ ಪಕ್ಷದ ವಿಚಾರವನ್ನು ಆಂತರಿಕವಾಗಿ ಚರ್ಚೆ ಮಾಡಬೇಕು ಎಂದು ಹೇಳುತ್ತೇನೆ. ನಾನು ಯಾವುದಾದರೂ ಹುದ್ದೆ ಬಯಸಿದರೆ ನೀವು (ಮಾಧ್ಯಮಗಳು) ಆ ಸ್ಥಾನ ನನಗೆ ಕೊಡಿಸುತ್ತೀರಾ? ಅಥವಾ ಈ ಹುದ್ದೆಗಳು ಅಂಗಡಿಯಲ್ಲಿ ಸಿಗುತ್ತದೆಯೇ? ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದರೆ ಯಾವುದೇ ಪ್ರಯೋಜನವಿಲ್ಲ. ಬದಲಿಗೆ ಇದರಿಂದ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ಕೇಳಿದರು.

ಪಕ್ಷದ ಸಂಘಟನೆ ಕುಂಠಿತವಾಗಿದೆ, ಪಕ್ಷಕ್ಕೆ ಪೂರ್ಣಪ್ರಮಾಣದ ಅಧ್ಯಕ್ಷರು ಬೇಕು ಎಂಬ ಸತೀಶ್ ಜಾರಕಿಹೊಳಿಯವರ ಹೇಳಿಕೆಗೆ ಸ್ಪಷ್ಟನೆ ನೀಡಬೇಕಿರುವುದು ನಾನಲ್ಲ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು. ಈ ವಿಚಾರವಾಗಿ ಅವರ ಬಳಿ ಕೇಳಿ. ಅವರ ನಿರ್ಧಾರವನ್ನು ಪ್ರಶ್ನೆ ಮಾಡಲಾಗುತ್ತಿದೆ. ಈ ರೀತಿ ಮಾಡಬಾರದು.

- ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಯಾರೇ ಇರಲಿ, ಹೋಗಲಿ ಪಕ್ಷ ಇರುತ್ತದೆ

ಈ ಪಕ್ಷವನ್ನು ಕೇವಲ ಡಿ.ಕೆ. ಶಿವಕುಮಾರ್ ಒಬ್ಬನೇ ಅಧಿಕಾರಕ್ಕೆ ತಂದಿಲ್ಲ. ಕಾರ್ಯಕರ್ತರು, ಮತದಾರರು ನಮ್ಮ ಮೇಲೆ ಅಪಾರವಾದ ವಿಶ್ವಾಸವಿಟ್ಟು ನಮಗೆ ಅಧಿಕಾರ ನೀಡಿದ್ದಾರೆ. ಇದನ್ನು ನಾವು ಉಳಿಸಿಕೊಳ್ಳಬೇಕು, ಉಳಿಸಿಕೊಳ್ಳುತ್ತೇವೆ. ಇದು ಕಾರ್ಯಕರ್ತರ ಹಾಗೂ ಮತದಾರರ ಪಕ್ಷ. ಇದಕ್ಕೆ ತನ್ನದೇ ಆದ ದೊಡ್ಡ ಇತಿಹಾಸವಿದೆ. ಯಾರೇ ಇರಲಿ, ಹೋಗಲಿ ತನ್ನನ್ನು ತಾನು ಉಳಿಸಿಕೊಳ್ಳುವ ಶಕ್ತಿ ಈ ಪಕ್ಷಕ್ಕೆ ಇದೆ. ಗಾಂಧೀಜಿ ಅವರು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟು ಅಧಿಕಾರವನ್ನು ತ್ಯಾಗ ಮಾಡಿದ್ದಾರೆ. ಅಂಬೇಡ್ಕರ್ ಅವರು ಸಂವಿಧಾನ ಕೊಟ್ಟರು ಅವರು ಯಾವ ಅಧಿಕಾರ ಪಡೆದಿದ್ದಾರೆ? ನಾವು ಅವರನ್ನೆಲ್ಲ ಸ್ಮರಿಸಬೇಕು. ಹೀಗಾಗಿ ಮಾಧ್ಯಮಗಳ ಮುಂದೆ ಮಾತನಾಡುವುದಕ್ಕಿಂತ ಪಕ್ಷ ಬಹಳ ಮುಖ್ಯ ಎಂದು ಮನವಿ ಮಾಡುತ್ತೇನೆ ಎಂದು ಹೇಳಿದರು.

ಗಜೇಂದ್ರಗಡ ಠಾಣೆಯಲ್ಲಿ ಪ್ರಕರಣ ದಾಖಲು। ಮುಗಿಲು ಮುಟ್ಟಿದ ಕುಟುಂಬಸ್ಥರ ಆಕ್ರಂದನ

ಲವ್ ಜಿಹಾದ್ ಆರೋಪ ವಿದ್ಯಾರ್ಥಿನಿ ಆತ್ಮಹತ್ಯೆ

ಗದಗ: ಪ್ರೀತಿ, ಪ್ರೇಮ ವಿಚಾರವಾಗಿ 15 ವರ್ಷದ ಬಾಲಕಿ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಜಿಲ್ಲೆಯ ಗಜೇಂದ್ರಗಡ ಪಟ್ಟಣದ ಬಣಗಾರ ಕಾಲೋನಿಯಲ್ಲಿ ನಡೆದಿದೆ.

9ನೇ ತರಗತಿ ಓದುತ್ತಿದ್ದ ಖುಷಿ ಆತ್ಮಹತ್ಯೆಗೆ ಶರಣಾದ ಬಾಲಕಿ. ಯಾರು ಇಲ್ಲದ ವೇಳೆ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ವಿದ್ಯಾರ್ಥಿಗಳಾದ 18 ವರ್ಷದ ಮುತ್ತುರಾಜ್ ಮ್ಯಾಗೇರಿ ಹಾಗೂ 19 ವರ್ಷದ ಜುನೇದಸಾಬ್ ಕಂದಗಲ್ ಅವರ ಕಿರುಕುಳದಿಂದ ಖುಷಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಈ ಇಬ್ಬರು ಸೇರಿ ಈ ಖುಷಿಯನ್ನು ಲವ್ ಮಾಡ್ತಿದ್ದರು. ಈ ವಿಷಯ ಗೊತ್ತಾಗಿ ಇಬ್ಬರಿಗೂ ತಾಕೀತು ಮಾಡಲಾಗಿತ್ತು. ಆದರೂ ಇಬ್ಬರು ಆಗಾಗ ಭೇಟಿಯಾಗಿ ಮಾತನಾಡಿ ಕಿರುಕುಳ ನೀಡುತ್ತಿದ್ದರು. ಈ ಕಿರುಕುಳದಿಂದ ಬೇಸತ್ತು ಬಾಲಕಿ ನೇಣು ಬಿಗಿದುಕೊಂಡು ಮೃತಪಟ್ಟಿದ್ದಾಳೆ ಎಂದು ಕುಟುಂಬಸ್ಥರು ದೂರಿದ್ದಾರೆ.

ವಿದ್ಯಾರ್ಥಿಗಳಾದ ಜಿನೇದಸಾಬ್ ಹಾಗೂ ಮುತ್ತುರಾಜ್ ವಿರುದ್ಧ ಗಜೇಂದ್ರಗಡ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಸ್ಥಳಕ್ಕೆ ರೋಣ ಸಿಪಿಐ ಹಾಗೂ ಗಜೇಂದ್ರಗಡ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಮೈಯೆಲ್ಲಾ ಕಣ್ಣಾಗಿರಬೇಕು

ದೇಶದ ಉತ್ತರ ಭಾಗದ ಗಡಿಗಳಲ್ಲಿ ಪರಿಸ್ಥಿತಿ ಬಹಳ ಸೂಕ್ಷ್ಮವಾಗಿದೆ, ಆದರೆ ಎಂಥದೇ ಪರಿಸ್ಥಿತಿ ಮತ್ತು ಸವಾಲು ಒದಗಿದರೂ ಅದನ್ನು ಎದುರಿಸಲು ಭಾರತೀಯ ಸೇನಾಪಡೆ ಸಮರ್ಥವಾಗಿದೆ ಮತ್ತು ಸನ್ನದ್ಧವಾಗಿದೆ ಎಂಬ ಮಾತುಗಳನ್ನಾಡಿದ್ದಾರೆ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ. ಚೀನಾ, ಪಾಕಿಸ್ತಾನ, ಬಾಂಗ್ಲಾದೇಶದಂಥ 'ಮಗ್ಗುಲು ಮುಳ್ಳು' ದೇಶಗಳು ಭಾರತದ ವಿರುದ್ಧ ಕತ್ತಿ ಮಸೆಯುತ್ತಲೇ ಇರುವ ಇಂದಿನ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸೇನಾ ಮುಖ್ಯಸ್ಥರು ಆಡಿರುವ ಈ ಮಾತು ಆತ್ಮವಿಶ್ವಾಸದ ಪ್ರತೀಕವಾಗಿದೆ. ಜತೆಗೆ, ಭಾರತದ ಮೇಲೆ ಮುರಕೊಂಡು ಬೀಳಲು ಹವಣಿಸುತ್ತಿರುವ ಶತ್ರುರಾಷ್ಟ್ರಗಳಿಗೆ ನೀಡಿದ ಪರೋಕ್ಷ ಎಚ್ಚರಿಕೆಯೂ ಆಗಿದೆ ಎಂದರೆ ಅತಿಶಯೋಕ್ತಿಯಲ್ಲ. ಈಶಾನ್ಯ ರಾಜ್ಯ ಮಣಿಪುರವು ಕೆಲ ತಿಂಗಳ ಹಿಂದೆ ಕಾರಣವಲ್ಲದ ಕಾರಣಕ್ಕೆ ಹೊತ್ತಿಕೊಂಡು ಉರಿದಿದ್ದು, ನೆರೆಯ ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ಅಲ್ಲಿನವರು ಎರಗಿ, ಹಿಂಸಿಸಿ, ಆಸ್ತಿಪಾಸ್ತಿಗಳಿಗೆ ನಷ್ಟ ಉಂಟುಮಾಡಿದ್ದು ಈ ಎಲ್ಲ ಬೆಳವಣಿಗೆಗಳ ಹಿಂದೆ ಕೆಲವೊಂದು ವಿದೇಶಿ ಶಕ್ತಿಗಳ ಮತ್ತು ಶತ್ರುರಾಷ್ಟ್ರಗಳ ಕೈವಾಡವಿದೆ ಎನ್ನಲಾಗುತ್ತಿದೆ. ಗಡಿಭಾಗದಲ್ಲಿ ಆಗಾಗ ತಲೆದೋರುವ ಉದ್ವಿಗ್ನ ಪರಿಸ್ಥಿತಿಗೂ ಇದು ಅನ್ವಯವಾಗುವ ಮಾತು. ತಾನಾಗಿಯೇ ಯಾವ ದೇಶದ ಮೇಲೂ ಆಕ್ರಮಣಕ್ಕೆ ಮುಂದಾಗದ ಶುಭ್ರ ಮತ್ತು ಸ್ಪಷ್ಟ ಚಾರಿತ್ರ್ಯ ಭಾರತ ದೇಶದ್ದು; ಆದರೆ ಭಾರತದ ಮತ್ತು ಭಾರತೀಯರ ಸೌಜನ್ಯವನ್ನು 'ದೌರ್ಬಲ್ಯ' ಎಂದು ಪರಿಗಣಿಸಿ ಕಿತಾಪತಿ ಮಾಡಿದವರಿಗೆಲ್ಲಾ ಭಾರತೀಯ ಸೇನೆ ಸರಿಯಾಗೇ ತಪರಾಕಿ ನೀಡಿದ್ದಿದೆ. ಸಾಕಷ್ಟು ವರ್ಷಗಳ ಹಿಂದೆ ನಡೆದ ಕಾರ್ಗಿಲ್ ಯುದ್ಧ, ಉಗ್ರರ ಶಿಬಿರಗಳ ಮೇಲೆ ನಡೆದ ಸರ್ಜಿಕಲ್ ಸ್ಟ್ರೈಕ್ ಹೀಗೆ ಇದಕ್ಕೆ ಸಾಕಷ್ಟು ಉದಾಹರಣೆಗಳನ್ನು ನೀಡಬಹುದು. ಇಷ್ಟಾಗಿಯೂ ಪಾಠ ಕಲಿಯದ ಚಿತ್ತಸ್ಥಿತಿ ಕೆಲವೊಂದು ನೆರೆಹೊರೆ ದೇಶಗಳದ್ದು. ಹೀಗಾಗಿ, ಅನುಗಾಲವೂ 'ಸಮರಸನ್ನದ್ಧ' ಸ್ಥಿತಿಯಲ್ಲಿ ಇರಬೇಕಾದ ಹಾಗೂ ಗಡಿಭಾಗದಲ್ಲಿ ಮೈಯೆಲ್ಲಾ ಕಣ್ಣಾಗಿ ಕಾಯಬೇಕಾದ ಅನಿವಾರ್ಯತೆಯಿದೆ ಭಾರತೀಯ ಸೇನೆಗೆ. ದೇಶದ ಸಮಗ್ರತೆ-ಸಾರ್ವಭೌಮತೆಗಳ ರಕ್ಷಣೆಗೆ ಅದು ಅಗತ್ಯವೂ ಹೌದೆನ್ನಿ.

ಸೊಂಪಾದಕೀಯ

ನೈಫ್ ಅಲಿ ಖಾನ್!

ಕೋಲಾಹಲ ಸೃಷ್ಟಿ ಮಾಡೋ ಸುದ್ದಿಯೊಂದು ಬಾಲಿವುಡ್ ಅಂಗಳದಿಂದ ಹೊರಬಿದ್ದಿದೆ. ನವಾಬ್ ವಂಶಸ್ಥ ಪಟೌಡಿ ಪುತ್ರ ಸೈಫ್ ಅಲಿ ಖಾನ್ ಅವರ ಮೇಲೆ ನೈಫ್ ಅಟ್ಯಾಕ್ ಆಗಿದೆ. ಮುಂಬೈನ ಅವರ ನಿವಾಸದಲ್ಲಿ ಅದರಲ್ಲೂ ಹನ್ನೆರಡನೇ ಫ್ಲೋರ್‌ನಲ್ಲಿರೋ ಅವರ ನಿವಾಸಕ್ಕೆ ನುಗ್ಗಿದ ದುಷ್ಕರ್ಮಿಯೊಬ್ಬ ಸೈಫ್ ಅವರಿಗೆ ಚಾಕುವಿನಿಂದ ಹಲವಾರು ಬಾರಿ ಇರಿದಿದ್ದಾನೆ. ಐದಾರು ಕಡೆ ತೀವ್ರ ಗಾಯ ಆಗಿರುವ ಸೈಫ್ ಸದ್ಯಕ್ಕೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಹಾಗಾಗಿ ಸೈಫ್ ಅಲಿ ಖಾನ್ ಈಗ ಸೇಫ್ ಅಲಿ ಖಾನ್ ಎನ್ನಬಹುದು. ಬಾಲಿವುಡ್‌ನಲ್ಲಿ ಕೊಲೆ ಬೆದರಿಕೆಗಳು ಸಾಮಾನ್ಯ. ಅದರಲ್ಲೂ ಸ್ಟಾರ್ ನಟರಿಗೆ ಇದು ಕಾಮನ್. ಇಂಥ ಬೆದರಿಕೆಗಳು ಸಾಮಾನ್ಯವಾಗಿ ಹುಸಿ ಆಗಿರುತ್ತವೆ. ಇನ್ನು ಕೆಲವು ಗುಲ್ಶನ್ ಕುಮಾರ್ ಅವರ ಕೇಸ್ ಥರ ನಿಜ ಕೂಡಾ ಆಗಿಬಿಡುತ್ತವೆ. ಇನ್ನು ಸಲ್ಮಾನ್ ಖಾನ್ ಅವರಿಗಂತೂ ಆಗಾಗ್ಗೆ ಕೊಲೆ ಬೆದರಿಕೆ ಬರುತ್ತಲೇ ಇರುತ್ತವೆ. ಇತ್ತೀಚೆಗೆ ಬಿಷ್ಣೋಯ್ ಗ್ಯಾಂಗ್ ನಿಂದಲೂ ಸಲ್ಮಾನ್‌ಗೆ ಕೊಲೆ ಬೆದರಿಕೆ ಬಂದಿತ್ತು. ಇಂಥ ಕರೆಗಳು ಬಹಳಷ್ಟು ಸಲ ಕೇವಲ ಸುದ್ದಿಯಾಗಿ ಉಳಿದು ಬಿಡುತ್ತವೆ. ಈ ಬಾರಿ ಸೈಫ್ ಅಲಿ ಖಾನ್ ಅಟ್ಯಾಕ್‌ಗೆ ಗುರಿ ಆಗಿದ್ದಾರೆ. ವಿಶೇಷ ಅಂದ್ರೆ, ಸೈಫ್‌ಗೆ ಇದುವರೆಗೂ ಅಂಥ

ಯಾವ ಬೆದರಿಕೆ ಕರೆಗಳೂ ಬಂದಿರಲಿಲ್ಲ, ಯಾಕಂದ್ರೆ ಇದು ಸೈಫ್ ಅವರ ಪ್ರಾಣ ತೆಗೆಯುವ ಉದ್ದೇಶ ದಿಂದಲೇ ಮಾಡಿರುವ ಅಟ್ಯಾಕ್ ಅಂತ ಮೇಲ್ನೋಟಕ್ಕೆ ಅನ್ನಿಸುತ್ತಿಲ್ಲ, ವರದಿ ಗಳ ಪ್ರಕಾರ, ಇರಿದ ಆರೋಪಿಯು ಸೈಫ್ ಮನೆಗೆ ಕನ್ನ ಹಾಕಲು ಹೋಗಿದ್ದ ನಂತೆ. ಕಳ್ಳತನ ಮಾಡುವ ಪ್ರಯತ್ನದಲ್ಲಿ ಅಡ್ಡಬಂದ ಸೈಫ್‌ಗೆ ಇರಿದ್ದಾನೆ. ಆದರೆ, ಸೈಫ್ ವಾಸ ಇರೋ ಮನೆ 12ನೇ ಫ್ಲೋರ್‌ನಲ್ಲಿ ಇದ್ದು ಅಲ್ಲಿಗೆ ಕಳ್ಳ ಹೇಗೆ ಹೋದ, ಜತೆಗೆ ತೀರಾ ಸೈಫ್ ಅಲಿ ಖಾನ್ ಅವರಂಥ ಸೆಲೆಬ್ರಿಟಿಗಳ 12ನೇ ಫ್ಲೋರಿನ ಮನೆಗೆ ನುಗ್ಗೋದು ಅಷ್ಟು ಸುಲಭನಾ? ಅನ್ನೋ ಅನು ಮಾನಗಳು ಈ ಪ್ರಕರಣದಲ್ಲಿ ಮೂಡುತ್ತವೆ. ಒಟ್ಟಿನಲ್ಲಿ ತೀವ್ರ ಗಾಯ ಗಳಾಗಿದ್ದರೂ ಸೈಫ್ ಸೇಫಾಗಿದ್ದಾರೆ ಅನ್ನೋದು ಸಮಾಧಾನದ ವಿಷಯ ಅಂತ ಅವರ ವೈಫ್ ಕರೀನಾ ಕಪೂರ್ ಹೇಳಿಕೆ ಕೊಟ್ಟಿದ್ದಾರೆ. ಆದರೆ ಈ ಘಟನೆ ಬಾಲಿವುಡ್ ನಟರ ಸುರಕ್ಷತೆಯ ಬಗ್ಗೆ ಪ್ರಶ್ನೆ ಎತ್ತಿರೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಸೀತಾಪತಿ ಮನೋಭಾವದವರು

ಜಪಾನಿಯರು ಅತ್ಯಂತ ವಿನಯಶೀಲರು, ಸುಸಂಸ್ಕೃತರು ಎಂಬುದು ಗೊತ್ತಿತ್ತು. ನೈತಿಕತೆ, ಶಿಷ್ಟಾಚಾರ ಮತ್ತು ಪರಸ್ಪರ ಗೌರವಕ್ಕೆ ವಿಶೇಷ ಮಹತ್ವ ನೀಡುವವರು ಎಂಬುದು ಸಹ ತಿಳಿದಿತ್ತು. ಆದರೆ ತಮ್ಮಿಂದಾಗುವ ತಪ್ಪುಗಳಿಗೆ ಪದೇ ಪದೆ ಕ್ಷಮೆಯಾಚಿಸುವ 'ಸೀತಾಪತಿ' ಮನೋಭಾವದವರು ಎಂಬುದು ಗೊತ್ತಿರಲಿಲ್ಲ. ಜಪಾನಿಯರು ಕ್ಷಮೆಯಾಚನೆ (Apology)ಗೆ ಅತ್ಯಂತ ಪ್ರಾಮುಖ್ಯ ನೀಡುವವರು. ತಮ್ಮಿಂದಾದ ಸಣ್ಣ ತಪ್ಪಿಗೂ ಅತೀವವಾಗಿ ನೊಂದುಕೊಳ್ಳುವ ಸ್ವಭಾವದವರು. ಅವರಿಗೆ 'ತಪ್ಪಾಯ್ತು, ಮನ್ನಿಸಿ' ಎಂದು ಒಂದು ಸಲ ಹೇಳಿದರೆ ಸಮಾಧಾನವಾಗುವುದಿಲ್ಲ. ಪದೇ ಪದೆ ಹೇಳಿದಾಗಲೇ ಸಂತೃಪ್ತಿ. ಜಪಾನಿಯರ ಸಂಸ್ಕೃತಿಯಲ್ಲಿ, ಕ್ಷಮಾಯಾಚನೆ ಒಬ್ಬ ವ್ಯಕ್ತಿಯ ನೈತಿಕತೆ, ಶ್ರದ್ಧೆ, ವಿಶ್ವಾಸ ಮತ್ತು ಹೊಣೆಗಾರಿಕೆಯನ್ನು ತೋರಿಸುವ ಸಂಕೇತ. ಈ ಕಾರಣದಿಂದ ಆ ದೇಶದ ಜನರು ಸುಮಾರು 20 ಬೇರೆ ಬೇರೆ ರೀತಿಗಳಲ್ಲಿ ಕ್ಷಮೆಯಾಚಿಸುತ್ತಾರೆ. 'ಸೊಮಿಮಸೆನ್' (Sumimasen) ಎಂಬುದು ಸಾಮಾನ್ಯ ಕ್ಷಮೆಯಾಚನೆ ಪದವಾಗಿದೆ. ಇದು ಕ್ಷಮಿಸಿರಿ ಅಥವಾ ಕ್ಷಮಿಸಿ ಎಂಬ ಅರ್ಥ ಹೊಂದಿದೆ. ನಮ್ಮಲ್ಲಿ sorry ಎಂದು ಹೇಳಿದಂತೆ. ದೈನಂದಿನ ಸಾಮಾನ್ಯ ಪರಿಸ್ಥಿತಿಯಲ್ಲಿ, ಉದಾಹರಣೆಗೆ, ಯಾರಿಗಾದರೂ ಅಜಾಗರೂಕತೆಯಿಂದ ತೊಂದರೆಯಾದರೆ, ಆ ಪದವನ್ನು ಬಳಸುತ್ತಾರೆ. 'ಸೊಮಿಮಸೆನ್' ಎಂದು ಹೇಳಿದರೂ ಸಮಾಧಾನವಾಗದಿದ್ದರೆ, ಗೊಮೆನ್ನಸೈ (Gomen Nasai) ಅಂತ ಹೇಳುತ್ತಾರೆ. ಹೀಗಂದರೆ 'ನಾನು ಅತ್ಯಂತ ವಿನೀತನಾಗಿ ಕ್ಷಮೆ ಕೇಳುತ್ತೇನೆ' ಎಂದರ್ಥ. ಇದು ಆತ್ಮೀಯ ಸಂಬಂಧಗಳಲ್ಲಿ ಬಳಸುವ ಮತ್ತು ಗಂಭೀರ ತಪ್ಪುಗಳನ್ನು ಒಪ್ಪಿಕೊಳ್ಳಲು ಬಳಸುವ ಪದ. ಸ್ನೇಹಿತರು ಅಥವಾ ಪರಿಚಿತರು ತಮ್ಮ ನಡುವಿನ ಸಣ್ಣ-ಪುಟ್ಟ ತಪ್ಪುಗಳಿಗೆ 'ಗೊಮೆನ್ನಸೈ' ಎಂದು ಹೇಳುತ್ತಾ ಕ್ಷಮೆ ಯಾಚಿಸುತ್ತಾರೆ. ಆಫೀಸಿನಲ್ಲಿ ಮಾಡಿದ ತಪ್ಪುಗಳಿಗೆ 'ಮೊಶಿವಕೇ ಅರಿಮಸೇನ್' (MMshiwake Arimasen) ಎಂದು ಹೇಳಿ ಕ್ಷಮೆ ಯಾಚಿಸುತ್ತಾರೆ. 'ಮೊಶಿವಕೇ ಗೊಮೆನ್ನಸೈ' ಅಂದ್ರೆ, ದೊಡ್ಡ ಪ್ರಮಾದ ಮಾಡಿದಾಗ ಹೇಳುವ ಅತ್ಯಂತ ವಿನೀತ ಪದ. 'ನನ್ನಿಂದ ದೊಡ್ಡ ತಪ್ಪಾಗಿದೆ, ನಾನು ಅತ್ಯಂತ ಗಾಢ ಭಾವದಿಂದ ಕ್ಷಮೆಯಾಚಿಸುತ್ತೇನೆ' ಎಂಬ ಅರ್ಥವನ್ನು ಆ ಪದ ವ್ಯಕ್ತಪಡಿಸುತ್ತದೆ. ಅಸಭ್ಯ ವರ್ತನೆ ತೋರಿದಾಗ 'ಶಿಟ್ಸುರೆ ಇಟಾಶಿಮಾಶಿತಾ' ಎಂದು ಹೇಳುತ್ತಾರೆ. ಉದಾಹರಣೆಗೆ, ಏನಾದರೂ ಅಜಾಗರೂಕತೆಯಿಂದ ಯಾರಿಗಾದರೂ ತೊಂದರೆಯುಂಟು ಮಾಡಿದಾಗ, ತಪ್ಪು ಅರಿವಿಗೆ ಬಂದಾಕ್ಷಣ ಹಾಗೆ ಹೇಳುತ್ತಾರೆ. 'ನನ್ನಿಂದ ತಪ್ಪಾಗಿದೆ, ಆದರೆ ನೀವು ನನ್ನನ್ನು ಕ್ಷಮಿಸಲೇಬೇಕು' ಎಂದು ಗಟ್ಟಿಯಾಗಿ ಕ್ಷಮೆಯಾಚಿಸುವುದುಂಟು. ಆಗ 'ಒಯುರೆ ಇಟಾಶಿಮಾಸು' ಅಂತಾರೆ. ಹೀಗೆ ಹೇಳಿದಾಗ ಕ್ಷಮಿಸದೇ ಬೇರೆ ಮಾರ್ಗವೇ ಇರುವುದಿಲ್ಲ. ಯಾರಿಗಾದರೂ ಆಘಾತವನ್ನುಂಟು ಮಾಡಿದಾಗ 'ಸೊರೇವಾ ಶಿಟ್ಸುರೆ ದೆಶಿತಾ' ಎಂದು ಹೇಳುತ್ತಾರೆ. 'ಸೂಮನ್' ಅಂದ್ರೆ, ಅಪ್ರಜ್ಞಾಪೂರ್ವಕವಾಗಿ ಆದ ತಪ್ಪಿಗೆ ಕ್ಷಮೆಯಾಚಿಸುವ ಪದ. ಅಧಿಕೃತ ವ್ಯಾಪಾರ-ವ್ಯವಹಾರಗಳಲ್ಲಿ ತಪ್ಪಾದಾಗ, 'ಫುನ್ಕೀ' ಎಂದು ಹೇಳುವುದುಂಟು. ಸ್ನೇಹಿತನೊಬ್ಬ ಮಿತ್ರದ್ರೋಹದಂಥ ಗಂಭೀರ ಪ್ರಮಾದ ಎಸಗಿದರೆ 'ಅಟಾಮಾ ಸಾಗೇರು' ಅಂತಾರೆ. ಹಾಗೆ ಹೇಳಿ, ತಲೆ ತಗ್ಗಿಸುವುದು ವಾಡಿಕೆ. ಇದು ಗಂಭೀರ ಕ್ಷಮೆಯಾಚನೆಗೆ ಶ್ರದ್ಧೆಯಿಂದ ಬಳಸುವ ವಿಧಾನ. ದೈನಂದಿನ ಜೀವನದಲ್ಲಿ ಸಣ್ಣ-ಪುಟ್ಟ ಪ್ರಮಾದಗಳಾದಾಗ 'ಉಕ್ಯೋ ' ಎಂದು ಹೇಳುವುದುಂಟು. 'ಫುಮಾಂ' ಎಂದರೆ ಅಸಮಾಧಾನಕ್ಕೆ ಸಂಬಂಧಿಸಿದ ಕ್ಷಮೆಯಾಚನೆ. 'ಅರಿಪೋಟೋನಮುಸ್' ಅಂದರೆ ಒಂದಕ್ಕಿಂತ ಹೆಚ್ಚು ತಪ್ಪು ಮಾಡಿ ಸಿಕ್ಕಿ ಬಿದ್ದಾಗ ಅಥವಾ ತಪ್ಪಿನ ಅರಿವಾದಾಗ ಬಳಸುವ ಪದ. ಜಪಾನಿನಲ್ಲಿ ಕ್ಷಮೆಯಾಚನೆಯೂ ಒಂದು ಮುಖ್ಯ ಕಸುಬು ಇರಬಹುದೇನೋ ಎಂಬಂತೆ ಭಾಸವಾದರೆ ಆಶ್ಚರ್ಯವಿಲ್ಲ. ಕೇವಲ ಶಬ್ದಗಳ ಮೂಲಕವೇ ಅಲ್ಲ, ಶಾರೀರಿಕ ಚಲನೆಗಳಿಂದಲೂ ಅವರು ಕ್ಷಮೆಯಾಚಿಸುತ್ತಾರೆ. ಇದರಿಂದ ಆ ದೇಶದ ನೈತಿಕತೆ ಮತ್ತು ಶಿಷ್ಟಾಚಾರವನ್ನು ಒಳಗೊಂಡ ಸಮೃದ್ಧ ಸಂಸ್ಕೃತಿಯ ದರ್ಶನವಾಗುವುದು ಮಾತ್ರ ನಿಜ.

ನಮ್ಮಷ್ಟಕ್ಕೆ ನಾವೇ ಮಾತನಾಡಿಕೊಳ್ಳುವುದು ಹುಚ್ಚೇ?

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಆ ದಿನಗಳಲ್ಲಿ ಕುಮಟಾದ ರೈಲ್ವೆ ಸ್ಟೇಷನ್ ರಸ್ತೆಯಲ್ಲಿ ಆರೇಳು ಹುಚ್ಚರು ವಾಸವಾಗಿದ್ದರು. ಅವರನ್ನು ಕೊಂಕಣ ರೈಲ್ವೆ ಬೋಗಿಗಳೇ ಯಾವತ್ತೋ ನಮ್ಮೂರಿಗೆ ತಂದು ಬಿಟ್ಟಿದ್ದಿರಬೇಕು. ಅವರೆಲ್ಲ ವರ್ಷಾನುಗಟ್ಟಲೆ ಆ ರಸ್ತೆಯ ಆಜುಬಾಜು ಪಾಳುಬಿದ್ದ ಕಟ್ಟಡದ ಅವಶೇಷಗಳಲ್ಲಿ ವಾಸವಾಗಿದ್ದರಿಂದ ಎಲ್ಲರಿಗೂ ಅವರ ಮುಖಪರಿಚಯವಿತ್ತು. ಕೆಲವು ರಿಕ್ಷಾ, ಟೆಂಪೋ ಡ್ರೈವರುಗಳಿಗೆ ಅವರ ಹೆಸರೂ ಗೊತ್ತಿತ್ತು. ಆ ಹುಚ್ಚರೂ ಊರಿನ ಒಂದು ಭಾಗವೇ ಆಗಿದ್ದರು. ಹಾಗಂತ ಅವರಿಂದ ಯಾರಿಗೂ ಅಂಥದ್ದೇನೂ ಅಪಾಯವಾಗಿದ್ದೇನಿಲ್ಲ. ಆದರೆ ಆಗೀಗ ಅವರನ್ನು ಯಾರೋ ಪುಂಡು ಪೋಕರಿಗಳು ವಿನಾಕಾರಣ ಓಡಿಸಿಕೊಂಡು ಹೋಗುತ್ತಿದ್ದರು. ಇವರೋ ಕಾರಣವೇ ತಿಳಿಯದೆ, ಹೆದರಿ ದಿಕ್ಕಾಪಾಲಾಗಿ ಓಡುತ್ತಿದ್ದರು. ಇದು ಆ ರಸ್ತೆಯಲ್ಲಿ ಓಡಾಡುತ್ತಿದ್ದ ಕಾಲೇಜು ಹೆಣ್ಣುಮಕ್ಕಳನ್ನು ಗಾಬರಿಗೊಳಿಸುತ್ತಿತ್ತು. ನಮ್ಮೂರಿನ ಘಟಿಂಗರು ಹೀಗೆ ಮಾಡುತ್ತಿದ್ದುದು ವಿಕೃತ ವಿನೋದಕ್ಕಾಗಿಯೇ ಇತ್ತು. ಇದು ಕೆಲವರಿಗೆ ಹುಚ್ಚರ ಉಪಟಳವೆನ್ನಿಸುತ್ತಿತ್ತು. ಕೆಲವರು ಆ ಹುಚ್ಚರನ್ನು ಹಿಡಿದು ಎರಡು ಏಟು ಹಾಕುತ್ತಿದ್ದರು, ಗುದ್ದುತ್ತಿದ್ದರು. ಸಭ್ಯ ಸಮಾಜಕ್ಕೆ ಅದು ಹಿಂಸೆಯೆನಿಸುತ್ತಿರಲಿಲ್ಲ.

ಅವರಿಂದ ಸಮಾಜಕ್ಕೆ ಏನೆಂದರೆ ಏನೂ ಸಮಸ್ಯೆಯೇ ಇರಲಿಲ್ಲ. ಅವರು ಜನರಿಂದ ಶೋಷಿತರಾಗಿದ್ದೇ ಜಾಸ್ತಿ. ಇವರೆಲ್ಲರೂ ಹುಚ್ಚರೆಂದು ಹೇಳುವುದಕ್ಕೆ ಎರಡೇ ಗುಣ ಕಾರಣಗಳಿದ್ದವು. ಮೊದಲನೆಯದು ಸಮಾಜ ಮಾಡಿಕೊಂಡ ಕಟ್ಟುಪಾಡು, ನಿಯಮ, ರಿವಾಜು ಇವ್ಯಾವುದರ ಅರಿವಿಲ್ಲದ ಅವರ ಬದುಕು. ಎರಡನೆಯದೆಂದರೆ ಅವರ ಸ್ವಗತ- ಅವರು ತಮ್ಮಷ್ಟಕ್ಕೆ ತಾವೇ ಮಾತನಾಡಿಕೊಳ್ಳುತ್ತಿದ್ದರು. ಕೆಲವರು ಮಾತನಾಡಿದ್ದು ಏನೋ ಗಿಬ್ರಿಶ್ ಅನಿಸುತ್ತಿತ್ತು. ಇನ್ನು ಕೆಲವರದು ಸ್ಪಷ್ಟ, ಯಕ್ಷಗಾನದಷ್ಟು ಶುದ್ಧ ಕನ್ನಡ. ಅವರೇನಾದರೂ ಸ್ವಚ್ಛ ಬಟ್ಟೆ ಧರಿಸಿ- ತಮ್ಮಷ್ಟಕ್ಕೆ ತಾವೇ ಮಾತನಾಡುವುದನ್ನು ನಿಲ್ಲಿಸಿದ್ದರೆ ಯಾರೂ ಅವರನ್ನು ಹುಚ್ಚರೆಂದೆನ್ನುತ್ತಿರಲಿಲ್ಲವೇನೋ. ಹೆಚ್ಚೆಂದರೆ ಅವರಿಗೆ ನಿರ್ಗತಿಕ ಎಂಬ ಪಟ್ಟ, ಸಾಂತ್ವನ ಸಿಗುತ್ತಿತ್ತು. ಆದರೆ ಈ ಸ್ವಗತ ಮಾತಿನ ಏಕೈಕ ಕಾರಣಕ್ಕಾಗಿ ಅವರು ಸಮಾಜದ ಎಲ್ಲ ಕರುಣಾರಸಗಳಿಂದ ವಂಚಿತರಾಗಿದ್ದರು.

ನಾವು ಮಕ್ಕಳಂತೂ ಅದೆಷ್ಟೋ ಕಾಲ- ಹುಚ್ಚರೆಂದರೆ ತಮ್ಮಷ್ಟಕ್ಕೆ ತಾವೇ ಮಾತನಾಡಿಕೊಳ್ಳುವವರು, ಅದುವೇ ಹುಚ್ಚರ ಪ್ರಥಮ ಮತ್ತು ಪರಮ ಲಕ್ಷಣ ಎಂದೇ ಅಂದುಕೊಂಡಿದ್ದೆವು. ಅಲ್ಲೊಂದು ವೈಚಾರಿಕ ಸಮಸ್ಯೆಯಿತ್ತು. ನಾವು ಮಕ್ಕಳೂ ನಮ್ಮಷ್ಟಕ್ಕೆ ನಾವೇ ಮಾತಾಡಿಕೊಳ್ಳುತ್ತಿದ್ದೆವು. ಮಕ್ಕಳ ಪ್ರಪಂಚದಲ್ಲಿ ಅದೊಂದು ಸಹಜ ವಿಷಯವಾಗಿತ್ತು. ಊರಲ್ಲಿ ಪ್ರಾಜ್ಞರೆನಿಸಿದವರೂ ತಮ್ಮಷ್ಟಕ್ಕೆ ತಾವೇ ಮಾತನಾಡಿಕೊಳ್ಳುವುದು ಅಲ್ಲಲ್ಲಿ ಅನುಭವಕ್ಕೆ ಬರುತ್ತಿತ್ತು. ಒಂದೇ ವ್ಯತ್ಯಾಸವೆಂದರೆ ನಮ್ಮೆಲ್ಲರ ಸ್ವಗತ ಬಹಿರಂಗವಾಗಿರುತ್ತಿರಲಿಲ್ಲ. ನಮ್ಮೆಲ್ಲರ ಸ್ವಗತ ಯಾರ ಕಿವಿಗೂ ಕೇಳಿಸುತ್ತಿರಲಿಲ್ಲ. ಅಂದು ನಾವು ನೋಡುತ್ತಿದ್ದ ನಾಟಕ, ಯಕ್ಷಗಾನಗಳಲ್ಲಿ ಪಾತ್ರವಾಗಿ ಬರುತ್ತಿದ್ದ ರಾಮ, ರಾವಣ, ಶೂರ್ಪನಖಿಯಾದಿಯಾಗಿ ಎಲ್ಲ ಪಾತ್ರಗಳೂ ಒಂದಿಷ್ಟು ಸ್ವಗತ ಮಾತನಾಡುತ್ತಿದ್ದವು. ಹಾಗಾಗಿ ಹುಚ್ಚು ಎಂಬ ವಿಷಯದಲ್ಲಿ ಒಂದಿಷ್ಟು ಗೊಂದಲಗಳು ನಮ್ಮಲ್ಲಿದ್ದವು. ಸ್ವಗತ ಮಾತನಾಡುವುದೇ ಹುಚ್ಚೋ ಅಥವಾ ಅದು ಬೇರೆಯವರಿಗೆ ಕೇಳುವಂತೆ ಮಾತನಾಡುವುದು ಮಾತ್ರ ಹುಚ್ಚೋ? ಇತ್ಯಾದಿ ಪ್ರಶ್ನೆಗಳು ಹುಚ್ಚಿನ ಸ್ಪಷ್ಟನೆಯನ್ನು ಬಯಸಿದ್ದವು.

ಸುಮ್ಮನೆ ಒಂಚಣ ಗ್ರಹಿಸಿ ನೋಡಿ. ಬೆಳಗಿನ ಅಲಾರಾಂ ಗದ್ದಲದ ಮರುಕ್ಷಣವೇ ನಮ್ಮೆಲ್ಲರ ಸ್ವಗತ ಮಾತು ಕೂಡ ಆರಂಭವಾಗಿಬಿಡುತ್ತದೆ. ''ನನಗೆ ನಿದ್ರೆ ಸಾಕಾಯ್ತೋ ಇಲ್ಲವೋ? ಇನ್ನೊಂದು ಸ್ವಲ್ಪ ಹೊತ್ತು ಮಲಗೋಣ. ಅಂದ ಹಾಗೆ ನಿನ್ನೆ ಎಷ್ಟು ಗಂಟೆಗೆ ಮಲಗಿದ್ದೆ? ಅಯ್ಯೋ ನಿದ್ರೆ ಕಥೆ ಹಾಳಾಯ್ತು, ಇವತ್ತು ಎಷ್ಟೆಲ್ಲಾ ಕೆಲಸವಿದೆ. ಇಲ್ಲಿಗೆ ಹೋಗಬೇಕು, ಅಲ್ಲಿಗೆ ಬರಬೇಕು. ಅದನ್ನು ತರಬೇಕು, ಈ ಕೆಲಸ ಮುಗಿಸಬೇಕು!'' ಹೀಗೆ ಹಾಸಿಗೆಯಲ್ಲೇ ನಮ್ಮ ಮಾತು ಶುರುವಾಗಿಬಿಡುತ್ತದೆ. ಇದು ಅಷ್ಟಕ್ಕೇ ನಿಲ್ಲುವುದಿಲ್ಲ. ಹಲ್ಲುಜ್ಜಲು ಕನ್ನಡಿಯ ಮುಂದೆ ನಿಂತರೆ ''ಇವತ್ತು ಗಡ್ಡ ಮಾಡಬೇಕೋ ಬೇಡವೋ, ತಲೆ ಕೂದಲು ಕಟಿಂಗ್ ಈ ವಾರ ಮಾಡಿಸಿ ಬಿಡಬೇಕು..'' ಹೀಗೆ ಮಾತು ಮುಂದುವರಿಯುತ್ತದೆ. ರಾತ್ರಿ ಮಲಗುವವರೆಗೂ ಎಲ್ಲಿಯೇ ಒಂದಿಷ್ಟು ಏಕಾಂತ ಸಿಕ್ಕಿಬಿಟ್ಟರೆ, ಇಲ್ಲವೇ ಎಲ್ಲ ವ್ಯವಹಾರಗಳ ನಡುವೆಯೇ ನಮ್ಮೆಲ್ಲರ ಸ್ವಗತ ಶುರುವಾಗಿಬಿಟ್ಟಿರುತ್ತದೆ. ಅಷ್ಟೇ ಅಲ್ಲ, ಮಲಗಿದ ಮೇಲೆಯೂ ಈ ಮಾತು ನಿದ್ರೆಯ ಹಲವು ಹಂತಗಳಲ್ಲಿಯೂ ಮುಂದುವರಿಯುತ್ತದೆ. ಪ್ರತಿಯೊಬ್ಬರೂ ಅವಕಾಶ ಸಿಕ್ಕಾಗಲೆಲ್ಲ ತಮ್ಮೊಂದಿಗೇ ಮಾತಿಗಿಳಿಯುತ್ತಾರೆ. ನನ್ನ ಪರಿಚಯದವರೊಬ್ಬರು ಏಕಾಂತ ನಡೆಯುವಾಗಲೆಲ್ಲ ಎಲ್ಲರಿಗೂ ಕೇಳುವಷ್ಟೇ ದೊಡ್ಡ ಸ್ವರದಲ್ಲಿ ತಮ್ಮಷ್ಟಕ್ಕೆ ತಾವೇ ಮಾತನಾಡಿಕೊಳ್ಳುತ್ತಿದ್ದರು. ಅವರು ನಮ್ಮೂರಿನ ತೋಟ ಗದ್ದೆಯ ಹಾದಿಯಲ್ಲಿ ಒಬ್ಬರೇ ಹೋಗುತ್ತಿದ್ದರೆ ಯಾರೋ ಇಬ್ಬರು ಹೋಗುತ್ತಿದ್ದಾರೆ ಎಂದೇ ಗ್ರಹಿಕೆಯಾಗುತ್ತಿತ್ತು. ಅವರ ಬಾಕಿ ಎಲ್ಲಾ ವ್ಯವಹಾರಗಳು ಸಹಜವಾಗಿದ್ದವು. ಆದರೆ ಅವರ ಸ್ವಗತ ಮಾತ್ರ ದೊಡ್ಡ ಸ್ವರದಲ್ಲಿಯೇ ಬಂದುಬಿಡುತ್ತಿತ್ತು. ಕೈ ಹಾವಭಾವಗಳೂ ಅದಕ್ಕೆ ಜತೆಯಾಗುತ್ತಿದ್ದವು. ಅದು ಅವರಿಗೆ ತಿಳಿದಿತ್ತೋ ಇಲ್ಲವೋ. ಆದರೆ ಊರಿನ ಬಹುಪಾಲು ಜನರಲ್ಲಿ 'ಅವರಿಗೆ ಸ್ವಲ್ಪ ಮಂಡೆ ಪೆಟ್ಟು' ಎಂದೇ ಗಟ್ಟಿ ನಂಬಿಕೆ ಇತ್ತು. ಅವರು ಎಲ್ಲಾ ರೀತಿಯಲ್ಲೂ ಸಮಾಜ ಒಪ್ಪುವ ಸರಿಯೇ ಇದ್ದರು. ಸ್ವಗತ ಮಾತ್ರ ಧ್ವನಿರೂಪ ಪಡೆಯುತ್ತಿತ್ತು.

ಅದೇಕೋ ಸ್ವಗತದ ಬಗ್ಗೆ ಸಮಾಜದಲ್ಲಿ ಒಂದು ವಿಚಿತ್ರ ಭಾವನೆ ಇದೆ. ಅವರನ್ನು ಹುಚ್ಚರೆಂದೇ ಎಲ್ಲರೂ ನಂಬುವುದು. ಸ್ವಗತಕ್ಕೊಂದಿಷ್ಟು ಅಲಿಖಿತ ನೀತಿ ನಿಯಮವಿದೆ. ಅಷ್ಟಕ್ಕೂ ನಾವೇಕೆ ನಮ್ಮಷ್ಟಕ್ಕೇ ಮಾತನಾಡಿಕೊಳ್ಳುತ್ತೇವೆ? ಇದು ಆರೋಗ್ಯಕರವೋ ಅಥವಾ ಮಾನಸಿಕ ರೋಗವೋ?

ಮನೆಯಲ್ಲಿ ಚಿಕ್ಕ ಮಕ್ಕಳು ತಮ್ಮಷ್ಟಕ್ಕೇ ಆಟವಾಡುವಾಗ ಇದನ್ನು ಗ್ರಹಿಸಿರುತ್ತೀರಿ. ಆಗತಾನೆ ಮಾತು ಕಲಿತ ಮಕ್ಕಳ ಎಲ್ಲಾ ವಿಚಾರಗಳೂ ಸಸ್ವರ ಮಾತಿನಲ್ಲಿಯೇ ಇರುತ್ತವೆ. ಅವರೇನು ವಿಚಾರ ಮಾಡುತ್ತಾರೆಯೋ ಅದುವೇ ಫಿಲ್ಟರ್ ಇಲ್ಲದೆ ಧ್ವನಿಯಾಗಿ ಬರುತ್ತದೆ. ಅಸಲಿಗೆ ಈ ಸ್ವಗತ ಅದಕ್ಕಿಂತಲೂ ಮೊದಲೇ ಆರಂಭವಾಗಿರುತ್ತದೆ. ಮಗುವು ಶಬ್ದದ ಉಚ್ಚಾರ ಕಲಿಯುವುದಕ್ಕಿಂತ ಮೊದಲೇ ಬೊಚ್ಚು ಬಾಯಿಯಲ್ಲಿ ಗೊಜ್ಜು ಬೀಸಿದಂತೆ ಏನೇನೋ ಮಾತನಾಡುವುದನ್ನು ನೋಡಿರಬಹುದು. ಅದು ನಮ್ಮ ವಿಚಾರಗಳನ್ನು ವರ್ಗೀಕರಿಸಿ, ಶ್ರೇಣೀಕರಿಸುವ ಕ್ರಿಯೆ. ಇದು ಆರೋಗ್ಯಕರ ಮಗುವಿನ ಒಂದು ಲಕ್ಷಣ ಕೂಡ. ಮಗು ಯಾರ ಜತೆ ತಾನು ಹೇಗೆ ಮಾತನಾಡಬೇಕು, ಇಂಥ ಸ್ಥಿತಿಯಲ್ಲಿ ಯಾವಯಾವ ಶಬ್ದಗಳ ಉಚ್ಚಾರ ಹೇಗೆ ಮಾಡಬೇಕು ಇವೆಲ್ಲವನ್ನೂ ಮನದಟ್ಟು ಮಾಡಿಕೊಳ್ಳುವುದು ಈ ಸ್ವಗತ ಸಂಭಾಷಣೆಯಿಂದಲೇ. ವ್ಯಕ್ತಿತ್ವ ರೂಪುಗೊಳ್ಳುವುದು ಹತ್ತು ವರ್ಷದೊಳಗೆ ಎಂದಾದರೆ ಆ ರೂಪಿಸಿಕೊಳ್ಳುವ ಪ್ರಕ್ರಿಯೆ ಮುಖ್ಯ ಭಾಗವೇ ಸ್ವಗತ ಮಾತು. ಆ ಸಂದರ್ಭದಲ್ಲಿ ಮಕ್ಕಳು ತಂದೆ, ತಾಯಿ, ಮನೆಯವರ ವ್ಯವಹಾರವನ್ನು ಎಲ್ಲಿಲ್ಲದ ಸೂಕ್ಷ್ಮತೆಯಿಂದ ಗ್ರಹಿಸುತ್ತವೆ. ಮನೆಯು ಮೊದಲ ಪಾಠಶಾಲೆ, ಮನೆಯವರೆಲ್ಲರೂ ಗುರುಗಳಾಗುವುದು ಹಾಗೆ. ಪಾಲಕರು ಮಗ್ಗಿ, 'ಎಬಿಸಿಡಿ' ಕಲಿಸುವುದಕ್ಕಿಂತ ಮೊದಲು ಅವ್ಯಕ್ತವಾಗಿ ರೂಪಿಸುವುದು ಮಕ್ಕಳ ವ್ಯಕ್ತಿತ್ವವನ್ನು. ಅಂಥ ಸಮಯದಲ್ಲಿ ಪ್ರಶಂಸೆ ಅಥವಾ ತೆಗಳುವಿಕೆ ಅಥವಾ ಯಾವುದೇ ಭಾವನೆ ಪಾಲಕರಲ್ಲಿ ತೀವ್ರವಾಗಿದ್ದರೆ ಅದು ಯಥಾವತ್ತು ಮಕ್ಕಳ ವ್ಯಕ್ತಿತ್ವದ ಭಾಗವಾಗುತ್ತದೆ. ಏಕೆಂದರೆ ಅದೆಲ್ಲವೂ ಅವರ ಸ್ವಗತದ ಸರಕಾಗಿರುತ್ತದೆ. ಕ್ರಮೇಣ, ದೊಡ್ಡವರಾದಂತೆ, ವ್ಯಕ್ತಿತ್ವ ರೂಪುಗೊಳ್ಳುತ್ತಿದ್ದಂತೆ ಈ ಮಾತು ಅಂತರ್ಯವನ್ನು ಸೇರುತ್ತಾ ಹೋಗುತ್ತದೆ.

ಸ್ವಗತವನ್ನು ಆಧುನಿಕ ಮನಃಶಾಸ್ತ್ರದಲ್ಲಿ ಸ್ಥೂಲವಾಗಿ ಮೂರ್ನಾಲ್ಕು ವಿಭಾಗವಾಗಿ ವಿಂಗಡಿಸಿ ನೋಡುವ ಪದ್ಧತಿ ಇದೆ. ಸಕಾರಾತ್ಮಕ, ನಕಾರಾತ್ಮಕ ಮತ್ತು ಸಹಜ ಮಾತು ಹೀಗೊಂದು ವರ್ಗೀಕರಣ ಇದೆ. ಉದಾಹರಣೆಗೆ 'ನಾನು ಇದನ್ನು ಮಾಡಬಲ್ಲೆ' ಎಂದು ಕೆಲಸಕ್ಕೆ ಮೊದಲೇ ಹೇಳಿಕೊಳ್ಳುವುದು ಸಕಾರಾತ್ಮಕ. 'ಅಯ್ಯೋ ಇದು ನನ್ನ ಹತ್ತಿರ ಸಾಧ್ಯವೇ ಇಲ್ಲ, ನಾನು ಉಪಯೋಗಕ್ಕೆ ಬಾರದವನು' ಇತ್ಯಾದಿ ನಕಾರಾತ್ಮಕ. 'ಕೆಲಸದಿಂದ ಮರಳುವಾಗ ಇವತ್ತು ಕೊತ್ತಂಬರಿ ಸೊಪ್ಪು ತರಬೇಕು' ಇದು ನಿರ್ಲಿಪ್ತ. ನಮಗೆ ನಾವೇ ಮಾತನಾಡಿಕೊಳ್ಳುವಾಗ ನೇರವಾಗಿ ನಮ್ಮನ್ನೇ ಉದ್ದೇಶಿಸಿ ಮಾತನಾಡುವುದು ಒಂದು ಬಗೆ. ನಮ್ಮನ್ನೇ ನಾವು ಎರಡನೇ ವ್ಯಕ್ತಿಯಂತೆ ಕರೆದು ಮಾತನಾಡುವುದು ಎರಡನೇ ಬಗೆ. ವಿರಾಟ್ ಕೊಹ್ಲಿಯು 'ಈ ಬಾಲ್‌ಗೆ ಸಿಕ್ಸ್ ಹೊಡೆಯುತ್ತೇನೆ' ಎಂದು ಹೇಳಿಕೊಳ್ಳುವುದು ಮೊದಲನೆಯ ರೀತಿ. ಕೊಹ್ಲಿ ತನಗೆ ತಾನೇ 'ವಿರಾಟ್, ನೀನು ಈ ಬಾಲ್‌ಗೆ ಸಿಕ್ಸರ್ ಹೊಡೆಯಬೇಕು' ಎಂದು ತನ್ನಿಂದ ಪ್ರತ್ಯೇಕಿಸಿ ಹೇಳುವುದು ಎರಡನೇ ರೀತಿ. ಈ ಎರಡನೇ ರೀತಿ ಹೆಚ್ಚು ಪರಿಣಾಮಕಾರಿ.

ವ್ಯಕ್ತಿತ್ವ ವಿಕಸನದ ಲೇಖನಗಳಲ್ಲಿ, ಸೋಷಿಯಲ್ ಮೀಡಿಯಾದಲ್ಲಿ, ಪುಸ್ತಕಗಳಲ್ಲಿ ಎಲ್ಲರೂ ಹೇಳುವುದು 'ಸಕಾರಾತ್ಮಕವಾಗಿ ಯೋಚಿಸಿ' ಅಂತ. ಅವರೆಲ್ಲರದೂ ಒಂದೇ ಸಿದ್ಧಸೂತ್ರ- 'ಬಿ ಪಾಸಿಟಿವ್'. ಅದೇನೋ ಒಂದು ರಕ್ತಪ್ರಕಾರದಂತೆ, ಅದನ್ನು ಮಾಡಿಬಿಟ್ಟರೆ ಎಲ್ಲವು ಸಲೀಸಾಗುತ್ತದೆ, ಯಶಸ್ಸು ತಾನಾಗಿಯೇ ಬರುತ್ತದೆ ಇತ್ಯಾದಿ. ವ್ಯಕ್ತಿತ್ವ ವಿಕಸನ ಸಂಬಂಧಿತ ಯಾವ ಭಾಷಣವನ್ನೇ ಕೇಳಿ- ಅವರದ್ದೆಲ್ಲ ಇದೇ- Be Positive! ಅಂಥ ಭಾಷಣಕಾರರೆಲ್ಲ 'ಸಕಾರಾತ್ಮಕವಾಗಿ ಯೋಚಿಸಿ' ಎಂದಷ್ಟೇ ಹೇಳುವುದು. ಯಾವತ್ತೂ ಕೇವಲ ಸಕಾರಾತ್ಮಕವಾಗಿ ಮಾತ್ರ ಯೋಚಿಸುವುದು ಹೇಗೆ ಎಂಬ ಪ್ರಶ್ನೆಯನ್ನು ಅವರೆಂದೂ ಪರಿಗಣಿಸುವುದೇ ಇಲ್ಲ. ಏಕೆಂದರೆ ಅದಕ್ಕೆ ಉತ್ತರ ಸುಲಭದ್ದಲ್ಲ. ಏನೇ ಇರಲಿ, ಅಂಥ ಭಾಷಣ ಕೇಳಿದಾಕ್ಷಣ ನಮಗೂ Being Positive ಎಲ್ಲವಕ್ಕೂ ಪರಿಹಾರ ಎಂದೆನಿಸಿಬಿಡುತ್ತದೆ. ಆದರೆ ನಿರಂತರ ಸಕಾರಾತ್ಮಕವಾಗಿಯೇ ಯೋಚಿಸುವುದು, ಸ್ವಗತ ಮಾತನಾಡಿಕೊಳ್ಳುವುದು ಕಾರ್ಯತಃ ಯಾರಲ್ಲಿಯೂ ಸಾಧ್ಯವೇ ಇಲ್ಲ. ಅದು ನಮ್ಮ



ಮನಸ್ಸಿನ ಮೂಲ ಸ್ವರೂಪಕ್ಕೆ ವಿರುದ್ಧವಾದದ್ದು. ಅದು ಪ್ರವಾಹಕ್ಕೆ ವಿರುದ್ಧವಾಗಿ ಈಜಿದಂತೆ. ಇದು Human Instinctಗೆ ಸಂಬಂಧಿಸಿದ ವಿಷಯ. ನಾವು ಸಕಾರಾತ್ಮಕವಾಗಿ ಸ್ವಗತ ಮಾತನಾಡಿಕೊಳ್ಳುವುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ನಕಾರಾತ್ಮಕ ಯೋಚನೆಗಳು. ನಕಾರಾತ್ಮಕ ವಿಚಾರಗಳು ಕಷ್ಟ ಕಾಲಕ್ಕೆ ಆಗಿಬರುವ ತಾಲೀಮುಗಳು. ಸಕಾರಾತ್ಮಕವೋ, ನಕಾರಾತ್ಮಕವೋ, ಅಲಿಪ್ತವೋ ಎಲ್ಲವೂ ಸಮಪಾಲಿನಲ್ಲಿದ್ದರೆ ಮಾತ್ರ ಅಲ್ಲೊಂದು ಸಮತೋಲನ ಮೂಡಲು ಸಾಧ್ಯ. ಅತಿಯಾದ ಸಕಾರಾತ್ಮಕತೆಯು ಅತಿಯಾದ ನಕಾರಾತ್ಮಕತೆಯಷ್ಟೇ ಕೆಟ್ಟದ್ದು. ಹಾಗಾದರೆ ಯಾವುದೇ ಒಂದು ಲೆಕ್ಕ ಮೀರಿದರೆ, ಹದ ತಪ್ಪಿದರೆ ಗುರುತಿಸುವುದು ಹೇಗೆ? ಸಮತೋಲನದ ಸೈಕಲ್ಲಿನ ಸವಾರಿ ಹೇಗೆ ಸಾಧ್ಯ?

ನಮ್ಮ ಮಿದುಳು ಸ್ವಭಾವತಃ ಅತ್ಯಂತ ಆಲಸ್ಯದ್ದು. ಅದು ಯಾವುದೇ ಪುನರಾವರ್ತನೆಯನ್ನು ಗ್ರಹಿಸುತ್ತಿದ್ದಂತೆಯೇ ತನ್ನ ಕೆಲಸವನ್ನು ನಿಲ್ಲಿಸಿಬಿಡುತ್ತದೆ. ತನಗೆ ತಾನೇ ಜಾಡ್ಯವನ್ನು ಆರೋಪಿಸಿಕೊಂಡುಬಿಡುತ್ತದೆ. ಈ ಮೊದಲು ಚಿಕ್ಕಮಕ್ಕಳ ಯೋಚನೆ ಶಬ್ದರೂಪವನ್ನು ಪಡೆಯುವುದರ ಬಗ್ಗೆ ಹೇಳಿದೆನಲ್ಲ. ಅದು ಅಂತರ್ಮುಖಿಯಾಗುವುದು ಮನುಷ್ಯಾವಸ್ಥೆಯ ಮುಂದಿನ ಹಂತ. ಅದರಾಚೆಯ ಹಂತವೇ ಜಾಡ್ಯ. ಕ್ರಮೇಣ ನಮ್ಮ ಅಂತರ್ಮುಖಿ ಮಾತುಗಳನ್ನು ನಮ್ಮದೇ ಮನಸ್ಸು ತಾತ್ಸಾರ ಮಾಡಲಿಕ್ಕೆ ಆರಂಭಿಸಿಬಿಡುತ್ತದೆ. ಕ್ರಮೇಣ ನಾವು ನಮ್ಮದೇ ಮಾತನ್ನು ಕೇಳಿಸಿಕೊಳ್ಳುವುದನ್ನೇ ನಿಲ್ಲಿಸಿಬಿಡುತ್ತೇವೆ. ಹೇಳಿದ್ದನ್ನೇ ಹೇಳುವವರ ಮಾತನ್ನು ಕಿವಿ ತೆರೆದೇ ಕೇಳಿಸಿಕೊಳ್ಳದಿರುವಂತೆ, ನಮ್ಮದೇ ಮಾತು ಕ್ರಮೇಣ ನಮಗೆ ಕೇಳಿಸದಾಗುತ್ತದೆ. ಅದುವೇ ಅಸಲಿ ಸಮಸ್ಯೆ. ನಾವು ನಮ್ಮ ಮಾತನ್ನು ಅಲಕ್ಷಿಸಿದಷ್ಟೂ ಅವು ಚಿತ್ರವಿಚಿತ್ರ ಭಾವನೆಗಳಾಗಿ ಅನ್ಯರೂಪವನ್ನು ಪಡೆಯುತ್ತವೆ.

ಮೊದಲು ನಮ್ಮ ಮಾತನ್ನು ಸಮಾಧಾನವಾಗಿ ಕೂತು ಕೇಳಿಸಿಕೊಳ್ಳಬೇಕು. ಕೇಳಿಸಿಕೊಳ್ಳುವುದೆಂದರೆ ಪ್ರಜ್ಞಾಪೂರ್ವಕವಾಗಿ. ಯಾವುದೇ ವಿಚಾರವೇ ಇರಲಿ, ಅದನ್ನು ಪೂರ್ಣ ಪ್ರಜ್ಞೆಯಿಂದ ಗ್ರಹಿಸುವುದು ಇದೆಲ್ಲದರ ಮೊದಲನೇ ಹಂತ. ನಾವು ನಮ್ಮಷ್ಟಕ್ಕೇ ಮಾತನಾಡಿದರಷ್ಟೇ ಮುಗಿಯಲಿಲ್ಲ, ಅಥವಾ ಮಾತನಾಡುವುದನ್ನೇ ಸಂಪೂರ್ಣ ನಿಲ್ಲಿಸಿಬಿಡುವುದೂ ಪರಿಹಾರವಲ್ಲ, ನಾವು ಮಾತನಾಡಿದ್ದನ್ನು ನಾವೇ ಕೇಳಿಸಿಕೊಳ್ಳುವುದು. ಆಗ ಮಾತ್ರ, ನಾವು ನಮಗೆ ಅರ್ಥವಾಗುತ್ತೇವೆ. ನಮ್ಮ ಯೋಚನೆಗಳ ರೀತಿ ನೀತಿ- 'ಅಂತ್ ಪಾರ್' ಹತ್ತುವುದೇ ನಮ್ಮ ಮಾತನ್ನು ನಾವು ಕಿವಿಕೊಟ್ಟು ಕೇಳಿದಾಗ. ನೀವು ಯಾರದೋ ಜತೆಯಲ್ಲಿ ಮಾತನಾಡುತ್ತಿದ್ದೀರಿ ಎಂದಿಟ್ಟುಕೊಳ್ಳಿ. ಮಾತನಾಡುವಾಗ ಅವರು ತಮ್ಮ ಮೊಬೈಲ್ ನೋಡುತ್ತಿದ್ದರೆ ಅಥವಾ ಇನ್ನೊಂದು ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರೆ ನಮ್ಮಲ್ಲಿ ಅಸಹನೆ ಹುಟ್ಟುತ್ತದೆ ಅಲ್ಲವೇ? ಅದು ಸ್ವಗತದ ಮಾತಿಗೂ ಲಾಗುವಾಗುವ ವಿಷಯ. ಸ್ವಗತವೆಂದರೆ ನಮಗೆ ನಾವೇ ಮಾತನಾಡಿಕೊಳ್ಳುವುದರಿಂದ ಕೇಳುವುದು ಕೂಡ ನಾವೇ ಆಗಬೇಕಾದದ್ದು ಅನಿವಾರ್ಯ. ನಮ್ಮನ್ನು ನಾವು ಲಕ್ಷ್ಯ ಕೊಟ್ಟು ಕೇಳಿಸಿಕೊಂಡಾಗ ಮಾತ್ರ ನಮಗೆ ನಾವು ಕೈಗೆಟುಕುವುದು. ನಮ್ಮ ಸಮಸ್ಯೆಗಳಿಗೆ, ಮನಸ್ಸಿನ ನಕಾರಾತ್ಮಕ ವಿಚಾರಗಳಿಗೆ ಉತ್ತರಿಸಿಕೊಳ್ಳುವುದು, ಪರಿಹಾರ ಸೂಚಿಸಿಕೊಳ್ಳುವುದು ಇವೆಲ್ಲ ಆಮೇಲಿನ ಮಾತು. ಮೊದಲು ಪೂರ್ಣ ಲಕ್ಷ್ಯದಿಂದ ಕೇಳಿಸಿಕೊಳ್ಳುವುದು. ನಮ್ಮದೇ ಮಾತನ್ನು ಕೇಳುವುದು ಸುಲಭದ ಪ್ರಕ್ರಿಯೆ ಯಲ್ಲ. ಸುಮ್ಮನೆ ಕೂತು ಒಂದು ಕ್ಷಣ ಏನು ನಡೆಯುತ್ತಿದೆ ಎಂದು ಯೋಚಿಸುವುದು ಕಷ್ಟವಷ್ಟೇ ಅಲ್ಲ, ಅದೊಂದು ತ್ರಾಸಿನ ವಿಷಯ. ಯಾವುದೋ ಒಂದು ವಿಚಾರ ಬಹಳ ರಗಳೆಯೆನಿಸುತ್ತಿದ್ದರೆ ಅದರ ಬಗ್ಗೆ ಯೋಚಿಸುವುದೇ ಹಿಂಸೆಯೆನಿಸುತ್ತದೆ. ಆದರೆ ನಮ್ಮ ಒಳಮಾತನ್ನು ನಿತ್ಯ ಒಂದಿಷ್ಟು ಹೊತ್ತು ಸಮಾಧಾನದಿಂದ ಎದುರಿಸಲೇಬೇಕು. ಒಳಮಾತನ್ನು ಬಹುಕಾಲದಿಂದ ಅಲಕ್ಷಿಸಿದಲ್ಲಿ ಒಮ್ಮೆಲೇ ಎದುರಿಸುವುದು ಸುಲಭವಲ್ಲವೇ ಅಲ್ಲ. ಸುಮ್ಮನೆ ಕೂತು ಅಂತರ್ಮುಖಿಯಾದರೆ ನಕಾರಾತ್ಮಕ ವಿಚಾರಗಳೇ ತಾಂಡವವಾಡುತ್ತವೆ. ಅದು ಸಹಜ ಮತ್ತು ಪ್ರಾಕೃತಿಕ. ಅಂಥ ವಿಚಾರಗಳ ಮೂಲಕ್ಕೆ ಹೋಗಿ, ಯೋಚಿಸಿ, ಸ್ವಗತ ಚರ್ಚಿಸಿದಲ್ಲಿ ಮಾತ್ರ ಅವು ಶಾಂತವಾಗಬಲ್ಲವು. ಅದನ್ನು ಬಿಟ್ಟು- 'ಇನ್ನು ಮೇಲೆ ನಾನು ಎಲ್ಲವನ್ನೂ ಪಾಸಿಟಿವ್ ಆಗಿಯೇ ವಿಚಾರಮಾಡುವುದು' ಎಂದು ನಮ್ಮೊಳಗಿನ ನೆಗೆಟಿವ್ ಮಾತುಗಳನ್ನು ಅಲಕ್ಷಿಸುವುದು ತಾತ್ಕಾಲಿಕ ಅನಸ್ತೇಶಿಯಾ (ಅರಿವಳಿಕೆ) ಕೊಟ್ಟುಕೊಂಡಂತೆ. ಇಂದಲ್ಲ ನಾಳೆ ಆ ನೋವಿನ ಅನುಭವವಾಗಿಯೇ ಆಗುತ್ತದೆ.

ಕೇಳಿಸಿಕೊಳ್ಳುವುದೆಂದರೆ ನಾವು ಮಾಡಿಕೊಂಡು ಬಂದ ವಿಚಾರ ಪಲಾಯನವನ್ನು ನಿಲ್ಲಿಸುವುದು. ನಮ್ಮದೇ ಯೋಚನೆ, ವಿಚಾರಗಳು ಹಿತವಾಗಿಲ್ಲ ಎಂಬ ಕಾರಣಕ್ಕೆ ತಪ್ಪಿಸಿಕೊಂಡು ಓಡಾಡುವುದನ್ನು ಖೈದು ಮಾಡುವುದು. ಸ್ವಗತ ಮಾತೆಂದರೆ ಅದು ಅಂತರ್ಮುಖಿ ವಕಾಲತ್ತು. ಅಲ್ಲಿ ಡಿಫೆಂಡೆಂಟ್, ಪಬ್ಲಿಕ್ ಪ್ರಾಸಿಕ್ಯೂಟರ್, ನ್ಯಾಯಾಧೀಶ ಎಲ್ಲರೂ ಖುದ್ದು ನಾವೇ. ಒಳ್ಳೆಯ ನ್ಯಾಯಾಧೀಶನೆಂದರೆ ಮೊದಲು ಪರ-ವಿರೋಧವನ್ನು ಸಮಚಿತ್ತದಿಂದ ಕೇಳಿಸಿಕೊಳ್ಳಬೇಕು. ಆಗ ಮಾತ್ರವೇ ಸರಿಯಾದ ತೀರ್ಪು ಸಾಧ್ಯ. ಅಂತರ್ಮುಖಿ ವಾದ-ಪ್ರತಿವಾದದಲ್ಲಿ ಪರಿಹಾರ ಕೊನೆಯಲ್ಲಿ. ಪರಿಹಾರವೇ ಉದ್ದೇಶವಾಗಬೇಕೆಂದೂ ಇಲ್ಲ. ಸರಿಯಾಗಿ ಕೇಳಿಸಿಕೊಂಡರೆ ಹೆಚ್ಚಿನವು ಹಾಗೆಯೇ ಪರಿಹಾರವಾಗಿಬಿಡುತ್ತವೆ. ಅದಾಗಿಯೂ ಉಳಿದುಕೊಂಡರೆ- ಆ ಯೋಚನೆ ನಮ್ಮಲ್ಲಿ ಹುಟ್ಟುಹಾಕುವ ಭಾವಗಳನ್ನು ಗ್ರಹಿಸುವುದು ಮುಂದಿನ ಹಂತ. ಸಿಟ್ಟು, ನಿಸ್ಸಹಾಯಕತೆ, ಬೇಸರ, ಅಸೂಯೆ ಇಂಥದ್ದೆಲ್ಲವನ್ನೂ ಒಬ್ಬ ನ್ಯಾಯಾಧೀಶನಂತೆ, ಮೂರನೇ ವ್ಯಕ್ತಿಯಂತೆ ನೋಡುವುದು. ಇದು ಜಾಗೃತ ಅಭ್ಯಾಸದಿಂದ ಸುಲಭ ಸಾಧ್ಯ. ಸಿಟ್ಟಾಗಲಿ, ದ್ವೇಷವಾಗಲಿ- ಯಾವುದೇ ಭಾವವನ್ನು ಹತ್ತಿಕ್ಕುವುದು ಪರಿಹಾರವಲ್ಲ, ಏಕೆಂದರೆ ಅಂಥ ಕೆಲಸಕ್ಕೆ ಮುಂದಾದರೆ ಅದು ಕೃತ್ರಿಮವಾಗುತ್ತದೆ. ಯಾವುದೇ ಕೃತ್ರಿಮವನ್ನು ನಿರಂತರ ಮಾಡಲಿಕ್ಕಾಗುವುದಿಲ್ಲ, ಬದಲಿಗೆ ನಮ್ಮ ಕೇಳುವಿಕೆಯನ್ನು ಇನ್ನಷ್ಟು ಆಳಕ್ಕೆ ಒಯ್ಯುತ್ತಿದ್ದಂತೆ ಪರಿಹಾರ, ಸಮಸ್ಯೆಗೊಂದು ಶಾಶ್ವತ ಅಂತ್ಯ ಸಾಧ್ಯವಾಗುತ್ತದೆ. ನಮ್ಮ ಸ್ವಗತ ಮಾತು ಸಕಾರಾತ್ಮಕವೋ, ನಕಾರಾತ್ಮಕವೋ, ಅದು ಹುಟ್ಟಿರುವುದು ನಮ್ಮಲ್ಲಿಯೇ. ಅದನ್ನು ಕೇಳಿಸಿ ಕೊಳ್ಳಬೇಕಾದವರೂ ನಾವೇ. ಸರಿಯಾಗಿ ಕೇಳಿಸಿಕೊಳ್ಳದೇ 'ನಾನು ಯಾವತ್ತೂ ಪಾಸಿಟಿವ್' ಎಂದು ಅದುಮಿಟ್ಟುಕೊಂಡಷ್ಟು ಅದೊಂದು ಹುಣ್ಣಿನಂತೆ ಕಾಡುತ್ತದೆ. ಬದಲಿಗೆ 'ಏನು ವಿಷಯ?' ಎಂದು ಪ್ರಶ್ನಿಸಿಕೊಂಡರೆ, ನಕಾರಾತ್ಮಕ ವಿಚಾರಗಳಿಗೆ ಕೊಡಬೇಕಾದ ಮರ್ಯಾದೆ ಕೊಟ್ಟು ಸಮಾಧಾನ ಮಾಡಿದರೆ ಕೊನೆಯಲ್ಲಿ ಅನಿವಾರ್ಯವಾಗಿ ಸಕಾರಾತ್ಮಕ ಮಾತು, ವಿಚಾರಗಳಷ್ಟೇ ಉಳಿದುಕೊಳ್ಳುತ್ತವೆ. ಧ್ಯಾನ ಇದಕ್ಕೆ ಪೂರಕ.

ರುಪಾಯಿ ಮೌಲ್ಯ ಕುಸಿತ: ಏನು, ಯಾಕೆ, ಹೇಗೆ?

ವಿಶ್ಲೇಷಣೆ
ರವೀ ಸಜಂಗದ್ದೆ
vveditoped@gmail.com

ಕೆಂಪಾದವೋ ಎಲ್ಲ ಟ್ರಂಪಾದವೋ! ಕಳೆದ ನವೆಂಬರ್ ತಿಂಗಳಲ್ಲಿ ನಡೆದ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆದ್ದ ಡೊನಾಲ್ಡ್ ಟ್ರಂಪ್, ಜನವರಿ 20ರಂದು ಅಧಿಕೃತವಾಗಿ ಪ್ರಮಾಣವಚನ ಸ್ವೀಕರಿಸಿ, 45ನೆಯ ಅಧ್ಯಕ್ಷರಾಗಿ ಗದ್ದುಗೆ ಏರಲಿದ್ದಾರೆ. ಅಲ್ಲಿಗೆ, ಇಡೀ ವಿಶ್ವವೇ ಕಾತರದಿಂದ ಕಾಯುತ್ತಿದ್ದ 'ಅಮೆರಿಕ ಅಧ್ಯಕ್ಷೀಯ ಚುನಾವಣೆ' ಪ್ರಕ್ರಿಯೆಗೆ ತಾರ್ಕಿಕ ಅಂತ್ಯ ಸಿಗಲಿದೆ.

ಇತ್ತೀಚಿನವರೆಗೆ, ಅಮೆರಿಕದಲ್ಲಿ ಯಾವ ಪಕ್ಷದವರು ಅಧಿಕಾರಕ್ಕೆ ಬಂದರೂ, ಭಾರತದೊಂದಿಗಿನ ಸಂಬಂಧದಲ್ಲಿ ಹೇಳಿಕೊಳ್ಳುವಂಥ ಬಾಂಧವ್ಯ, ಪರಸ್ಪರ ಸಹಯೋಗ ಇರಲಿಲ್ಲವೆಂದೇ ಹೇಳಬೇಕು. ಅದಕ್ಕೆ ಕಾರಣಗಳು ಹಲವಾರು. 2014ರ ತರುವಾಯದಲ್ಲಿ, ಭಾರತದಲ್ಲಿ ಸ್ಥಿರ ಸರಕಾರ, ಸಮರ್ಥ ನಾಯಕತ್ವ ಮತ್ತು ದಕ್ಷ ಆಡಳಿತ ತಂಡವು ಅಧಿಕಾರಕ್ಕೆ ಬಂದ ನಂತರವಷ್ಟೇ ದ್ವಿಪಕ್ಷೀಯ ಬಾಂಧವ್ಯದಲ್ಲಿ ವರ್ಧನೆಯಾಗಿದೆ. ಒಂದು ಕಾಲಕ್ಕೆ, 'ಅಮೆರಿಕಕ್ಕೆ ನೆರವಾಗುವ ನಿರ್ಣಯಗಳು ಮಾತ್ರ' ಈ ದ್ವಿಪಕ್ಷೀಯ ಸಂಬಂಧದಲ್ಲಿ ಅಂಗೀಕಾರವಾಗುತ್ತಿದ್ದವು; ಆದರೀಗ ಬದಲಾದ ಕಾಲಘಟ್ಟದಲ್ಲಿ, ಭಾರತವೂ ದ್ವಿಪಕ್ಷೀಯ ನಿರ್ಣಯಗಳನ್ನು ತೆಗೆದುಕೊಳ್ಳುವಂಥ ಮತ್ತು ಭಾರತದ ಅಭಿಪ್ರಾಯಗಳೂ ಅಮೆರಿಕದ ನಿರ್ಧಾರಗಳ ಮೇಲೆ ಪ್ರಭಾವ ಬೀರುವಂಥ ಸನ್ನಿವೇಶ ನಿರ್ಮಾಣವಾಗಿದೆ. ಅಂಥ ಸದೃಢ ರಾಷ್ಟ್ರವಾಗಿ ಭಾರತ ರೂಪುಗೊಂಡಿದೆ. ಆರ್ಥಿಕ, ವಾಣಿಜ್ಯ, ರಫ್ತು, ಉತ್ಪಾದನೆ, ಕೈಗಾರಿಕೆ ಮತ್ತಿತರ ವಿಭಾಗಗಳಲ್ಲಿ ಭಾರತ ಮತ್ತು ಅಮೆರಿಕ ಪರಸ್ಪರ ಸಹಕಾರದ ಮೂಲಕ ದ್ವಿಪಕ್ಷೀಯ ಪ್ರಗತಿ ಸಾಧಿಸಿರುವುದು ನಿರ್ವಿವಾದ.

ಟ್ರಂಪ್‌ರ ಸಿಂಹಾಸನಾರೋಹಣ ಸನ್ನಿಹಿತವಾಗುತ್ತಿದ್ದಂತೆಯೇ ವಿಶ್ವಾದ್ಯಂತದ ಷೇರುಪೇಟೆಗಳು ನಿರೀಕ್ಷೆಯಂತೆಯೇ ಒಂದಷ್ಟು ಸಂಚಲನವನ್ನು ಕಂಡಿವೆ, ಹಲವಾರು ಏರಿಳಿತಗಳು ಸಂಭವಿಸಿವೆ. ಭಾರತದಲ್ಲಿ ಅಷ್ಟೇನೂ ಪ್ರಭಾವ ಆಗಲಿಲ್ಲವಾದರೂ, ಹಣಕಾಸು ತಜ್ಞರು ಊಹಿಸಿದಂತೆ ಅಮೆರಿಕನ್ ಡಾಲರ್ ಎದುರು ರುಪಾಯಿ ಒಂದಷ್ಟು ಕುಸಿತ ಕಂಡಿದೆ. ಹೀಗೇಕಾಯಿತು ಎಂಬುದರ ಕುರಿತಾದ ವಿವರಗಳನ್ನು ಸರಳವಾಗಿ ಅರಿಯಲು ಯತ್ನಿಸೋಣ.

ಡಾಲರ್‌ನೆದುರು ರುಪಾಯಿಯು ಶೇ.8-10ರಷ್ಟು ಕುಸಿಯಬಹುದು ಎಂಬುದಾಗಿ, ಟ್ರಂಪ್ ಅಮೆರಿಕ ಅಧ್ಯಕ್ಷರಾಗಿ ಆಯ್ಕೆಯಾದ ಸಂದರ್ಭದಲ್ಲಿ ಆರ್‌ಬಿಐ ಅಂದಾಜಿಸಿತ್ತು. ಇದರ ಜತೆಗೆ, ಕಳೆದ ವಾರ ಹೊರಬಿದ್ದ ಅಲ್ಲಿನ ಮಾರುಕಟ್ಟೆ ವರದಿಯೂ ಡಾಲರ್ ಮೌಲ್ಯವು ಬಲವಾಗಲು ಮತ್ತೊಂದು ಕಾರಣವಾಯಿತು. ಡಿಸೆಂಬರ್ ತಿಂಗಳಿನಲ್ಲಿ 1,60,000 ಉದ್ಯೋಗ ಸೃಷ್ಟಿಯ ಅಂದಾಜಿನ ಎದುರು, 2,56,000ದಷ್ಟು ಉದ್ಯೋಗಗಳು ಅಮೆರಿಕದಲ್ಲಿ ಸೃಷ್ಟಿಯಾಗಿವೆ. ಅಲ್ಲಿನ ನಿರುದ್ಯೋಗ ದರ ಶೇ.4.2ರಿಂದ 4.1ಕ್ಕೆ ಕುಸಿದಿದೆ. ಇದು ಇತರ ಕರೆನ್ಸಿಗಳ ಎದುರು ಡಾಲರ್ ಮೌಲ್ಯ ವೃದ್ಧಿಸಲು ಬಲವಾದ ಕಾರಣ. ಈ ಧನಾತ್ಮಕ ವಿವರಗಳು ಅಮೆರಿಕದ ಫೆಡರಲ್ ರಿಸರ್ವ್‌ನ ಉದ್ದೇಶಿತ ಬಡ್ಡಿದರ ಕಡಿತದ ಸಾಧ್ಯತೆಯನ್ನು ತಗ್ಗಿಸಿದೆ. ಶೇ.1ರಷ್ಟು ಬಡ್ಡಿದರ ಕಡಿತದ ಈ ಹಿಂದಿನ ನಿರೀಕ್ಷೆಗೆ ಹೋಲಿಸಿದರೆ, ಶೇ.0.5ರಷ್ಟು ಬಡ್ಡಿದರ ಕಡಿತವಷ್ಟೇ ಆದೀತೆಂದು ಮಾರುಕಟ್ಟೆ ನಿರೀಕ್ಷಿಸುತ್ತಿದೆ. ಹೂಡಿಕೆದಾರರಿಗೆ ಇದು ಶುಭ ಸುದ್ದಿ. ಹಾಗಾಗಿ ಡಾಲರ್ ಒಂದಷ್ಟು ಪ್ರಬಲವಾಗುತ್ತಿದೆ- ಪರಿಣಾಮವಾಗಿ ರುಪಾಯಿ ಮೌಲ್ಯ ಒಂದಷ್ಟು ಕುಸಿಯುತ್ತಿದೆ.

ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆಯು ಮೂರು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿರುವುದೂ ರುಪಾಯಿ ಮೌಲ್ಯ ಕುಸಿಯಲು ಇನ್ನೊಂದು ಕಾರಣ. ರಷ್ಯಾ ದೇಶದ ಕಚ್ಚಾತೈಲ ಸರಬರಾಜು ವ್ಯವಸ್ಥೆಯ ಕುರಿತಾದ ತನ್ನ ಈಗಿನ ನಿರ್ಬಂಧಗಳನ್ನು ಅಮೆರಿಕ ಇನ್ನಷ್ಟು ಬಿಗಿಗೊಳಿಸುವ ಸಾಧ್ಯತೆ ಕಾಣುತ್ತಿದೆ. ಹಾಗಾದಾಗ, ಭಾರತ ಮತ್ತು ಚೀನಾದಂಥ ಪ್ರಮುಖ ಆಮದುದಾರರ ಮೇಲೆ ಈ ಮುಂದುವರಿದ ನಿರ್ಬಂಧಗಳು ವ್ಯತಿರಿಕ್ತ ಪರಿಣಾಮ ಬೀರಬಹುದು. ರುಪಾಯಿ ಮೌಲ್ಯವು ಒಂದಷ್ಟು ದುರ್ಬಲವಾಗಲು ತೈಲಬೆಲೆ ಏರಿಕೆಯೂ ಸಹಕರಿಸುವಂತೆ ಭಾಸವಾಗುತ್ತಿದೆ. ಭಾರತವು ತೈಲದ ಅತಿದೊಡ್ಡ ಆಮದುದಾರರಲ್ಲಿ ಒಂದಾಗಿರುವುದರಿಂದ, ಕಚ್ಚಾತೈಲ ಬೆಲೆಯು ಏರಿಕೆಯ ಗತಿಯಲ್ಲಿರುವುದರಿಂದ ಮತ್ತು ಆಮದು ಹಣದುಬ್ಬರ ಏರಿಕೆಯಾಗುತ್ತಿರುವುದರಿಂದ ರುಪಾಯಿ ಮೌಲ್ಯದಲ್ಲಿನ ಕುಸಿತವನ್ನು ಕಾಣುತ್ತಿದ್ದೇವೆ.

ಹೊಸದಾಗಿ ಅಧಿಕಾರ ಹಿಡಿಯಲು ಸಿದ್ಧರಾಗಿರುವ ಟ್ರಂಪ್ ಅವರ ನಿರ್ಬಂಧಗಳು ಮತ್ತು ಅಂತಾರಾಷ್ಟ್ರೀಯ ವ್ಯಾಪಾರ ನೀತಿಯ ಕುರಿತಾದ ಅನಿಶ್ಚಿತತೆಯೂ, ಅಂತಾರಾಷ್ಟ್ರೀಯ ಕರೆನ್ಸಿ ಮಾರುಕಟ್ಟೆಯಲ್ಲಿ ರುಪಾಯಿ ಮೌಲ್ಯದ ಮೇಲೆ ಒಂದಷ್ಟು ಪ್ರಭಾವ ಬೀರಿದೆ. ಟ್ರಂಪ್ ನೀಡುತ್ತಿರುವ ತೆರಿಗೆ ಕಡಿತ, ಭೌಗೋಳಿಕ ವಿಘಟನೆ-ಆಕ್ರಮಣ-ಸ್ವಾಧೀನ ಕುರಿತ ಹೇಳಿಕೆಗಳು, ವಿವಿಧ ದೇಶಗಳಿಂದ ಆಮದು ಮಾಡುವ ಸೇವೆಗಳ ಮೇಲೆ ಹೆಚ್ಚಿನ ಸುಂಕ ವಿಧಿಸುವ ಪ್ರಸ್ತಾವನೆ ಕೂಡ ಡಾಲರ್ ಮೌಲ್ಯದ ವೃದ್ಧಿಗೆ ಮತ್ತು ಅದರ ಎದುರು ರುಪಾಯಿ ಮೌಲ್ಯದ ಕುಸಿತಕ್ಕೆ ಕಾರಣೀಭೂತವಾಗಿವೆ. ಮುಂದಿನ ದಿನಗಳಲ್ಲಿ ಭಾರತದ ಮಾಹಿತಿ ತಂತ್ರಜ್ಞಾನ ವಲಯದ ಸೇವೆಗಳಿಗೆ ಅಮೆರಿಕವು ಹೆಚ್ಚಿನ ಸುಂಕ ವಿಧಿಸುವ ಆತಂಕವಿದ್ದು, ಇದು ಕೂಡ ಡಾಲರಿನೆದುರು ರುಪಾಯಿಯ ಅಪಮೌಲ್ಯವಾಗಲು ಬಲವಾದ ಕಾರಣವಾಗಿದೆ.

ವಿದೇಶಿ ನೇರ ಬಂಡವಾಳ ಹೂಡಿಕೆದಾರರು (ಎಫ್‌ಡಿಐ) ಮತ್ತು ವಿದೇಶಿ ಪೋರ್ಟ್‌ಫೋಲಿಯೋ ಹೂಡಿಕೆದಾರರು (ಎಫ್‌ಪಿಐ) ರುಪಾಯಿಯ ಮೌಲ್ಯವು ವೃದ್ಧಿಸುವಲ್ಲಿ ಅಥವಾ ಕುಸಿಯುವಲ್ಲಿ ಮಹತ್ತರ ಪಾತ್ರ ವಹಿಸುತ್ತಾರೆ. ಈ ಬೃಹತ್ ಹೂಡಿಕೆದಾರರು ಜನವರಿ ತಿಂಗಳಲ್ಲಿ ಭಾರತದ ಷೇರು ಮಾರುಕಟ್ಟೆಯಲ್ಲಿ ಮಾರಾಟವನ್ನು ಹೆಚ್ಚಿಸುತ್ತಾ, 'ಪ್ರಾಫಿಟ್ ಬುಕಿಂಗ್' ಮಾಡುವ ಉದ್ದೇಶದಿಂದ ಒಂದಷ್ಟು ಬಿಲಿಯನ್ ಡಾಲರ್ ಮೊತ್ತವನ್ನು ದೇಶದಿಂದ ಹೊರಗೆ ಹರಿಸಿದ್ದಾರೆ. ಕಳೆದ ಡಿಸೆಂಬರ್‌ನಲ್ಲಿ ಹೀಗೆ 169 ಬಿಲಿಯನ್‌ನಷ್ಟು ಹೊರಹರಿವು ಆಗಿದ್ದು, ಜನವರಿಯಲ್ಲಿ ಅದಾಗಲೇ ಈ ಮೊತ್ತವು 213 ಬಿಲಿಯನ್ ಪ್ರಮಾಣವನ್ನು ದಾಟಿದೆ. ನಿರಂತರ ಮಾರಾಟವು ಒಟ್ಟಾರೆಯಾಗಿ ಹೂಡಿಕೆದಾರರ ವಿಶ್ವಾಸವನ್ನು ಕುಗ್ಗಿಸಿದೆ. ಪರಿಣಾಮ, ಕಳೆದೊಂದು ವಾರದಿಂದ ಷೇರುಪೇಟೆಯಲ್ಲಿ 'ಕರಡಿ ಕುಣಿತ'! ಹಣದ ಹೆಚ್ಚಿನ ಹೊರಹರಿವು ಸ್ವಾಭಾವಿಕವಾಗಿ ಆಯಾ ದೇಶದ ಕರೆನ್ಸಿಯನ್ನು ನೇರವಾಗಿ ಅಪಮೌಲ್ಯಗೊಳಿಸುತ್ತದೆ. ರುಪಾಯಿ ಮೌಲ್ಯವು ಕುಸಿಯಲು ಇದೂ ತನ್ನದೇ ಕೊಡುಗೆ ನೀಡಿದೆ.

ಪ್ರಸಕ್ತ ತ್ರೈಮಾಸಿಕದಲ್ಲಿ ದೇಶದ ಕಾರ್ಪೊರೇಟ್/ಕೈಗಾರಿಕೆ, ಕೃಷಿ ಮತ್ತು ಉತ್ಪಾದನಾ ವಲಯಗಳು ಒಂದಷ್ಟು ಮಂದಗತಿಯಲ್ಲಿ ಸಾಗುತ್ತಿರುವುದನ್ನು ಅಂಕಿ-ಅಂಶಗಳು ಸಾರುತ್ತಿವೆ. 2024ರಲ್ಲಿ ಭಾರತದ ಒಟ್ಟು ವ್ಯವಹಾರೋದ್ದಿಮೆ ಮತ್ತು ಉತ್ಪಾದನಾ ವಲಯದ ಲಾಭವು, ದೇಶದ ಜಿಡಿಪಿಯ ಶೇ.5.2ರಷ್ಟು ಇತ್ತು. ಅದೀಗ ಕಡಿಮೆಯಾಗಿದೆ. ಬೇಡಿಕೆ ಮತ್ತು ಬಳಕೆಯ ಪ್ರಮಾಣಗಳಲ್ಲಿನ ವ್ಯತ್ಯಾಸ, ಉತ್ಪಾದನೆ ಹಾಗೂ ಕಚ್ಚಾ ವಸ್ತುಗಳ ಬೆಲೆಯಲ್ಲಿನ ಏರಿಕೆಯೂ ಈ ಮಂದಗತಿಯ ಮುಂದುವರಿಕೆಗೆ ತಮ್ಮ ಪಾಲು ನೀಡಿವೆ. ಉತ್ಪಾದನೆ ಮತ್ತು ಪೂರಕ ವ್ಯವಹಾರಗಳಲ್ಲಿ ಉದ್ದೇಶಿತ ಪ್ರಗತಿ ಸಾಧಿಸಲು ಆಗದಿರುವ ಕಾರಣ ರುಪಾಯಿಯು ಒಂದಷ್ಟು ಮೌಲ್ಯವನ್ನು ಕಳಕೊಂಡಂತೆ ಭಾಸವಾಗುತ್ತಿದೆ.

ಇವಿಷ್ಟು ರುಪಾಯಿ ಅಪಮೌಲ್ಯವಾಗಲು ಬಲವಾದ ಅಂಶಗಳು. ಮತ್ತೊಂದೆಡೆ, ರುಪಾಯಿ ಮೌಲ್ಯದ ಕುಸಿತದಿಂದಾಗಿ ಕಚ್ಚಾತೈಲ ಮತ್ತು ಅವಶ್ಯಕ ಸರಕುಗಳ ಆಮದು ವೆಚ್ಚ ಜಾಸ್ತಿಯಾಗಿ ಹಣದುಬ್ಬರದಲ್ಲಿ ಏರಿಕೆಯಾಗುತ್ತದೆ. ಜತೆಗೆ ವಿದೇಶದಲ್ಲಿ (ಉದಾಹರಣೆಗೆ ಅಮೆರಿಕದಲ್ಲಿ) ಖರ್ಚು ಮಾಡಬೇಕಾದ ರುಪಾಯಿಯ ಪ್ರಮಾಣವೂ ಜಾಸ್ತಿಯಾಗುತ್ತದೆ. ರುಪಾಯಿ ಮೌಲ್ಯ ಕುಸಿತದಿಂದಾಗಿ ವಿದೇಶಿ ಬಂಡವಾಳ ಹೂಡಿಕೆದಾರರು ಹೂಡಿಕೆಗೆ ಹಿಂದೇಟು ಹಾಕುತ್ತಾರೆ, ಹೂಡಿಕೆಯನ್ನು ಮುಂದೂ ಡುತ್ತಾರೆ. ಇದು ವಿದೇಶಿ ಬಂಡವಾಳದ ಹರಿವಿನ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ. ಬಂಡವಾಳದ ಹರಿವು ಕಡಿಮೆಯಾದರೆ ದೇಶದ ಒಟ್ಟಾರೆ ಆರ್ಥಿಕ ಪ್ರಗತಿ ಮಂದವಾಗುತ್ತದೆ. ಹೀಗಿದ್ದೂ, ರುಪಾಯಿ ದುರ್ಬಲಗೊಂಡಾಗ ರಫ್ತು ವಲಯಕ್ಕೆ ಒಂದಷ್ಟು ಅನುಕೂಲವೂ ಆಗುತ್ತದೆ. ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಬೆಲೆಯಲ್ಲಿ ರಫ್ತು ಮಾಡುವ ಮೂಲಕ, ಭಾರತದ ಸರಕು ಮತ್ತು ಸೇವೆಗಳಿಗೆ ಬೇಡಿಕೆ ಸೃಷ್ಟಿಸಿ ದೇಶಗಳ ನಡುವಿನ 'ವ್ಯವಹಾರದ ಕೊರತೆ ಅಂತರ'ವನ್ನು ತಗ್ಗಿಸಬಹುದು. ವಿದೇಶಿ ಸಂಸ್ಥೆಗಳು ಡಾಲರ್ ಮುಖಾಂತರ ಹಣ ಪಾವತಿಸುವುದಾದರೆ, ರುಪಾಯಿ ಅಪಮೌಲ್ಯದ ದೆಸೆಯಿಂದಾಗಿ ಅಂಥ ಭಾರತೀಯ ಸಂಸ್ಥೆಗಳಿಗೆ ಹೆಚ್ಚಿನ ಮೊತ್ತ ಸಿಗುತ್ತದೆ.

ಬೇಡಿಕೆ ಮತ್ತು ಪೂರೈಕೆಯ ಅಂತರವನ್ನು ಹತೋಟಿಯಲ್ಲಿ ಇಟ್ಟು, ಭಾರತೀಯ ರಿಸರ್ವ್ ಬ್ಯಾಂಕು (ಆರ್‌ಬಿಐ) ರುಪಾಯಿಯು ಮತ್ತಷ್ಟು ಅಪಮೌಲ್ಯಗೊಳ್ಳದಂತೆ ತಡೆಯಬಹುದು. ಆರ್‌ಬಿಐನ ಹಿಂದಿನ ಗವರ್ನರ್ ಶಕ್ತಿಕಾಂತ್ ದಾಸ್ ಈ ವಿಚಾರದಲ್ಲಿ ಎಚ್ಚರಿಕೆಯ ನೀತಿ ಅನುಸರಿಸಿ, ಡಾಲರ್ ಎದುರು ರುಪಾಯಿ ಮೌಲ್ಯ ವಿಪರೀತ ಕುಸಿಯದಂತೆ ನೋಡಿಕೊಳ್ಳುತ್ತಿದ್ದರು. ಈಗಿನ ಗವರ್ನರ್ ಸಂಜಯ್ ಮಲ್ಹೋತ್ರಾ ಅವರು, ಡಾಲರ್‌ಗೆ ನಿಗದಿಯಾಗಿರುವ 'ನಿಶ್ಚಿತ ದರ' ನೀತಿಯನ್ನು ಅನುಸರಿಸುತ್ತಿಲ್ಲ. ಕರೆನ್ಸಿಯ ಮೌಲ್ಯವನ್ನು ಮಾರುಕಟ್ಟೆಯು ನಿರ್ಧರಿಸುವಂತಾಗುವ ನೀತಿಯನ್ನು ಸದ್ಯಕ್ಕೆ ಆರ್‌ಬಿಐ ಅನುಸರಿಸಿದಂತೆ ಭಾಸವಾಗುತ್ತಿದೆ. ಹೀಗಿದ್ದೂ ಡಾಲರ್ ಎದುರು ರುಪಾಯಿ ಮೌಲ್ಯವು 87ಕ್ಕಿಂತ ಕೆಳಗೆ ಕುಸಿಯಲು ಸದ್ಯೋಭವಿಷ್ಯದಲ್ಲಿ ಆರ್‌ಬಿಐ ಬಿಡುವ ಸಾಧ್ಯತೆ ಕಡಿಮೆ ಎನಿಸುತ್ತದೆ.

ಡಾಲರ್ ಎದುರು ರುಪಾಯಿ ಕುಸಿದಾಕ್ಷಣ, 'ಅಮೆರಿಕದ ಆರ್ಥಿಕತೆ ಬಲಿಷ್ಠವಾಗಿದೆ, ಭಾರತದ ಆರ್ಥಿಕತೆ ಕುಸಿಯುತ್ತದೆ' ಎಂದು ಭರತವಾಕ್ಯ ನುಡಿದುಬಿಡುವುದು ಸುತರಾಂ ಸರಿಯಲ್ಲ. ಹಲವು ಜಾಗತಿಕ ವಿದ್ಯಮಾನಗಳ ಜತೆಗೆ ದೇಶದೊಳಗಿನ ವಿದ್ಯಮಾನಗಳು, ಉತ್ಪಾದನೆ, ಕೈಗಾರಿಕೆ, ಕೃಷಿ, ಉದ್ಯೋಗ, ಹಣದುಬ್ಬರ, ಷೇರು ಮಾರುಕಟ್ಟೆ ಸೂಚ್ಯಂಕ ಮುಂತಾದ ಹಲವು ಅಂಶಗಳೂ ರುಪಾಯಿ ಮೌಲ್ಯವನ್ನು ನಿರ್ಧರಿಸುವಲ್ಲಿ ತಮ್ಮದೇ ಆದ ಕೊಡುಗೆ ನೀಡುತ್ತವೆ, ಪ್ರಭಾವ ಬೀರುತ್ತವೆ. ದೀರ್ಘಕಾಲದವರೆಗೆ ಅಥವಾ ನಿರಂತರವಾಗಿ ಈ ಟ್ರೆಂಡ್ ಮುಂದುವರಿದಾಗ ಮಾತ್ರ ಅದು ಎಚ್ಚರಿಕೆಯ ಗಂಟೆಯಾಗಿ ಪರಿಣಮಿಸಬಲ್ಲದು, ಸಂಭಾವ್ಯ ಅಪಾಯವನ್ನು ಅದು ಸೂಚಿಸಬಲ್ಲದು. ಹಾಗಾಗಲು ಆರ್‌ಬಿಐನ ಸದೃಢ ನೀತಿಗಳು ಖಂಡಿತ ಬಿಡಲಾರವು. ಸದೃಢ-ಸುಭದ್ರ ಸರಕಾರ ಇರುವುದರ ಜತೆಗೆ, ದೇಶದ ಸರ್ವತೋಮುಖ ಅಭಿವೃದ್ಧಿಯೂ ಆಶಾದಾಯಕವಾಗಿರುವ ಪರಿಣಾಮ ಹಾಗೇನೂ ಆಗಲಾರದು.

ಇತ್ತೀಚಿನ ಜಾಗತಿಕ ಏರಿಳಿತಗಳು ಮತ್ತು ಯುದ್ಧಗಳು, ಜಾಗತಿಕ ವಿತ್ತೀಯ ಮಾರುಕಟ್ಟೆಯಲ್ಲಿ ಒಂದಷ್ಟು ಸಂಚಲನ, ತಲ್ಲಣ ಮೂಡಿಸಿರುವುದುಂಟು; ಭಾರತದ ಮೇಲೆ ಮತ್ತು ನಮ್ಮ ಕರೆನ್ಸಿಯ ಮೇಲೆ ಇದರ ಕನಿಷ್ಠ ಪರಿಣಾಮವಾಗಿದೆ. ಇದು ಋತುಮಾನ ಬದಲಾದಾಗ ಬರುವ ಶೀತ-ಕೆಮ್ಮಿನಂತೆ! ಇದಕ್ಕೆ ಮದ್ದು ತೆಗೆದುಕೊಂಡರೆ ಏಳು ದಿನಗಳಲ್ಲಿ ಕಡಿಮೆಯಾಗುತ್ತದೆ, ತೆಗೆದುಕೊಳ್ಳದಿದ್ದರೆ ಒಂದು ವಾರದಲ್ಲಿ ವಾಸಿಯಾಗುತ್ತದೆ ಎನ್ನುವುದೇ ಲೇಸು! ಹೀಗಾಗಿ ರುಪಾಯಿ ಕುಸಿತವನ್ನು ನಾವುಗಳೇ ನಮ್ಮ ಅನುಕೂಲಕ್ಕೆ ತಕ್ಕಂತೆ ವಿಶ್ಲೇಷಿಸುವುದು ಬೇಡ. ಅದಕ್ಕೆ ಸಂಬಂಧಿಸಿದ 'ಆರ್ಥಿಕ ವೈದ್ಯ'ರು ಅದರ ಕುರಿತು ವಿಮರ್ಶಿಸಿ ನಿರ್ಧರಿಸಲಿ. ನಮ್ಮ ಪೈಸೆಗೆ ಯಾವತ್ತೂ ಕಿಮ್ಮತ್ತು ಇದ್ದೇ ಇರುತ್ತದೆ!

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಭಟ್ಟರ್ ಸ್ಕಾಚ್

- **ಕಲ್ಮಂಗಿ ಆಚಾರ್, (ಇಮೇಲ್ ಮೂಲಕ)**
ಭಟ್ರೇ, 'ವಿಶ್ವವಾಣಿ' ಬಂದ್ ಆಗುತ್ತದೆ ಎಂದು ಹೇಳಿದವರಿಗೆ ನೀವೇನು ಮಾಡಿದಿರಿ?
- **ಬಾಯಿ ಬಂದ್ ಮಾಡಿಸಿದೆ!**

- **ವಿರೂಪಾಕ್ಷ ಶಾಸ್ತ್ರೀ, ನಂಜನಗೂಡು**
ಭಟ್ರೇ, ಸರಕಾರ 'ನಿಮ್ಹಾನ್ಸ್' ಎಂದು ನಾಮಕರಣ ಮಾಡದೇ ಹೋಗಿದ್ದಿದ್ದರೆ ಏನೆಂದು ಕರೆಯಿಸಿಕೊಳ್ಳುತ್ತು?
- **ಹುಚ್ಚಾಸ್ಪತ್ರೆ!**

- **ರಾಘಣ್ಣ, ಮೈಸೂರು**
ಭಟ್ರೇ, ಪ್ರಮಾಣವಚನದ ವೇಳೆ ಟ್ರಂಪ್, 'ಮೋದಿಯವರನ್ನೇಕೆ ಕರೆದುಕೊಂಡು ಬರಲಿಲ್ಲ' ಎಂದು ಜೈಶಂಕರರನ್ನು ಪ್ರಶ್ನಿಸಿದರೆ ಏನು ಹೇಳಬಹುದು?
- **ಕುಂಭಮೇಳದ ಸ್ನಾನ ಸಂಭ್ರಮ ಇಲ್ಲದಿದ್ದಿದ್ದರೆ ಮೋದಿ ಖಂಡಿತ ಬರುತ್ತಿದ್ದರು!**

- **ಲಿಂಗಪ್ಪ ಉತನಾಳ, ಹಂಸಬಾವಿ**
ಭಟ್ರೇ, ನಿಮ್ಮನ್ನು ನಾನು ಏನೋ ಅಂದ್ಕೊಂಡಿದ್ದೆ?
- **ಖರೆ ಹೇಳಲಾ, ನಾನೂ ಹಾಗೆ ಅಂದುಕೊಂಡಿದ್ದೆ!**

- **ವಿನೋದ ಕಾಮತ್, ಬೆಂಗಳೂರು**
ಭಟ್ರೇ, ಪ್ರೀತಿಸುವುದರ ಒಂದು ಸಮಸ್ಯೆ ಅಂದ್ರೆ ಏನು?
- **ಪ್ರೀತಿಸಿದವಳನ್ನೇ ಮದುವೆಯಾಗೋದು!**

- **ಸತ್ಯಾನಂದ ಶೆಟ್ಟಿ, ಗದಗ**
ಭಟ್ರೇ, ಕೆಲವರೇಕೆ ಸ್ನಾನ ಮಾಡುವುದಿಲ್ಲ?
- **ಮೈ ತೊಳೆದರೆ ಚರ್ಮದ ಕಲರ್ ಹೋಗುತ್ತೆ ಎಂದು ಭಾವಿಸಿರಬಹುದಾ?!**

- **ಕೆ.ಕೆ.ಅರುಣಾ, ಚಿಕ್ಕಬಾಣಾವರ**
ಭಟ್ರೇ, ನಾನು ಆಗರ್ಭ ಶ್ರೀಮಂತನ ಮಗಳನ್ನು ಮದುವೆಯಾಗಬೇಕು ಎಂದು ನಿರ್ಧರಿಸಲೇ?
- **ಅವಳ ಮದುವೆಯಾದವ ಭಿಕಾರಿಯಾಗ್ತಾನೆ ಅಂತ ಅವಳ ಹಣೆಬರಹದಲ್ಲಿ ಇದ್ರೆ ಏನು ಮಾಡ್ತೀಯಾ?!**

- **ವಿಕಾಸ ಹೆಗಡೆ, ಸಿದ್ದಾಪುರ**
ಭಟ್ರೇ, ಹುಡುಗಿಯರಿಗೆ ನವಿಲುಗರಿ ಅಂದ್ರೆ ಬಹಳ ಇಷ್ಟ, ಏಕೆ?
- **ಅಡಕೆ ಗರಿ ಇಷ್ಟಪಡೋಣ ಅಂದ್ರೆ ಅದಕ್ಕೆ ಹಳದಿ ಚುಕ್ಕೆ ರೋಗ ಬಂದಿದೆಯಲ್ಲಾ?!**

- **ಸತ್ಯಪ್ಪ ಸಿ., (ಇಮೇಲ್ ಮೂಲಕ)**
ಭಟ್ರೇ, ಬೆಂಗಳೂರಿನಲ್ಲಿ ಇರುವವರೆಲ್ಲ ಪ್ರೇಮಕವಿಗಳಂತೆ ಹೌದಾ?
- **ಬೆಂಗಳೂರಿಗೆ ಅಂಥ ಅಪವಾದ ಬಾರದಿರಲಿ ಅಂತ ಮೊಯಿಲಿಯವರನ್ನು ಇಟ್ಟುಕೊಳ್ಳಲಾಗಿದೆ!**

- **ರಾಧಾ ಭಾಸ್ಕರ, ಸಾಗರ**
ಭಟ್ರೇ, ಒಂದೇ ದಿನ ಸರಸ ಅಂತಾಳಲ್ಲ?
- **ಅನಂತರ ವಿರಸ ಪಕ್ಕಾ ಅಂತಾಯ್ತು ಬಿಡು!**

ಹವ್ಯಕ ಸಂಸ್ಕೃತಿಯ ಒಳನೋಟಗಳು

ಹವ್ಯಕುಟುಂಬಿ
ಡಾ.ಆರ್.ಜಿ.ಹೆಗಡೆ
vveditoped@gmail.com

ಕೆಲ ದಿನಗಳ ಹಿಂದೆ ನಡೆದ ವಿಶ್ವ ಹವ್ಯಕ ಸಮ್ಮೇಳನ ಭಾರಿ ಯಶಸ್ವಿಯಾಯಿತು ಎನ್ನುವುದರಲ್ಲಿ ಅನುಮಾನವಿಲ್ಲ. ಸಮ್ಮೇಳನದ ನೇತೃತ್ವ ವಹಿಸಿದ್ದವರಿಗೆ ಈ ಯಶಸ್ಸಿನ ಶ್ರೇಯ ಸಲ್ಲಬೇಕು. ವಿಶ್ವಾದ್ಯಂತ ಹರಡಿರುವ ಹವ್ಯಕರು ಸೇರಿ ತಮ್ಮ ಇತಿಹಾಸ, ಸಂಸ್ಕೃತಿ, ವರ್ತಮಾನ ಮತ್ತು ಭವಿಷ್ಯದ ಕುರಿತು ಈ ಸಂದರ್ಭದಲ್ಲಿ ಚರ್ಚಿಸಿದ್ದು ಒಂದು ಮಹತ್ವದ ಬೆಳವಣಿಗೆ. ಪ್ರತಿಯೊಂದು ಸಮಾಜವೂ ಹೀಗೆ ತನ್ನತನವನ್ನು ಕಟ್ಟಿಕೊಳ್ಳುವುದು-ಇಟ್ಟುಕೊಳ್ಳುವುದು ಒಳ್ಳೆಯದು. ಏಕೆಂದರೆ, ಪ್ರತಿಯೊಂದು ಸಮಾಜಕ್ಕೂ ಅದರದ್ದೇ ಆದ ಜೀವನ ಶೈಲಿ, ವೈವಿಧ್ಯಮಯ ಊಟ, ವಿಶಿಷ್ಟ ವಾದ ಕಲೆ-ಸಂಸ್ಕೃತಿ-ಮಾತುಗಾರಿಕೆ ಇರುತ್ತವೆ. ಒಂದು ಪರಿಸರದ ಭಾಗವಾಗಿ ಬದುಕಿದ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡ ಹೆಜ್ಜೆಗುರುತುಗಳು ಇಂಥ ಸಮಾಜಗಳಿಗೆ ಇರುತ್ತವೆ. ಇಂಥ ಸಮಾಜ-ಸಂಸ್ಕೃತಿಗಳು ಹೀಗೆ ತಮ್ಮನ್ನು ಗುರುತಿಸಿಕೊಂಡು ಎದ್ದು ನಿಂತಾಗ ಮಾತ್ರವೇ ಪಾಶ್ಚಾತ್ಯೀಕರಣವನ್ನು ತಡೆಯಲು ಸಾಧ್ಯ. ಇಂಥ ವಿಭಿನ್ನ ಸಂಸ್ಕೃತಿಗಳು ಅಂತಾರಾಷ್ಟ್ರೀಯ ಪ್ರವಾಸೋದ್ಯಮದ ಪ್ರಮುಖ ಆಕರ್ಷಣೆಗಳು ಕೂಡ.

ಮೊನ್ನಿನ ಸಮ್ಮೇಳನದಲ್ಲಿ, ಹವ್ಯಕ ಸಂಸ್ಕೃತಿ ಎಂದರೇನು ಎನ್ನುವ ಪ್ರಶ್ನೆಯ ಕುರಿತೂ ಚರ್ಚೆಗಳು ನಡೆದವು. ಆದ್ದರಿಂದ, ಹಿಂದೆ ಕಂಡುಂಡ ಹವ್ಯಕ ಜೀವನಶೈಲಿಯ ಒಳನೋಟಗಳನ್ನು ತೆರೆದಿಡುವ ಮೂಲಕ, ಹವ್ಯಕ ಸಂಸ್ಕೃತಿ ಎಂದರೇನು ಎಂಬುದನ್ನು ಇಲ್ಲಿ ಹಂಚಿಕೊಳ್ಳಲು ಯತ್ನಿಸಿದ್ದೇನೆ.

ಹವ್ಯಕರು ಮೂಲತಃ ಹಳ್ಳಿಗರು ಮತ್ತು ಕೃಷಿ ಆಧರಿಸಿ ಜೀವನ ನಡೆಸಿದವರು. ಹವ್ಯಕ ಹಳ್ಳಿಗಳು ಸಾಧಾರಣವಾಗಿ ಅಡಕೆ ತೋಟ, ಕಬ್ಬಿನ ಗದ್ದೆ, ಕರಡದ ಬೇಣ, ಸೊಪ್ಪಿನ ಬೆಟ್ಟ ಮತ್ತು ನೀರಿನಿಂದ ತುಂಬಿದಂಥವು. ಭಾರಿ ಮಳೆ ಬೀಳುವ ಪರಿಸರ, ನೀರುಗದ್ದೆ, ಹಳ್ಳ, ನದಿ, ಸಮುದ್ರ, ಯಕ್ಷಗಾನ ಇಂಥವುಗಳ ಪ್ರಭಾವ ಹವ್ಯಕ ಭಾಷೆಯ ಮೇಲಿದೆ. ಈ ಭಾಷೆಯಲ್ಲಿರುವ ಗಾದೆಗಳು, ಈಡಿಯಮ್‌ಗಳು ಸಹಜವಾಗಿ ಇಂಥವನ್ನು ಹಿನ್ನೆಲೆಯಾಗಿ ಹೊಂದಿವೆ. ಸಾಧಾರಣವಾಗಿ ಹವ್ಯಕ ಊರಿನ ರಚನೆ ಹೇಗಿರುತ್ತದೆಯೆಂದರೆ, 2-3 ಎಕರೆ ತೋಟ/ಬೇಣ, ಅದರ ನಡುವೆ ಮನೆ, ನಂತರ ಮುಂದಿನ ತೋಟ ಮತ್ತು ಅವರ ಮನೆ, ನಂತರ ಇನ್ನೊಬ್ಬರದ್ದು ಹೀಗೆ. ಹೀಗಾಗಿ ಅವೆಲ್ಲ ವಿಸ್ತೀರ್ಣದಲ್ಲಿ ದೊಡ್ಡ ಊರುಗಳು; ಅಲ್ಲಿ ಮಾತು-ಗದ್ದಲ ಕೇಳಿಸುವುದೇ ಇಲ್ಲ. ಸಾಯಂಕಾಲ ಕೇಳಿಸುವುದು ಮೃದಂಗದ, ಚಂಡೆಯ ಸ್ವರ. ತೋಟಕ್ಕೆ ಹೋದವರನ್ನು ಕರೆಯಲು 'ಕೂ' ಹೊಡೆಯಬೇಕು, ಇಲ್ಲವೇ ಜಮಟೆ ಬಾರಿಸಬೇಕು!

ಮನೆಗಳು ಹೆಚ್ಚಾಗಿ ಕಲ್ಲು/ಮಣ್ಣಿನ ಗೋಡೆ ಹೊಂದಿ, ಚಾವಣಿಗೆ ಸೋಗೆ ಅಥವಾ ಹಂಚು ಹೊದಿಸಿಕೊಂಡಿರುತ್ತಿದ್ದವು. ಇವು ಸೋಗೆ, ಅಡಕೆ-ತೆಂಗಿನ ಮರಗಳು, ತೆಂಗಿನ ಗರಿ, ಬಿದಿರು, ಬೆತ್ತದ ಬಳ್ಳಿ, ಬಾಳೆ ಬಳ್ಳಿ, ಕೂಗಲ ಬಳ್ಳಿ ಮುಂತಾದ ಪ್ರಾದೇಶಿಕವಾಗಿ ಲಭ್ಯವಿರುವ ಉತ್ಪನ್ನಗಳನ್ನು ಬಳಸಿ ಕಟ್ಟಿದಂಥವು. ಹಾವಿನ ಕಾಟ ತಪ್ಪಿಸುವ ಸಲುವಾಗಿ ಮನೆಗಳಿಗೆ ಚಿಕ್ಕ ಚಿಕ್ಕ ಕಿಟಕಿಗಳು ಇರುತ್ತಿದ್ದವು. ವಾಸ್ತುಬಾಗಿಲು ಧಾರ್ಮಿಕ ಮಹತ್ವದ್ದು, ಅದರ ಮುಂದೆ ತಲೆಬಗ್ಗಿಸಿಯೇ ಹೋಗಬೇಕು. ಹಾಗಾಗಿ ಆ ಬಾಗಿಲನ್ನು ಎತ್ತರವಿರಿಸುತ್ತಿರಲಿಲ್ಲ. ಮಣ್ಣಿಗೆ ಸುಣ್ಣದ ನೀರು ಕುಡಿಸಿ, ನುಣುಪು ಕಲ್ಲಿನಿಂದ ಒರೆದು ಮಾಡಿದ ಥಳಥಳ ಹೊಳೆವ ನೆಲ. ಮನೆಗಳು ಬಹುತೇಕವಾಗಿ ಕಟ್ಟಿಗೆಯ ಅಂಕಣ ಹಾಕಿದವು, ಹೀಗಾಗಿ ಒಳಗೆ ಯಾವಾಗಲೂ ತಂಪು. ಹವ್ಯಕ ಮನೆಗಳ ಮುಂದಿನ ಮತ್ತು ಮಹತ್ವದ ಭಾಗವೇ 'ಹೊಳ್ಳಿ'. ರಾತ್ರಿ ಬೆಚ್ಚಗೆ ಸೊಪ್ಪು ಕಂಬಳಿ ಅಥವಾ ಹಡಗಂಬಳಿ ಹೊದ್ದು ಹೊಳ್ಳಿಯ ಮೇಲೆ ಮಲಗಿದರೆ ಸ್ವರ್ಗ. ಮಲಗಿದಲ್ಲಿಂದಲೇ ಬೆಳದಿಂಗಳು, ಅಮಾವಾಸ್ಯೆಯ ನಕ್ಷತ್ರಗಳ ರಾಶಿ, ಮಳೆಗಾಲದಲ್ಲಿ ಭಾರಿ ಜಡಿಯುವ ಮಳೆ, ಜೀರುಂಡೆಗಳ ಗಾನ ಇವೆಲ್ಲವನ್ನೂ ಅನುಭವಿಸಬಹುದು. ತೋಟ, ಗುಡ್ಡಗಳು, ಮಳೆ, ಹಳ್ಳ, ಹೊಳೆ, ಪ್ರಕೃತಿ, ಕೀಟಗಳು, ಪ್ರಾಣಿಗಳು, ಹಾವುಗಳು, ಹಕ್ಕಿಜಗತ್ತು ಎಲ್ಲವುಗಳ ಪರಿಚಯ ಹವ್ಯಕರಿಗೆ ಇರುತ್ತದೆ. ಒಟ್ಟಾರೆಯಾಗಿ ಪ್ರಕೃತಿಯು ಹವ್ಯಕರ ಬದುಕಿನ ಭಾಗ.

ರೋಗ-ರುಜಿನ ಬಂದರೂ ಅವರಿಗೆ ಪ್ರಕೃತಿಯೇ ಔಷಧಿಯನ್ನು ಒದಗಿಸುತ್ತಿತ್ತು. ಯಾವ ಗಿಡದ ತೊಪ್ಪಲನ್ನು ಅರೆದು ಕುಡಿಸಬೇಕು ಅಥವಾ ತೇದು ಹಚ್ಚಬೇಕು ಎನ್ನುವ ವಿಚಾರ ಹವ್ಯಕರಿಗೆ ಗೊತ್ತಿತ್ತು. ಮನೆಯಲ್ಲಿ ಶುಂಠಿ, ಜೇಷ್ಠಮಧು, ಉಳ್ಳಾಗಡ್ಡಿ, ಜಾಯಿಕಾಯಿ, ಕೊಡಸಗನ ಬೇರು ಇತ್ಯಾದಿ ಇದ್ದೇ ಇರುತ್ತಿದ್ದವು. ನೆಗಡಿ ಬಂದಾಗ ಉಳ್ಳಾಗಡ್ಡಿ-ಕಾಳುಮೆಣಸಿನ ಕಷಾಯ ಕುಡಿದರೆ 2 ದಿನದಲ್ಲಿ ಮಾಯ. ಆ ಔಷಧಿಗಳನ್ನು ತೆಗೆದುಕೊಳ್ಳಲು ಚಿತ್ರವಿಚಿತ್ರವಾದ ಪದ್ಧತಿಗಳಿದ್ದವು. ಉದಾಹರಣೆಗೆ, ಕೆಲವು ಔಷಧಿಗಳನ್ನು ಒಯ್ಯುವಾಗ ರೋಗಿಗೆ ನೀಡುವ ತನಕ ಹಿಂದೆ ನೋಡಬಾರದು. ಇನ್ನು ಕೆಲವು ಔಷಧಿ ತೆಗೆದುಕೊಂಡು ಹೋಗಬೇಕಾದರೆ ಅವನ್ನು ಕೊಡುವ ತನಕ ಮಾತನಾಡಬಾರದು, ಔಷಧಿಯನ್ನು ನೆಲಕ್ಕೆ ಇಡಬಾರದು ಹೀಗೆ ಸಂಪ್ರದಾಯಗಳಿದ್ದವು. ಔಷಧಿಗಳಿಗೆ ದುಡ್ಡು ಕೊಡುವ ಪದ್ಧತಿಯಿರಲಿಲ್ಲ, ಕೆಲವು ಸಂದರ್ಭದಲ್ಲಿ ಒಂದು ತೆಂಗಿನ ಕಾಯಿ ಕೊಡುವುದಿತ್ತು. ಇಡೀ ಜೀವನದಲ್ಲಿ ಅಲೋಪತಿಯ ಒಂದೂ ಗುಳಿಗೆಯನ್ನು ತೆಗೆದುಕೊಳ್ಳದವರೂ ಇದ್ದರು. ಅವರು ಪ್ರಕೃತಿಯ ಲಯದ ಜತೆ ಬದುಕಿದ್ದು ಇದಕ್ಕೆ ಕಾರಣವಿರಬಹುದು.

ಚಪ್ಪಲಿ ಹಾಕುವ, ವಿಶೇಷವಾಗಿ ಬಟ್ಟೆ ಧರಿಸುವ ಪದ್ಧತಿ ಇರಲಿಲ್ಲ; ಗಂಡಸರು ಸುಮಾರಾಗಿ ಒಂದು ಅಂಗಿ (ಯಾವುದಕ್ಕಾದರೂ ಇರಲೆಂದು) ಮಾಡಿಸಿಡುತ್ತಿದ್ದರು. ಕುಮಟಾಕ್ಕೆ ಅಥವಾ ಮದುವೆಗೆ ಹೋಗುವುದಿದ್ದರೆ ಮಾತ್ರವೇ ಅದನ್ನು ಹಾಕಿಕೊಳ್ಳುವುದು ಅಥವಾ ಹೆಗಲ ಮೇಲೆ ಇಟ್ಟುಕೊಳ್ಳುವುದು. ಊರಿನಲ್ಲೇ ಇರುವ ಹೊಲಿಗೆಯವ, ಯಾವ ಬಣ್ಣದ ಬಟ್ಟೆ ಇದೆಯೋ ಅದರಲ್ಲೇ ಅಂಗಿ ಮಾಡಿಕೊಡುವುದು ವಾಡಿಕೆ; ಹೀಗಾಗಿ ಕೆಲವೊಮ್ಮೆ ಇಡೀ ಊರಿಗೇ ಸಮವಸ್ತ್ರ ಬಂದಂತೆ ಇರುತ್ತಿತ್ತು. ಹೆಂಗಸರಿಗೆ ವರ್ಷಕ್ಕೆ 2-3 ಸೀರೆ. ಅವರು ಒಂದೆರಡು ಪಲಕ ಮಾಡಿಸಿಡುತ್ತಿದ್ದರು. ಮನೆಯಲ್ಲಿರಬೇಕಾದರೆ ಹಾಕಿಕೊಳ್ಳುವ ಪದ್ಧತಿ ಕಡಿಮೆ. ಹಾಗೆಯೇ ಇಂದಿನ ಹಾಗೆ ಲಂಗ ಹಾಕಿ ಅದರ ಮೇಲೆ ಸೀರೆಯುಡುವ ಪದ್ಧತಿ ಇರಲಿಲ್ಲ. ಸುಮಾರಾಗಿ ಹಾಕುವುದು ಕತ್ರುಡುಗೆ. ಗಂಡಸರು ಒಂದು ಕಚ್ಚೆಯುಟ್ಟು, ಅವಶ್ಯಕತೆ ಬಿದ್ದರೆ ಅದರ ಮೇಲಿಂದ ಒಂದು ಅಡ್ಡ ಟವೆಲ್ ಸುತ್ತುತ್ತಿದ್ದರು. ಮೇಲ್ಗಡೆ ಏನೂ ಇಲ್ಲ. ಅನುಕೂಲಸ್ಥರು ನೀಲಿಬಣ್ಣದ ಒಂದೆರಡು ಅಂಡರ್‌ವೇರ್ ಹೊಲಿಸಿಬಿಡುತ್ತಿದ್ದರು. ಒಟ್ಟಾರೆ, ಸರಳ ಜೀವನ ಹವ್ಯಕರದು. ಹವ್ಯಕರದು ಸಾಧಾರಣವಾಗಿ ಒಟ್ಟು ಕುಟುಂಬ, ಗಂಡ-ಹೆಂಡತಿಗೆ ಸರಾಸರಿ 6-8 ಮಕ್ಕಳು. ಕಟ್ಟಿಗೆಯ ಒಲೆಯ ಮೇಲೆ ಅಡುಗೆ ಮಾಡಬೇಕು. ಕರೆಂಟ್ ಇರಲಿಲ್ಲ, ಹಾಗಾಗಿ ಕರೆಂಟ್‌ಗೆ ಸಂಬಂಧಿ ಸಿದ ಯಾವುದೇ ರೀತಿಯ ಮಷೀನ್ ಇರಲಿಲ್ಲ, ಬಾವಿಯಿಂದ ನೀರು ತಂದುಕೊಳ್ಳಬೇಕು. ನೀರು ಸೇದಲು ಬಾವಿಗೆ ಗಡಗಡೆ ಇರುತ್ತಿತ್ತು, ಕೆಲವೊಮ್ಮೆ ಸೊಂಟ ಬಗ್ಗಿಸಿ ಜಗ್ಗುವ ಬಾವಿ. ಮಳೆಗಾಲಕ್ಕೆ ಸೌದೆಕೋಲು, ಮಡ್ಲುಗರಿ , ಕಾಯಿಸಿಪ್ಪೆ, ಗರಟೆ ತಂದಿಟ್ಟುಕೊಳ್ಳಬೇಕು.

ಕೊಟ್ಟಿಗೆಯು ಹವ್ಯಕ ಸಂಸ್ಕೃತಿಯ ಅವಿಭಾಜ್ಯ ಅಂಗ. ಎಮ್ಮೆ-ದನಗಳು ಇರಲೇಬೇಕು, ಗೋಮಯಕ್ಕಾದರೂ ಆಕಳು ಬೇಕು. ಸ್ವಚ್ಛ ಗೊಳಿಸಲು/ಶುದ್ಧಗೊಳಿಸಲು ಬೆಳಗಾದರೆ ಗೋಮಯ ಬೇಕೇ ಬೇಕು. ಮನೆಯಲ್ಲಿ ಹಾಲು ಪುಷ್ಕಳವಾಗಿ ಇರುತ್ತಿತ್ತು ಎನ್ನಲಾಗದು. ಒಂದು ಸೊಲಗೆ ಅಥವಾ ಸೇರಿನಷ್ಟು ಹಾಲು ಕೊಡುವ ಆಕಳು ಇರುತ್ತಿತ್ತು. ಕೆಲವು ಮನೆಯಲ್ಲಿ ಇದ್ದುದ ರಲ್ಲಿಯೇ ಬೆಣ್ಣೆ ತೆಗೆದು ತುಪ್ಪ ಮಾಡಿ ಇಡುತ್ತಿದ್ದರು. ಆದರೆ ತುಪ್ಪವನ್ನು (ಶ್ರೀಮಂತರು ಬಿಟ್ಟು) ಮನುಷ್ಯರು ತಿನ್ನುವಂತಿರಲಿಲ್ಲ, ಅದು ದೇವರ ಪೂಜೆಗೆ ಅಥವಾ ಹೋಮಕ್ಕೆ ಮೀಸಲು. ಮಗಳು ಬಾಣಂತಿಯಾಗಿ ಬಂದರೆ ಅವಳಿಗೆ ತುಪ್ಪವನ್ನು ಬಡಿಸುವುದಿತ್ತು.

ಬೆಳಗ್ಗೆ ಆಸರಿಗೆ ಸುಮಾರಾಗಿ ದೋಸೆ ಅಥವಾ ತೆಳ್ಳವು. ದೋಸೆ ಎರೆದು ಕುತ್ರಿ ಹಾಕುವುದೇ 9 ಗಂಟೆಯ ತನಕವೂ ಒಂದು ಪೂರ್ಣಪ್ರಮಾಣದ ಕೆಲಸವಾಗುತ್ತಿತ್ತು. ಕೆಲವರ ಮನೆಯ ಪೂಜೆ ಸುದೀರ್ಘ; ಸಂಧ್ಯಾವಂದನೆಗೇ ತಾಸುಗಟ್ಟಲೆ ಸಮಯ ಹಿಡಿಯುತ್ತಿತ್ತು. ಸುತ್ತಮುತ್ತಲ ವಾತಾವರಣದಲ್ಲಿ ಬೆಳೆದ ದಾಸವಾಳ, ಕರವೀರ, ನಂಜಟ್ಲೆ, ಹುಲಿಮೀಸೆ, ಕೋಟೆ ಹೂವು, ಪುಷ್ಪಾಳಿ, ಕಾಯ್ಕಡಿ ಹೂವು, ನಿತ್ಯಪುಷ್ಪ, ತೇರಿನಚಂಡೆ ಹೂವು, ದೂರ್ವೆ ಇತ್ಯಾದಿ ಕೊಯ್ದು ತಂದು, ಗಂಧಮಂಗಲ ತೇಯ್ದಿಟ್ಟುಕೊಂಡು ಪೂಜೆ ನಡೆಯಬೇಕು. ದೇವರ ಮೂರ್ತಿಗಳಿಗೆ ಸ್ನಾನಮಾಡಿಸಿ ಗಂಧಮಂಗಲ ಹಚ್ಚಬೇಕು. ಒಂದೆರಡು ತಾಸಿನ ಕೆಲಸವದು. ಅನ್ನ ಮಾಡಿ ದೇವರಿಗೆ ಉಣಬಡಿಸುವ ಪದ್ಧತಿ ಇತ್ತು. ಸಾಯಂಕಾಲ ಭಜನೆ, ಹಾಲು ಮುಂದಿಟ್ಟು ದೇವರಿಗೆ ಪೂಜೆ. ಮನೆಯ ಹಿರಿಯರು ಮಕ್ಕಳಿಗೆ ಸಂಸ್ಕೃತ ಶ್ಲೋಕ, ದೇವರ ಸ್ತುತಿ, ವಿಷ್ಣು ಸಹಸ್ರನಾಮ ಇತ್ಯಾದಿಗಳನ್ನು ಹೇಳಿಕೊಡುತ್ತಿದ್ದರು. ಗಂಡು ಮಕ್ಕಳಿಗೆ ಹೆಚ್ಚಾಗಿ 8ನೇ ವರ್ಷಕ್ಕೆ ಉಪನಯನ, ಗಾಯತ್ರಿ ಮಂತ್ರದ ಬೋಧನೆ. ಗಾಯತ್ರಿ ಜಪವಾದ ನಂತರ, ಅಷ್ಟಾಕ್ಷರಿ ಮಾಡಿ ಪಂಚಾಕ್ಷರಿ ಹೇಳಬೇಕು. ಅವಾಚ್ಯ/ಅಶ್ಲೀಲ ಶಬ್ದಗಳನ್ನು ಹವ್ಯಕರು ಆಡುತ್ತಿದ್ದುದಿಲ್ಲ, ಅವು ಕೇಳಿಬಂದಿದ್ದು ನಂತರದಲ್ಲಿ.

ಅಡುಗೆ ಸರಳವಾದ ಕೆಲಸ. ಬೇಸಗೆಯಲ್ಲಿ ಕುಚ್ಚಲಕ್ಕಿ ತಂದು ವರ್ಷಕ್ಕೆ ಬೇಕಾಗುವಷ್ಟು ಮೂಡೆ ಕಟ್ಟಿಡುತ್ತಿದ್ದರು. ಹಾಗೆಯೇ ಬೆಲ್ಲದ ಡಬ್ಬಗಳನ್ನು ಹೊಗೆ ಅಟ್ಟದ ಮೇಲೆ ಪೇರಿಸಿಡುತ್ತಿದ್ದರು. ಮನೆಯಲ್ಲಿ ತೆಂಗಿನಕಾಯಿ ಇರುತ್ತಿತ್ತು. ದೊಡ್ಡ ಬೊಡ್ಡೆ ಅಥವಾ ಚರಿಗೆಯಲ್ಲಿ ಅಕ್ಕಿ ಹೊಯ್ದು ಅನ್ನ ಮಾಡುವುದು, ಮತ್ತೊಂದು ದೊಡ್ಡ ಅಗಲ ಪಾತ್ರೆಯಲ್ಲಿ ಹುಳಿ ಮಾಡುವುದು. ಆಗ ಯಾಕೋ ಭಾರಿ ಹಸಿವು, ಇಂದಿನ 6 ಜನರ ಊಟವನ್ನು ಹೆಚ್ಚು ಕಡಿಮೆ ಒಬ್ಬರೇ ಮಾಡಿಬಿಡುತ್ತಿದ್ದರು. ಅರ್ಧ ಕೊಳಗ ಕೇಸರಿಬಾತು ತಿನ್ನುವ ತಾಕತ್ತಾನಿಗಳಿದ್ದರು. ತರಕಾರಿ ತರುವ ಪದ್ಧತಿ ಇರಲಿಲ್ಲ. ಬಾಳೆದಿಂಡು, ಬಾಳೆಕಾಯಿ, ಮೊಟ್ಟೆ ಕೆಸವು, ಕರಿಕೆಸವು, ಪಂಜರ ಗಡ್ಡೆ, ಉಪ್ಪುನೀರಿಗೆ ಹಾಕಿಟ್ಟ ಮಾವಿನಕಾಯಿ, ಹಲಸಿನ ತೊಳೆ, ಮಗೆಕಾಯಿ, ಮನೆಯ ಸುತ್ತಮುತ್ತಲೇ ಬೆಳೆದ ಸವತೆ, ಬೆಂಡೆ, ಬದನೆ, ತೊಂಡೆಕಾಯಿ, ಬಸಳೆ ಇತ್ಯಾದಿ ಇರುತ್ತಿದ್ದವು. ತಂಬುಳಿ ಮಾಡಲಂತೂ ಎಲಬದಿಗೆ ಸೊಪ್ಪು, ಇಲಿಕಿವಿ ಸೊಪ್ಪು, ಮಾವಿನಕಾಯಿ, ಜುಮ್ಮನಕಾಳು ಇತ್ಯಾದಿ ಲಭ್ಯವಿದ್ದವು. ದಿನನಿತ್ಯದ ಅಡುಗೆಗೆ ಅನ್ನ, ಹುಳಿ, ತಂಬುಳಿ ಮತ್ತು ಒಂದು ಗೊಜ್ಜು. ಹೆಚ್ಚು ಕಡಿಮೆ ಸಂಜೆಗೆ ಪ್ರತ್ಯೇಕ ಅಡುಗೆ ಪದ್ಧತಿ ಇರಲಿಲ್ಲ. ಹವ್ಯಕರ ಅಡುಗೆ, ಸಿಹಿತಿಂಡಿಗಳು ಅಕ್ಕಿ ಪ್ರಧಾನವಾದಂಥವು-ಸೂಳಗಡವು, ಕಡಬು, ದೊಡ್ಡ ಹೀಗೆ.

ಹವ್ಯಕರದು ಆತಿಥ್ಯದಲ್ಲಿ ಎತ್ತಿದ ಕೈ. ಯಾರಾದರೂ ಬಂದರೆ, ಅವರಿಗೆ 'ಬಾರ' ಎಂದು ಹೇಳಲೇಬೇಕು. ಬಂದು ಕುಳಿತ ನಂತರ ಅವರಿಗೆ 'ಆಸರಿಗೆ ಬೇಕನ' ಎಂದು ಕೇಳಲೇಬೇಕು. ಕೂಡಲೇ, ಕನಿಷ್ಠಪಕ್ಷ ಬೆಲ್ಲ, ನೀರು ಕೊಡಲೇಬೇಕು. ಮಜ್ಜಿಗೆ ಇದ್ದವರು 'ಮಜ್ಜಿಗೆ ಕೊಡಲನ' ಎಂದು ಕೇಳುತ್ತಿದ್ದರು. ತಿಂಡಿ ತಿನ್ನುವ ಸಮಯದಲ್ಲಿ ಬಂದರೆ ಅವರು ಆಸರಿ ಕುಡಿಯಲೇಬೇಕು. ಕೆಲಸದವರು, ಬೇಡುವವರು ಕೂಡ ಇರಬಹುದು. ಊಟದ ಸಮಯದಲ್ಲಿ ಬಂದವರಿಗೂ ಅದೇ ಆತಿಥ್ಯ. ಅದೆಲ್ಲ ಮನೆಯ ಸಂಸ್ಕಾರದ ಪ್ರಶ್ನೆ. ಬೇಡುವವರಿಗೆ ಅಕ್ಕಿ ಹಾಕಿಯೇ ಕಳಿಸಬೇಕು, ಸಂಭಾವನೆಗೆ ಬರುವವರಿಗೆ ಅಡಕೆ ಕೊಟ್ಟೇ ಕಳಿಸಬೇಕು. ಹಬ್ಬ-ಹುಣ್ಣಿಮೆಗಳಿಗೆ ಸಂಬಂಧಿಗಳನ್ನು ಕರೆಯಲೇಬೇಕು. ನವರಾತ್ರಿಯ ವೇಳೆ 9 ದಿನಗಳಲ್ಲಿ ಸುಮಾರು ಸಾವಿರ ಜನ ಊಟ ಮಾಡುತ್ತಿದ್ದರು. ಪ್ರತಿ ಸಂಬಂಧಿಕರ ಮನೆಗೂ ಹೋಗಿ 'ಊಟಕ್ಕೆ ಬನ್ನಿ' ಎಂದು ಕರೆಯಲೇಬೇಕು. ಹಾಗೆ ಬಂದವರಿಗೆ ಊಟ ಹಾಕಿ, ತೆಂಗಿನಕಾಯಿ ಇತ್ಯಾದಿ ನೀಡಿ ಕಳಿಸಲೇಬೇಕು.

ಹವ್ಯಕರ ಕಲೆ, ಸಾಹಿತ್ಯ, ಜಾನಪದ ಶ್ರೀಮಂತವಾದುದು. ಮುಂಜಿಗೆ, ಮದುವೆಗೆ, ಸತ್ಯ ನಾರಾಯಣನಿಗೆ, ಗಣಪತಿಗೆ ಹಾಡುವ ಹಳೆಯ ಕಾಲದ, ಬಾಯಿಂದ ಬಾಯಿಗೆ ಹರಿದುಬಂದ ಹಾಡುಗಳಿವೆ. ಮದುವೆ ಸಮಯದಲ್ಲಿ ಪರಸ್ಪರ ಕಾಲೆಳೆಯುವ 'ಹಳಿದ ಹಾಡು'ಗಳಿವೆ. ಯಕ್ಷಗಾನವು ಸಾಂಸ್ಕೃತಿಕ ಪ್ರಪಂಚಕ್ಕೆ ಹವ್ಯಕರ ಕೊಡುಗೆ. ಕಲೆಯ ಶ್ರೀಮಂತಿಕೆಯನ್ನು ಹೆಚ್ಚಿಸಿದ ವರು ಹವ್ಯಕರು. ಕೆರೆಮನೆ ಶಿವರಾಮ ಹೆಗಡೆ, ಶೇಣಿ ಗೋಪಾಲಕೃಷ್ಣ ಭಟ್ಟ, ಕೆರೆಮನೆ ಶಂಭು ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ ಹೀಗೆ ಹಲವು ಹೆಸರುಗಳು ಇದಕ್ಕೆ ಸಾಕ್ಷಿ. ಹವ್ಯಕರು ಮೂಲತಃ ಬಿಸಿನೆಸ್ ಮನಸ್ಥಿತಿಯವರಲ್ಲ, ಕೃಷಿ, ಶಿಕ್ಷಣ, ವೈದ್ಯಕೀಯ, ಕಾನೂನು, ಕಲೆ, ತಂತ್ರಜ್ಞಾನ ಇವು ಹವ್ಯಕರಿಗೆ ಹೆಚ್ಚು ಹೊಂದಿಕೊಳ್ಳುವ ಕ್ಷೇತ್ರಗಳು. ರಾಜಕೀಯದಲ್ಲಿದ್ದರೂ ತಮ್ಮ ಮೂಲ ಮೌಲ್ಯಗಳನ್ನು, ಅಂದರೆ ಉದಾರತೆ, ಸಂಕೋಚ, ವೈಯಕ್ತಿಕ ಘನತೆ ಇವನ್ನು ಬಿಡಲು ಹವ್ಯಕರಿಗೆ ಸಾಧ್ಯವಾಗುವುದಿಲ್ಲ!

(ಲೇಖಕರು ಮಾಜಿ ಪ್ರಾಂಶುಪಾಲರು ಮತ್ತು ಸಂವಹನಾ ಸಮಾಲೋಚಕರು)

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್
naadigru@gmail.com

- **ಬ್ಯಾಂಕ್‌ನಿಂದ ಹಣ, ಚಿನ್ನಾಭರಣ ಕೊಂಡೊಯ್ಯುವವರ ಗಮನ ಬೇರೆಡೆ ಸೆಳೆದು ದೋಚುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿದ ಕೆ.ಆರ್.ಪುರಂ ಠಾಣೆ ಪೊಲೀಸರು: ಸುದ್ದಿ**
- ಐದು ವರ್ಷಕ್ಕೊಮ್ಮೆ ಜನಕ್ಕೆ ಹೆಂಡ ಕುಡಿಸಿ ಮತಗಳನ್ನು ದೋಚುವವರನ್ನು...?

- **ನೂತನ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು 3 ಲಕ್ಷ ರು. ಲಂಚ ಪಡೆದ ಬೆಸ್ಕಾಂ ಸಹಾಯಕ ಎಂಜಿನಿಯರ್‌ನನ್ನು ಬಂಧಿಸಿದ ಲೋಕಾಯುಕ್ತ ಪೊಲೀಸರು: ಸುದ್ದಿ**
- ಈ ಸುದ್ದಿಗೆ ''ಬೆಸ್ಕಾಂ ಎಂಜಿನಿಯರ್‌ಗೆ ಲೋಕಾಯುಕ್ತ ಪೊಲೀಸರ ಷಾಕ್!'' ಎಂದು ಪ್ರತಿಕ್ರಿಯಿಸುವುದೋ ಅಥವಾ ''ಲೋಕಾಯುಕ್ತ ಪೊಲೀಸರಿಂದ 'ಕರೆಂಟು' ಹೊಡೆಸಿಕೊಂಡ ಬೆಸ್ಕಾಂ ಎಂಜಿನಿಯರ್'' ಎಂದು ಉದ್ಗರಿಸುವುದೋ ಎಂಬುದು ನಿಮಗೆ ಬಿಟ್ಟಿದ್ದು!

- **ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತರ ಹೆಸರಿನಲ್ಲಿದ್ದ ಖಾತೆಗೆ ಹಂಚಿಕೆ ಮಾಡಲಾಗಿದ್ದ ಬಹುಕೋಟಿ ಮೊತ್ತದ ಡಿ.ಡಿ.ಗಳನ್ನು ಬ್ಯಾಂಕ್‌ಗೆ ಹಾಕಿ, ಪಾಲಿಕೆಯ ಚೆಕ್‌ಗಳ ಮೇಲೆ ಆಯುಕ್ತರ ನಕಲಿ ಸಹಿ ಹಾಕಿ, 36 ಲಕ್ಷಕ್ಕೂ ಹೆಚ್ಚು ರುಪಾಯಿ ದುರ್ಬಳಕೆ ಮಾಡಿಕೊಂಡಿದ್ದ ಆರೋಪಿಗಳ ಬಂಧನ: ಸುದ್ದಿ**
- ಶಾರುಖ್ ಖಾನ್ ಅಭಿನಯದ 'ದಿಲ್‌ವಾಲೆ ದುಲ್ಹನಿಯಾ ಲೇ ಜಾಯೆಂಗೇ' ಚಲನಚಿತ್ರವನ್ನು ಸಂಕ್ಷಿಪ್ತವಾಗಿ 'ಡಿಡಿಎಲ್‌ಜೆ' ಎಂದು ಕರೆಯುವುದು ವಾಡಿಕೆ; ಈ ಖತರ್‌ನಾಕ್‌ಗಳು ಯಾರದ್ದೋ ಹೆಸರಿನ 'ಡಿಡಿ'ಗಳನ್ನು ಹೀಗೆ 'ಲೇ ಜಾಯೆಂಗೇ' ಅಂದುಕೊಂಡು ಎಗರಿಸಿದ್ದರಿಂದ ಇವರಿಗೂ 'ಡಿಡಿಎಲ್‌ಜೆ' ಎಂದು ಕರೆಯಬಹುದೇ?!

- **ರಾಜ್ಯ ಕಾಂಗ್ರೆಸ್‌ನಲ್ಲಿ ನಿಲ್ಲದ ಬಣ-ಬಡಿದಾಟ. ಹೈಕಮಾಂಡ್ ಸೂಚನೆ ಬಳಿಕವೂ ನಿಲ್ಲದ 'ಟಾಕ್ ವಾರ್': ಸುದ್ದಿ**
- ಏನೂ ಮಾಡೋಕ್ಕಾಗಲ್ಲ, ಮಳೆಯ ಸುರಿತ ನಿಂತ ಬಳಿಕವೂ, ಮರದಿಂದ ಹನಿಗಳು ಉದುರುವುದಿದೆ..!

- **ಧರ್ಮಗುರುವಾಗಿದ್ದುಕೊಂಡು ಭಕ್ತರಿಗೆ ಹಿತವಚನ ಹೇಳುವ ಬದಲು, ಕುಡಿದು ಅಮಲೇರಿಸಿಕೊಂಡು ರಸ್ತೆಯಲ್ಲಿ ತೇಲಾಡಿದ ಸ್ವಾಮೀಜಿ: ಸುದ್ದಿ**
- ಈಗ ಭಕ್ತರೇ ಅವರಿಗೆ ಹಿತವಚನ ಹೇಳಬೇಕಾಗಿ ಬಂತಲ್ಲಾ ಶಿವನೇ!

- **ದೆಹಲಿ ವಿಧಾನಸಭಾ ಚುನಾವಣೆಗೆ ಹೊಸದಿಲ್ಲಿ ಕ್ಷೇತ್ರದಿಂದ ಆಮ್ ಆದ್ಮಿ ಪಕ್ಷದ ಅರವಿಂದ ಕೇಜ್ರಿವಾಲ್ ನಾಮಪತ್ರ ಸಲ್ಲಿಕೆ: ಸುದ್ದಿ**
- ದೆಹಲಿ ಮತದಾರರು 'ಕಮಲ'ಳಿಗೆ ಒಲಿಯುವರೋ ಅಥವಾ 'ಅರವಿಂದ'ನಿಗೆ ಅಚ್ಚೊತ್ತುವರೋ ಎಂಬುದು ಕನ್‌ಫರ್ಮ್ ಆಗಲು ಸಾಕಷ್ಟು ಸಮಯವಿದೆ!

- **ವಿವಾದಿತ ಅಬಕಾರಿ ನೀತಿಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮಾಜಿ ಸಿಎಂ ಮತ್ತು ಆಮ್ ಆದ್ಮಿ ಪಕ್ಷದ ಸಂಚಾಲಕ ಅರವಿಂದ ಕೇಜ್ರಿವಾಲ್ ಮತ್ತು ಮಾಜಿ ಡಿಸಿಎಂ ಮನೀಷ್ ಸಿಸೋಡಿಯಾರ ವಿಚಾರಣೆಗೆ ಜಾರಿ ನಿರ್ದೇಶನಾಲಯಕ್ಕೆ ಅನುಮತಿಸಿದ ಕೇಂದ್ರ ಗೃಹ ಸಚಿವಾಲಯ: ಸುದ್ದಿ**
- ಅಂದ ಹಾಗೆ, ಫೆಬ್ರವರಿ 5ರಂದು ದೆಹಲಿ ವಿಧಾನಸಭಾ ಚುನಾವಣೆ ನಡೆಯಲಿದೆ ಎಂಬುದು ಓದುಗರ ಗಮನಕ್ಕೆ. ಮಿಕ್ಕಿದ್ದನ್ನು ನೀವೇ ಊಹಿಸಿಕೊಳ್ಳಿ!

ಬಿಕ್ಕಟ್ಟಿನಲ್ಲಿ ಸಿಲುಕಿರುವ ನಾವೀಗ ಚೇತರಿಸಿಕೊಳ್ಳಬೇಕಿದೆ

ವಾಸ್ತವನೋಟ
ನಂಜುಂಡ ಪ್ರತಾಪ್ ಪಾಲೆಕಂಡ
vveditoped@gmail.com

ನಿಜ, ನಾವೀಗ ಬಿಕ್ಕಟ್ಟಿನಲ್ಲಿ ಸಿಲುಕಿದ್ದೇವೆ, ಅಂಥದೊಂದು ಹಾದಿಯಲ್ಲೇ ಹೆಜ್ಜೆ ಹಾಕುತ್ತಿದ್ದೇವೆ. ಇದು ಬಿಕ್ಕಟ್ಟಿನ ಹಾದಿ ಎಂದು ಗೊತ್ತಿದ್ದರೂ ನಡಿಗೆಯನ್ನು ನಿಲ್ಲಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಹಾಗಂತ, ಇದು ನಮ್ಮೊಬ್ಬರದೇ ಸಮಸ್ಯೆ ಎಂದುಕೊಳ್ಳಬೇಕಿಲ್ಲ, ವಿಶ್ವದ ಬಹುತೇಕ ದೇಶಗಳದ್ದು ಇಂಥದೇ ಪರಿಸ್ಥಿತಿ. ಹೀಗಾಗಿ, ಸಮಷ್ಟಿ ದೃಷ್ಟಿಕೋನ ಇಟ್ಟುಕೊಂಡು ವಿಶ್ವದ ಪ್ರಸಕ್ತ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಯತ್ನಿಸೋಣ.

ಮೊದಲಿಗೆ, ಕಳೆದ 50 ವರ್ಷಗಳಿಂದೀಚೆಗೆ, ವಿಶ್ವದ ಜನಸಂಖ್ಯೆಯು ದುಪ್ಪಟ್ಟಾಗಿದೆ, 4 ಶತಕೋಟಿಯಿಂದ 8 ಶತಕೋಟಿಗೆ ಅದು ಬಂದು ಮುಟ್ಟಿದೆ. 100ಕ್ಕೂ ಹೆಚ್ಚು ದೇಶಗಳಲ್ಲಿ ಚುನಾವಣೆ ನಡೆದಿದ್ದಕ್ಕೆ ಮತ್ತು ವಿಶ್ವದ ಅರ್ಧಕ್ಕೂ ಹೆಚ್ಚಿನ ಸಂಖ್ಯೆಯ ಜನರು ಅದರಲ್ಲಿ ಪಾಲ್ಗೊಂಡಿದ್ದಕ್ಕೆ ನಾವು ಸಾಕ್ಷಿಯಾಗಿದ್ದೇವೆ. ಹೀಗೆ ಚುನಾವಣೆ ನಡೆಸಿದ ದೇಶಗಳ ಪೈಕಿ ಶೇ.80ರಷ್ಟು ದೇಶಗಳಲ್ಲಿ ಆಡಳಿತಾತ್ಮಕ ಬದಲಾವಣೆ ಕಂಡು ಬಂದಿದ್ದೇನೋ ಖರೆ; ಆದರೆ, ಭಾರತದಲ್ಲಿ ಹೇಳಿಕೊಳ್ಳುವಂಥ ಬದಲಾವಣೆಯೇನೂ ಆಗಲಿಲ್ಲ. ಅಂದರೆ, ಭಾರತದಲ್ಲಿನ ಚುನಾವಣಾ ಫಲಿತಾಂಶವು, ಆಡಳಿತಾರೂಢ ಪಕ್ಷಕ್ಕೆ ದಕ್ಕಿದ ಮತಗಳನ್ನು ತಗ್ಗಿಸಿದ್ದು ಬಿಟ್ಟರೆ ಹಾಗೂ ಆಡಳಿತ ವ್ಯವಸ್ಥೆಯ ರಚನೆಯಲ್ಲಿ ಕೊಂಚ ಮಟ್ಟಿಗಿನ ಬದಲಾವಣೆ ತಂದಿದ್ದು ಬಿಟ್ಟರೆ, ಮಿಕ್ಕ ದೇಶಗಳಂತೆ ಅಧಿಕಾರಸ್ಥರ ಸಾರಾಸಗಟು ಬದಲಾವಣೆಯನ್ನೇನೂ ಅದು ತರಲಿಲ್ಲ.

ಪ್ರಮುಖವಾದುದು ಎನ್ನಬಹುದಾದ 10 'ಹವಾಮಾನ ವಿಪತ್ತುಗಳು' ಜಾಗತಿಕ ಮಟ್ಟದಲ್ಲಿ ಬರೋಬ್ಬರಿ 288 ಶತಕೋಟಿ ಡಾಲರ್‌ನಷ್ಟು ಹಾನಿಯನ್ನುಂಟು ಮಾಡಿದವು ಮತ್ತು ಈ ಬಾಬತ್ತಿನಲ್ಲಿ ಭಾರತವೊಂದರಲ್ಲೇ 2803ರಷ್ಟು ಜೀವನಷ್ಟವಾದವು, ಅದಕ್ಕೆ ಪರಿಹಾರಾರ್ಥವಾಗಿ 15,000 ಕೋಟಿ ರೂಪಾಯಿಗಳಷ್ಟು ನೆರವನ್ನು ನೀಡಬೇಕಾಗಿ ಬಂತು. ಎಲ್ಲರಿಗೂ ಗೊತ್ತಿರುವಂತೆ, ಭಾರತದಲ್ಲಿ ಉದ್ಯೋಗಸ್ಥರ ನಿವೃತ್ತಿ ವಯಸ್ಸು 58ರಿಂದ 60ರ ವಯೋಮಾನದ ಒಳಗೆ ನಿಗದಿಯಾಗಿದೆ. ಆದರೆ, ರಾಜ್ಯದ ನ್ಯಾಯಾಲಯಗಳಲ್ಲಿನ ನ್ಯಾಯಾಧೀಶರು 62ನೇ ವರ್ಷದಲ್ಲೂ ಮತ್ತು ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು 65ರ ವರ್ಷದಲ್ಲೂ ನಿವೃತ್ತಿ ಹೊಂದುತ್ತಾರೆ. ಇನ್ನು ನಮ್ಮ ರಾಜಕಾರಣಿಗಳ ವಿಷಯವನ್ನಂತೂ ಕೇಳುವುದೇ ಬೇಡ; ಶಾಸಕರು ತಮಗೆ 92 ವರ್ಷ ವಯಸ್ಸಾಗುವವರೆಗೆ ಮತ್ತು ಸಂಸದರು 82 ವರ್ಷವಾಗುವವರೆಗೆ ಸಂಬಳವನ್ನು ಪಡೆಯುತ್ತಲೇ ಇರುವಂಥ ಸನ್ನಿವೇಶಕ್ಕೆ ನಾವು ಸಾಕ್ಷಿಯಾಗಿದ್ದೇವೆ. ಇದು, 72.23 ವರ್ಷಗಳ ಸರಾಸರಿ ಜೀವಿತಾವಧಿಯನ್ನು ಹೊಂದಿರುವ ನಮ್ಮ ರಾಷ್ಟ್ರದಲ್ಲಿ, ನಮ್ಮ ರಾಜಕಾರಣಿಗಳಿಗೆ ದಕ್ಕಿರುವ ವಿಶೇಷ ಸೌಲಭ್ಯ ಎನ್ನಲಡ್ಡಿಯಿಲ್ಲ.

ಕಳೆದ 50 ವರ್ಷಗಳಲ್ಲಿ, ಜನಸಂಖ್ಯೆಯು ದ್ವಿಗುಣಗೊಂಡಿದ್ದರೂ, ಸಾರ್ವಜನಿಕ ವಲಯದ ಉದ್ಯೋಗಗಳು ಅಥವಾ ಸರಕಾರಿ ಉದ್ಯೋಗಗಳಲ್ಲಿ ಹೆಚ್ಚಳವೇನೂ ಆಗಿಲ್ಲ; ಬದಲಿಗೆ, ಒಟ್ಟು ಉದ್ಯೋಗಾವಕಾಶಗಳ ಪ್ರಮಾಣವು ಶೇ.35ರಿಂದ ಶೇ.25ಕ್ಕೆ ಕುಗ್ಗಿದೆ ಮತ್ತು ಅದು ಕುಗ್ಗುತ್ತಲೇ ಸಾಗಿದೆ. ಸಾಲದೆಂಬಂತೆ, 2024ರಲ್ಲಿ, ಸಾರ್ವಜನಿಕ ವಲಯದ ಇನ್ನೂ ಮೂರು ಉದ್ಯಮಗಳು ಬಂಡವಾಳ ಹಿಂತೆಗೆತಕ್ಕೆ ಸಾಕ್ಷಿಯಾದವು ಹಾಗೂ ಒಟ್ಟಾರೆಯಾಗಿ ಇವು 1000ಕ್ಕಿಂತ ಕಡಿಮೆಯಿರುವ ಉದ್ಯೋಗಗಳನ್ನು ಹೊಂದಿದ್ದವು ಎಂಬುದು ಗಮನಾರ್ಹ. ಭಾರತ ಸರಕಾರದ 2024ರ ವಾರ್ಷಿಕ ವರದಿಯೇ ಸೂಚಿಸುವಂತೆ, ದೇಶದ ಯುವಪೀಳಿಗೆಯು ತನ್ನ ಕಾರ್ಯಭಾರದಲ್ಲಿ ಅರ್ಥಪೂರ್ಣವಾಗಿ ತೊಡಗಿಸಿಕೊಳ್ಳುವಂತಾಗಲು ಭಾರತವು ವಾರ್ಷಿಕವಾಗಿ ಏನಿಲ್ಲವೆಂದರೂ 75 ಲಕ್ಷಕ್ಕೂ ಹೆಚ್ಚು ಕೃಷಿಯೇತರ (ಅಥವಾ ತೋಟಗಾರಿಕಾ ಕ್ಷೇತ್ರವನ್ನು ಹೊರತುಪಡಿಸಿದ) ವಲಯದ ಉದ್ಯೋಗಗಳನ್ನು ಸೃಷ್ಟಿಸಬೇಕಾದ ಅಗತ್ಯವಿದೆ.

ಪಟ್ಟೀಕರಣಕ್ಕೆ ಒಳಗಾಗಿರುವ ಅಥವಾ 'ಲಿಸ್ಟೆಡ್' ಭಾಗ್ಯ ದಕ್ಕಿಸಿಕೊಂಡಿರುವ ಅಗ್ರಗಣ್ಯ 100 ಕಂಪನಿಗಳ ಒಟ್ಟಾರೆ ಮಾರುಕಟ್ಟೆ ಬಂಡವಾಳದ ಪ್ರಮಾಣವು ಸುಮಾರು 5.17 ಟ್ರಿಲಿಯನ್ ಡಾಲರ್‌ನಷ್ಟು ಇದ್ದು, ಇದು ವಿಶ್ವದ ಅಗ್ರಗಣ್ಯ ಆರ್ಥಿಕತೆಗಳ ಪೈಕಿ 3ನೇ ಸ್ಥಾನದಲ್ಲಿರುವ ಜರ್ಮನಿಯಲ್ಲಿ ಕಾಣಬರುವುದಕ್ಕಿಂತ ಹೆಚ್ಚಿನದಾಗಿದೆ. ಈ ಕಂಪನಿಗಳು 2024ರ ವರ್ಷಾಂತ್ಯದ ವೇಳೆಗೆ ಇದ್ದಂತೆ, 50 ಲಕ್ಷಕ್ಕೂ ಸ್ವಲ್ಪವೇ ಹೆಚ್ಚು ಪ್ರಮಾಣದ ಉದ್ಯೋಗಗಳನ್ನು ಹೊಂದಿವೆ.

ಸ್ವಾತಂತ್ರ್ಯ ಸಿಕ್ಕ ನಂತರ ಭಾರತವು, ಸಮಾಜವಾದಿ ಮಾದರಿಯನ್ನು ಅನುಸರಿಸಿತು ಮತ್ತು ಇದರನ್ವಯ ಸರಕಾರವು ದೇಶದಲ್ಲಿನ ಅತಿದೊಡ್ಡ 'ಉದ್ಯೋಗ ಸೃಷ್ಟಿಕರ್ತ' ಎನಿಸಿಕೊಂಡಿತು. 1991ರಲ್ಲಿ ಭಾರತದ ಆರ್ಥಿಕತೆಯನ್ನು ಮುಕ್ತವಾಗಿಸಿದ ಪರಿಣಾಮ, ವ್ಯವಸ್ಥೆಯ 'ಕ್ರಿಯಾಶಾಸ್ತ್ರ'ದಲ್ಲಿ, ಸಾಮಾಜಿಕ-ಆರ್ಥಿಕ ಸ್ವರೂಪದಲ್ಲಿ ಗಮನಾರ್ಹ ಮತ್ತು ಕ್ರಾಂತಿಕಾರಕ ಬದಲಾವಣೆಗಳು ಕಾಣಲಾರಂಭಿಸಿದವು ಹಾಗೂ ಖಾಸಗಿ ವಲಯವು ಹೆಚ್ಚೆಚ್ಚು ಉದ್ಯೋಗಗಳನ್ನು ಸೃಷ್ಟಿಸಲು ಶುರುಮಾಡಿತು. ಮೇಲೆ ಉಲ್ಲೇಖಿಸಿರುವಂತೆ, 100 ಅಗ್ರಗಣ್ಯ ಲಿಸ್ಟೆಡ್ ಕಂಪನಿಗಳಲ್ಲಿ 50 ಲಕ್ಷಕ್ಕೂ ಹೆಚ್ಚು ಉದ್ಯೋಗಗಳಿದ್ದರೆ, ಈ ಪಟ್ಟಿಯ ಕಂಪನಿಗಳ ಪೈಕಿ ಶೇ.13ರಷ್ಟಿರುವ ಸಾರ್ವಜನಿಕ ವಲಯದ ಉದ್ಯಮಗಳ ತೆಕ್ಕೆಯಲ್ಲಿರುವ ಉದ್ಯೋಗಗಳ ಪ್ರಮಾಣ ಶೇ.5ಕ್ಕಿಂತ ಕಮ್ಮಿಯಿದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿಯೆಂದರೆ, ಕಳೆದ 5 ವರ್ಷಗಳಲ್ಲಿ ಈ ಕಂಪನಿಗಳಿಂದ ಸೇರ್ಪಡೆಯಾದ ಉದ್ಯೋಗಗಳ ಒಟ್ಟು ಸಂಖ್ಯೆ, ಅಂದರೆ 2019ರಿಂದ 2024ರವರೆಗೆ ಉದ್ಯೋಗಾವಕಾಶಗಳಲ್ಲಿ ಆದ ಹೆಚ್ಚಳವು 9 ಲಕ್ಷಕ್ಕಿಂತ ಕಡಿಮೆಯಿದೆ. ಇದು ಶೇ.21ರಷ್ಟು ಹೆಚ್ಚಳವನ್ನೇನೋ ದಾಖಲಿಸಿದೆ ಎನ್ನಿ. ಆದರೆ, ಇಲ್ಲಿ ಚಿಂತೆಗೆ ಕಾರಣವಾಗಿರುವ ಸಂಗತಿಯೆಂದರೆ, ಈ ಕಂಪನಿಗಳಲ್ಲಿ ಕಾಣಬರುವ ಸುಮಾರು ಶೇ.80ರಷ್ಟು ನೇಮಕಾತಿಗಳು, 'ಬಾಹ್ಯವಾಗಿ' ಮಾಡಿಕೊಂಡಂಥವು (ಅಂದರೆ, ತಮ್ಮಂಥದೇ ಮತ್ತೊಂದು ಕಂಪನಿಯಲ್ಲಿ ಅಥವಾ ಅನ್ಯಶೈಲಿಯ ಕಂಪನಿಯಲ್ಲಿ ಅದೇ ಸ್ವರೂಪದ ಉದ್ಯೋಗವನ್ನು ನಿರ್ವಹಿಸುತ್ತಿರುವವರನ್ನು ಹೆಕ್ಕಿ ನೇಮಿಸಿಕೊಳ್ಳುವಿಕೆ) ಆಗಿವೆ; ಹೀಗೆ ಮಾಡುವ ಮೂಲಕ ಸದರಿ ಕಂಪನಿಗಳು ತಮ್ಮ ತೆಕ್ಕೆಗೆ 'ಅನುಭವಿ ಕಾರ್ಯಪಡೆ'ಯನ್ನು ಸೇರ್ಪಡೆ ಮಾಡಿಕೊಳ್ಳುತ್ತಿವೆ, ಅಷ್ಟೇ. ಹೀಗಾಗಿ, 'ಹೊಸತು' ಎಂಬ ಹಣೆಪಟ್ಟಿ ಹೊತ್ತಿರುವ ಉದ್ಯೋಗಗಳ ಸಂಖ್ಯೆ ಕೇವಲ ಶೇ.20ರಷ್ಟು ಅಥವಾ ಅದಕ್ಕಿಂತ ಕಮ್ಮಿ ಎನ್ನಲಡ್ಡಿಯಿಲ್ಲ. ಅಂದರೆ, ಕಳೆದ 5 ವರ್ಷಗಳಲ್ಲಿ ಹೊಮ್ಮಿರುವ ಹೊಸ ಉದ್ಯೋಗಗಳ ಸಂಖ್ಯೆ 2 ಲಕ್ಷಕ್ಕಿಂತಲೂ ಕಮ್ಮಿ. ಪರಿಸ್ಥಿತಿ ಹೀಗಿರುವಾಗ, ಭಾರತದ ಕಾರ್ಪೊರೇಟ್ ಪ್ರಪಂಚವು (ಅಂದರೆ ಬೃಹತ್ ಉದ್ಯಮಗಳು) ದೇಶದ ಯುವಪೀಳಿಗೆಗಾಗಿ ಹೆಚ್ಚೆಚ್ಚು ಉದ್ಯೋಗಗಳನ್ನು ಸೃಷ್ಟಿಸುತ್ತದೆ ಎಂದು ಸರಕಾರವು ಹೇಗೆ ತಾನೇ ಆಲೋಚಿಸುತ್ತಾ ಕೂರಲು ಸಾಧ್ಯ? ಸರಕಾರವು ಸೃಷ್ಟಿಸುತ್ತಿರುವ ಉದ್ಯೋಗಗಳ ಸಂಖ್ಯೆಯು ಕಮ್ಮಿಯಿದೆ ಮತ್ತು ಆ ಪ್ರಮಾಣವು ಖಾಸಗಿ ವಲಯವು ಸೃಷ್ಟಿಸುತ್ತಿರುವುದಕ್ಕಿಂತಲೂ ತುಂಬಾ ಕಮ್ಮಿಯಿದೆ ಎಂಬ ವಾಸ್ತವವನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ. ಭಾರತದಲ್ಲಿ 'ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಗಾತ್ರದ' ಉದ್ಯಮಗಳ ಅಭಿವೃದ್ಧಿಗೆ ಸಮರ್ಪಿತವಾದ 'ಎಂಎಸ್‌ಎಂಇ' ಸಚಿವಾಲಯವು ಪ್ರಾರಂಭವಾಗಿ 25 ವರ್ಷಗಳಾಗಿವೆ. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳು (ಎಂಎಸ್‌ಎಂಇಗಳು) ಹೆಚ್ಚಿನ ಉದ್ಯೋಗಗಳನ್ನು ಸತತವಾಗಿ ಸೃಷ್ಟಿಸುವಲ್ಲಿ ಸಮರ್ಥವಾಗಿವೆ. ತುಲನಾತ್ಮಕವಾಗಿ ಹೇಳುವುದಾದರೆ, 2019ರ ವರ್ಷದಲ್ಲಿ ಎಂಎಸ್‌ಎಂಇ ವಲಯದಿಂದ 11.4 ಕೋಟಿಯಷ್ಟು ಉದ್ಯೋಗಗಳು ಸೃಷ್ಟಿಯಾಗಿದ್ದರೆ, 2024ರಲ್ಲಿ ಈ ಪ್ರಮಾಣವು ದುಪ್ಪಟ್ಟಿಗಿಂತ ಹೆಚ್ಚಾಗಿ 24.3 ಕೋಟಿಯನ್ನು ಮುಟ್ಟಿತು. ಸರಕಾರವು ತನ್ನ ನಿವ್ವಳ ಸಾಲದ ಶೇ.40ರಷ್ಟು ಭಾಗವು ಆದ್ಯತಾ ವಲಯಗಳಿಗೆ ತಲುಪುವಂತಾಗುವುದನ್ನು ಕಡ್ಡಾಯಗೊಳಿಸುತ್ತದೆ ಮತ್ತು ಈ ಪೈಕಿಯ ಸಿಂಹಪಾಲನ್ನು ಎಂಎಸ್‌ಎಂಇ ವಲಯಕ್ಕಾಗಿ ಮೀಸಲಿಡುತ್ತದೆ. ಮೇಲ್ನೋಟಕ್ಕೆ ಇದು ಉತ್ತೇಜಕವಾಗಿ ಕಂಡುಬಂದರೂ, 2023ರಲ್ಲಿ ಎಂಎಸ್‌ಎಂಇ ವಲಯಕ್ಕೆ ನೀಡಲಾದ ಸಾಲದ ಅನುಪಾತವು ಶೇ.14.9ರಷ್ಟಿತ್ತು. ಅಂದರೆ, ಅದು ನಿಗದಿಪಡಿಸಲಾದ ಪ್ರಮಾಣದ ಶೇ.50ರಷ್ಟು ಕೂಡ ಇರಲಿಲ್ಲ. 2024ರಲ್ಲಿ ಈ ಪ್ರಮಾಣ ಶೇ.15.5ರಷ್ಟಿತ್ತು; ಹಿಂದಿನ ವರ್ಷಕ್ಕೆ ಹೋಲಿಸಿದರೆ ಪ್ರಮಾಣದಲ್ಲಿ ಆಂಶಿಕ ಹೆಚ್ಚಳ ಆಗಿರುವುದೇನೋ ಖರೆ, ಆದರೆ ಅಷ್ಟಾಗಿಯೂ ಅದು ಸರಕಾರವು ಕಡ್ಡಾಯಪಡಿಸಿರುವ ಪ್ರಮಾಣದ ಅರ್ಧಕ್ಕಿಂತಲೂ ಕಡಿಮೆಯಿದೆ ಎಂಬುದು ವಾಸ್ತವ. ಈ ಎಲ್ಲ ಅಂಶಗಳನ್ನು ಅವಲೋಕಿಸಿದಾಗ, ಬಂಡವಾಳದ 'ಸಮರ್ಥ' ಲಭ್ಯತೆ ಎಂಬುದು ಎಂಎಸ್‌ಎಂಇಗಳ ಪಾಲಿಗೆ ಒಂದು ದೊಡ್ಡ ಸವಾಲಾಗೇ ಉಳಿದಿರುವುದು ಅರಿವಾಗುತ್ತದೆ. 2019ರ ವರ್ಷದಿಂದ ಈಚೆಗೆ, 35,000ಕ್ಕೂ ಹೆಚ್ಚಿನ ಎಂಎಸ್‌ಎಂಇ ಗಳು ಬಾಗಿಲು ಬಡಿದುಕೊಂಡಿವೆ. ಈ ಪೈಕಿ ಮೂರನೇ ಎರಡರಷ್ಟು ಭಾಗದವು ಬಂದ್ ಆಗಿದ್ದು ಕೋವಿಡ್ ಪಿಡುಗಿನ ಕಾರಣದಿಂದಾಗಿ. ವ್ಯಾಪಾರ-ವ್ಯವಹಾರದ ವಿಧಾನಕ್ಕೆ ಸಂಬಂಧಿಸಿದ ಮತ್ತು 2019ರ ಅಕ್ಟೋಬರ್‌ನಲ್ಲಿ ಪ್ರಕಟಗೊಂಡ, 'ಡೂಯಿಂಗ್ ಬಿಸಿನೆಸ್ ರಿಪೋರ್ಟ್, 2020' (ಡಿಬಿಆರ್) ಎಂಬ ವಿಶ್ವಬ್ಯಾಂಕಿನ ವರದಿಯಲ್ಲಿ ಭಾರತವು 63ನೇ ಸ್ಥಾನವನ್ನು ದಕ್ಕಿಸಿಕೊಂಡಿತ್ತು. 2014ರ ವರ್ಷಕ್ಕೆ ಸಂಬಂಧಿಸಿ ಈ ಡಿಬಿಆರ್ ವರದಿ ಯಲ್ಲಿ 142ನೇ ಶ್ರೇಯಾಂಕದಲ್ಲಿದ್ದ ಭಾರತವು ಕಾಲ ಕ್ರಮೇಣ ಸುಧಾರಣೆಗೊಂಡು 2019ರಲ್ಲಿ 63ನೇ ಸ್ಥಾನವನ್ನು ಮುಟ್ಟಿದೆ ಎಂಬುದನ್ನಿಲ್ಲಿ ಗಮನಿಸಬೇಕು. ಈ ಬೆಳವಣಿಗೆಯನ್ನು ನಾವು ಸಂಭ್ರಮಿಸಲೂ ಬಹುದು ಅಥವಾ ನಾವು ಏಕೆ ಮತ್ತು ಎಲ್ಲಿ ಹಿಂದುಳಿದಿದ್ದೇವೆ ಎಂಬ ಸೂಕ್ಷ್ಮ ಅವಲೋಕನದ ಲೆಕ್ಕಾಚಾರವನ್ನೂ ಮಾಡಬಹುದು. ಉತ್ಪಾದಕತೆಯ ಹೆಚ್ಚಳವು ಬೃಹತ್ ಕಂಪನಿಗಳ ಪಾಲಿಗೆ ಮೌಲ್ಯದ ಸೃಷ್ಟಿಯಲ್ಲಿ ತನದೇ ಆದ ಕೊಡುಗೆ ನೀಡುತ್ತಿರುವುದರ ಜತೆಗೇ, ಹೊಸ ಉದ್ಯೋಗಗಳ ಸೃಷ್ಟಿಯ ಮೇಲೆ ನಕಾರಾತ್ಮಕ ಪ್ರಭಾವ ಉಂಟಾಗುತ್ತಿರುವುದನ್ನೂ ಎತ್ತಿ ತೋರಿಸುತ್ತಿದೆ.

'ಉದ್ಯಮ-ಪೂರಕ ವಾತಾವರಣ' ಕಲ್ಪಿಸುವ ಅಥವಾ ವ್ಯವಹಾರವನ್ನು ಸುಲಭಗೊಳಿಸುವ 'Ease of Doing Business' ಎಂಬ ಪರಿಕಲ್ಪನೆಯು, ಎಂಎಸ್‌ಎಂಇಗಳ ಮೇಲೆ ಬೀರುವ ಸ್ತರದ ಮಟ್ಟಿನ ಪರಿಣಾಮವನ್ನು ಬೃಹತ್ ಉದ್ಯಮಗಳ ಮೇಲೇನೂ ಬೀರುವುದಿಲ್ಲ. ಎಂಎಸ್‌ಎಂಇಗಳು ಉದ್ಯೋಗ ಸೃಷ್ಟಿಗೆ ಗಣನೀಯ ಕೊಡುಗೆಯನ್ನು ನೀಡುತ್ತಿರುವುದು ಹೌದಾದರೂ, ಅದೇ ವೇಳೆಗೆ ವ್ಯವಹಾರವನ್ನು ಮುಂದುವರಿಸಿಕೊಂಡು ಹೋಗುವ ನಿಟ್ಟಿನಲ್ಲಿ ಪ್ರತಿಯೊಂದು ಸಂಭಾವ್ಯ ಕಷ್ಟಗಳನ್ನು ಕೂಡ ಎದುರಿಸುತ್ತಲೇ ಇರುತ್ತವೆ. ಭಾರಿ ಮೌಲ್ಯದ ಯೋಜನೆಗಳನ್ನು ಘೋಷಿಸಿಬಿಟ್ಟರೆ ಹೆಚ್ಚೆಚ್ಚು ಸಂಖ್ಯೆಯ ಉದ್ಯೋಗಾವಕಾಶಗಳನ್ನು ಅವು ಹೊತ್ತು ತರುತ್ತವೆ ಎಂದು ಸರಕಾರವು ಭಾವಿಸಿರುವಂತೆ ತೋರುತ್ತದೆ. ಕೆಲ ವರ್ಷಗಳ ಹಿಂದೆ, ಓಲಾ ಇಲೆಕ್ಟ್ರಿಕ್ ಕಂಪನಿಯು ದೈತ್ಯ ಗಾತ್ರದ ಕಾರ್ಖಾನೆಯೊಂದರ ಸ್ಥಾಪನೆಯ ಕುರಿತು ಘೋಷಿಸಿ, ಅದೊಂದು ಕಾರ್ಖಾನೆಯಲ್ಲೇ ಬರೋಬ್ಬರಿ 1000 ಮಹಿಳೆಯರಿಗೆ ಉದ್ಯೋಗ ನೀಡುವ ಕುರಿತು ಹೇಳಿಕೊಂಡಿತ್ತು. ತಮಾಷೆಯೇನು ಗೊತ್ತಾ? ಉತ್ಪಾದನೆ, ತಂತ್ರಜ್ಞಾನ, ಮಾರಾಟ ಮತ್ತು ಕಾರ್ಯಾಚರಣೆಗಳು ಸೇರಿದಂತೆ ಭಾರತದಾದ್ಯಂತದ ತನ್ನ ಎಲ್ಲ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿ 2024ರ ಆರಂಭದಲ್ಲಿ ಹತ್ತತ್ತಿರ ಇಂಥ 400 ನೆಲೆಗಳನ್ನು ಹೊಂದಿದ್ದ ಆ ಕಂಪನಿಯು ಆ ವರ್ಷಾಂತ್ಯದೊಳಗೆ 500 ಮಂದಿಯನ್ನು ಮನೆಗೆ ಕಳಿಸಿತು. ಇದು ಮತ್ತೇನಲ್ಲ, ವ್ಯವಹಾರ ಜಗತ್ತಿನ ಕಠೋರ ವಾಸ್ತವತೆಗಳ ಒಂದು ತುಣುಕಷ್ಟೇ. 2023ರ ಅಂತ್ಯದ ವೇಳೆಗೆ ಆ ಕಂಪನಿಯು 2300 ಕೋಟಿ ರುಪಾಯಿಗಳಷ್ಟು ಎತ್ತುವಳಿ ಮಾಡಿತ್ತು.

ಕನ್ನಡಕ, ಕಾಂಟ್ಯಾಕ್ಟ್ ಲೆನ್ಸ್ ಮುಂತಾದ ದೃಶ್ಯ ಸಾಧನಗಳನ್ನು ತಯಾರಿಸಲೆಂದು ವಿಶ್ವದ ಅತಿದೊಡ್ಡ ಕಾರ್ಖಾನೆಯನ್ನು ಸ್ಥಾಪಿಸುವುದಾಗಿ ಘೋಷಿಸಿದ ಲೆನ್ಸ್ ಕಾರ್ಟ್ ಕಂಪನಿಯು ತೆಲಂಗಾಣ ಸರಕಾರದೊಂದಿಗೆ ಇತ್ತೀಚೆಗೆ ಒಡಂಬಡಿಕೆಗೆ ಸಹಿಹಾಕಿತು. ಇದಕ್ಕಾಗಿ ಸುಮಾರು 1,500 ಕೋಟಿ ರುಪಾಯಿಗಳನ್ನು ಹೂಡಲಾಗುತ್ತದೆ ಮತ್ತು ಈ ಕಾರ್ಖಾನೆಯಿಂದಾಗಿ 2500 ಉದ್ಯೋಗಗಳು ಸೃಷ್ಟಿಯಾಗಲಿವೆ ಎಂಬ ಭರವಸೆಯೂ ಹೊಮ್ಮಿತು. ಈ ಕಂಪನಿಯು ರಾಜಸ್ಥಾನದ ಭಿವಂಡಿಯಲ್ಲಿ ಈಗಾಗಲೇ ಒಂದು ಕಾರ್ಖಾನೆಯನ್ನು ನಡೆಸುತ್ತಿದೆ; ಉನ್ನತ ತಾಂತ್ರಿಕತೆಯ ಸ್ವಯಂಚಾಲಿತ ವ್ಯವಸ್ಥೆಯನ್ನು ಹೊಂದಿರುವ ಈ ಘಟಕವು, ಸರಬರಾಜು ಸರಪಳಿ ಮತ್ತು ಉತ್ಪಾದನೆಗೆ ಸಂಬಂಧಿಸಿದ ಸುಮಾರು 300 ಮಂದಿಯನ್ನು ತೊಡಗಿಸಿಕೊಂಡಿದೆ. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಅಖಾಡಕ್ಕಿಳಿದ ಉದ್ಯಮದ ಅನುಭವಿ ಹಾಗೂ ಪ್ರಸಿದ್ಧ ಹೂಡಿಕೆ ದಾರರೊಬ್ಬರು, ''ಇಂಥ ಅವಕಾಶಗಳನ್ನು ಆಕರ್ಷಿ ಸುವಲ್ಲಿ ಅಥವಾ ಉಳಿಸಿಕೊಳ್ಳುವಲ್ಲಿ ಕರ್ನಾಟಕ ಸರಕಾರವು ವಿಫಲವಾಗಿದೆ'' ಎಂದು ತರಾಟೆಗೆ ತೆಗೆದುಕೊಂಡಿದ್ದರ ಜತೆಗೆ, ''ಇದು ಕರ್ನಾಟಕಕ್ಕೆ ಆದ ನಷ್ಟ'' ಎಂದೂ ಪ್ರತಿಪಾದಿಸಿದರು. ಈ ಎಲ್ಲ ಅಂಶ ಗಳೂ ಈಗಾಗಲೇ ಹಲವು ರೀತಿಗಳಲ್ಲಿ ಬಿಂಬಿತವಾಗಿ, ತಮ್ಮ ವರಸೆಯನ್ನು ತೋರಿಸುತ್ತಿವೆ. 500ಕ್ಕೂ ಹೆಚ್ಚು ಮಿಲಿಯನೇರ್‌ಗಳು ಅರಬ್ ಸಂಯುಕ್ತ ಗಣ ರಾಜ್ಯದಂಥ (ಯುಎಇ) ಇತರ ದೇಶಗಳ ಪೌರತ್ವ ವನ್ನು ತೆಗೆದುಕೊಂಡಿರುವುದು ಇಂಥ ಅಂಶಗಳ ಲ್ಲೊಂದು. ಇವರೆಲ್ಲಾ ಸಾಮಾನ್ಯವಾಗಿ, ನವೋದ್ಯಮ ಶೀಲರು ಹಾಗೂ ಸಣ್ಣ ಮತ್ತು ಮಾಧ್ಯಮ ಗಾತ್ರದ ವ್ಯಾಪಾರೋದ್ದಿಮೆಗಳ ಮಾಲೀಕರಾಗಿದ್ದು, ಭಾರತದಲ್ಲಿ ವ್ಯವಹಾರವನ್ನು ಮುಂದುವರಿಸಲು ಬಂಡವಾಳ ಲಭ್ಯತೆಗೆ, ತೆರಿಗೆ ಕಾನೂನುಗಳಿಗೆ ಸಂಬಂಧಿಸಿದ ಸಾಕಷ್ಟು ಸವಾಲುಗಳನ್ನು ಎದುರಿಸ ಬೇಕಾಗಿ ಬಂದಿದೆ. ಹೀಗಾಗಿ ಅವರು ದೇಶದಿಂದ ನಿರ್ಗಮಿಸುತ್ತಿದ್ದಾರೆ ಎನ್ನಲಡ್ಡಿಯಿಲ್ಲ. 'ಬೃಹತ್ ಉದ್ದಿಮೆಗಳೇ ಉತ್ತಮ' ಎಂಬ ದೃಷ್ಟಿಕೋನವನ್ನು ಹೊಂದಿರುವುದೇ ನಮ್ಮವರ ಸಮಸ್ಯೆ; 'ಸಣ್ಣ ಗಾತ್ರದ ಉದ್ದಿಮೆಗಳು ಸುಸ್ಥಿರವಾಗಿರುತ್ತವೆ' ಎಂಬುದನ್ನು ಭಾರತವು ಪ್ರಸ್ತುತ ಮನವರಿಕೆ ಮಾಡಿಕೊಳ್ಳಬೇಕಿದೆ. ಇಲ್ಲವಾದಲ್ಲಿ, ನಾವು ಮತ್ತಷ್ಟು ದೊಡ್ಡ ಬಿಕ್ಕಟ್ಟಿಗೆ ಸಿಲುಕುವುದು ಕಟ್ಟಿಟ್ಟಬುತ್ತಿ. ಜತೆಗೆ, ಅದರಿಂದ ಚೇತರಿಸಿಕೊಳ್ಳುವುದು ಮತ್ತಷ್ಟು ಸವಾಲಿನ ಸಂಗತಿಯಾಗಿ ಬಿಡುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

(ಲೇಖಕರು ವಾಣಿಜ್ಯೋದ್ಯಮಿ ಹಾಗೂ ಸ್ಟಾರ್ಟಪ್ ಉದ್ಯಮಗಳ ಸಲಹೆಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:03

ಸಮಾಚಾರ ಸಣ್ಣದಲ್ಲ

ಗಡಿಗೆ ಚೀನಾ ರೋಬೊ ಶ್ವಾನ, ಲೇಸರ್‌ಡ್ರೋನ್



ಲಡಾಖ್: ನೆರೆಯ ಕಮ್ಯುನಿಸ್ಟ್ ದೇಶ ಪದೇ ಪದೇ ನಿಗೂಢ ನಡೆಗಳಿಂದ ಭಾರತವನ್ನು ಗೊಂದಲಕ್ಕೆ ಕೆಡವುತ್ತಿದೆ. ಒಂದೆಡೆ ಶಾಂತಿ ಮಾತುಕತೆಯನ್ನೂ ನಡೆಸುವ ಚೀನಾ, ಇನ್ನೊಂದೆಡೆ ಗಡಿಯಲ್ಲಿ ಹೊಸ ಬಗೆಯ ಸಮರ ಉಪಕರಣಗಳನ್ನು, ಅತ್ಯಾಧುನಿಕ ತಂತ್ರಜ್ಞಾನವನ್ನೂ ನಿಯೋಜಿಸುತ್ತಾ ಗಡಿ ಉದ್ವಿಗ್ನತೆಗೂ ಕಾರಣವಾಗುತ್ತಿದೆ. ಭಾರತದ ಗಡಿ ಬಳಿ ಚೀನಾದ 'ಪೀಪಲ್ಸ್ ಲಿಬರೇಶನ್ ಆರ್ಮಿ' (ಪಿಎಲ್ಎ) ಎಕ್ಸೋಸ್ಕೆಲಿಟನ್ಸ್, ರೋಬೋ ಡಾಗ್ಸ್ ಮತ್ತು ಹೈ-ಪವರ್ ಲೇಸರ್ ಡ್ರೋನ್, ಕೃತಕ ಬುದ್ಧಿಮತ್ತೆ(ಎಐ) ತಂತ್ರಜ್ಞಾನವನ್ನು ಬಳಸುತ್ತಿದೆ. ಈ ರೋಬೊ ಶ್ವಾನಗಳು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮೂಲಕ ಕೆಲಸ ಮಾಡುತ್ತವೆ ಎಂಬ ಮಾಹಿತಿ ಲಭ್ಯವಾಗಿದೆ. 4 ವರ್ಷಗಳ ಹಿಂದೆ ಪೂರ್ವ ಲಡಾಕ್‌ನ ಗಡಿ ಭಾಗದಲ್ಲಿ ಎರಡೂ ಕಡೆಯ ಸೈನಿಕರ ಮಧ್ಯೆ ಮಾರಣಾಂತಿಕ ಸಂಘರ್ಷ ಉಂಟಾಗಿ ಉಭಯ ದೇಶಗಳ ಸಂಬಂಧ ಹದಗೆಟ್ಟಿತ್ತು.

ಕಾಶ್ಮೀರದಲ್ಲಿ ನಿಗೂಢ ಕಾಯಿಲೆಗೆ 15 ಬಲಿ

ಶ್ರೀನಗರ: ಜಮ್ಮುವಿನ ಆಸ್ಪತ್ರೆಯಲ್ಲಿ ನಿಗೂಢ ಕಾಯಿಲೆಯಿಂದ ಬುಧವಾರ 9 ವರ್ಷದ ಬಾಲಕಿ ಸಾವನ್ನಪ್ಪಿದ್ದಾಳೆ. ಇದರೊಂದಿಗೆ ಜಮ್ಮು-ಕಾಶ್ಮೀರದ ರಾಜೌರಿ ಜಿಲ್ಲೆಯ ಬಾಧಲ್ ಗ್ರಾಮದಲ್ಲಿ ಕಳೆದ ಒಂದೂವರೆ ತಿಂಗಳಲ್ಲಿ ನಿಗೂಢ ಕಾಯಿಲೆಗೆ ಬಲಿಯಾದವರ ಸಂಖ್ಯೆ 15ಕ್ಕೆ ಏರಿಕೆಯಾಗಿದೆ. ಬಾಲಕಿಯ 4 ಸಹೋದರರು ಮತ್ತು ಅಜ್ಜ ಕೂಡ ನಿಗೂಢ ಕಾಯಿಲೆಯಿಂದ ಕಳೆದ 4 ದಿನಗಳಲ್ಲಿ ಸಾವನ್ನಪ್ಪಿದ್ದಾರೆ. ಸಾವಿನ ಕಾರಣಗಳ ತನಿಖೆಗೆ ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಲಾಗಿದೆ ಎಂದು ರಾಜೌರಿ ಜಿಲ್ಲೆ ಅಧಿಕಾರಿಗಳು ತಿಳಿಸಿದ್ದಾರೆ. ಮೃತರಲ್ಲಿ ಕೆಲವರ ಸ್ಯಾಂಪಲ್‌ಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿದ್ದು, ಅವುಗಳಲ್ಲಿ ನ್ಯೂರೋಟಾಕ್ಸಿನ್‌ಗಳು ಪತ್ತೆಯಾಗಿವೆ ಎಂಬ ತಜ್ಞರು ಹೇಳಿದ್ದಾರೆ. ಆದರೆ, ರಾಜ್ಯದ ಆರೋಗ್ಯ ಸಚಿವೆ ಸಕೀನಾ ಮಸೂದ್, ಬಾಧಲ್ ಗ್ರಾಮದಲ್ಲಿ ನಿಗೂಢ ಕಾಯಿಲೆ ಕಂಡುಬಂದಿಲ್ಲ ಎಂದು ಹೇಳುತ್ತಿರುವುದು ಗೊಂದಲಕ್ಕೆ ಕಾರಣವಾಗಿದೆ. ತನಿಖೆ ಪೂರ್ಣಗೊಂಡ ನಂತರವೇ ಯಾವುದೇ ತೀರ್ಮಾನಕ್ಕೆ ಬರುತ್ತೇವೆ ಎಂದು ಸಚಿವೆ ಹೇಳಿದ್ದಾರೆ.

ಇ.ಡಿ ವಿಚಾರಣೆಗೆ ಕೆಟಿಆರ್ ಹಾಜರು

ಹೈದರಾಬಾದ್: 2023ರಲ್ಲಿ ಫಾರ್ಮುಲಾ ರೇಸ್‌ನಲ್ಲಿ ಹಣ ದುರ್ಬಳಕೆ ಆರೋಪ ಸಂಬಂಧ ದಾಖಲಾಗಿರುವ ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆ ನಡೆಸಿರುವ ಜಾರಿ ನಿರ್ದೇಶನಾಲಯ(ಇ.ಡಿ) ಗುರುವಾರ ಮಾಜಿ ಸಚಿವ, ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ.ರಾಮರಾವ್ ಅವರ ವಿಚಾರಣೆ ನಡೆಸಿದೆ. ಹೈದರಾಬಾದ್‌ನಲ್ಲಿರುವ ಜಾರಿ ನಿರ್ದೇಶನಾಲಯ ಕಚೇರಿಗೆ ಗುರುವಾರ ಬಂದ ಕೆ.ಟಿ. ರಾಮರಾವ್ ಅವರನ್ನು ಇ.ಡಿ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದರು. ಈ ಸಂದರ್ಭ ಕಚೇರಿ ಹೊರಗೆ ರಾಜ್ಯ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದ ಬಿಆರ್‌ಎಸ್ ನಾಯಕರು, ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು. ಪ್ರಕರಣದಲ್ಲಿ ಇ.ಡಿ ಈಗಾಗಲೇ ಆರೋಪಿಗಳಾದ ಹಿರಿಯ ಐಎಎಸ್ ಅಧಿಕಾರಿ ಅರವಿಂದ್ ಕುಮಾರ್ ಮತ್ತು ಎಚ್‌ಎಂಡಿಎ ಮುಖ್ಯ ಎಂಜಿನಿಯರ್‌ನನ್ನು ವಿಚಾರಣೆ ಮಾಡಿದೆ.

ತಿರುಪತಿ: ಮಹಡಿಯಿಂದ ಬಿದ್ದು 3ರ ಬಾಲಕ ಸಾವು

ಅಮರಾವತಿ: ಕಾಲ್ತುಳಿತ ದುರಂತದ ನೆನಪು ಮಾಸುವ ಮುನ್ನವೇ ತಿರುಪತಿಯಲ್ಲಿ ಗುರುವಾರ ಮತ್ತೊಂದು ಅವಘಡವಾಗಿದೆ. ತಿರುಮಲ ತಿರುಪತಿ ದೇವಸ್ಥಾನದ(ಟಿಟಿಡಿ) ಅತಿಥಿಗೃಹವೊಂದರಲ್ಲಿ 1ನೇ ಮಹಡಿ ಮೇಲಿಂದ ಬಿದ್ದು 3 ವರ್ಷದ ಬಾಲಕ ಸಾವನ್ನಪ್ಪಿದ್ದಾನೆ. ಕಡಪ ಜಿಲ್ಲೆಯ ಚಿನ್ನ ಚೌ ಗ್ರಾಮದ ಕುಟುಂಬ ದೇವರ ದರ್ಶನಕ್ಕಾಗಿ ಬಂದು ಪದ್ಮನಾಭ ನಿಲಯ ಅತಿಥಿಗೃಹದಲ್ಲಿ ತಂಗಿತ್ತು. ಗುರುವಾರ ಮಧ್ಯಾಹ್ನ 3.30ರಲ್ಲಿ ಸಹೋದರನೊಂದಿಗೆ ಆಟವಾಡುತ್ತಿದ್ದ ಬಾಲಕ ಮೆಟ್ಟಿಲುಗಳ ಗ್ರಿಲ್ ಮೂಲಕ ಜಾರಿ ಬಿದ್ದು, ಗಂಭೀರವಾಗಿ ಗಾಯಗೊಂಡು ಅಸುನೀಗಿದ್ದಾನೆ. ಅಸಹಜ ಸಾವು ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

ವಿದ್ಯುತ್ ಕಳವು: 16 ಮಸೀದಿ, 1400 ಮನೆ ವಿರುದ್ಧ ಪ್ರಕರಣ

ಸಂಭಾಲ್: ತಿಂಗಳ ಹಿಂದೆ ಮಸೀದಿ ಸರ್ವೆ ವಿಚಾರವಾಗಿ ಹಿಂಸಾಚಾರ ನಡೆದು ನಾಲ್ವರ ಸಾವಿಗೆ ಕಾರಣವಾಗಿದ್ದ ಉತ್ತರ ಪ್ರದೇಶದ ಸಂಭಾಲ್ ನಗರದಲ್ಲಿ ವಿದ್ಯುತ್ ಕಳವು ವ್ಯಾಪಕವಾಗಿದೆ. ಈ ಭಾಗದ ಸಮಾಜವಾದಿ ಪಕ್ಷದ ಸಂಸದ ಜಿಯಾವುರ್ ರೆಹಮಾನ್ ವಿರುದ್ಧವೇ ಕೋಟ್ಯಂತರ ರು. ವಿದ್ಯುತ್ ಕಳವು ದೂರು ದಾಖಲಾಗಿದೆ. ಆ ಬಳಿಕ ಎಚ್ಚೆತ್ತ ವಿದ್ಯುತ್ ಮಂಡಳಿ ಸಮಗ್ರ ಸ್ವರೂಪದ ತನಿಖೆ ಆರಂಭಿಸಿದೆ. ಈವರೆಗೆ 2 ಮದರಸಾ, 16 ಮಸೀದಿ ಮತ್ತು 1400ಕ್ಕೂ ಹೆಚ್ಚು ಮನೆ-ಅಂಗಡಿಗಳಲ್ಲಿ ವಿದ್ಯುತ್ ಕಳವು ನಡೆದಿರುವುದು ಪತ್ತೆಯಾಗಿದ್ದು, ಠಾಣೆಗಳಲ್ಲಿ ವಿದ್ಯುತ ಕಳವಿನ ದೂರು ದಾಖಲಿಸಲಾ ಗಿದೆ. ವಿದ್ಯುತ್ ಕಳವು ಪ್ರಕರಣಗಳಲ್ಲಿ ಈವರೆಗೆ 11 ಕೋಟಿ ರು. ದಂಡ ವಿಧಿಸಲಾಗಿದೆ. ಅದರಲ್ಲಿ ಕೆಲವ ರಷ್ಟೇ ದಂಡ ಪಾವತಿಸಿದ್ದು, ಈವರೆಗೆ ಕೇವಲ 20 ಲಕ್ಷ ರು. ದಂಡದ ಹಣ ವಸೂಲಿ ಆಗಿದೆ. ವಿದ್ಯುತ್ ಕಳವು ಶೋಧ ಶುರುವಾಗುತ್ತಲೇ ಕ್ಷೇತ್ರದಲ್ಲಿನ 1 ಚರ್ಚ್, 22 ಮಸೀದಿಗಳು ಹೊಸದಾಗಿ ವಿದ್ಯುತ್ ಸಂಪರ್ಕ ಕೋರಿ ವಿದ್ಯುತ್ ಮಂಡಳಿಗೆ ಅರ್ಜಿ ಸಲ್ಲಿಸಿವೆ.

ಭಾರತದ ಹೊಸ ಮೈಲುಗಲ್ಲು | ಸಾಧನೆ ಮಾಡಿದ 4ನೇ ದೇಶ | ಪ್ರಧಾನಿ, ಗಣ್ಯರ ಅಭಿನಂದನೆ

ಇಸ್ರೊ ಸ್ಪೇಸ್ ಡಾಕಿಂಗ್ ಯಶಸ್ವಿ

ದೆಹಲಿ: ಭಾರತದ ಮೊದಲ 'ಉಪಗ್ರಹ ಡಾಕಿಂಗ್' ಪ್ರಯೋಗ ಬಾಹ್ಯಾಕಾಶದಲ್ಲಿ ಗುರು ವಾರ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಇಂಥ ಸಾಧನೆ ಮಾಡಿದ ವಿಶ್ವದ ನಾಲ್ಕನೇ ದೇಶವಾಗಿ ಹಿಂದೂಸ್ಥಾನ ಗುರುತಿಸಿಕೊಂಡಿದೆ.

ದೇಶದ ಪ್ರತಿಷ್ಠಿತ 'ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ' (ಇಸ್ರೊ) ಸ್ಪಾಡೆಕ್ಸ್ ಮಿಷನ್‌ನಡಿ ಮತ್ತೊಂದು ಮಹತ್ವದ ಸಾಧನೆ ಮಾಡುವ ಮೂಲಕ ಅಂತಾರಾಷ್ಟ್ರೀಯ ಅಂತ ರಿಕ್ಷ ಸಂಶೋಧನಾ ಲೋಕದಲ್ಲಿ ಹೆಗ್ಗುರುತು ಮೂಡಿಸಿದೆ. 2024ರ ವರ್ಷಾಂತ್ಯದಲ್ಲಿ(ಡಿ.30) ಪಿಎಸ್‌ಎಲ್‌ವಿ-ಸಿ60 ರಾಕೆಟ್‌ನಲ್ಲಿ ಉಡಾವಣೆ ಗೊಂಡ 'ಇಸ್ರೊ'ದ ಎರಡು ಉಪಗ್ರಹಗಳಾದ ಟಾರ್ಗೆಟ್ 02 ಮತ್ತು ಚೇಸರ್ 01 ಅಂತರಿಕ್ಷದಲ್ಲಿ ಕಡೆಗೂ ಡಾಕಿಂಗ್ ಪ್ರಯೋಗದಲ್ಲಿ ಯಶಸ್ಸು ಸಾಧಿಸಿವೆ.





ಹಲವು ಬಾರಿಯ ಪ್ರಯತ್ನಗಳ ನಂತರ ಎರಡೂ ಉಪ ಗ್ರಹಗಳನ್ನು ಸಮೀಪಕ್ಕೆ ತಂದು ಯಶಸ್ವಿ ಯಾಗಿ ಡಾಕಿಂಗ್ (ಪರಸ್ಪರ ಜೋಡಣೆ) ಮಾಡಲಾಯಿತು. ಆ ಮೂಲಕ 'ಭಾರತ ಬಾಹ್ಯಾ ಕಾಶ ನಿಲ್ದಾಣ' ನಿರ್ಮಾಣ ಕನಸಿಗೆ ಬಲಿಷ್ಠ ರೆಕ್ಕೆ ಮೂಡಿ ದಂತಾಯಿತು. ಭಾರತದ ಬಾಹ್ಯಾಕಾಶ ಕ್ಷೇತ್ರದಲ್ಲಿನ ಸ್ವಾವಲಂಬನೆಯನ್ನೂ ಎತ್ತಿ ತೋರಿದಂತಾಯಿತು. ಇಸ್ರೋಗಾಗಿ ಏರೋಸ್ಪೇಸ್ ಮತ್ತು ಅನಂತ್ ಟೆಕ್ನಾಲಜೀಸ್ ಪ್ರೈ.ಲಿ. ಎರಡು ಉಪಗ್ರಹ ಗಳನ್ನು ಸಂಯೋಜಿಸಿವೆ. ಡಾಕಿಂಗ್ ಮತ್ತು ರಿಜಿಡೈಸೇಷನ್ ನಂತರ ಎರಡೂ ಉಪಗ್ರಹಗಳ ನಡುವೆ ವಿದ್ಯುತ್ ಶಕ್ತಿ ವರ್ಗಾವಣೆ ಆಗುವು ದನ್ನು ಪ್ರದರ್ಶಿಸಲಾಗುವುದು ಎಂದು ಇಸ್ರೊ ಹೇಳಿದೆ.

ಐತಿಹಾಸಿಕ ಕ್ಷಣ: ಇಸ್ರೊ

ಬಾಹ್ಯಾಕಾಶದಲ್ಲಿ ಎರಡೂ ಉಪಗ್ರಹಗಳ ಡಾಕಿಂಗ್(ಜೋಡಣೆ ಕಾರ್ಯ) ಗುರುವಾರ ಯಶಸ್ವಿಯಾಗಿ ಪೂರ್ಣಗೊಂಡಿದೆ. ಇದು ಐತಿಹಾಸಿಕ ಕ್ಷಣ ಎಂದು ಇಸ್ರೊ ಪ್ರಕಟಿಸಿದೆ. ಆರಂಭದಲ್ಲಿ ಕಿಲೋಮೀಟರ್‌ಗಟ್ಟಲೆ ದೂರ ದಲ್ಲಿದ್ದ ಎರಡೂ ಉಪಗ್ರಹಗಳನ್ನು ಹಂತ ಹಂತವಾಗಿ 15 ಮೀ ಮತ್ತು 3 ಮೀ. ಹೋಲ್ಡ್ ಪಾಯಿಂಟ್‌ಗಳಿಗೆ ಸ್ಥಳಾಂತರಿಸುವ, ಬಳಿಕ ಹಿಂತೆಗೆದುಕೊಳ್ಳುವ ಪ್ರಯೋಗಗಳನ್ನು ಹಲವು ಬಾರಿ ನಡೆಸಿ ಖಾತರಿಪಡಿಸಿಕೊಳ್ಳಲಾ ಯಿತು. ನಂತರ ಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲಾ ಯಿತು. ಆ ಬಳಿಕವೇ ಗುರುವಾರ ಮುಂಜಾನೆ ಡಾಕಿಂಗ್ ಪ್ರಕ್ರಿಯೆಯನ್ನು ಪ್ರಾರಂಭಿಸಿ ಬಲು ಯಶಸ್ವಿಯಾಗಿ ಪೂರ್ಣಗೊಳಿಸಲಾಯಿತು. ಅಷ್ಟೇ ಅಲ್ಲದೇ, ಆ ಕ್ಷಣಗಳ ದೃಶ್ಯಾವಳಿಗಳನ್ನು ಉಪಗ್ರಹಗಳಲ್ಲಿನ ಕ್ಯಾಮೆರಾ ಮೂಲಕ ಚಿತ್ರೀಕರಿಸಿಕೊಳ್ಳುವ ಕಾರ್ಯವನ್ನೂ ಮಾಡಲಾಗಿದೆ ಎಂದು ಇಸ್ರೊ ಹೆಮ್ಮೆಯಿಂದ ಹೇಳಿಕೊಂಡಿದೆ.

ಡಾಕಿಂಗ್ ಮುಂದೂಡಿಕೆ ಏಕೆ?

ರಾಕೆಟ್ ಉಡ್ಡಯಗೊಂಡ ಮೊದಲಿಗೆ ಜ.7ರಂದೇ ಡಾಕಿಂಗ್ ಪ್ರಯೋಗಕ್ಕೆ ದಿನ ನಿಗದಿಯಾಗಿತ್ತು. ಟಾರ್ಗೆಟ್ ಮತ್ತು ಚೇಸರ್ ಹೆಸರಿನ ಎರಡೂ ಉಪಗ್ರಹಗಳ ನಡುವಿನ ಅಂತರವನ್ನು 500 ಮೀಟರ್‌ಗಳಿಂದ 225 ಮೀಟರ್‌ಗಳಿಗೆ ಇಳಿಸಲಷ್ಟೇ ಸಾಧ್ಯವಾಯಿತು. ಹಾಗಾಗಿ ಡಾಕಿಂಗ್ ಪ್ರಕ್ರಿಯೆಯನ್ನು ಮುಂದೂಡಬೇಕಾಯಿತು. ಭಾನುವಾರ, ಎರಡೂ ಉಪಗ್ರಹಗಳನ್ನು 15 ಮೀ.ನಿಂದ 3 ಮೀ. ಗಳಷ್ಟು ಸಮೀಪಕ್ಕೆ ತರುವಲ್ಲಿ ಯಶಸ್ವಿಯಾದ ಇಸ್ರೊ ಭೂಕೇಂದ್ರ ತಂಡ, ಅಂತಿಮ ಡಾಕಿಂಗ್ (ಜೋಡಣೆ)ಗೂ ಮುಂಚಿನ ಸುರಕ್ಷತೆ ಖಾತರಿ ಪಯೋಗ ನಡೆಸುವ ಸಲುವಾಗಿ ಎರಡೂ ಉಪಗ್ರಹಗಳನ್ನು ಮರಳಿ ದೂರವಾಗಿಸಿ ಅಂತರ ಹೆಚ್ಚಿಸಲಾಯಿತು. ಕಡೆಗೆ ಗುರುವಾರ ಬೆಳಗ್ಗೆ ಎರಡೂ ಉಪಗ್ರಹಗಳನ್ನು ಸಮೀಪಕ್ಕೆ ತಂದು ಯಶಸ್ವಿಯಾಗಿ ಜೋಡಣೆಗೊಂಡು ಬಿಗಿಯಾಗಿ ಲಾಕ್ ಆಗುವಂತೆ ಮಾಡಲಾಯಿತು. ಈಗ ಜೋಡಣೆಗೊಂಡಿರುವ ಎರಡೂ ಉಪಗ್ರಹಗಳನ್ನು ನಂತರದ ದಿನಗಳಲ್ಲಿ ಅನ್‌ಡಾಕಿಂಗ್ ಮಾಡಲಾಗುತ್ತದೆ(ಬೇರ್ಪಡಿಸಲಾಗುತ್ತದೆ). ಆ ಬಳಿಕ ಎರಡೂ ಉಪಗ್ರಹಗಳಿಗೆ ಅಳವಡಿಸಿರುವ ಪೇಲೋಡ್‌ಗಳು(ವಿವಿಧ ಉಪಕರಣ) ಕಾರ್ಯಾಚರಣೆ ಪ್ರಾರಂಭಿಸಲಿವೆ. ಈಗ ಇಸ್ರೊ ಕೈಗೊಂಡಿರುವ ಡಾಕಿಂಗ್ ಮಿಷನ್‌ನ ಅವಧಿ 2 ವರ್ಷಗಳವರೆಗೆ ಮುಂದುವರಿಯಲಿದೆ.

ಭವಿಷ್ಯದ ಅಂತರಿಕ್ಷ ಯೋಜನೆಗಳಿಗೆ ಶಕ್ತಿ

ಈಗ ಸಾಧ್ಯವಾಗಿರುವ ಡಾಕಿಂಗ್ ಪ್ರಯೋಗದ ಯಶಸ್ಸಿನಿಂದ ಮುಂಬರುವ ದಿನಗಳಲ್ಲಿ ಗಗನಯಾನ್ ಮತ್ತು ಭಾರತೀಯ ಅಂತರಿಕ್ಷ ಮಿಷನ್ ಮೊದಲಾದ ಕಾರ್ಯಾಚರಣೆಗಳಿಗೆ ಡಾಕಿಂಗ್ ತಂತ್ರಜ್ಞಾನ ಅತ್ಯಗತ್ಯವಾಗಿದೆ. ಯಶಸ್ವಿ ಬಾಹ್ಯಾಕಾಶ ನೌಕೆ ಡಾಕಿಂಗ್ ಸರಬರಾಜು, ಉಪಕರಣಗಳು ಮತ್ತು ಸಂಭಾವ್ಯ ಗಗನಯಾತ್ರಿಗಳ ವರ್ಗಾವಣೆಯನ್ನು ಸುಗಮಗೊಳಿಸುತ್ತದೆ, ಇದು ಮಾನವ ಬಾಹ್ಯಾಕಾಶ ಹಾರಾಟ ಮತ್ತು ಅಂತರಗ್ರಹ ಕಾರ್ಯಾಚರಣೆಗಳಿಗೆ ದಾರಿ ಮಾಡಿಕೊಡುತ್ತದೆ. ಬಾಹ್ಯಾಕಾಶ ಕೇಂದ್ರಗಳಿಗೆ ಸಂಶೋಧನೆಗೆ ತಂತ್ರಜ್ಞರು, ವಿಜ್ಞಾನಿಗಳನ್ನು ಕಳುಹಿಸಿಕೊಡುವ ಕಾರ್ಯಗಳಿಗೆ ಈಗಿನ ಡಾಕಿಂಗ್ ಸಾಧನೆ ಬಹುದೊಡ್ಡ ಪ್ರಯೋಜನಕಾರಿಯಾಗಿದೆ. ಬಾಹ್ಯಾಕಾಶ ಸಂಶೋಧನೆಗೆ, ಗಗನಯಾತ್ರಿಗಳ ಜೀವನಕ್ಕೆ ಅಗತ್ಯವಾದ ಸರಕುಗಳನ್ನು ಕಳುಹಿಸಿಕೊಡಲು, ಬಹು ರಾಕೆಟ್ ಉಡಾವಣೆಗಳ ಅಗತ್ಯವಿರುವಾಗ ಉಪಗ್ರಹಗಳು ಮತ್ತು ಬಾಹ್ಯಾಕಾಶದಲ್ಲಿರುವ ಇತರ ವಸ್ತುಗಳನ್ನು ಸಂಯೋಗ ಮಾಡುವ ತಂತ್ರಜ್ಞಾನವು ಅತ್ಯಗತ್ಯ.



ಟಾರ್ಗೆಟ್ ಮತ್ತು ಚೇಸರ್ ಉಪಗ್ರಹಗಳನ್ನು ಡಾಕಿಂಗ್ ಪ್ರಕ್ರಿಯೆ ಮೂಲಕ ಯಶಸ್ವಿಯಾಗಿ ಪರಸ್ಪರ ಜೋಡಿಸಿ ಪ್ರಯೋಗ ಪೂರ್ಣಗೊಳಿಸಿದ ಇಸ್ರೊ ವಿಜ್ಞಾನಿಗಳ ತಂಡಗಳಿಗೆ ಅಭಿನಂದೆ. ಅಂತರಿಕ್ಷ ಡಾಕಿಂಗ್ ಪ್ರಯೋಗ ಯೋಜನೆ ಭವಿಷ್ಯದಲ್ಲಿ ಅಂತರಿಕ್ಷ ಕಾರ್ಯಾಚರಣೆಗಳಿಗೆ ಮಹತ್ವದ ಕೊಡುಗೆ ನೀಡಲಿದೆ ಎಂದು ನಿರೀಕ್ಷಿಸಲಾಗುತ್ತಿದೆ.

-**ನರೇಂದ್ರ ಮೋದಿ**, ಪ್ರಧಾನಿ

ಇಸ್ರೊ ಇಡೀ ತಂಡದ ಪ್ರಯತ್ನಗಳಿಗೆ ಅಭಿನಂದನೆ ಸಲ್ಲಿಸುವೆ. ಡಾಕಿಂಗ್ ನಂತರ ಎರಡೂ ಉಪಗ್ರಹಗಳು ಈಗ ಒಂದೇ ಘಟಕವಾಗಿ ಕಾರ್ಯನಿರ್ವಹಿಸುತ್ತಿವೆ. ಅದೂ ಕೂಡ ದೃಢಪಟ್ಟಿದೆ. ಮುಂದಿನ ದಿನಗಳಲ್ಲಿ ಅನ್‌ಡಾಕಿಂಗ್ ಮತ್ತು ವಿದ್ಯುತ್ ವರ್ಗಾವಣೆ ಪರಿಶೀಲನೆಗಳ ಪ್ರಯೋಗ ನಡೆಯಲಿವೆ.

-**ವಿ. ನಾರಾಯಣನ್**, ಇಸ್ರೊ ಅಧ್ಯಕ್ಷ

370 ಕೋಟಿ ರು. ವೆಚ್ಚ

ಭಾರತ ಸರಕಾರ ಈ ಪ್ರತಿಷ್ಠಿತ ಡಾಕಿಂಗ್ ಯೋಜನೆಗಾಗಿ ಉಪಗ್ರಹಗಳ ನಿರ್ಮಾಣದಿಂದ ಆರಂಭಿಸಿ, ಉಡ್ಡಯನ, ಬಾಹ್ಯಾಕಾಶದಲ್ಲಿ ಜೋಡಣೆವರೆಗಿನ ಒಟ್ಟಾರೆ ಸ್ಪಾಡೆಕ್ಸ್ ಡಾಕಿಂಗ್ ಪ್ರಯೋಗಕ್ಕಾಗಿ ಒಟ್ಟು 370 ಕೋಟಿ ರು.ಗಳಷ್ಟು ವೆಚ್ಚ ಮಾಡಿದೆ. ಬಾಹ್ಯಾಕಾಶದಲ್ಲಿ ಸ್ವಂತದ ನಿಲ್ದಾಣ ನಿರ್ಮಾಣ ಮಾಡುವಲ್ಲಿ ಇದು ಮಹತ್ವದ ಹೆಜ್ಜೆ ಯಾಗಿದೆ. ಈ ನಿರ್ಣಾಯಕ ಬಾಹ್ಯಾಕಾಶ ಸಾಮರ್ಥ್ಯ ಸಾಧಿಸಿದ ವಿಶ್ವದ ನಾಲ್ಕನೇ ದೇಶವಾಗಿ ಭಾರತ ಈಗ ಗುರುತಿಸಿಕೊಂಡಿದೆ. 'ಇಸ್ರೊ' ಸಂಸ್ಥೆ ಮಾಡಿದ ಈ ಸಾಧನೆಯು ಯುವ ವಿಜ್ಞಾನಿಗಳು, ಬ್ಯಾಹ್ಯಾಕಾಶ ಸಂಶೋಧನೆ ಆಸಕ್ತರಿಂದ ಭಾರೀ ಮೆಚ್ಚುಗೆ ಗಳಿಸಿದೆ ಮತ್ತು ಬಾಹ್ಯಾಕಾಶ ಪರಿಶೋಧನೆಯಲ್ಲಿ ಮಹತ್ವಾಕಾಂಕ್ಷಿ ಯೋಜನೆಗಳನ್ನು ಇನ್ನಷ್ಟು ಬಲಪಡಿಸಿದೆ.

ಸಂಕ್ರಾಂತಿ ಕೋಳಿ ಕಾಳಗ: 2,000 ಕೋಟಿ ರು. ಪಣ

ವಿಜಯವಾಡ: ಆಂಧ್ರಪ್ರದೇಶದ ಕೃಷ್ಣ ಮತ್ತು ಎನ್‌ಟಿಆರ್ ಹಾಗೂ ಗೋದಾವರಿ ಜಿಲ್ಲೆಗಳಲ್ಲಿ ಮಕರ ಸಂಕ್ರಾಂತಿ, ಸುಗ್ಗಿ ಹಬ್ಬದ ಸಂದರ್ಭ 3 ದಿನಗಳ ಕಾಲ ಜಾತ್ರೆ, ಕೋಳಿ ಅಂಕ ನಡೆಸಲಾಗಿದೆ. ನೂರಾರು ಕೋಳಿಗಳು ಗಾಯಗೊಂಡು ಭಾರೀ ಪ್ರಮಾಣದಲ್ಲಿ ರಕ್ತ ಹರಿಸಿವೆ. ಅಷ್ಟೇ ಅಲ್ಲದೇ, ರಕ್ತಪಾತವಾಗಿದ್ದು, ಈ ವರ್ಷ ಕೋಳಿ ಕಾಳಗದಲ್ಲಿ 2000 ಕೋಟಿ ರು. ವರೆಗೂ ಬೆಟ್ಟಿಂಗ್ ನಡೆದಿದೆ ಎಂದು ಹೇಳಲಾಗಿದೆ. ಈ ಬಗ್ಗೆ ವ್ಯಾಪಕ ಟೀಕೆ ವ್ಯಕ್ತವಾಗಿದೆ.

ಸಂಪ್ರದಾಯ ಮತ್ತು ಪದ್ಧತಿ ನೆಪದಲ್ಲಿ ಕೋಳಿ ಕಾಳಗ ಪಂದ್ಯ ನಡೆಸದಂತೆ ನಿಗಾ ವಹಿಸುವಂತೆ ಪೊಲೀಸ್ ಸಿಬ್ಬಂದಿಗೆ ಹೈಕೋರ್ಟ್ ನಿರ್ದೇಶನ ನೀಡಿದ್ದರೂ ಆಂಧ್ರಪ್ರದೇಶ ಕೃಷ್ಣ ಮತ್ತು ಎನ್‌ಟಿಆರ್ ಜಿಲ್ಲೆಗಳಲ್ಲಿನ ಎಡುಪುಗಲ್ಲು, ರಾಮವರಪ್ಪಡು, ಇಬ್ರಾಹಿಂಪಟ್ಟಣಂ, ಮಂಗಳಗಿರಿ, ಗನ್ನವರಂ, ನುನ್ನಾ, ತಿರುವುರು, ಚಿಂಚಿನಾಡ, ಪುಲಪಲ್ಲಿ ಮತ್ತಿತರ ಗ್ರಾಮಗಳಲ್ಲಿ ಕೋಳಿ ಕಾಳಗ ವೀಕ್ಷಿಸಲು ಯುವಜನರು ಮತ್ತು ಮಹಿಳೆಯರು ಸೇರಿ ಸಾವಿರಾರು ಜನರು ಕ್ರೀಡಾಂಗಣಗಳಲ್ಲಿ ನೆರೆದಿದ್ದರು. ತಡೆಪಲ್ಲಿಗುಡೆಂ ಮೂಲದ ಉದ್ಯಮಿ ಗುಡಿವಾಡ ಪ್ರಭಾಕರರಾವ್ ಮತ್ತು ಹೆಸರಾಂತ ಕೋಳಿ ತಳಿಗಾರ ರಾಟಯ್ಯ ಅವರ ಕೋಳಿಗಳ ನಡುವಿನ ಕಾಳಗ 1 ಕೋಟಿ ರು.ಗೂ ಅಧಿಕ ಪಂಥಕ್ಕೆ ಕಾರಣವಾಗಿತ್ತು ಎನ್ನಲಾಗಿದೆ.

ಶ್ರೀಹರಿಕೋಟಾ: 3ನೇ ಉಡಾವಣಾ ವೇದಿಕೆಗೆ ಸಂಪುಟ ಅನುಮೋದನೆ

ದೆಹಲಿ: ಆಂಧ್ರಪ್ರದೇಶದ ಕರಾವಳಿ ಪ್ರದೇಶವಾದ ಶ್ರೀಹರಿಕೋಟಾದಲ್ಲಿನ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿ 3ನೇ ಉಡಾವಣಾ ವೇದಿಕೆ ನಿರ್ಮಿಸುವ ಯೋಜನೆಗೆ ಕೇಂದ್ರ ಸಚಿವ ಸಂಪುಟ ಸಭೆ ಗುರುವಾರ ಅನುಮೋದನೆ ನೀಡಿದೆ. ಈ ಹೊಸ ಉಡ್ಡಯನ ವೇದಿಕೆ ಮುಂದಿನ ಪೀಳಿಗೆಯ 'ಮಾನವ ಗಗನಯಾನ' ಕಾರ್ಯಕ್ರಮಗಳಿಗೆ ನೆರವಾಗಲಿದೆ. ಇದು ಎಲ್‌ವಿಎಂ-3 ಉಡಾವಣೆಗಳು ಮತ್ತು ಗಗನಯಾನ ಕಾರ್ಯಾಚರಣೆಗಳ ಅವಕಾಶಗಳನ್ನು ಮತ್ತಷ್ಟು ಹೆಚ್ಚಿಸಲು ಅನುಕೂಲ ಮಾಡಿಕೊಡಲಿದೆ ಎಂದು ನಿರೀಕ್ಷಿಸಲಾಗಿದೆ. ಭವಿಷ್ಯದ ಈ ಬಾಹ್ಯಾಕಾಶ ಸಂಶೋಧನಾ ಯೋಜನೆಗೆ ನೆರವಾಗಲಿರುವ 3ನೇ ಉಡ್ಡಯನ ವೇದಿಕೆಯ ನಿರ್ಮಾಣಕ್ಕೆ 3,985 ಕೋಟಿ ರು. ವೆಚ್ಚವಾಗಲಿದೆ. ನಿರ್ಮಾಣ ಕಾಮಗಾರಿ 48 ತಿಂಗಳುಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

2 ಮಕ್ಕಳಿದ್ದರಷ್ಟೇ ಚುನಾವಣೆ ಸ್ಪರ್ಧೆಗೆ ಅವಕಾಶ: ನಾಯ್ಡು



ತಿರುಪತಿ: ಈ ಬಾರಿ ಅಧಿಕಾರಕ್ಕೆ ಬಂದಾಗಿನಿಂದ ಜನಸಂಖ್ಯೆ ಹೆಚ್ಚಳದ ಅಗತ್ಯದ ಬಗ್ಗೆ ಪದೇ ಪದೇ ಉಲ್ಲೇಖಿಸುತ್ತಲೇ ಇರುವ ಆಂಧ್ರಪ್ರದೇಶ ಮುಖ್ಯಮಂತ್ರಿ, ತೆಲುಗು ದೇಶಂ ಪಕ್ಷದ ಮುಖ್ಯಸ್ಥ ನಾರಾ ಚಂದ್ರಬಾಬು ನಾಯ್ಡು, ಚುನಾವಣೆಗೆ ಸ್ಪರ್ಧಿಸುವುದಕ್ಕೆ ಹೊಸ ಅರ್ಹತೆಯ ನಿಯಮದ ಬಗ್ಗೆ ಮಾತನಾಡಿದ್ದಾರೆ.

ತಿರುಪತಿಯಲ್ಲಿ ಸುದ್ದಿಗಾರರ ಜತೆ ಗುರುವಾರ ಮಾತನಾಡುತ್ತಿದ್ದ ನಾಯ್ಡು, ಇಬ್ಬರು ಮಕ್ಕಳನ್ನು ಹೊಂದಿರುವವರಿಗಷ್ಟೇ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ಅವಕಾಶವಿರಲಿದೆ ಎಂದಿದ್ದಾರೆ. ಗ್ರಾಮ ಪಂಚಾಯತ್ ಸರಪಂಚ್, ಪುರಸಭೆ ಕೌನ್ಸಿಲರ್, ಮೇಯರ್ ಹುದ್ದೆಗೆ ಆಯ್ಕೆಯಾಗಲು ಇಚ್ಛಿಸುವವರು ಇಬ್ಬರಿಗಿಂಥ ಅಧಿಕ ಮಕ್ಕಳನ್ನು ಹೊಂದಿರಬೇಕಾದ್ದು ಕಡ್ಡಾಯ ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಜನಸಂಖ್ಯೆ ಹೆಚ್ಚಳ ಅಗತ್ಯವಾಗಿದೆ. ಮಕ್ಕಳ ಜನನ ಪ್ರಮಾಣ ಹೆಚ್ಚಿಸುವ ಉದ್ದೇಶದಿಂದಲೇ ಎರಡಕ್ಕಿಂತ ಅಧಿಕ ಮಕ್ಕಳಿರುವವರಿಗಷ್ಟೇ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಕ್ಕೆ ಅವಕಾಶ ಎಂಬ ಹೊಸ ನಿಯಮ ಜಾರಿಗೆ ತರಲಾಗುತ್ತಿದೆ ಎಂದು ಹೇಳಿದ್ದಾರೆ. ಹಿಂದೆ ಒಂದು ಕಾಲದಲ್ಲಿ ಜನಸಂಖ್ಯೆ ನಿಯಂತ್ರಿಸುವ ಸಲುವಾಗಿ ಹೆಚ್ಚು ಮಕ್ಕಳಿದ್ದವರಿಗೆ ಪಂಚಾಯತ್, ಪುರಸಭೆ ಮತ್ತಿತರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸ್ಪರ್ಧೆ ಮಾಡುವುದಕ್ಕೆ ಅವಕಾಶ ನೀಡುತ್ತಿರಲಿಲ್ಲ. ಈಗ ಪರಿಸ್ಥಿತಿ ಉಲ್ಟಾ ಆಗಿದೆ. ಹೆಚ್ಚು ಮಕ್ಕಳಿರುವವರಿಗಷ್ಟೇ ಚುನಾವಣೆ ಸ್ಪರ್ಧೆಗೆ ಅವಕಾಶ ನೀಡಬೇಕಾದ ಪರಿಸ್ಥಿತಿ ಬಂದಿದೆ ಎಂದು ಬದಲಾದ ಪರಿಸ್ಥಿತಿ ಕುರಿತು ವಿವರಿಸಿದ್ದಾರೆ.

ಮನೆ ತುಂಬಾ ಮಕ್ಕಳು

ಹಿಂದಿನ ಕಾಲದಲ್ಲಿ ಒಟ್ಟು ಕುಟುಂಬ, ಮನೆ ತುಂಬಾ ಮಕ್ಕಳು ಸಹಜ ಎನ್ನುವಂತಿತ್ತು. ಆದರೆ, ಈಗಿನ ಕಾಲದಲ್ಲಿ ಪ್ರತ್ಯೇಕ ಕುಟುಂಬ, ದಂಪತಿಗೆ ಒಂದೇ ಮಗ ಎಂಬ ಕ್ರಮವಿದೆ. ಹಾಗಾಗಿ ರಾಜ್ಯದಲ್ಲಿನ ಜನಸಂಖ್ಯೆ ಇಳಿಮುಖವಾಗುತ್ತಿದೆ, ಮಕ್ಕಳ ಸಂಖ್ಯೆಯಂತೂ ಕಳವಳಕಾರಿ ಪ್ರಮಾಣದಲ್ಲಿ ಕುಸಿತ ಕಂಡಿದೆ ಎಂದು ಆಂಧ್ರ ಸಿಎಂ ಚಂದ್ರಬಾಬು ನಾಯ್ಡು ನುಡಿದರು.

ಗೋಧ್ರಾ ರೈಲಿಗೆ ಬೆಂಕಿ ಕೇಸ್: ಫೆ.13ಕ್ಕೆ ಸುಪ್ರೀಂ ವಿಚಾರಣೆ

ದೆಹಲಿ: 2002ರ ಫೆ.27ರಂದು ಗುಜರಾತ್‌ನ ಗೋಧ್ರಾದಲ್ಲಿ ಸಬರಮತಿ ಎಕ್ಸ್‌ಪ್ರೆಸ್‌ನ-6 ಕೋಚ್‌ಗೆ ಬೆಂಕಿ ಹಚ್ಚಿದ್ದರಿಂದ 59 ಜನರು ಸಾವನ್ನಪ್ಪಿದ್ದರು. ಇದು ಗುಜರಾತ್ ಗಲಭೆಗೆ ಕಾರಣವಾಯಿತು. ರೈಲಿನ ಕೋಚ್‌ಗೆ ಬೆಂಕಿ ಇಟ್ಟ ಪ್ರಕರಣದಲ್ಲಿ ಗುಜರಾತ್ ಸರಕಾರ ಮತ್ತು ಇತರೆ ಅಪರಾಧಿಗಳು ಸಲ್ಲಿಸಿದ ಮೇಲ್ಮನವಿಗಳನ್ನು ಫೆ.13ರಂದು ವಿಚಾರಣೆ ನಡೆಸುವುದಾಗಿ, ಹಾಗೂ ಅಂದು ಮತ್ತೆ ಮುಂದೂಡಿಕೆ ನೀಡಲಾಗುವುದಿಲ್ಲ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಜೆ.ಕೆ. ಮಹೇಶ್ವರಿ ಮತ್ತು ಅರವಿಂದ್ ಕುಮಾರ್ ಅವರ ಪೀಠ ಗುರುವಾರ ಹೇಳಿದೆ. ಈ ಪ್ರಕರಣದಲ್ಲಿ ಸೆಷನ್ಸ್ ನ್ಯಾಯಾಲಯ 11 ಅಪರಾಧಿಗಳಿಗೆ ಮರಣದಂಡನೆ ಹಾಗೂ 20 ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಆದರೆ, ಗಲ್ಲು ಶಿಕ್ಷೆಗೆ ಒಳಗಾದ 11 ಅಪರಾಧಿಗಳ ಮೇಲ್ಮನವಿ ವಿಚಾರಣೆ ನಡೆಸಿದ ಹೈಕೋರ್ಟ್ ಶಿಕ್ಷೆಯ ಪ್ರಮಾಣವನ್ನು ಜೀವಾವಧಿಗೆ ಬದಲಿಸಿತ್ತು. ಹೈಕೋರ್ಟ್ ತೀರ್ಪು ಪ್ರಶ್ನಿಸಿ ಗುಜರಾತ್ ಸರಕಾರ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ.

ಅದಾನಿ ಸಮೂಹ ನಡುಗಿಸಲೆತ್ನಿಸಿದ್ದ ಸಂಸ್ಥೆ ಸ್ಥಗಿತ

ಹಿಂಡನ್‌ಬರ್ಗ್ ರಿಸರ್ಚ್ ಬಂದ್!

ದೆಹಲಿ: ಭಾರತದ ದೊಡ್ಡ ಉದ್ಯಮಿ ಗೌತಮ್ ಅದಾನಿ ಒಡೆತನದ ಹತ್ತಾರು ಕಂಪನಿಗಳ ಸಮೂಹ ಸೇರಿದಂತೆ ಹಲವು ಕಾರ್ಪೊರೇಟ್ ದಿಗ್ಗಜ ಕಂಪನಿಗಳ ಮಾಹಿತಿ ಸೋರಿಕೆ ಮಾಡುವ ಮೂಲಕ ಬೆದರಿಕೆ ಒಡ್ಡುತ್ತಿದ್ದ, ವಿವಾದಗಳನ್ನು ಸೃಷ್ಟಿಸುತ್ತಿದ್ದ ಅಮೆರಿಕದ ಶಾರ್ಟ್ ಸೆಲ್ಲರ್ ಸಂಸ್ಥೆ 'ಹಿಂಡನ್‌ಬರ್ಗ್ ರಿಸರ್ಚ್' ಸಂಸ್ಥೆ ಕಾರ್ಯಾಚರಣೆ ಸ್ಥಗಿತಗೊಳಿಸುತ್ತಿದೆ.

ಅಮೆರಿಕ ಮೂಲದ ಸಣ್ಣ ದತ್ತಾಂಶ ಮಾರಾಟ ಘಟಕವಾಗಿರುವ ಹಿಂಡನ್ ಬರ್ಗ್ ಸಂಸ್ಥೆಯನ್ನು ಸದ್ಯವೇ ವಿಸರ್ಜಿಸಲಾಗುತ್ತಿದೆ. ಈ ನಿರ್ಧಾರಕ್ಕೆ ನಿರ್ದಿಷ್ಟ ಕಾರಣವೇನೂ ಇಲ್ಲ, ಯಾವುದೇ ಬೆದರಿಕೆಯೂ ಬಂದಿಲ್ಲ, ಆರೋಗ್ಯ ಸಮಸ್ಯೆ ಮತ್ತು ದೊಡ್ಡ ವೈಯಕ್ತಿಕ ಕಾರಣಗಳೂ ಎದುರಾಗಿಲ್ಲ ಎಂದು ಸಂಸ್ಥೆಯ ಸಂಸ್ಥಾಪಕ ನಾಟೆ ಆ್ಯಂಡರ್ಸನ್ ಗುರುವಾರ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದಾರೆ.

ವಿಶ್ವದ ಅನೇಕ ವಿಚಾರಗಳು, ನಾನು ಕಾಳಜಿ ವಹಿಸುವ ವ್ಯಕ್ತಿಗಳನ್ನು ಮಿಸ್ ಮಾಡಿಕೊಳ್ಳುತ್ತಿರುವೆ. ಕುಟುಂಬ ಮತ್ತು ಸಹೋದ್ಯೋಗಿ ತಂಡದ ಜತೆ ಕಳೆದ ವರ್ಷಾಂತ್ಯವೇ ಈ ಬಗ್ಗೆ ಚರ್ಚಿಸಿದ್ದೆ. ನಿಗದಿತ ಕೆಲ ವಿಚಾರಗಳ ಸಂಶೋಧನೆ ಒಂದು ಹಂತಕ್ಕೆ ಬಂದ ಮೇಲೆ ಸಂಸ್ಥೆಯನ್ನು ಸ್ಥಗಿತಗೊಳಿಸಲು ನಿರ್ಧರಿಸಿದ್ದೆ. ನಿಯಮದಂತೆ ಈ ಕುರಿತು ಮಾಹಿತಿ ಹಂಚಿಕೊಳ್ಳುತ್ತಿರುವೆ ಎಂದು ಆಂಡರ್ಸನ್ ಬರೆದಿದ್ದಾರೆ.

2017ರಲ್ಲಿ 10 ಸಿಬ್ಬಂದಿಗಳೊಂದಿಗೆ ಸಣ್ಣ ಮಟ್ಟದಲ್ಲಿ ಕಾರ್ಯಾರಂಭ ಮಾಡಿದ ಹಿಂಡನ್‌ಬರ್ಗ್, ಕಡಿಮೆ ಅವಧಿಯಲ್ಲಿ ವಿಶ್ವದ ದಿಗ್ಗಜ ಕಾರ್ಪೊರೇಟ್ ಕಂಪನಿಗಳ ಲೆಕ್ಕಪತ್ರಗಳನ್ನು ಬಯಲಿಗೆಳೆದು ಅಕ್ರಮಗಳನ್ನು ಹೊರಹಾಕಲೆತ್ನಿಸಿತ್ತು. 2023ರಲ್ಲಿ ಭಾರತದ ಉದ್ಯಮಗಳ ವಿರುದ್ಧ ವರದಿ ಪ್ರಕಟಿಸಿತ್ತು.

ಅದಾನಿ ವಿರುದ್ಧ ಆರೋಪ: ಅದಾನಿ ಕಂಪನಿ ಸಮೂಹ ಸಾಗರೋತ್ತರ ವಹಿವಾಟಿನ ತೆರಿಗೆ ವಂಚಿಸುತ್ತಿದೆ ಎಂದು ಆರೋಪಿಸಿತ್ತು. ಕಂಪನಿಯ ಷೇರುಗಳ ಬೆಲೆ ಕೃತಕವಾಗಿ ಹೆಚ್ಚಿಸಲು ಮಾರಿಷಸ್ ನಿಧಿ ಬಳಸಲಾಗಿದೆ. ಅದರಲ್ಲಿ ಸೆಬಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಪಾಲು ಹೊಂದಿದ್ದಾರೆ ಎಂದು ಹಿಂಡನ್‌ಬರ್ಗ್ 2024ರಲ್ಲಿ ಆರೋಪಿಸಿತ್ತು. ಇದು ಭಾರತದ ಷೇರುಪೇಟೆಯಲ್ಲಿ ಬಹಳ ಸಂಚಲನ ಉಂಟು ಮಾಡಿತ್ತು. ಪರಿಣಾಮ ಅದಾನಿ ಗ್ರೂಪ್ ಷೇರುಗಳ ಮೌಲ್ಯದಲ್ಲಿ ಭಾರೀ ಕುಸಿತವಾಗಿತ್ತು.

ರು.500ಕ್ಕೆ ಸಿಲಿಂಡರ್, ಉಚಿತ ಪಡಿತರ-ವಿದ್ಯುತ್

ದೆಹಲಿಗೆ ಕಾಂಗ್ರೆಸ್ ಪ್ರಣಾಳಿಕೆ

ದೆಹಲಿ: ದೆಹಲಿಯಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ನಗರ ನಿವಾಸಿಗಳಿಗೆ 500 ರು.ಗೆ ಅಡುಗೆ ಅನಿಲ ಸಿಲಿಂಡರ್ ನೀಡಲಾಗುವುದು. ಅಲ್ಲದೇ, ಪಡಿತರ ಕಿಟ್ ಮತ್ತು 300 ಯುನಿಟ್ ವಿದ್ಯುತ್ ಪ್ರತಿ ಮನೆಗೆ ಉಚಿತವಾಗಿ ನೀಡುವುದಾಗಿ ಕಾಂಗ್ರೆಸ್ ಗುರುವಾರ ಭರವಸೆ ನೀಡಿದೆ.

ಆಂಧ್ರ ಸಿಎಂ ರೇವಂತ್ ರೆಡ್ಡಿ ದೆಹಲಿ ಚುನಾವಣೆಗೆ ಗುರುವಾರ ಕಾಂಗ್ರೆಸ್ ಪ್ರಣಾಳಿಕೆ ಬಿಡುಗಡೆ ಮಾಡಿದರು.

ದೆಹಲಿಯಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಅಧಿಕಾರಕ್ಕೆ ಬರುತ್ತಲೇ ಕಾಂಗ್ರೆಸ್ 5 ಭರವಸೆಗಳನ್ನು ಈಡೇರಿಸುತ್ತದೆ ಎಂದು ಘೋಷಿಸಿದರು. ದೆಹಲಿ ವಿಧಾನಸಭಾ ಚುನಾವಣೆಗೆ ಎಐಸಿಸಿ ಉಸ್ತುವಾರಿಯಾಗಿರುವ ಖಾಜಿ ನಿಜಾಮುದ್ದೀನ್ ಮತ್ತು ದೆಹಲಿ ಕಾಂಗ್ರೆಸ್ ಮುಖ್ಯಸ್ಥ ದೇವೇಂದ್ರ ಯಾದವ್ ಜತೆಗೂಡಿ ಪ್ರಣಾಳಿಕೆ ಬಿಡುಗಡೆ ಮಾಡಿದರು.

ಮಹಿಳೆಯರಿಗೆ ಮಾಸಿಕ 2,500 ರು. ಆರ್ಥಿಕ ನೆರವು ನೀಡುರ 'ಪ್ಯಾರಿ ದೀದಿ ಯೋಜನೆ'ಯನ್ನು ಜ.6ರಂದು ಕರ್ನಾಟಕ ಡಿಸಿಎಂ ಡಿ.ಕೆ.ಶಿವಕುಮಾರ್ ಪ್ರಕಟಿಸಿದ್ದರು. ಪ್ರತಿ ಕುಟುಂಬಕ್ಕೆ 25 ಲಕ್ಷ ರು.ವರೆಗೂ ಉಚಿತ ಆರೋಗ್ಯ ವಿಮೆ ಒದಗಿಸುವ 'ಜೀವನ ರಕ್ಷಾ ಯೋಜನೆ'ಯನ್ನು ಜ.8ರಂದು ಘೋಷಿಸಲಾಗಿತ್ತು. ದೆಹಲಿಯ ವಿದ್ಯಾವಂತ ನಿರುದ್ಯೋಗಿ ಯುವಜನರಿಗೆ ಮಾಸಿಕ 8,500 ರು.ಗಳನ್ನು ಒಂದು ವರ್ಷದವರೆಗೆ ನೀಡುವುದಾಗಿ ಕಾಂಗ್ರೆಸ್ ಭರವಸೆ ನೀಡಿದೆ.

ಹಲವು ಬಗೆ ಯತ್ನ: ಆಮ್ ಆದ್ಮಿ ಪಕ್ಷ 3ನೇ ಬಾರಿಗೆ ಅಧಿಕಾರಕ್ಕೇರಲು ಎಲ್ಲಾ ಬಗೆಯ ಯತ್ನಗಳನ್ನೂ ನಡೆಸಿದ್ದರೆ, ದಶಕಗಳಿಂದ ದೆಹಲಿ ವಿಧಾನಸಭೆಯ ಅಧಿಕಾರದ ಮೊಗಸಾಲೆಯಿಂದ ದೂರವಾಗಿರುವ ಕಾಂಗ್ರೆಸ್, ಈ ಬಾರಿ ಆಡಳಿತ ಪಕ್ಷವಾಗಬೇಕೆಂದು ಪ್ರಯತ್ನಿಸುತ್ತಿದೆ. ಅದರ ಭಾಗವಾಗಿಯೇ ಜನಾಕರ್ಷಕ ಪ್ರಣಾಳಿಕೆ ಬಿಡುಗಡೆ ಮಾಡುವ ಪ್ರಯತ್ನ ನಡೆಸಿದೆ.

ಈವರೆಗೆ 68 ಕ್ಷೇತ್ರಗಳಿಗೆ ಅಭ್ಯರ್ಥಿ

70 ಸದಸ್ಯ ಬಲದ ದೆಹಲಿ ವಿಧಾನಸಭೆಗೆ ಫೆ.5ರಂದು ಚುನಾವಣೆ ನಡೆಯಲಿದ್ದು, ಫೆ.8ರಂದು ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗಲಿದೆ. ಮತದಾನಕ್ಕೆ ದಿನಗಣನೆ ನಡೆದಿದ್ದರೆ ಕಾಂಗ್ರೆಸ್ ಪಕ್ಷ ಹಂತ ಹಂತವಾಗಿ ಅಭ್ಯರ್ಥಿಗಳ ಹೆಸರು ಪ್ರಕಟಿಸುತ್ತಿದೆ. ಮಂಗಳವಾರ 15 ಅಭ್ಯರ್ಥಿ ಗಳ ಪಟ್ಟಿ ಪ್ರಕಟಿಸಿದ್ದ ಕಾಂಗ್ರೆಸ್ ಪಕ್ಷ, ಗುರುವಾರ 5 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದೆ. ಡಿ.24ರಂದು 26 ಅಭ್ಯರ್ಥಿ, ಅದಕ್ಕೂ ಮುನ್ನ 21 ಅಭ್ಯರ್ಥಿಗಳ ಹೆಸರು ಪ್ರಕಟಿಸಿತ್ತು. ಈವರೆಗೆ ಕಾಂಗ್ರೆಸ್ ಒಟ್ಟು 68 ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದೆ. ಬಿಜೆಪಿ ಅಭ್ಯರ್ಥಿ ಗಳ ಪಟ್ಟಿಯೂ ಅಪೂರ್ಣವಾಗಿದೆ. ಆಮ್ ಆದ್ಮಿ ಪಕ್ಷ ಮಾತ್ರವೇ ಎಲ್ಲಾ 70 ಕ್ಷೇತ್ರಗಳಿಗೂ ಸ್ಪರ್ಧೆ ಮಾಡುತ್ತಿದೆ.

ಕೇಜ್ರಿವಾಲ್ ಬಳಿ ಸ್ವಂತ ಮನೆ, ಕಾರು ಇಲ್ಲ!

ದೆಹಲಿ: ದೆಹಲಿ ಮಾಜಿ ಮುಖ್ಯಮಂತ್ರಿ, ಆಮ್ ಆದ್ಮಿ ಪಕ್ಷದ(ಎಎಪಿ) ನಾಯಕ ಅರವಿಂದ್ ಕೇಜ್ರಿವಾಲ್ ಹೊಸ ದಿಲ್ಲಿ ವಿಧಾನಸಭಾ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದ್ದು, ಜತೆಗೆ ಪ್ರಮಾಣಪತ್ರದಲ್ಲಿ ಆಸ್ತಿ ವಿವರವನ್ನೂ ಘೋಷಿಸಿದ್ದಾರೆ. ಸ್ವಂತ ಮನೆ, ಕಾರು ಇಲ್ಲ. ತಮ್ಮ ಬಳಿ 40,000 ರು. ಮತ್ತು ಪತ್ನಿ ಸುನೀತಾ ಬಳಿ 32,000 ರು. ನಗದು ಇದೆ. ತಮ್ಮ ಬಳಿ ಚರಾಸ್ತಿ 3.46 ಲಕ್ಷ ರು., ಸುನೀತಾ ಬಳಿ ಚರಾಸ್ತಿ 1 ಕೋಟಿ ರು. ಇದೆ. 1.7 ಕೋಟಿ ರು.ಗಳ ಸ್ಥಿರಾಸ್ತಿ ಇದೆ. ಸುನೀತಾ ಬಳಿ 1.5 ಕೋಟಿ ರು. ಸ್ಥಿರಾಸ್ತಿ ಇದೆ. ಸುನೀತಾ ಗುರುಗ್ರಾಮದಲ್ಲಿ ಒಂದು ಮನೆ, 2017ರ ಮಾಡೆಲ್ ಮಾರುತಿ ಬಲೆನೊ ಕಾರು ಹೊಂದಿದ್ದಾರೆ. ಆಕೆ ಬಳಿ 320 ಗ್ರಾಂ ಚಿನ್ನಾಭರಣ(25.9 ಲಕ್ಷ ರು. ಮೌಲ್ಯ) ಇವೆ. 2023-24ರಲ್ಲಿ ತಮಗೆ ಶಾಸಕಾಂಗ ವೇತನವಾಗಿ 7,21,530 ರು. ಬಂದಿದೆ. ಸುನೀತಾಗೆ ಪಿಂಚಣಿಯಿಂದ 14,10,740 ರು. ಬಂದಿದೆ. ಇಬ್ಬರೂ ಯಾವುದೇ ರೀತಿಯ ಸಾಲ ಮಾಡಿಲ್ಲ ಎಂದು ಪ್ರಮಾಣ ಪತ್ರದಲ್ಲಿ ವಿವರಿಸಿದ್ದಾರೆ. ಪ್ರಸ್ತುತ 14 ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿರುವುದಾಗಿಯೂ ಕೇಜ್ರಿವಾಲ್ ವಿವರಿಸಿದ್ದಾರೆ.

ಮೋದಿ, ಅಮಿತ್ ಶಾ, ರಾಜನಾಥ್ ಸಿಂಗ್, ಸಿಎಂ ಯೋಗಿ

ಬಿಜೆಪಿಗೆ 40 ಸ್ಟಾರ್ ಪ್ರಚಾರಕರು

ದೆಹಲಿ: ದೆಹಲಿ ವಿಧಾನಸಭೆ ಚುನಾವಣೆಗೆ ಅದಾಗಲೇ ಪ್ರಚಾರ ಕಾರ್ಯ ಆರಂಭ ಗೊಂಡಿದ್ದು, ಈ ಬಾರಿ ಅಧಿಕಾರಕ್ಕೇರಲೇ ಬೇಕು ಎಂದು ಪಣ ತೊಟ್ಟಿರುವ ಬಿಜೆಪಿ, ಪ್ರಚಾರ ಕಾರ್ಯವನ್ನು ಇನ್ನಷ್ಟು ಜನಾಕರ್ಷಕವಾಗಿಸಲು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ 40 ಸ್ಟಾರ್ ಪ್ರಚಾರಕರ ಪಟ್ಟಿ ಪ್ರಕಟಿಸಿದೆ. ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್ ಹಾಗೂ ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಸೇರಿದಂತೆ ಬಿಜೆಪಿ ಆಡಳಿತದ ರಾಜ್ಯಗಳಲ್ಲಿನ 7 ಮುಖ್ಯಮಂತ್ರಿಗಳ ಹೆಸರನ್ನೂ ಸ್ಟಾರ್ ಪ್ರಚಾರಕರ ಪಟ್ಟಿಗೆ ಸೇರಿಸಿದೆ.

ಪ್ರಧಾನಿ ಮೋದಿ 2-3 ರ‍್ಯಾಲಿ ನಡೆಸುವ ನಿರೀಕ್ಷೆ ಇದೆ. ದೆಹಲಿಯಲ್ಲಿ ಪ್ರಧಾನಿ ರೋಡ್ ಷೋಗೂ ಬೇಡಿಕೆ ಇದೆ. ಆದರೆ ಪಕ್ಷದ ಉನ್ನತ ನಾಯಕರು ಈ ಬಗ್ಗೆ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಬಿಜೆಪಿ ಪದಾಧಿಕಾರಿಯೊಬ್ಬರು ಹೇಳಿದರು. ಸಚಿವ ಅಮಿತ್ ಶಾ ದೆಹಲಿ ನಗರದ 7 ಲೋಕಸಭಾ ಕ್ಷೇತ್ರಗಳಲ್ಲಿಯೂ ಚುನಾವಣಾ ರ‍್ಯಾಲಿ ನಡೆಸಲಿದ್ದಾರೆ.

ಉತ್ತರ ಪ್ರದೇಶದ ಪೂರ್ವ ಭಾಗ ಮತ್ತು ಬಿಹಾರ ರಾಜ್ಯದ ಜನರು ರಾಜಧಾನಿ ನಗರ ದೆಹಲಿಯಲ್ಲಿ ಗಣನೀಯ ಸಂಖ್ಯೆಯಲ್ಲಿದ್ದಾರೆ. ಆ ಮತಬ್ಯಾಂಕ್ ಆಕರ್ಷಣೆಗಾಗಿ ಭೋಜ್‌ಪುರಿ ಸಿನಿತಾರೆಯರು, ಸಂಸದ ಮನೋಜ್ ತಿವಾರಿ ಮತ್ತು ರವಿ ಕಿಶನ್ ಮತ್ತು ದಿನೇಶ್ ಲಾಲ್ ಯಾದವ್ ನಿರಾಹುವಾ ಸೇರಿದಂತೆ ಹಲವು ನಾಯಕರು ಪ್ರಚಾರ ನಡೆಸಲಿದ್ದಾರೆ. ಪೂರ್ವಾಂಚಲ ಭಾಗದ ಬಿಜೆಪಿ ನಾಯಕರೂ ಪ್ರಚಾರ ಪ್ರಮುಖರ ಪಟ್ಟಿಯಲ್ಲಿದ್ದಾರೆ. ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ಶಿವರಾಜ್ ಸಿಂಗ್ ಚೌಹಾಣ್, ಮನೋಹರ ಲಾಲ್ ಖಟ್ಟರ್, ಪಿಯೂಷ್ ಗೋಯಲ್, ಧರ್ಮೇಂದ್ರ ಪ್ರಧಾನ್, ಹರ್ದೀಪ್ ಸಿಂಗ್ ಪುರಿ ಮತ್ತು ಗಿರಿರಾಜ್ ಸಿಂಗ್, ಮುಖ್ಯಮಂತ್ರಿಗಳಾದ ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ್, ಮಹಾರಾಷ್ಟ್ರದ ದೇವೇಂದ್ರ ಫಡ್ನವಿಸ್, ಅಸ್ಸಾಂನ ಹಿಮಂತ ಬಿಸ್ವಾ ಶರ್ಮಾ ಸ್ಟಾರ್ ಪ್ರಚಾರಕರಾಗಿದ್ದಾರೆ.

ಸಮಾಚಾರ ಸಣ್ಣದಲ್ಲ

ಗಣೇಶ್‌ಗೆ 'ಆತಿಥ್ಯ ರತ್ನ ಪ್ರಶಸ್ತಿ' ನೀಡಿ ಸನ್ಮಾನ

ಹೊಸನಗರ: ನಗರದ ಮಾವಿನಕೊಪ್ಪದಲ್ಲಿ ಸುಮಾರು 25ವರ್ಷಗಳಿಂದ ನಾಗರಕ್ಷಾ ಕ್ಯಾಂಟಿನ್ ನಡೆಸುತ್ತಿದ್ದ ಮಾವಿನಕೊಪ್ಪ ಗಣೇಶ್‌ರವರಿಗೆ ಸಾಗರ ಪ್ರಾಂತ್ಯದ ಹೋಟಲ್ ಮಾಲೀಕರ ಕ್ಷೇಮಾಭವೃದ್ಧಿ ಟ್ರಸ್ಟ್ ವತಿಯಿಂದ, ಸಾಗರದಲ್ಲಿ ಸನ್ಮಾನಿಸಿ ಆತಿಥ್ಯ ರತ್ನ ಬಿರುದು ನೀಡಿ ಗೌರವಿಸಲಾಯಿತು. ಅಬಿನಂದನೆ: ಇವರಿಗೆ ಕೋಟೆಗಾರ್ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಶಶಿಧರ್‌ನಾಯ್ಕ್, ಉಪಾಧ್ಯಕ್ಷರಾದ ಪಿ.ಆರ್ ಸಂಜೀವಣ್ಣ ಕಾರ್ಯದರ್ಶಿ ಹೆಚ್.ಆರ್ ಸುರೇಶ್ ಹಾಗೂ ಹೆಚ್. ಶ್ರೀನಿವಾಸ್ ಸಂಘದ ಎಲ್ಲ ಪದಾಧಿಕಾರಿಗಳು ಗ್ರಾಮ ಪಂಚಾಯತಿ ಸದಸ್ಯೆ ದಿವ್ಯ ಬೃಂದಾವನ ಪ್ರವೀಣ್, ಗೌತಮ್ ಕುಮಾರಸ್ವಾಮಿ ಇನ್ನೂ ಮುಂತಾದವರು ಅಭಿನಂದಿಸಿ ಇನ್ನೂ ಹೆಚ್ಚಿನ ಸೇವೆ ಜನರಿಗೆ ನೀಡುವುದರ ಜತೆಗೆ ಹೆಚ್ಚು ಪ್ರಶಸ್ತಿಗಳಿಸಿ ಹೊಸನಗರ ತಾಲೂಕಿಗೆ ಕೀರ್ತಿ ತರಲಿ ಎಂದು ಹಾರೈಸಿದ್ದಾರೆ.

ಮಹಾರಾಣಿ ತಂಡ ಕ್ರಿಕೆಟ್‌ನಲ್ಲಿ ದ್ವಿತೀಯ

ಶಿವಮೊಗ್ಗ: ಚಿಕ್ಕಮಗಳೂರಿನ ಟೈಗರ್ ಕ್ಲಬ್ ವತಿಯಿಂದ ಆ ಯೋಜಿಸಿದ್ದ ಚಿಕ್ಕಮಗಳೂರು ಗೌಡ್ತಿಯರ ಪ್ರೀಮಿಯರ್ ಲೀಗ್ (ಸಿಜಿಪಿಎಲ್) ರಾಜ್ಯಮಟ್ಟದ ಕ್ರಿಕೆಟ್ ಟೂರ್ನಿಯಲ್ಲಿ ಮಹಾರಾಣಿ ತಂಡ ದ್ವಿತೀಯ ಸ್ಥಾನ ಪಡೆದುಕೊಂಡು 70 ಸಾವಿರ ರು. ನಗದು ಬಹುಮಾನ ವಿಜೇತವಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಒಟ್ಟು 8 ತಂಡಗಳು ಭಾಗವಹಿಸಿದ್ದವು. ಮಹಾರಾಣಿ ತಂಡ ಉತ್ತಮ ಪ್ರದರ್ಶನ ನೀಡುವ ಜತೆಯಲ್ಲಿ ವುಮನ್ ಆಫ್ ದಿ ಮ್ಯಾಚ್ ಪ್ರಶಸ್ತಿ ಗೆದ್ದಿದ್ದಾರೆ. ಶಿವಮೊಗ್ಗದ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಮಹಾಪೋಷಕರಾದ ಪ್ರೊ. ಅನುರಾಧ ಪಟೇಲ್ ಮತ್ತು ಎಕೆವಿಎಸ್ ರಾಜ್ಯಾಧ್ಯಕ್ಷ ಸಿ.ಜಿ.ಗಂಗಾಧರ ಗೌಡ ಅವರ ನೇತೃತ್ವದಲ್ಲಿ ಮಹಾರಾಣಿ ತಂಡ ರಚಿಸಿ ಮಂಜುಳಾ ಅವರನ್ನು ತಂಡದ ನಾಯಕಿಯಾಗಿ ನೇಮಿ ಸಲಾಗಿತ್ತು. ತಂಡದ ಮಾಲಿಕತ್ವವನ್ನು ಶಿವಮೊಗ್ಗದ ಪ್ರೊ. ಅನುರಾಧ ಪಟೇಲ್, ಲೀಲಾವತಿ ಗಂಗಾಧರ್ ಗೌಡ, ಶಿವಮೊಗ್ಗದ ಗಾಯತ್ರಿ ಯಲ್ಲಪ್ಪ ಗೌಡ ಮತ್ತು ಲತಾ ರಂಗನಾಥ ವಹಿಸಿ ಕೊಂಡಿದ್ದರು. ಕಾರ್ಯಕ್ರಮದಲ್ಲಿ ಪ್ರೊ. ಅನುರಾಧ ಪಟೇಲ್ ಎಲ್ಲಾ ಆಟಗಾರರನ್ನು ಸನ್ಮಾನಿಸಿದರು. ಸಿಜಿಪಿಎಲ್ ಖಜಾಂಚಿ ಕೃಷ್ಣವೇಣಿ ರಮೇಶ್, ನಿರ್ದೇಶಕಿ ಧರಣಿ ನಾಗೇಶ್ ಕಾರ್ಯ ಕ್ರಮದಲ್ಲಿ ಪಾಲ್ಗೊಂಡಿದ್ದರು. ಕ್ರಿಕೆಟ್ ಮಹಿಳಾ ಆಟಗಾರರನ್ನು ಶಿವಮೊಗ್ಗದ ಮಹಿಳಾ ಒಕ್ಕಲಿಗರ ವೇದಿಕೆ ಅಧ್ಯಕ್ಷೆ ಅರ್ಚನಾ ಮಲ್ಲಿಕಾರ್ಜುನ ಅಭಿನಂದಿಸಿದರು.

ಶ್ರೀಕೃಷ್ಣಾರ್ಪಣ ನಾಳೆ

ಶಿವಮೊಗ್ಗ: ಗೀತ ಮಿತ್ರ ಆಧ್ಯಾತ್ಮಿಕ ಮಾಸ ಪತ್ರಿಕೆ ಶಿವಮೊಗ್ಗ, ಸುಬ್ರಹ್ಮಣ್ಯ ಶ್ರೇಷ್ಠಿ ರುಕ್ಮಣಮ್ಮ ಪ್ರತಿಷ್ಠಾನ ಬಾಣಾವರ ಇವರ ಸಂಯುಕ್ತಾಶ್ರಯದಲ್ಲಿ ಜ. 18 ರಂದು ಬೆಳಗ್ಗೆ 9 ಗಂಟೆಗೆ ಕುವೆಂಪು ರಂಗಮಂದಿ ರದಲ್ಲಿ ಶ್ರೀಕೃಷ್ಣಾರ್ಪಣ–2025 ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷೆ ಸರೋಜ ಗೋವಿಂದರಾಜ್ ಹೇಳಿದರು.ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಗೀತಮಿತ್ರ ಆಧ್ಯಾತ್ಮಿಕ ಮಾಸ ಪತ್ರಿಕೆ 1963ರಲ್ಲಿ ಪ್ರಾರಂಭವಾಗಿ ಮುಂದುವರೆಯುತ್ತಿದೆ. ಗೀತಮಿತ್ರ ಮತ್ತು ಎಸ್.ಎಸ್.ಆರ್. ಪ್ರತಿಷ್ಠಾನ ಭಗವದ್ಗೀತ ಕಂಠ ಪಾಠ ಸ್ಪರ್ಧೆ 25 ವರ್ಷಗಳಿಂದ ನಡೆಸುತ್ತಾ ಬಂದಿದೆ. ಶ್ರೀ ಜಡೆಸಿದ್ದ ಶಿವಯೋಗೀಶ್ವರ ಮಠದ ಶಿವಾನಂದ ಸ್ವಾಮೀಜಿ ಸಾನ್ನಿಧ್ಯವಹಿಸಲಿದ್ದು, ಶಾಸಕ ಡಿ.ಎಸ್. ಅರುಣ್ ಉದ್ಘಾಟಿಸುವರು ಎಂದರು.ಪತ್ರಿಕಾಗೋಷ್ಠಿಯಲ್ಲಿ ಶಾರದಾ ಗೋಪಾಲ್, ಟಿ.ಆರ್. ಅಶ್ವತ್ಥ್ ನಾರಾಯ ಣಶೆಟ್ಟಿ, ಮಂಜುನಾಥ್ ಬೆಲಗೂರು, ಉಪಸ್ಥಿತರಿದ್ದರು.

ತೀರ್ಥಹಳ್ಳಿ ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ತೀರ್ಥಹಳ್ಳಿ ಶ್ರೀ ರಾಮೇಶ್ವರ ದೇವರ ರಥೋತ್ಸವ ವೈಭವದಿಂದ ನೆರವೇ ರಿತು. ಸಂಕ್ರಾಂತಿ ಉತ್ಸವ ಸಮಿತಿ ಹಮ್ಮಿಕೊಂಡಿದ್ದ ಈ ರಥೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.

{ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಕೆಪಿಸಿಸಿ ಹುದ್ದೆ ಅಂಗಡಿಯಲ್ಲೂ ಸಿಗುವುದಿಲ್ಲ, ಮಾಧ್ಯಮಗಳ ಮುಂದೆ ಮಾತನಾಡಿದರೂ ಸಿಗುವುದಿಲ್ಲ. ನಾವು ಮಾಡುವ ಕೆಲಸ, ಶ್ರಮವನ್ನು ಪಕ್ಷದ ನಾಯಕರು ಗುರುತಿಸಿ ಅದಕ್ಕೆ ಸೂಕ್ತ ಹುದ್ದೆ ನೀಡುತ್ತಾರೆ. ಮಾಧ್ಯಮಗಳ ಮುಖಾಂತರ ಯಾರಾದರೂ ಹುದ್ದೆ ಕೇಳುತ್ತಾರೆಯೇ? ಇದನ್ನೆಲ್ಲಾ ಹೊಸದಾಗಿ ಕೇಳುತ್ತಿರುವೆ.

ನಾಳೆ ಅಡಕೆ ಬೆಳೆಗಾರರ ಸಮಾವೇಶ | ಉದ್ಘಾಟನೆಗೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್

ಅಡಕೆ ಹಾನಿ ವರದಿ ಕುರಿತು ತನಿಖೆ

ಶಿವಮೊಗ್ಗ: ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್ ಅವರು ಜ.18 ರಂದು ಶಿವಮೊಗ್ಗ ಜಿಲ್ಲೆಗೆ ಆಗಮಿಸಲಿದ್ದು ಈ ಸಂದರ್ಭದಲ್ಲಿ ಅಡಕೆ ಹಾನಿಕಾರಕ ಎಂಬ ವರದಿ ಕುರಿತು ತಜ್ಞರಿಂದ ತನಿಖೆ ನಡೆಸುವಂತೆ ಕೋರಲು ತೀರ್ಮಾನಿಸಲಾಗಿದೆ ಎಂದು ಸಂಸದ ಬಿ.ವೈ.ರಾಘವೇಂದ್ರ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜ.18 ರಂದು ಬೆಳಗ್ಗೆ 10 ಗಂಟೆಗೆ ಅಗ್ರಿಕಲ್ಚರ್ ಬೇಸಿಕ್ ಮಲೆನಾಡು ಸ್ಟಾರ್ಟ್ ಅಪ್ ಸಮ್ಮೇಳನವನ್ನು ಶಿವಮೊಗ್ಗದ ಪೆಸಿಟ್ ಕಾಲೇಜ್ ನಲ್ಲಿ ಉದ್ಘಾಟನೆ ಮಾಡಲಿದ್ದಾರೆ. ನಂತರ ಅವರು ಸಾಗರದ ಸಂತೆ ಮೈದಾನದಲ್ಲಿ ನಡೆಯುವ ಅಡಕೆ ಬೆಳೆಗಾರರ ಬೃಹತ್ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಈ ಸಮಾರಂಭದಲ್ಲಿ ತೋಟಗಾರಿಕಾ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಆಗಮಿಸಲಿದ್ದಾರೆ. ಸಚಿವ ಮಧು ಬಂಗಾರಪ್ಪ, ಶಾಸಕ ಗೋಪಾಲಕೃಷ್ಣ ಬೇಳೂರು, ಮಾಜಿ ಸಚಿವ ಕಾಗೋಡು ತಿಮ್ಮಪ್ಪ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ಆರಗ ಜ್ಞಾನೇಂದ್ರ, ಡಾ. ಆರ್.ಎಂ.ಮಂಜುನಾಥ್ ಗೌಡ, ಮಾಜಿ ಸಚಿವ ಹೆಚ್.ಹಾಲಪ್ಪ, ಮೊದಲಾದವರು ಭಾಗಿಯಾಗಲಿದ್ದಾರೆ. ಅಡಿಕೆ ಬೆಳೆಗಾರ ಸಮಾವೇಶ ಸಮಿತಿಯ ಅಧ್ಯಕ್ಷ ಹೆಚ್.ಎಸ್.ಮಂಜಪ್ಪ ಹಾಗೂ ಸಾಗರ ಪ್ರಾಂತ್ಯ ಅಡಿಕೆ ಬೆಳೆಗಾರರ ಸಂಘದ ಅಧ್ಯಕ್ಷ ವ.ಶಂ. ರಾಮಚಂದ್ರಭಟ್ ಅವರ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು.

ಶಾಸಕ ಬಿ.ವೈ.ರಾಘವೇಂದ್ರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಸಮಾವೇಶದಲ್ಲಿ ಅಡಿಕೆ ಬೆಳೆಗಾರರ ಪ್ರಮುಖ ಉದ್ದೇಶಗಳಾದ ವಿದೇಶಿ ಅಡಿಕೆ ಆಮದು ನಿಯಂತ್ರಣ, ಅಡಕೆಗೆ ಬರುವ ರೋಗಬಾಧೆ ಪರಿಹಾರಕ್ಕೆ ಕ್ರಮ, ವನ್ಯಜೀವಿ ಗಳ ಹಾವಳಿ ತಡೆಗಟ್ಟುವಂತೆ, ಅಡಿಕೆ ಬೆಳೆಗಾರರ ಸೊಪ್ಪಿನ ಬೆಟ್ಟದ ಸಮಸ್ಯೆ ಪರಿಹಾರ ಹಾಗೂ ರಾಷ್ಟ್ರೀಯ ಅಡಿಕೆ ಮಂಡಳಿ ರಚನೆಗೆ ಒತ್ತಾಯಿಸಲಾಗುವುದು ಎಂದರು.

ವರ್ಲ್ಡ್ ಹೆಲ್ತ್ ಆರ್ಗನೈಸೇಷನ್ ನೀಡಿದ್ದ ಅಡಿಕೆ ಹಾನಿಕಾರಕ ವರದಿಯಲ್ಲಿ ಸಿಗರೇಟ್ ಲಾಬಿಗಳಿಂದ ವರದಿ ಹೊರಗೆ ಬಂದಿರುವ ಶಂಕೆ ಇದೆ. ಹಾಗಾಗಿ ನುರಿತ ತಜ್ಞರ ತಂಡ ರಚಿಸಿ, ತನಿಖೆ ನಡೆಸಲು ಸಚಿವರಲ್ಲಿ ಮನವಿ ಮಾಡ ಲಾಗು ವುದು ಎಂದರು.

ಸಂಶೋಧನಾ ಕೇಂದ್ರದ ಅವಶ್ಯಕತೆ ಇದೆ

ಮಾಯಿಶ್ಚರ್ ಕಂಟೆಂಟ್ (ಅಡಿಕೆ ತೇವಾಂಶ) ಶೇ.7 ಎಷ್ಟು ಇದೆ. ಇದು ಸಾಧ್ಯವಾಗುತ್ತಿಲ್ಲ. ಅದನ್ನು 10 ರಿಂದ 11 ಕ್ಕೆ ತೇವಾಂಶವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಒತ್ತಾಯ ಮಾಡಲಾಗುವುದು. ಮಲೆನಾಡಿನ ಅಡಿಕೆಯ ರಫ್ತಿಗೆ ಒತ್ತಾಯಿಸಲಾಗುವುದು. ಹೊರ ರಾಷ್ಟ್ರಗಳಿಂದ ಅಡಿಕೆ ಆಮದಿಗೆ ತೆರಿಗೆ ಹೆಚ್ಚಿಸಲು ಒತ್ತಾಯ ಮಾಡಲಾಗುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಹರತಾಳು ಹಾಲಪ್ಪ, ಟಿ.ಡಿ.ಮೇಘರಾಜ, ಹಕ್ರೆ ಮಲ್ಲಿಕಾರ್ಜುನ್, ವಿನ್ಸೆಂಟ್ ರೋಡ್ರಿಗಸ್, ಕೆ.ವಿ. ಅಣ್ಣಪ್ಪ ಉಪಸ್ಥಿತರಿದ್ದರು.

> ವಂಶ ಪಾರಂಪರಿಕ ಬೆಳೆಯಾದ ಅಡಿಕೆಯು ಎಲೆ ಚುಕ್ಕೆ ರೋಗದ ಸಮಸ್ಯೆಯನ್ನು ಎದುರಿಸುತ್ತಿದ್ದು, ಈ ಒಂದು ರೋಗದಿಂದ ಮಲೆನಾಡು ಭಾಗದಲ್ಲಿ ಸುಮಾರು 226 ಕೋಟಿ ನಷ್ಟ ಆಗಿದೆ. ಇದಕ್ಕೆ ಕೇಂದ್ರದಿಂದ ಪರಿಹಾರದ ರೂಪದಲ್ಲಿ ಹಣ ನೀಡಲು ಒತ್ತಾಯಿಸಲಾಗಿತ್ತು. ಕೇಂದ್ರದಿಂದ ಅನುದಾನ ನೀಡುವುದರ ಮೂಲಕ ರೈತರ ಕಣ್ಣೀರನ್ನು ಒರೆಸಬೇಕು.
> –ಬಿ.ವೈ.ರಾಘವೇಂದ್ರ, ಶಾಸಕ

ರೈತರ ಕೂಗು ಮಂತ್ರಿಗಳಿಗೆ ಮುಟ್ಟಿಸುವ ಅವಕಾಶ

ಮುಂದಿನ ದಿನಗಳಲ್ಲಿ ಭತ್ತಕ್ಕೆ ಹೆಚ್ಚಿನ ಒತ್ತು ನೀಡಬೇಕು, ಮಲೆನಾಡು ಅಡಿಕೆ ಸಂಶೋಧನಾ ಕೇಂದ್ರಕ್ಕೆ ಕಳೆದ ಬಾರಿ ಬಸವರಾಜ ಬೊಮ್ಮಾಯಿ ಅವಧಿಯಲ್ಲಿ 10 ಕೋಟಿ ಅನುದಾನ ಮೀಸಲಿಡಲಾಗಿತ್ತು. ಅಷ್ಟರಲ್ಲಿ ಸರಕಾರ ಬದಲಾಯಿತು ಎಂದ ಅವರು, ಸಮಾವೇಶಕ್ಕೆ ಜಿಲ್ಲೆಯ ರೈತರು ದೊಡ್ಡ ಸಂಖ್ಯೆಯಲ್ಲಿ ಆಗಮಿಸಬೇಕು. ರೈತರ ಕೂಗನ್ನು ಮಂತ್ರಿಗಳಿಗೆ ಮುಟ್ಟಿಸುವ ಅವಕಾಶ ಇದೆ ಎಂದು ಶಾಸಕ ಬಿ.ವೈ.ರಾಘವೇಂದ್ರ ಹೇಳಿದರು.

ಮಕ್ಕಳ ಹಕ್ಕು ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ : ನ್ಯಾ.ಸಂತೋಷ್

ಶಿವಮೊಗ್ಗದಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಪೋಷಣೆ ಕುರಿತ ಒಂದು ದಿನದ ಕಾರ್ಯಾಗಾರವನ್ನು ಸಂತೋಷ್ ಎಂ ಎಸ್ ಉದ್ಘಾಟಿಸಿದರು.

ಶಿವಮೊಗ್ಗ: ಮಕ್ಕಳ ಹಕ್ಕು ರಕ್ಷಣೆ ಮತ್ತು ಪೋಷಣೆ ನಮ್ಮೆಲ್ಲರ ಜವಾಬ್ದಾರಿ. ಮಕ್ಕಳ ರಕ್ಷಣೆಗಾಗಿ ಪೋಕ್ಸೋ ಕಾಯ್ದೆಯಂತಹ ಅನೇಕ ಕಠಿಣ ಕಾಯ್ದೆಗಳು ಜಾರಿಗೆ ಬಂದಿದ್ದು ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಂತೋಷ್ ಎಂ ಎಸ್ ಹೇಳಿದರು.

ಪಿಯು ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕಚೇರಿಯಲ್ಲಿ ಗುರುವಾರ ಜಿಲ್ಲಾ ಕ್ರೈಸ್ ವಸತಿ ಶಾಲೆ/ಕಾಲೇಜು ಅಧಿಕಾರಿಗಳಿಗೆ ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಪೋಷಣೆ ಕುರಿತು ಏರ್ಪಡಿಸಲಗಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಮಕ್ಕಳ ವಿರುದ್ಧ ಪ್ರಕರಣ ಶಮನ ಮಾಡಲು ಪೋಕ್ಸೋ ಕಾಯ್ದೆ ಜಾರಿಗೆ ಬಂದು 13 ವರ್ಷ ಆಯ್ತು. ನಿಷ್ಟೆಯಿಂದ ಇದರ ಅನುಷ್ಟಾನ ಮಾಡಲು ಮುಂದಾದಾಗ, ಈ ಕಾಯ್ದೆಯ ದುರ್ಬಳಕೆ ಸವಾಲಾಗಿ ನಿಲ್ಲುತ್ತದೆ. ಇಂತಹ ಗಂಭೀರ ವಿಚಾರವನ್ನು ಮಂಥನ ಮಾಡಬೇಕಿದ ಎಂದರು. ಡಿಡಿಪಿಯು ಚಂದ್ರಪ್ಪ ಎಸ್ ಗುಂಡಪಲ್ಲಿ ಮಾತನಾಡಿ, ದರು. ಆಯೋಗದ ನಿಕಟಪೂರ್ವ ಸದಸ್ಯ ಶಂಕರಪ್ಪ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಡಿ.ಮಲ್ಲೇಶಪ್ಪ, ಬಿಸಿಎಂ ಅಧಿಕಾರಿ ಶೋಭಾ ಇದ್ದರು.

> ಪೋಕ್ಸೋ ಕಾಯ್ದೆ ಮಕ್ಕಳ ಹಕ್ಕು ರಕ್ಷಣೆಗಾಗಿ ಜಾರಿ ಮಾಡಲಾಗಿದೆ. ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಪೋಷಣೆ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳು ಸೇರಿದಂತೆ ನಮ್ಮೆಲ್ಲರ ಜವಾಬ್ದಾರಿ.
> –ಸಂತೋಷ್ ಎಂ ಎಸ್,ಹಿರಿಯ ಸಿವಿಲ್ ನ್ಯಾಯಾಧೀಶ

ಬರೆದಂತೆ ಓದುವ ಏಕೈಕ ಭಾಷೆ ಕನ್ನಡ

ಸೊರಬ: ಭಾಷೆ ಭಾವನೆಗಳ ಅಭಿವ್ಯಕ್ತಿ ಸಾಧನವಾಗಿದ್ದು , ಬರೆದಂತೆ ಓದುವ ಏಕೈಕ ಭಾಷೆ ಕನ್ನಡ ಎಂದು ಜಡೆ ಹಿರೇಮಠ ಹಾಗೂ ಸೊರಬ ಕಾನುಕೇರಿ ಮಠದ ಘನಬಸವ ಅಮರೇಶ್ವರ ಶಿವಾಚಾರ್ಯ ಹೇಳಿದರು ಮಹಾಸ್ವಾಮಿಗಳು ಹೇಳಿದರು.

ಪಟ್ಟಣದ ಚಾಮರಾಜ ಪೇಟೆಯ ಕಾನುಕೇರಿ ಮಠದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಪದಾಧಿಕಾರಿಗಳ ಪದ ಗ್ರಹಣ ಉದ್ಘಾಟನಾ ಸಮಾರಂಭ ಹಾಗೂ ಸಾಹಿತಿ ನಾ ಡಿಸೋಜ ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಚನ ನೀಡಿದರು.

ಪ್ರಪಂಚದಲ್ಲಿ ಹಲವಾರು ಭಾಷೆಗಳಿವೆ, ಬರೆಯುವದು ಒಂದಾದರೆ ಉಚ್ಚರಿಸುವುದು ಮತ್ತೊಂದು ರೀತಿ ಇರುತ್ತದೆ. ಆದರೆ ಕನ್ನಡ ಭಾಷೆ ಉಚ್ಚಾರ ಮತ್ತು ಬರವಣಿಗೆ ಸಮಾನವಾಗಿರುತ್ತದೆ, ಸರ್ವವನ್ನು ತನ್ನೊಳಗೆ ಅಳವಡಿಸಿಕೊಂಡು ಭಾಷೆ ವಿಸ್ತಾರಗೊಳ್ಳಬೇಕು. ಅಂತಹ ಭಾಷೆ ಶಾಶ್ವತ ವಾದ ನೆಲೆ ಹೊಂದಬಲ್ಲದು. ಯಾವ ಭಾಷೆ ಪರಿವರ್ತನೆ ಹೊಂದಲಾರದೋ ಅಂತಹ ಭಾಷೆಗೆ ನೆಲೆ ಇರದು. ಹಾಗೆ ಸಾವಿರದ ಆರು ನೂರು ವರ್ಷಗಳ ಕನ್ನಡ ಭಾಷೆ ಸದಾ ಪರಿವರ್ತನಾ ನಿಯಮವನ್ನು ಅಳವಡಿಸಿಕೊಂಡು ಶಾಶ್ವತವಾಗಿ ನೆಲೆ ಹೊಂದಿರುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಿ. ಮಂಜುನಾಥ ಮಾತನಾಡಿ, ಕನ್ನಡ ನೆಲದಲ್ಲಿರುವ ನಾವು ಪುಣ್ಯವಂತರು. ಪುಸ್ತಕಗಳನ್ನು ಓದವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು, ಕನ್ನಡದ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ ಕಟ್ಟುವ ಕಾಯಕದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ತೊಡಗಿಕೊಳ್ಳುತ್ತಾ ಬಂದಿದೆ. ಆದರೆ ಕನ್ನಡ ಕಟ್ಟುವ ಕೆಲಸ ಸುಲಭದ ಕೆಲಸವಲ್ಲ. ಇಂದು ಕನ್ನಡ ಪುಸ್ತಕ ಓದುವ, ಬರೆಯುವ, ಮಾತ ನಾಡುವ ಸನ್ನಿವೇಷ ತುಂಬಾ ಆತಂಕಕಾರಿಯಾಗಿದೆ ಎಂಬುದನ್ನು ನಾವು ಮರೆಯಬಾರದು ಎಂದರು.

ಸಭೆಯ ಆರಂಭಕ್ಕೂ ಮೊದಲು ಸಾಹಿತಿ ನಾ ಡಿಸೋ ಜ, ನೇಕಾರ ರಾಮಕೃಷ್ಣ; ಪತ್ರಕರ್ತ ಶಿವಮೊಗ್ಗ ನಂದ ನ್ ಸೇರಿದಂತೆ ಅಗಲಿದ ಗಣ್ಯರಿಗೆ ಒಂದು ನಿಮಿಷ ಮೌನಾಚರಣೆ ಮಾಡ ಲಾಯಿತು.

ಹೆಚ್.ಗುರುಮೂರ್ತಿ, ಪೂರ್ಣಿಮಾ ಭಾವೆ, ಈರಪ್ಪ ಹೆಚ್, ಡಿ. ಶಿವಯೋಗಿ ತಂಡದವರಿಂದ ಕನ್ನಡ ಗೀತಗಾಯನ ನಡೆಯಿತು. ಡಾ.ರಾಜೇಂದ್ರ ತಲ್ಲೂರು ಕವನ ವಾಚಿಸಿದರು. ಜಾನಪದ ಗಾಯಕ ಶಿವರುದ್ರಪ್ಪ ಜೋಗಿ ತಂಡದವರಿಂದ ಜನಪದ ಸಂಭ್ರಮ ನಡೆಯಿತು.ಸಭೆಯಲ್ಲಿ ರಾಜಪ್ಪ ಮಾಸ್ತರ್ ,ಹೆಚ್.ಗಣಪತಿ ,ಡಾ ಎಂ.ಕೆ ಭಟ್, ಡಾ.ಜ್ಞಾನೇಶ್ ಹೆಚ್.ಈ, ಎಸ್.ಕೃಷ್ಣಾನಂದ, ಡಿ.ಎಸ್. ಶಂಕರ ಶೇಟ್, ಪತ್ರಕರ್ತ ಹುಚ್ಚರಾಯಪ್ಪ, ಮಧುರಾಯ್ ಜಿ. ಶೇಟ್, ಶ್ರೀಪಾದ ಬಿಚ್ಚುಗತ್ತಿ, ಮತ್ತಿತರಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಪದಾಧಿಕಾರಿಗಳ ಪದ ಗ್ರಹಣ ಉದ್ಘಾಟನಾ ಸಮಾರಂಭ ಹಾಗೂ ಸಾಹಿತಿ ನಾ ಡಿಸೋಜ ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಚನ ನೀಡಿದರು.

> ಕನ್ನಡ ಭಾಷೆಗೆ ಕನ್ನಡ ನೆಲದಲ್ಲಿಯೇ ಅಪಾಯವನ್ನು ನಾವು ತಂದಿದ್ದೇವೆ. ಅಕ್ಕಪಕ್ಕದ ರಾಜ್ಯಗಳಲ್ಲಿ ಭಾಷಾಭಿಮಾನವನ್ನು ನೋಡಿ ನಮ್ಮ ರಾಜ್ಯದ ರಾಜ್ಯ ಭಾಷೆ ಯನ್ನು ಅತ್ಯಂತ ಅಭಿಮಾನ, ಗೌರವ ಮತ್ತು ಜವಾಬ್ದಾರಿಯಿಂದ ಮಾತ ನಾಡುತ್ತಾ ಉಳಿಸಿ, ಬೆಳೆಸುವ ಮೂಲಕ ಮುಂದಿನ ತಲೆಮಾರಿಗೂ ಭಾಷಾ ಪ್ರೇಮವನ್ನು ಮೆರೆಸುವ ಕೆಲಸವಾಗಬೇಕಿದೆ ಎಂದು ತಿಳಿಸಿದರು.
> –ಎನ್. ಷಣ್ಮುಖಾಚಾರ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ನೂತನ ಅಧ್ಯಕ್ಷ

ಅಮೃತ್ ನೋನಿ ಕಪ್ ಸೀಸನ್ 2 ಉದ್ಘಾಟನೆ : ಶಾಸಕ

ಸದೃಢ ಆರೋಗ್ಯಕ್ಕೆ ಕ್ರೀಡೆ ಸಹಕಾರಿ

ಅಮೃತ್ ನೋನಿ ಕಪ್' ಸೀಸನ್ 2ರ ಕಾರ್ಯಕ್ರಮದಲ್ಲಿ ಶಾಸಕ ಚನ್ನಬಸಪ್ಪ ಕಪ್ ವಿತರಿಸಿದರು.

ಶಿವಮೊಗ್ಗ: ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವುದರಿಂದ ಹಾಗೂ ನಿರಂತರ ಅಭ್ಯಾಸ ಮಾಡುವುದರಿಂದ ಸದೃಢ ಆರೋಗ್ಯ ಕಾಪಾಡಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಶಾಸಕ ಎಸ್.ಎನ್.ಚನ್ನಬಸಪ್ಪ ಹೇಳಿದರು.

ನಗರದ ಪಿಇಎಸ್ ಕ್ರೀಡಾಂಗಣದಲ್ಲಿ ಅಮೃತ್ ನೋನಿ ಸಂಸ್ಥೆಯಿಂದ ಆಯೋಜಿಸಿದ್ದ 'ಅಮೃತ್ ನೋನಿ ಕಪ್' ಸೀಸನ್ 2ರ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಸಂಸ್ಥೆಗಳಲ್ಲಿ ಕ್ರೀಡಾಕೂಟ ಆಯೋಜಿಸುವುದರಿಂದ ಪರಸ್ಪರ ಒಡನಾಟ ವೃದ್ಧಿಯಾಗುವ ಜತೆಯಲ್ಲಿ ವೃತ್ತಿಯಲ್ಲಿ ಧನಾತ್ಮಕ ಪ್ರಗತಿ ಹೊಂದಲು ಸಾಧ್ಯ ಎಂದು ತಿಳಿಸಿದರು.

ವ್ಯಾಲ್ಯೂ ಪ್ರಾಡಕ್ಟ್ಸ್ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಡಾ. ಶ್ರೀನಿವಾಸಮೂರ್ತಿ ಮಾತನಾಡಿ, ಸಂಸ್ಥೆಯಲ್ಲಿ ಕೆಲಸ ಮಾಡುವವರು ಎಲ್ಲರೂ ಸೇರಿ ಕ್ರೀಡಾಕೂಟ ಆಯೋಜಿಸುತ್ತಿದ್ದು, ಎರಡನೇ ವರ್ಷದ ಅಮೃತ್ ನೋನಿ ಕಪ್ ಇದಾಗಿದೆ. ಉತ್ತಮ ಆರೋಗ್ಯಕ್ಕಾಗಿ ಕ್ರೀಡೆಗಳಲ್ಲಿ ಪಾಲ್ಗೊಳ್ಳುವಿಕೆ ಮುಖ್ಯ ಎಂದರು. ಅಮೃತ್ ನೋನಿ ಸಂಸ್ಥೆ ನಿರಂತರವಾಗಿ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡು ಸೇವಾ ಚಟುವಟಿಕೆಗಳನ್ನು ಕೈಗೊಳ್ಳುತ್ತಿದೆ ಎಂದು ತಿಳಿಸಿದರು.

ಅಮೃತ್ ನೋನಿ ಕಪ್ ಸೀಸನ್ 2ರ ಕ್ರೀಡಾಕೂಟ ದಲ್ಲಿ ಸಂಸ್ಥೆಯ ಒಟ್ಟು 5 ತಂಡಗಳು ಪಾಲ್ಗೊಂಡಿ ದ್ದವು. ಮ್ಯಾನುಫ್ಯಾಕ್ಚರಿಂಗ್ ಮಾಸ್ಟರ್, ಮಾರ್ಕೆಟಿಂ ಗ್ ವಾರಿಯರ್ಸ್, ಬ್ರಾಂಡಿಂಗ್ ಬೀಸ್ಟ್ಸ್, ಆಫೀಸ್ ಪವರ್ ಸ್ಟಾರ್ಸ್, ಮಿಲ್ಲೆಕ್ಸ್ ಬೂಸ್ಟರ್ಸ್ ತಂಡಗಳು ಪಾಲ್ಗೊಂಡಿದ್ದವು. ಅಂತಿಮವಾಗಿ ಸೀಸನ್ 2ರ ಫೈನಲ್ ಪಂದ್ಯದಲ್ಲಿ ಆಫೀಸ್ ಪವರ್ ಸ್ಟಾರ್ಸ್ ತಂಡ ಗೆಲುವು ಸಾಧಿಸಿ ಅಮೃತ್ ನೋನಿ ಕಪ್ ಮುಡಿಗೇರಿಸಿಕೊಂಡಿತು.

ವ್ಯಾಲ್ಯೂ ಪ್ರಾಡಕ್ಟ್ಸ್ ಸಂಸ್ಥೆ ನಿರ್ದೇಶಕಿ ಅಂಬುಜಾಕ್ಷಿ, ಸಿಇಒ ಇಂಚರಾ ನಾಡಿಗ್, ಲೀಗಲ್ ಹೆಡ್ ಶಶಿಕಾಂತ್ ನಾಡಿಗ್, ಓಂ ಶ್ರೀ ಮಾರ್ಕೆಟಿಂಗ್ ಸಲೂಷನ್ಸ್ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕಿ ಮಂಗಳಾಂಬಿಕೆ, ಸಿಇಒ ನಾರಾಯಣ್ ಇತರರಿದ್ದರು.

ಬಿಜೆಪಿ ದಲಿತ ವಿರೋಧಿಯಲ್ಲ: ವಿಜಯೇಂದ್ರ

ಶಿಕಾರಿಪುರ: ಭಾರತೀಯ ಜನತಾಪಕ್ಷ ಎಂದಿಗೂ ದಲಿತ ವಿರೋಧಿಯಲ್ಲ. ದಲಿತರ ಉದ್ಧಾರ ಪರಮಗುರಿ ಎಂದು ಶಾಸಕ ಬಿ ವೈ ವಿಜಯೇಂದ್ರ ಹೇಳಿದರು.

ಬುಧವಾರ ಸಂವಿಧಾನ ಗೌರವ ಅಭಿಯಾನದಲ್ಲಿ ಮಾತನಾಡಿ, ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೆ ಅಂಬೇಡ್ಕರ್ ಅವರನ್ನು ಅವಮಾನಿಸಿದ್ದು ಕಾಂಗ್ರೆಸ್ ಪಕ್ಷ, ತನ್ನ ಅಧಿಕಾರಕ್ಕಾಗಿ ಹಿಂದುಳಿದವರನ್ನು ವೋಟ್ ಬ್ಯಾಂಕ್ ಆಗಿ ಬಳಸಿಕೊಳ್ಳುತ್ತಿದೆ, ಕಾಂಗ್ರೆಸ್ ಪಕ್ಷದ ಈ ಡೋಂಗಿ ಜಾತ್ಯಾತೀತ ವರ್ತನೆ ತಾವು ಹಿಂದುಳಿದಪರ ಎನ್ನುವ ನಾಟಕವಾಗಿದೆ ಎಂದರು.

ಅಂಬೇಡ್ಕರ್ ರವರನ್ನು ರಾಜಕೀಯವಾಗಿ ಸೋಲಿಸಲು ಕಾಂಗ್ರೆಸ್ ಪಕ್ಷ ತಯಾರಿ ನಡೆಸಿತ್ತು, ಅವರು ತೀರಿಕೊಂಡಾಗ ದೆಹಲಿಯಲ್ಲಿ ಅವರ ಶವ ಸಂಸ್ಕಾರಕ್ಕೆ 3★6 ಜಾಗ ಕೊಡಲು ಯೋಚನೆ ಮಾಡಿದ ಕಾಂಗ್ರೆಸ್ ಸರಕಾರಕ್ಕೆ ನಮ್ಮ ಬಗ್ಗೆ ಮಾತನಾಡುವ ನೈತಿಕ ಹಕ್ಕಿಲ್ಲ ಎಂದರು.ಎಂಎಡಿಬಿ ಮಾಜಿ ಅಧ್ಯಕ್ಷ ಗುರುಮೂರ್ತಿ ಮಾತನಾಡಿ ದೇಶಾದ್ಯಂತ ವರ್ಷಪೂರ್ತಿ ಶಾಸಕರ ಗೃಹದಲ್ಲಿ ಭೀಮ ಪರಿವಾರದವರನ್ನು ಸನ್ಮಾನಿಸಿ ಗೌರವಿಸಿ ಸಂವಿಧಾನದ ಬಗ್ಗೆ ತಿಳುವಳಿಕೆ ಕೊಡುವ ವಿಚಾರವಾಗಿ ಭಾರತೀಯ ಜನತಾ ಪಾರ್ಟಿ ಕೈಗೊಂಡಿರುವ ಈ ಕಾರ್ಯಕ್ರಮ ಹೆಮ್ಮೆಯ ಸಂಗತಿ ಎಂದರು. ಈ ಸಂದರ್ಭದಲ್ಲಿ ಸಂವಿಧಾನ ಪೀಠಿಕೆಯನ್ನು ಪ್ರಮಾಣದ ಮೂಲಕ ಬೋಧಿಸಲಾಯಿತು. ನಂತರ ಭೀಮ ಬಳಗದ ದಂಪತಿಗಳನ್ನು ಶಾಸಕರ ಗೃಹದಲ್ಲಿ ಉಡಿತುಂಬಿ ಸನ್ಮಾನಿಸಿ ಗೌರವಿಸಲಾಯಿತು. ತಾಲೂಕು ಬಿಜೆಪಿ ಅಧ್ಯಕ್ಷ ಹನುಮಂತಪ್ಪ ಸಂಕ್ಲಾಪುರ, ಶೈಲಜಾ ಯೋಗೀಶ್ ಮಡ್ಡಿ, ಚಂದ್ರಪ್ಪ. ವಸಂತಗೌಡ, ಮುಖಂಡ ಬೂದ್ಯಪ್ಪ, ಎಸ್ಸಿ ಬಿಜೆಪಿ ಮೋರ್ಚಾ ಅಧ್ಯಕ್ಷ ಈಶ್ವರಪ್ಪ ಹಾಗೂ ಭೀಮ ಪರಿವಾರದ ಮುಖಂಡರು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಬುಧವಾರ ಶಾಸಕ ವಿಜಯೇಂದ್ರ ರವರು ಗೃಹ ಕಚೇರಿಯಲ್ಲಿ ಸಂವಿಧಾನ ಗೌರವ ಅಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿದರು.

> ನಮ್ಮ ಕುಟುಂಬ ಎಂದು ಜಾತಿ ವಿರೋಧ ಮಾಡಿಲ್ಲ. ನಮ್ಮ ತಾಯಿಯ ಕಾಲದಿಂದಲೂ ಎಲ್ಲಾ ಜಾತಿಯವರ ಜತೆ ಸಾಮರಸ್ಯ ಬೆಸುಗೆ ನಮ್ಮಲ್ಲಿ ಇದೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜನ್ಮಸ್ಥಳ, ಶಿಕ್ಷಣ ಕ್ಷೇತ್ರ, ಸೇರಿದಂತೆ ನಮ್ಮ ಸರಕಾರ ಪಂಚ ಕ್ಷೇತ್ರ ಪರಿವರ್ತನೆ ಮಾಡಿದೆ.
> –ಬಿ ವೈ ವಿಜಯೇಂದ್ರ, ಶಾಸಕ

ಪ್ರಕೃತಿಯ ಮನ್ವಂತರ ಪ್ರತಿನಿಧಿಸುವ ಹಬ್ಬ ಸಂಕ್ರಾಂತಿ

ಶಿಕಾರಿಪುರ: ಭಾರತದಲ್ಲಿ ಆಚರಿಸುವ ಅನೇಕ ಹಬ್ಬಗಳಲ್ಲಿ ಸಂಕ್ರಾಂತಿಗೆ ತನ್ನದೇ ಆದ ವಿಶೇಷತೆ ಮತ್ತು ಆಧ್ಯಾತ್ಮಿಕ ಹಿನ್ನೆಲೆ ಇದೆ. ಇದು ಸುಗ್ಗಿ ಸಂಭ್ರಮದ ಹಬ್ಬ, ಅರ್ಥಾತ್ ಕೃಷಿಯ ಸಂಭ್ರಮಾಚರಣೆಯ ಹಬ್ಬವಾಗಿದೆ ಎಂದು ತಾಲೂಕಿನ ಬೇಗೂರು ಗ್ರಾಮದ ಸಮೂಹ ಸಂಪನ್ಮೂಲ ವ್ಯಕ್ತಿ ಪರಮೇಶ್ವರಪ್ಪ ಎಚ್.ಪಿ ತಿಳಿಸಿದರು.

ಪಟ್ಟಣದ ಭವಾನಿ ರಾವ್ ಕೇರಿಯ ಮೈತ್ರಿ ಪ್ರಾಥಮಿಕ ಮತ್ತು ಕುಮದ್ವತಿ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಸ್ವಾಮಿ ವಿವೇಕಾನಂದ ಜಯಂತಿ ಮತ್ತು ಸಂಕ್ರಾಂತಿ ಸುಗ್ಗಿ ಹಬ್ಬದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು. ಸಂಕ್ರಾಂತಿ ಪ್ರಕೃತಿಯ ಮನ್ವಂತರ ಪ್ರತಿನಿಧಿಸುವ ಹಬ್ಬ, ಸೂರ್ಯ ಕರ್ಕಾಟಕ ರಾಶಿಯಿಂದ ಉತ್ತರಾಯಣದ ಮಕರ ರಾಶಿಯತ್ತ ತನ್ನ ದಿಕ್ಕು ಬದಲಿಸುವ ಪರಿವರ್ತನಾ ಸಂದರ್ಭವಾಗಿದೆ ಎಂದರು.

ಸಿದ್ದಲಿಂಗೇಶ್ವರ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಜಬೀವುಲ್ಲಾ ಮಾತನಾಡಿ, ವಿವೇಕಾನಂದರ ಅಧ್ಯಯನ ಶೀಲತೆ ಮತ್ತು ಜೀವನದ ಮಹತ್ವವನ್ನು ವಿವೇಕಾನಂದರು ತಿಳಿಸಿದ್ದಾರೆ ಅದನ್ನು ಅರಿತು ನಾವು ಜೀವನ ಸಾಗಿಸಬೇಕಾಗಿದೆ. ಇಂದು ಈ ಶಾಲೆಯಲ್ಲಿ ಹಬ್ಬದ ಆಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಿ, ಹಬ್ಬದ ಹಿನ್ನೆಲೆಯನ್ನು ಮಹತ್ವವನ್ನು ತಿಳಿಸಿ ಮುಂದುವರಿಸಿ ಕೊಂಡು ಹೋಗಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಲಾ ಪ್ರಾಚಾರ್ಯ ವಿಶ್ವನಾಥ ಮಾತನಾಡಿ, ನಾವು ಮಕ್ಕಳಲ್ಲಿ ನೈತಿಕ ಮೌಲ್ಯಗಳನ್ನು ಹುಟ್ಟು ಹಾಕಬೇಕಾಗಿದೆ ಎಂದರು. ಪ್ರಾಚಾರ್ಯ ವೀರೇಂದ್ರ.ಎಂ, ಸಿದ್ದೇಶ್ವರ, ಮೈತ್ರಿ ಮಾತೃ ಮಂಡಳಿಯ ಸದಸ್ಯೆ ಅಪರ್ಣಾ ಗುರುಮೂರ್ತಿ ಇದ್ದರು.

ಶಿಕಾರಿಪುರದ ಮೈತ್ರಿ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಸ್ವಾಮಿ ವಿವೇಕಾನಂದ ಜಯಂತಿ ಮತ್ತು ಸಂಕ್ರಾಂತಿ ಸುಗ್ಗಿ ಹಬ್ಬದ ಕಾರ್ಯಕ್ರ ಮದಲ್ಲಿ ಶಾಲೆಯ ಶಿಕ್ಷಕರು ಸಾಂಪ್ರದಾಯಿಕ ಉಡುಗೆ ತೊಟ್ಟು ಗಮನ ಸೆಳೆದರು.

> ಸಂಕ್ರಾಂತಿಯ ನಂತರ ಹಗಲಿನ ಕಾಲಾವಧಿ ಹೆಚ್ಚುತ್ತದೆ. ಶೂನ್ಯ ಮಾಸದಲ್ಲಿ, ಕೊರೆವ ಚಳಿಯಲ್ಲಿ ಜಡವಾಗಿದ್ದ ಮರಗಿಡಗಳಲ್ಲಿ ಎಲೆ ಉದುರಿ, ಹೊಸ ಚಿಗುರು ಬರಲಾರಂಭಿಸುತ್ತದೆ. ಶಿಶಿರ ಋತುವಿನ ಆರಂಭವಾಗಿದೆ. ಮೈತ್ರಿ ಶಾಲೆಯು ವಿದ್ಯಾರ್ಥಿಗಳಲ್ಲಿ ಉತ್ತಮ ಸಂಸ್ಕಾರ ನೀಡಿ ದೇಶದ ಸೊಬಗು, ಆಚಾರ ವಿಚಾರಗಳನ್ನುಅಚ್ಚುಕಟ್ಟಾಗಿ ಉಳಿಸಿಕೊಂಡು ಬರುತ್ತಿದೆ.
> –ಪರಮೇಶ್ವರಪ್ಪ ಎಚ್.ಪಿ ಸಂಪನ್ಮೂಲ ವ್ಯಕ್ತಿ

ಸುಗ್ಗಿ ಹಬ್ಬ ಕಣದ ಹಬ್ಬ

ರೈತರು ತಾವು ಬೆಳೆದ ಬೆಳೆಗಳನ್ನು ಮೂರು ರಾಶಿ ಮಾಡಿ ಕಣದಲ್ಲಿ ಪೂಜೆ ಮಾಡುತ್ತಿದ್ದರು.ಅದರಲ್ಲಿ ಒಂದು ರಾಶಿಯನ್ನು ತಮ್ಮ ಮನೆಗೆ, ಇನ್ನೊಂದನ್ನು ದಾನವಾಗಿ ಕೊಟ್ಟರೆ, ಒಂದಷ್ಟು ಮನೆಯ ಸೇವಕರಿಗೆ ದಾನ ಮಾಡುತ್ತಿದ್ದರು. ಆದರೆ ಈಗ ಗದ್ದೆಯಿಂದ ಮಾರುಕಟ್ಟೆಗೆ ಬೆಳೆಗಳನ್ನು ಸಾಗಿಸುತ್ತಿದ್ದೇವೆ. ಇದರಿಂದ ಈಗಿನ ಜನತೆಗೆ ಸುಗ್ಗಿ ಹಬ್ಬ ಕಣದ ಹಬ್ಬದ ಪರಿಚಯ ವಿಲ್ಲದಂತಾಗಿದೆ.

ಗೋಶಾಲೆ ಭದ್ರತೆಗೆ ಜಿಲ್ಲಾಧಿಕಾರಿಗೆ ಮನವಿ

ಶಿವಮೊಗ್ಗ: ಗೋವುಗಳ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಹಾಗೂ ಗೋಶಾಲೆಗಳಿಗೆ ಭದ್ರತೆ ಒದಗಿಸಲು ಆಗ್ರಹಿಸಿ ನಗರದ ಶ್ರೀ ಜ್ಞಾನೇಶ್ವರಿ ಗೋಶಾಲೆ ಹಾಗೂ ದೈವಜ್ಞ ಬ್ರಾಹ್ಮಣ ಸಮಾಜದ ಪದಾಧಿಕಾರಿಗಳು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಅವರಿಗೆ ಮನವಿ ಸಲ್ಲಿಸಿದರು. ಬೆಂಗಳೂರಿನ ಚಾಮರಾಜಪೇಟೆ ವ್ಯಾಪ್ತಿಯಲ್ಲಿ ಮೂರು ಹಸುಗಳ ಕೆಚ್ಚಲು ಕೊಯ್ದು ಚಿತ್ರಹಿಂಸೆ ನೀಡಿರುವ ಘಟನೆ ಗೋ ಪಾಲಕರು ಹಾಗೂ ಗೋ ಪ್ರೇಮಿಗಳಿಗೆ ನೋವುಂಟು ಮಾಡಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ. ರಾಜ್ಯದಲ್ಲಿ ಗೋವುಗಳಿಗೆ ರಕ್ಷಣೆ ಇಲ್ಲವಾಗಿದೆ. ಚಿತ್ರಹಿಂಸೆ ನೀಡುವವರ ಸಂಖ್ಯೆ ಹೆಚ್ಚಾಗಿದೆ. ಪ್ರಕರಣವನ್ನು ಅಖಂಡ ಗೋಪ್ರೇಮಿಗಳು, ಜ್ಞಾನೇಶ್ವರಿ ಗೋಶಾಲೆ ಆಡಳಿತ ಮಂಡಳಿ ಹಾಗೂ ದೈವಜ್ಞ ಬ್ರಾಹ್ಮಣ ಸಮಾಜದ ಪದಾಧಿಕಾರಿಗಳು ಖಂಡಿಸುತ್ತೇವೆ. ಗೋವುಗಳಿಗೆ ಹಿಂಸೆ ನೀಡಿರುವ ಆರೋಪಿಗಳನ್ನು ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು. ವಿವಿಧೆಡೆ ಇರುವ ಗೋಶಾಲೆಗಳಿಗೆ ಭದ್ರತೆ ಒದಗಿಸಬೇಕು ಎಂದು ಮನವಿ ಮಾಡಿದರು.ಜ್ಞಾನೇಶ್ವರಿ ಗೋಶಾಲೆ ಅಧ್ಯಕ್ಷ ಚಂದ್ರಹಾಸ ಪಿ.ರಾಯ್ಕರ್, ಪ್ರಶಾಂತ್ ಸಿ.ರಾಯ್ಕರ್, ಗುರುರಾಜ್ ಶೇಟ್, ಗಣೇಶ್, ದೈವಜ್ಞ ಸಮಾಜದ ಪ್ರಕಾಶ್, ಎಸ್.ಪಾಂಡುರಂಗ ಶೇಟ್, ಸೋಮೇಶ್, ಕೃಷ್ಣಮೂರ್ತಿ, ರಾಘವೇಂದ್ರ, ಮತ್ತಿತರರು ಹಾಜರಿದ್ದರು.

ಬದುಕನ್ನು ಸುಂದರಗೊಳಿಸುವ ಸಂಗೀತ

ಸಾಗರ: ಒಬ್ಬ ಮನುಷ್ಯ ಜೀವನದ ಸಂಕೀರ್ಣ ಸಂದರ್ಭದಲ್ಲಿ ಮನಸ್ಸಿಗೆ ಹಿತ ಬಯಸುವುದಕ್ಕೆ ಸಾಧ್ಯವಾಗುವುದಿದ್ದರೆ ಅದು ಕಲೆಯಿಂದ ಮಾತ್ರ ಎಂದು ಮಧ್ವಾಚಾರ್ಯ ಮಹಾಸಂಸ್ಥಾನ ಶ್ರೀ ಸಂಪುಟ ನರಸಿಂಹಸ್ವಾಮಿ ಸುಬ್ರಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ವೇದನಾದ ಪ್ರತಿಷ್ಠಾನ ಶ್ರೀ ಸದ್ಗುರು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ವಿದ್ಯಾಲಯದ 25ನೇ ರಾಷ್ಟ್ರೀಯ ಸಂಗೀತೋತ್ಸವ ಪಂಚವಿಂಶದ 4 ನೇ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಆಶೀರ್ವಚನ ನೀಡಿದರು. ಸಂಗೀತ ಮತ್ತು ಸಾಹಿತ್ಯಅದ್ಭುತ ಎರಡು ಕಲೆಗಳು ಮನುಷ್ಯನ ಬದುಕನ್ನು ಸುಂದರವಾಗಿಸಿದೆ. ಮನುಷ್ಯನ ಜೀವತದ ಮಾನಸಿಕ ಸೌಂದರ್ಯ ಮತ್ತು ಬೌದ್ಧಿಕ ರಕ್ಷಣೆಗೆ ಕಲೆ ಅತ್ಯಗತ್ಯ ಎನ್ನುವ ಸತ್ಯ ಈಗಾಗಲೆ ಬಹಿರಂಗವಾಗಿದೆ ಎಂದ ಅವರು, ವ್ಯಾಸ ಸಾಹಿತ್ಯ ಪಂಡಿತರ ನಡೆಯಾದರೆ ದಾಸ ಸಾಹಿತ್ಯ ಸಾಮಾನ್ಯ ಮನುಷ್ಯನ ಬದುಕನ್ನು ಹಸನುಗೊಳಿಸುವ ಶಕ್ತಿ ಹೊಂದಿದೆ ಮತ್ತು ಮನರಂಜನೆಗೆ ಕ್ಷುಲಕ ವಿಷಯದ ಹಿಂದೆ ಹೋಗದೆ ನೈತಿಕವಾಗಿ ಎತ್ತರಿಸುವ ಸಂಗೀತದಂತಹ ಕಲೆ ಅನುಸರಿಸಿದರೆ ಜೀವನ ಉತ್ತಮವಾದೀತು ಎಂದರು.

ಸಮಾರೋಪ: ರಜತ ಮಹೋತ್ಸವ ಸಮಾರೋಪದಲ್ಲಿ ಬೆಂಗಳೂರು ಸಪ್ತಕ ಸಂಸ್ಥೆಯ ಮುಖ್ಯಸ್ಥ ಜಿ.ಎಸ್. ಹೆಗಡೆ ಮಾತನಾಡಿ, ಲಲಿತ ಕಲೆಗಳಿಗೆ ಎಂತಹ ಶಕ್ತಿ ಇದೆ ಎನ್ನುವುದು ಇಲ್ಲಿನ ಸಂಗೀತೋತ್ಸವ ಸಾಬೀತು ಪಡಿಸಿದೆ. ಸಾಗರ ಸಂಗೀತ ಕಾರ್ಯಕ್ರಮಕ್ಕೆ ಆಗಮಿಸಿ ಜನತೆಯ ಹಬ್ಬವಾಗಿಸಿರುವುದು ವಿಶೇಷ. ಸಪ್ತಕವೂ ಸದಾ ಕಲೆಯನ್ನು ಪೋಷಿಸುವ ಕಾರ್ಯಕ್ರಮದಲ್ಲಿ ಸಹಕಾರ ನೀಡಲಿದೆ ಎಂದರು.

ಉತ್ತರ ಕನ್ನಡ ಜಿಲ್ಲಾ ಯುವ ನೇತಾರ ಅನಂತಮೂರ್ತಿ ಹೆಗಡೆ, ಪತ್ರಕರ್ತ ದೀಪಕ್ ಸಾಗರ್, ವಿದುಷಿ ವಸುಧಾ ಶರ್ಮ, ನರಸಿಂಹಮೂರ್ತಿ ಶರ್ಮ, ಐ.ವಿ. ಹೆಗಡೆ, ಗುರುದತ್ತ ಶರ್ಮ, ರಮೇಶ್ ಹೆಗಡೆ ಗುಂಡೂಮನೆ ಇದ್ದರು. ವೇದನಾದದ ಅಧ್ಯಕ್ಷ ಶ್ರೀಧರ ಹೆಗಡೆ ಅಧ್ಯಕ್ಷತೆ ವಹಿಸಿದ್ದರು. ಸಿದ್ದಾರ್ಥ ಬೆಳ್ಮಣ್ಣು,ಅಮಿತ್ ನಾಡಿಗ್‌ಯವರ ಗಾನ ವೇಣು ಜುಗಲ್ಬಂದಿ, ಪ್ರವೀಣ್ ಗೋಡ್ಖಿಂಡಿ ಮತ್ತು ಷಡಜ್ ಗೋಡ್ಖಿಂಡಿ ಯವರ ಬಾನ್ಸುರಿ ಜುಗಲ್ಬಂದಿ, ಮಂಜು ಷಾ ಪಾಟೀಲ್ ಕುಲಕರ್ಣಿ ಹಿಂದೂಸ್ತಾನಿ ಗಾಯನ ಜನರ ಮೆಚ್ಚುಗೆಗೆ ಪಾತ್ರವಾಯಿತು.

ಸಾಗರದ ರಾಷ್ಟ್ರೀಯ ಸಂಗೀತೋತ್ಸವದಲ್ಲಿ ಪ್ರವೀಣ್ ಗೋಡ್ಖಿಂಡಿ ಮತ್ತು ಷಡಜ್ ಗೋಡ್ಖಿಂಡಿಯವರ ಬಾನ್ಸುರಿ ಜುಗಲ್ಬಂದಿ,

ಪತ್ರಕರ್ತರ ರಾಜ್ಯ ಸಮ್ಮೇಳನ ನಾಳೆಯಿಂದ

ಶಿವಮೊಗ್ಗ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 39ನೇ ರಾಜ್ಯಸಮ್ಮೇಳನವನ್ನು ಕಲ್ಪತರುನಾಡು, ಸಿದ್ದಶರಣ ದಾಸೋಹದ ನೆಲವಾಗಿರುವ ತುಮಕೂರಿನಲ್ಲಿ ಜ. 18 ಮತ್ತು 19ರಂದು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಕೆ.ವಿ. ಶಿವಕುಮಾರ್ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜ. 18 ರಂದು ಬೆಳಗ್ಗೆ 8.30ಕ್ಕೆ ತುಮಕೂರಿನ ಟೌನ್ ಹಾಲ್ ಬಿಜಿಎಸ್ ವೃತ್ತದಿಂದ ಪತ್ರಕರ್ತರ ಮೆರವಣಿಗೆಯನ್ನು ಗೃಹ ಸಚಿವ ಡಾ.ಜಿ ಪರಮೇಶ್ವರ್ ಚಾಲನೆ ನೀಡಲಿದ್ದಾರೆ. ಹಿರೇಮಠಾಧೀಶ್ವರಾದ ಡಾ.ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ರಾಮಕೃಷ್ಣ ವಿವೇಕಾನಂದ ಆಶ್ರಮದ ಡಾ. ವೀರೇಶಾನಂದ ಸರಸ್ವತಿ ಸ್ವಾಮೀಜಿ, ಸ್ವಾಮಿ ಜಪಾನಂದಜೀ ಸಾನಿಧ್ಯ ವಹಿಸಲಿದ್ದಾರೆ ಎಂದರು. ಇದೇ ದಿನ ಬೆಳಗ್ಗೆ 11 ಗಂಟೆಗೆ ಸಿದ್ಧಾರ್ಥ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮೇಳನ ಉದ್ಘಾಟಿಸಲಿದ್ದಾರೆ. ತುಮಕೂರು ಜಿಲ್ಲೆಯ ಹಾಲಿ ಶಾಸಕರು, ಮಾಜಿ ಶಾಸಕರು, ಸಂಸದರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸಲಿದ್ದು, ಕೇಂದ್ರ ಸಚಿವ ವಿ.ಸೋಮಣ್ಣ ಸಚಿವ ಕೆ.ಎನ್ ರಾಜಣ್ಣ ಹಾಗೂ ಜಿಲ್ಲೆಯ ಎಲ್ಲಾ ಶಾಸಕರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಸಂಕ್ರಾಂತಿ ಸಂಭ್ರಮ

ವಿಶ್ವವಾಣಿ
17.01.2025 ಶುಕ್ರವಾರ

ಮಕರ ಸಂಕ್ರಾಂತಿ ಹಬ್ಬದಂದು ನಿಮ್ಮ ಮನೆಯ ಲಕ್ಷ್ಮೀಯರು ಎಳ್ಳು-ಬೆಲ್ಲ ಹಂಚಿ ಸಂಭ್ರಮಿಸಿದ ಸೆಲ್ಫಿ/ ಫೋಟೋಗಳನ್ನು ಕಳುಹಿಸಿಕೊಡುವಂತೆ ವಿಶ್ವವಾಣಿ ನೀಡಿದ ಕರೆಗೆ ಸ್ಪಂದಿಸಿ ನೂರಾರು ಓದುಗರು ಹಬ್ಬದ ಸಂಭ್ರಮವನ್ನು ಪತ್ರಿಕೆಯೊಂದಿಗೆ ಹಂಚಿಕೊಂಡಿದ್ದಾರೆ. ಫೋಟೋ ಕಳುಹಿಸಿದ ಎಲ್ಲರಿಗೂ ಧನ್ಯವಾದಗಳು. ಮತ್ತೊಮ್ಮೆ ಸಂಕ್ರಾಂತಿ ಹಬ್ಬದ ಶುಭಾಶಯಗಳು. ಆಯ್ದ ಫೋಟೋಗಳನ್ನು ಇಲ್ಲಿ ಪ್ರಕಟಿಸಿದ್ದೇವೆ.

ಚೈತನ್ಯ ಜಿ.
ಯಲಹಂಕ

ಅದ್ವಿತಿ ಶ್ರೀಶೈಲ ಯಡಹಳ್ಳಿ
ಬೆಳಗಾವಿ

ಸಿಂಚನ ತಿಮ್ಮಣ್ಣ ಭಟ್ಟ
ಬೆಂಗಳೂರು

ಲಹರಿ ಭಟ್
ಬಾಳಾಪುರ

ಶರ್ಮದ ದೇವಾಡಿಗ, ವೈಷ್ಣವಿ ದೇವಾಡಿಗ-ತ್ರಾಸಿ

ಸಮನ್ವಿತ ಭಟ್ ಬಾಳಾಪುರ
ಬೆಂಗಳೂರು

ಸಾಹಿತ್ಯ
ಮರುಗೋಡ್

ನಿವೇದಿತಾ, ಇರ, ತಾರ
ಬೆಂಗಳೂರು

ಕುಶಿ ಮತ್ತು ಗೆಳತಿಯರು, ಬೋಗಾದಿ, ಮೈಸೂರು

ರಿತನ್ಯ ಎಸ್ ಆಚಾರ್ಯ
ಕಮಲಶಿಲೆ

ಕಿಶೋರ್, ದಿವಿತಾ ಶಿರಾ,
ತುಮಕೂರು

ಪವನ್ ಆಂಗ್ಲ ಶಾಲೆ-ಪಿ.ಯು ಕಾಲೇಜಿನ ಸಿಬ್ಬಂದಿ, ಶ್ರೀರಾಮಪುರ, ಮೈಸೂರು

ಆದ್ಯ
ಮೈಸೂರು

ಅಂಜಿನಿ ವಶಿಷ್ಟ, ದೀಪ್ತಿರಾಜ್
ಬೆಂಗಳೂರು



ಅದ್ವೈಕಾ, ಸಿಡ್ನಿ
(ಆಸ್ಟ್ರೇಲಿಯಾ)

ಶ್ರೀಕೃಪಾ ವೆಂಕಟೇಶ್
ಕೆ.ಜಿ.ಎಫ್

ಉಮಾ ಅಶೋಕ್
ಹುಬ್ಬಳ್ಳಿ

ಇಶಿರಾ
ಚಳ್ಳಕೆರೆ

ಶ್ರದ್ಧಾ ಯೋಗನಾ-ಶ್ರೇಯಾ,
ವಿಜಯನಗರ, ಬೆಂಗಳೂರು



ಅನಿಕ ಎನ್ ಎಸ್
ಶಿವಮೊಗ್ಗ

ಪ್ರಣಮ್ಯ ವೈಶಿಷ್ಟ
ಬೆಂಗಳೂರು

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅಧ್ಯಾಪಕಿ ಮತ್ತು ವಿದ್ಯಾರ್ಥಿಗಳು, ಲಕಮಾಪುರ, ಧಾರವಾಡ

ಮನಸ್ವಿ ರಾಜ್
ಮೈಸೂರು

ಕಾವ್ಯಾ ವಿ. ಶೆಣೈ, ಅಮೃತ ಶೆಣೈ
ಬಿಇಎಸ್‌ಕೆ 3ನೇ ಹಂತ, ಬೆಂಗಳೂರು

ಮೇಧಾ ಬೆಳವಾಡಿ
ಮೈಸೂರು

ಶಾಲ್ಮಲಿ ಪುರುಷೋತ್ತಮ್
ಬೆಂಗಳೂರು

ಸಂಗೀತಾ ಬೇಲೂರು
ಹಾಸನ

ವೀಣಾ ವೀರೇಂದ್ರ, ದೇಸಾಯಿ
ಶೇಷಾದ್ರಿಪುರಂ, ಬೆಂಗಳೂರು

ಹಂಶಿಕಾ ಮತ್ತು ಸಹೋದರರು
ನಾಗಮಂಗಲ

ವನಿತ ಅರುಣ್
ಮೈಸೂರು

ವೀಣಾ ಗೌರಿಶಂಕರ್-ಮಧುಪ್ರಿಯಾ
ಬೆಂಗಳೂರು



ಸ್ನೇಹಾ ರಾಹುಲ್ ಉಮಚಂಗಿ
ಹುಬ್ಬಳ್ಳಿ

ರಾಜೇಶ್ವರಿ ವಿಶ್ವನಾಥ್
ಹಾಸನ

ಅಶೋಕನ ಕಾಲದಲ್ಲಿ ಗಾಂಧಾರ ಪ್ರಮುಖ ಬೌದ್ಧ ಕೇಂದ್ರವಾಗಿ ಬೆಳವಣಿಗೆ ಕಂಡಿತ್ತು. ಪೇಷಾವರ, ತಕ್ಷಶಿಲಾ, ಮರ್ದಾನ್, ಉದ್ದಿಯಾನ ಮತ್ತು ತರ್ಕ್‌ಬೈಗಳಲ್ಲಿ ಗಾಂಧಾರ ಶಿಲ್ಪಕಲೆ ಎಂಬ ಕಲಾಪ್ರಕಾರವೇ ಅಂದು ಹುಟ್ಟಿತ್ತು.

ಗಂಧರ್ವರ ದೇಶ ಗಾಂಧಾರ ಪ್ರದೇಶ!

● ಲಿಂಗರಾಜು ಡಿ.ಎಸ್.

ಮಹಾಭಾರತದ ಘಟನೆಗಳಲ್ಲಿ ಪ್ರಮುಖ ಪಾತ್ರ ವಹಿಸಿ ಮಹಾಯುದ್ಧಕ್ಕೆ ಕಾರಣವಾದ ಶಕುನಿ ಗಾಂಧಾರ ರಾಜ್ಯದ ಅರಸನಾಗಿದ್ದ. ಗಾಂಧಾರ ಸಾಮ್ರಾಜ್ಯದ ಉಲ್ಲೇಖ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಕಂಡುಬರುತ್ತದೆ. ಗಾಂಧಾರದ ರಾಜಕುಮಾರಿ ಗಾಂಧಾರಿ ಕುರು ಸಾಮ್ರಾಟ್ ಧೃತರಾಷ್ಟ್ರನ ಪತ್ನಿ. ಗಾಂಧಾರದ ಮೂಲನಿವಾಸಿಗಳು ಸಂಗೀತ ಮತ್ತು ಲಲಿತ ಕಲೆಗಳಲ್ಲಿ ಪಂಡಿತರಾಗಿದ್ದ ಕಾರಣ ಅವರನ್ನು ಗಂಧರ್ವರು ಎಂದು ಕರೆಯಲಾಗುತ್ತಿತ್ತು. ಪರ್ವತಗಳಿಂದ ಕೂಡಿದ್ದ ಗಾಂಧಾರ ಈಗ ಕಂದಹಾರ್ ಎಂದು ಅಪಭ್ರಂಶಗೊಂಡು ಅಫ್ಘಾನಿಸ್ತಾನದ ಒಂದು ಭಾಗವಾಗಿದೆ.

ವಿವಿಧ ಸಂಸ್ಕೃತಿ: ಅಫ್ಘನ್ ಮೂಲನಿವಾಸಿಗಳಾದ ಪಠಾಣರು ನಿಜಕ್ಕೂ ಮುಗ್ಧ ಹಾಗೂ ಶಾಂತಿಪ್ರಿಯ ಜನ. ಅಫ್ಘಾನಿಸ್ತಾನ ಕೂಡಾ ಭಾರತದ ಹಾಗೆ ಸುದೀರ್ಘ ಹಾಗೂ ಶ್ರೀಮಂತ ಇತಿಹಾಸವನ್ನು ಹೊಂದಿತ್ತು. ಸಿಲ್ಕ್ ರೋಡ್ ಕಾರಣವಾಗಿ ಅನೇಕ ದೇಶಗಳೊಂದಿಗೆ ವ್ಯಾಪಾರ ಸಂಪರ್ಕ ಹೊಂದಿದ ಅಫ್ಘಾನಿಸ್ತಾನ ವಿವಿಧ ಜನಾಂಗ ಹಾಗೂ ಸಂಸ್ಕೃತಿಗಳನ್ನು ತನ್ನ ಒಡಲಲ್ಲಿ ಅರಗಿಸಿಕೊಂಡಿದೆ.

ಅಲೆಕ್ಸಾಂಡರ್ ಗಾಂಧಾರ ಗೆದ್ದಿದ್ದ: ಮಹಾಜನಪದಗಳಲ್ಲಿ ಒಂದಾಗಿದ್ದ ಗಾಂಧಾರ ಸುಮಾರು ಕ್ರಿ.ಪೂ.1700 ರಿಂದ ಕ್ರಿ.ಪೂ.1400 ರ ಅವಧಿಯಲ್ಲಿ ಇಂಡೋ-ಆರ್ಯನ್ ವಲಸಿಗರ ನೆಲೆಯಾಗಿತ್ತು. ಈ ಸಮಯದಲ್ಲಿ ಗಾಂಧಾರದ ಸಂಸ್ಕೃತಿ ಅಭಿವೃದ್ಧಿಗೊಂಡು ಕಂಚು, ಕುಂಬಾರಿಕೆಯ ಕಲೆ ಉನ್ನತಿಗೆ ತಲುಪಿತ್ತು. ಅಂದು ಮೃತರ ಶವಗಳನ್ನು ಮಡಕೆಯಲ್ಲಿಟ್ಟು ಹೂಳುವ ಪದ್ಧತಿ ಜಾರಿಯಲ್ಲಿತ್ತು. ಗಾಂಧಾರ ಪ್ರದೇಶದಲ್ಲಿ ಕುಶಾನರು, ಮೌರ್ಯರು, ಪರ್ಶಿಯಾದ ಆರ್ಕಿಮೆನಿದ್ ಅರಸರು ಆಳಿದ ಉಲ್ಲೇಖಗಳು ಇತಿಹಾಸದಲ್ಲಿ ದೊರೆಯುತ್ತವೆ. ನಂತರ ಅಲೆಕ್ಸಾಂಡರ್ ಕ್ರಿ.ಪೂ.321 ರಲ್ಲಿ ಗಾಂಧಾರವನ್ನು ಗೆದ್ದಿದ್ದ. ಬಹುಶಃ ಅಲೆಕ್ಸಾಂಡರನೊಂದಿಗೆ ಅಥವಾ ಗ್ರೀಕ್ ಕಡೆಯಿಂದ ಬಂದಿದ್ದ ಮುಹಮ್ಮದನ ಸಂತಾನವಾದ ಸಯ್ಯಿದ್ ಜನಾಂಗ ಪೇಷಾವರ್ ಮತ್ತು ಕಂದಹಾರ್‌ಗಳಲ್ಲಿ ನೆಲೆಗೊಂಡರು. ಇವರ ಭಾಷೆ ಪಶ್ತೋ ಆದ ಕಾರಣ ಪಶ್ತೂನ್ ಅಥವಾ ಪಠಾಣ್ ಎಂಬ ಹೆಸರು ಪಡೆದರು. ಯುದ್ಧ ಕಲಿಗಳಾಗಿದ್ದ ಇವರು ಸ್ವಾಮಿ ನಿಷ್ಠೆಗೆ ಹೆಸರಾದವರು.

ಹುಯೆನ್‌ತ್ಸಾಂಗ್ ಭೇಟಿ

ಕ್ರಿ.ಶ. 627-643 ರ ಕಾಲದಲ್ಲಿ ಭಾರತಕ್ಕೆ ಬಂದಿದ್ದ ಚೀನಿ ಯಾತ್ರಿಕ ಹುಯೆನ್‌ತ್ಸಾಂಗ್ ಗಾಂಧಾರ ದೇಶಕ್ಕೆ ಭೇಟಿ ನೀಡಿ ಅದರ ಮಾಹಿತಿಯನ್ನು ತನ್ನ ಗ್ರಂಥ ಸಿ ಯು ಕುಲ್ (ದಿ ಬುದ್ಧಿಸ್ಟ್ ರೆಕಾರ್ಡ್ಸ್) ನಲ್ಲಿ ನೀಡುತ್ತಾನೆ. ಆತನ ಪ್ರಕಾರ ಗಾಂಧಾರ ದೇಶದ ವಿಸ್ತಾರ ಪೂರ್ವದಿಂದ ಪಶ್ಚಿಮಕ್ಕೆ 500 ಕಿಮಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 400 ಕಿಮಿ ಇತ್ತು. ದೇಶದ ರಾಜಧಾನಿ ಪುರುಷಪುರ (ಪೇಷಾವರ). ದೇಶದಲ್ಲಿ ಬೇಳೆಕಾಳುಗಳನ್ನು ಸಮೃದ್ಧವಾಗಿ ಬೆಳೆಯಲಾಗುತ್ತಿತ್ತು. ಬೌದ್ಧಧರ್ಮ ಉನ್ನತ ಸ್ಥಿತಿಯಲ್ಲಿದ್ದು 1000 ಕ್ಕೂ ಹೆಚ್ಚು ಸಂಘಾರಾಮಗಳಿದ್ದವು. ಇಲ್ಲಿ ಪಿಪಾಲ ವೃಕ್ಷ ಹಾಗೂ ಬುದ್ಧನು ಬಳಸುತ್ತಿದ್ದ ಪಾತ್ರೆಯೊಂದಿದ್ದು ಅದಕ್ಕೆ ಶತಮಾನಗಳಿಂದ ಪೂಜೆ ಸಲ್ಲುತ್ತಿದೆ. ಪುರುಷಪುರದಲ್ಲಿ ಕಾನಿಷ್ಕನು ನಿರ್ಮಿಸಿದ ಅದ್ಭುತವಾದ ಸ್ತೂಪ, 18 ಅಡಿಗಳೆತ್ತರದ ಬುದ್ಧನ ಪ್ರತಿಮೆ, ಅಶೋಕ ನಿರ್ಮಿಸಿದ 100-150 ಅಡಿಗಳೆತ್ತರದ ಸ್ತೂಪಗಳು ಗಮನ ಸೆಳೆಯುತ್ತವೆ ಎನ್ನುತ್ತಾನೆ ಆತ.

ಅಫ್ಘಾನಿಸ್ತಾನದ ಕುದುರಗಳು ಭಾರೀ ಪ್ರಸಿದ್ಧ: ಅಶೋಕನ ಕಾಲದಲ್ಲಿ ಗಾಂಧಾರ ಪ್ರಮುಖ ಬೌದ್ಧ ಕೇಂದ್ರವಾಗಿ ಬೆಳವಣಿಗೆ ಕಂಡಿತ್ತು. ಪೇಷಾವರ, ತಕ್ಷಶಿಲಾ, ಮರ್ದಾನ್, ಉದ್ದಿಯಾನ ಮತ್ತು ತರ್ಕ್‌ಬೈಗಳಲ್ಲಿ ಗಾಂಧಾರ ಶಿಲ್ಪಕಲೆ ಎಂಬ ಕಲಾಪ್ರಕಾರವೇ ಅಂದು ಹುಟ್ಟಿತ್ತು. ಇಂದು ಗಾಂಧಾರದ ಶಿಲ್ಪಕಲೆ ಮತ್ತು ಸಂಸ್ಕೃತಿ ಕೊನೆ ಉಸಿರೆಳೆಯುತ್ತಿದೆ! ಒಂದಾನೊಂದು ಕಾಲದಲ್ಲಿ ಅಫ್ಘಾನಿಸ್ತಾನದ ಜಾತಿ ಕುದುರೆಗಳು ಭಾರತದ ಅನೇಕ ಅರಸರ ಸೇನೆಗಳಲ್ಲಿದ್ದವು. ಕುದುರೆಯ ಮೇಲೆ ಕುಳಿತು ಕುರಿಯನ್ನು ಹೊತ್ತೊಯ್ಯುವ ಜನಪ್ರಿಯ ಆಟ ಬುಜಕಾಶಿ ಕ್ರೌರ್ಯದ ರೂಪ ತಳೆದಿತ್ತು. ವ್ಯಾಪಾರಿಗಳು ಅಫ್ಘನಿಸ್ತಾನದಿಂದ ಕುದುರೆಗಳನ್ನು ತಂದು ವಿಜಯನಗರದ ಅರಸರಿಗೂ ಮಾರಿದ್ದರು. ಟ್ಯಾಗೋರರ ಕಾಬೂಲಿವಾಲ ಕಥೆ ಹಾಗೂ ಕಾಬೂಲ್ ಸೇಬು ಸದಾ ನೆನಪಾಗುತ್ತವೆ.



ಕೊನೆಗೊಂಡ ಸಂಸ್ಕೃತಿ: ಅನೇಕ ಏಳು-ಬೀಳುಗಳನ್ನು ಕಂಡ ಅಫ್ಘನ್ ಸಂಸ್ಕೃತಿಗೆ ಕ್ರಿ.ಶ.642 ರಲ್ಲಿ ಅರಬರ ಆಗಮನದಿಂದ ಬೇರೆಯದೇ ತಿರುವು ಸಿಕ್ಕಿತು. ಇಸ್ಲಾಮ್ ಪ್ರಭಾವ ಅಫ್ಘನ್ ಪ್ರದೇಶದಲ್ಲಿ ಪ್ರಬಲವಾಗತೊಡಗಿ ಹಿಂದೂ ಮತ್ತು ಬೌದ್ಧ ಕಲೆ ಮತ್ತು ಸಂಸ್ಕೃತಿ ದಾಳಿಕೋರರ ಕೈಯಲ್ಲಿ ನಲುಗತೊಡಗಿತು. ಸಿಂಧ್ ಕಡೆಯಿಂದ ಬಂದ ಅರಬರು, ಘಜನವಿ ವಂಶದ ಮಹಮದ್ ಘಜನಿಯ ದಾಳಿ, ಟರ್ಕಿ ಅರಸರ ಕ್ರೌರ್ಯ ಮತ್ತು ಇದರಿಂದ ಆರಂಭವಾದ ಇಸ್ಲಾಮೀಕರಣದ ಕಾರಣವಾಗಿ ಇಲ್ಲಿನ ಮೂಲ ನಿವಾಸಿಗಳಾಗಿದ್ದ ಮೋಹ್ಯಾಲ್, ಖತ್ರಿ ಮತ್ತು ಅರೋರಾ ಜನ ಶತಮಾನಗಳ ಹಿಂದೆಯೇ ವಲಸೆ ಹೊರಟು ಭಾರತ ಸೇರಿದರು.

ಸ್ಮಾರಕಗಳ ನಿರ್ಲಕ್ಷ್ಯ: ಇಂದು ಅಫ್ಘನ್ ಪ್ರದೇಶದಲ್ಲಿ ಬೆರಳೆಣಿಕೆಯಷ್ಟು ಹಿಂದೂ ದೇವಾಲಯಗಳು ಮಾತ್ರ ಉಳಿದಿವೆ. ಸ್ವಾತ್ ಕಣಿವೆಯಲ್ಲಿ ಕೂಡಾ ಬೌದ್ಧ ಸ್ಮಾರಕಗಳಿದ್ದು ಅವುಗಳು ಅವಗಣನೆಗೆ ತುತ್ತಾಗಿ ನೆಲಕಚ್ಚುತ್ತಿವೆ. ತಾಲಿಬಾನ್ ಸರಕಾರ ಕೆಲವು ವರ್ಷಗಳ ಹಿಂದೆ ಬೌದ್ಧ ಸ್ಮಾರಕಗಳನ್ನು ಮತ್ತು ಬಾಮಿಯಾನ್ ಬುದ್ಧನನ್ನು ನೆಲಸಮ ಮಾಡಿತ್ತು. ಮೂರ್ತಿ ಪೂಜೆ ಇಸ್ಲಾಂ ಧರ್ಮದಲ್ಲಿ ನಿಷಿದ್ಧ ಹಾಗೂ ಪುರಾತನ ಅವಶೇಷಗಳು ಕೇವಲ ಕಲ್ಲು ಕಟ್ಟಡಗಳಷ್ಟೇ ಎನ್ನುವುದು ಅಫ್ಘನ್ ಉಗ್ರವಾದಿಗಳ ನಿಲುವು ಎನ್ನುತ್ತಾರೆ ಅಲ್ಲಿನ ಇತಿಹಾಸಕಾರರು!

ರಾಣಿಯನ್ನೇ ಗಡಿಪಾರು ಮಾಡಿದ್ದರು: ಮಹಿಳೆಯರು ಬುರ್ಖಾ ಧರಿಸಲೇಬೇಕು ಎಂದು ತಾಲಿಬಾನ್ ಘೋಷಿಸಿದ ಬೆನ್ನಲ್ಲೇ ನೆನಪಾದದ್ದು ಅಫ್ಘಾನಿಸ್ತಾನದ ರಾಣಿ ಸುರಾಯಾ ತಾರ್ಜಿ. ಕ್ರಿ.ಶ.1899 ರಲ್ಲಿ ಸಿರಿಯಾನದಲ್ಲಿ ಜನಿಸಿದ ಅಫ್ಘನ್ ಮೂಲದ ಈ ಯುವತಿ 1913 ರಲ್ಲಿ ಅಫ್ಘನ್ ರಾಜಕುಮಾರನನ್ನು ವಿವಾಹವಾಗಿ ಆಗಿನ ಸರಕಾರದಲ್ಲಿ ಮಂತ್ರಿಯಾಗಿ ಕಾರ್ಯ ನಿರ್ವಹಿಸುತ್ತಾಳೆ. ಬ್ರಿಟೀಷ್ ಆಡಳಿತ ವಿರುದ್ಧ ಆಂಗ್ಲೋ-ಅಫ್ಘನ್ ಯುದ್ಧದಲ್ಲಿ ಭಾಗವಹಿಸಿ ನಂತರ ಅಫ್ಘನ್ ಅಂತರ್ಯುದ್ಧವನ್ನೂ ಕಂಡವಳು. ಈಕೆ ಅಫ್ಘನ್ ಯುವತಿಯರ ಉನ್ನತ ವಿದ್ಯಾಭ್ಯಾಸಕ್ಕೆ ಹೆಚ್ಚು ಮಹತ್ವ ನೀಡಿದ್ದಳು. ನಂತರ 1929 ರಲ್ಲಿ ಗಡೀಪಾರಾಗಿ ರೋಮ್ ದೇಶದಲ್ಲಿ ನೆಲೆಸಿ 1968 ರಲ್ಲಿ ಮರಣ ಹೊಂದಿದ್ದಳು. ಈಕೆ ತನ್ನ ಮಾನವೀಯ ಕಾರ್ಯಗಳಿಗಾಗಿ ಪ್ರಭಾವಶಾಲಿ ಮಹಿಳೆಯರಲ್ಲಿ ಒಬ್ಬಳು ಎಂದು ಟೈಮ್ ಪತ್ರಿಕೆ 1927 ರಲ್ಲಿ ಉಲ್ಲೇಖಿಸಿತ್ತು.

ಚಿತ್ತ ವಿಹಾರ

ತೃಪ್ತಿ ಮತ್ತು ಅತೃಪ್ತಿಗಳ ರಿಂಗಣಗಳಲ್ಲಿ..

ಮನುಷ್ಯನ ಆಸೆಗೆ ಮಿತಿಯೆಂಬುದು ಇಲ್ಲವೇ ಇಲ್ಲ. ಅದು ಬಯಲು, ಬಾನಿನಂತೆ ವಿಶಾಲ. ಎಷ್ಟು ಸಿಕ್ಕರೂ ಇನ್ನಷ್ಟು ಬೇಕು ಬೇಕು ಎಂಬ ಬಯಕೆ. ಇದರಿಂದಾಗಿಯೇ ಬಿಡುವಿಲ್ಲದ ದುಡಿಮೆ, ಅವಿರತ ಪರಿಶ್ರಮ. ಉಸಿರು ತಗೆದುಕೊಳ್ಳಲು ಪುರುಸೊತ್ತು ಇಲ್ಲದ ಗಡಿಬಿಡಿ. ಇದು ಸಹಜವಾಗಿಯೇ ನಮ್ಮ ಬದುಕನ್ನು ಬಳಲಿಸುತ್ತದೆ. ಬದುಕಿನ ಸಹಜ ಸಂತಸಗಳಿಂದ ದೂರ ದೂರಕ್ಕೆ ಕೊಂಡೊಯ್ಯುತ್ತದೆ. ಹಾಗಾಗಿಯೇ ಮನುಷ್ಯ ಅಲ್ಪ ಸಂತೃಪ್ತನಾಗಿರಬೇಕು. ಯಾವುದರ ಕುರಿತಾಗಿಯೂ ಅಸಂತೋಷ ಇರಕೂಡದು. ಇರುವುದರಲ್ಲಿಯೇ ತೃಪ್ತನಾಗುವ ಮನೋಭಾವ ಬೆಳೆಸಿಕೊಳ್ಳಬೇಕು ಎಂಬುದು ಬಹುತೇಕ ದಾರ್ಶನಿಕರ, ಸಂತರ ಮಾತು. ಇದಕ್ಕೆ ಸಮಾನಾಂತರದಲ್ಲಿ ಮಹಾಭಾರತದ ಒಂದು ಮಾತು ಅಸಂತೋಷಃ ಶ್ರೀಯೋ ಮೂಲಂ ಎನ್ನುತ್ತದೆ. ಒಂದೆಡೆ ಆಸೆಯೇ ಸಂಪತ್ತಿಗೆ ಮೂಲ ಕಾರಣವೆನ್ನುವುದು ಕೂಡ ಸಂಪೂರ್ಣವಾಗಿ ಅಲ್ಲಗಳೆಯದ ಮಾತು.

ಮಹಾಭಾರತದ ದುರ್ಯೋಧನ ಪಾಂಡವರಿಗೆ ಒಂದಿಂಚು ರಾಜ್ಯವನ್ನು ಕೊಡಲಾರೆ ಎಲ್ಲವೂ ನನಗೆ ಬೇಕು ಎಂಬ ಅತಿಯಾಸೆ ಅವನ ಅವನತಿಗೆ ಕಾರಣವಾಗಿದ್ದು ನಮಗೆಲ್ಲ ತಿಳಿದ ಸಂಗತಿ. ಒಂದಡೆ ಆಸೆ ಬದುಕಿನ ಅವನತಿ ಕಾರಣವಾದರೆ ಇನ್ನೊಂದಡೆ ಬದುಕಿನ ಉನ್ನತಿಗೂ ಕೂಡ ತನ್ನದೇ ಕೊಡುಗೆಯನ್ನು ನೀಡಬಲ್ಲದು. ಹಾಗಾಗಿಯೇ ನಾವು ಯಾವುದನ್ನು ಎಷ್ಟು ಆಶಿಸಬೇಕು, ಯಾವುದಕ್ಕೆ ನಿರ್ಲಿಪ್ತನಾಗಬೇಕು ಎಂಬ ಸೂಕ್ಷ್ಮತೆಯನ್ನು ಅರಿಯುವುದು ತುಂಬ ಅಗತ್ಯವಾಗಿದೆ. ಮನುಷ್ಯನ ಮೂಲ ಅಗತ್ಯಗಳಾದ ಅನ್ನ, ಉಡುಗೆ ಮನೆ ಇವುಗಳ ಪೂರೈಕೆಗೆ ಆಸೆ ಪಡಲೇಬೇಕು. ಅವುಗಳನ್ನು ನ್ಯಾಯ ಮಾರ್ಗದಲ್ಲಿ ದುಡಿದು ಸಂಪಾದಿಸಬೇಕು. ದೈನಂದಿನ ಬದುಕಿಗೆ ಅಗತ್ಯವಾದ ಇಂಥವುಗಳಿಗೆ ಮತ್ತೆ ಮತ್ತೆ ಕೂಡಿಡುವ ಅತಿಯಾಸೆ ಖಂಡಿತ ಸಲ್ಲದು. ಈಸಕ್ಕಿಯಾಸೆ ನಿಮಗ್ಯಾಕೆ ಎಂಬ ಆಯ್ದಕ್ಕಿ ಲಕ್ಕಮ್ಮನ ಮಾತು ನಿಜಕ್ಕೂ ಮನನೀಯ. ಇವುಗಳ ಮೇಲಿನ ಸಲ್ಲದ ವ್ಯಾಮೋಹ ನಮ್ಮ ದುಃಖಕ್ಕೆ ಖಂಡಿತ ಕಾರಣವಾಗುತ್ತದೆ. ಇನ್ನೊಂದು ದಿಸೆಯಲ್ಲಿ ಆಧ್ಯಾತ್ಮಿಕ ಸಾಧನೆ, ಜ್ಞಾನದ ಗಳಿಕೆ, ಸತ್ಯದರ್ಶನದಂತ ಅಂಶಗಳಿಗೆ ಆಸೆ ಪಡುತ್ತಲೇ ಇರಬೇಕು. ನಿತ್ಯವೂ ನಿರಂತರವಾಗಿ ಹಂಬಲಿಸಬೇಕು. ಜಗತ್ತಿನ ಶ್ರೇಷ್ಠ ಸಂತ-ಮಹಾಂತರ, ದಾರ್ಶನಿಕರ ಬದುಕಿನ ರೀತಿ ಅವರ ತೀರದ ಜ್ಞಾನಾರ್ಜನೆಗಾಗಿ ಹಂಬಲಿಸಿದ ಹಸಿವನ್ನು ಸಾಕ್ಷೀರಿಸುತ್ತವೆ. ಅಂಬೇಡ್ಕರ ಅವರಂತ ಮೇಧಾವಿಗಳ ಬದುಕು ಎಂದಿಗೂ ಹಿಂಗದ ಜ್ಞಾನ ಗಳಿಕೆಗಾಗಿ ಬದುಕಿನ ತುಂಬ ಪ್ರಯತ್ನಿಸುತ್ತಲೇ ಇದ್ದ ಸಂಗತಿಯನ್ನು ನಮಗೆ ತಿಳಿಸಿಕೊಡುತ್ತವೆ. ಅತಿ ಆಸೆ ದುಃಖಕ್ಕೆ ಕಾರಣವಾಗಬಲ್ಲುದಾದರೆ, ಅತಿಯಾದ ನಿರ್ಲಿಪ್ತ ಭಾವ ಬದುಕನ್ನು ಜಡಗೊಳಿಸಬಲ್ಲದು ಕೂಡ ಎಂಬ ಸಂಗತಿ ವಾಸ್ತವವೇ ಸರಿ. ಯಾವುದಕ್ಕೆ ಅತಿಯಾಗಿ ಹಂಬಲಿಸಬೇಕು? ಯಾವುದನ್ನು ತಿರಸ್ಕರಿಸಬೇಕು? ಯಾವುದರ ಕುರಿತಾಗಿ ನಮ್ಮ ಬಯಕೆಗಳು ಮಿತಿಯಲ್ಲಿರಬೇಕು? ಯಾವುದರಲ್ಲಿ ತೃಪ್ತಿ ಹೊಂದಬೇಕು ಮತ್ತು ಯಾವುದರಲ್ಲಿ ಅತೃಪ್ತಿ ಭಾವ ನಮ್ಮನ್ನು ಮತ್ತೆ ಮತ್ತೆ ಕಾಡುತ್ತಲೇ ಇರಬೇಕು ಎಂಬ ಸಂಗತಿಗಳ ನಡುವಿನ ಸೂಕ್ಷ್ಮತೆಯನ್ನು ನಾವು ಅರಿತುಕೊಂಡು ಮುನ್ನಡೆಯಬೇಕು.

● ಮಹಾದೇವ ಬಸರಕೋಡ

ನಿತ್ಯಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ ● ಕೆ.ಶಿವಪ್ರಸಾದ್

ಮೋಹ, ಭಯ ಮತ್ತು ಕ್ರೋಧ

ಕೃಷ್ಣನ ಪ್ರಕಾರ ಸ್ಥಿತಪ್ರಜ್ಞ ಯಾರೆಂದರೆ ಸುಖದಿಂದ ಉದ್ವೇಗಗೊಳ್ಳದ, ದುಃಖದಿಂದ ತಲ್ಲಣಗೊಳ್ಳದ, ಮೋಹ, ಭಯ, ಕ್ರೋಧಗಳಿಂದ ಮುಕ್ತನಾಗಿರುವ ವ್ಯಕ್ತಿ (2.56) ಸುಖ -ದುಃಖ, ಲಾಭ -ನಷ್ಟ ಮತ್ತು ಜಯ ಅಪಜಯಗಳನ್ನು ಸಮಚಿತ್ತದಿಂದ ಸ್ವೀಕರಿಸಬೇಕೆಂದು ಹೇಳಿದ 2.38ನೆಯ ಶ್ಲೋಕದ ವಿಸ್ತೃತ ರೂಪವಿದು.

ನಾವೆಲ್ಲರೂ ಸುಖವನ್ನು ಬಯಸುತ್ತೇವೆ. ಆದರೆ ದುಃಖ ಅನಿವಾರ್ಯವಾಗಿ ನಮ್ಮ ಜೀವನದಲ್ಲಿ ಬರುತ್ತದೆ. ಯಾಕೆಂದರೆ ಇವೆರಡೂ ದ್ವಂದ್ವದಲ್ಲಿ ಜೊತೆಯಾಗಿಯೇ ಇರುತ್ತವೆ. ಇದು ಮೀನು ಹಿಡಿಯಲು ಇರುವ ಗಾಳದ ಹಿಂದೆ ಅಗೋಚರವಾಗಿರುವ ಕೊಂಡಿಯಂತಿದೆ. ಅಂದರೆ ಹೋರಾಟ ಯಾವಾಗಲು ಪ್ರತಿಫಲ ಕೊಡುತ್ತದೆ.

ಸ್ಥಿತಪ್ರಜ್ಞನಾದವನು ಈ ದ್ವಂದ್ವಗಳನ್ನು ಮೀರಿ ನಿಂತು ದ್ವಂದ್ವಾತೀತನಾಗುತ್ತಾನೆ. ಇದು ನಾವು ಒಂದನ್ನು ಪಡೆದಾಗ ಇನ್ನೊಂದು ಬಂದೇ ಬರುತ್ತದೆ ಎಂಬ ಅರಿವು. ಅದು ಬೇರೆ ರೂಪದಲ್ಲಾಗಿರಬಹುದು ಮತ್ತು ಕಾಲ ನಂತರವಾಗಿರಬಹುದು.

ನಮ್ಮ ಯೋಜನೆಯಿಂದಾಗಿ ನಾವು ಸುಖ ಪಡೆದಾಗ ನಮ್ಮ ಅಹಂಕಾರ ಹಿಗ್ಗುತ್ತದೆ. ಇದು ಉದ್ವೇಗವಲ್ಲದೆ ಮತ್ತೇನು ಅಲ್ಲ. ನಮಗೆ ದುಃಖವಾದಾಗ ಅಹಂಕಾರ ಕುಗ್ಗುತ್ತದೆ. ಇದು ತಲ್ಲಣವಲ್ಲದೆ ಮತ್ತೇನು ಅಲ್ಲ. ಕ್ರೋಧವು ಅಹಂಕಾರದ ಆಟ. ಇದನ್ನು ತಿಳಿದುಕೊಂಡು ಸ್ಥಿತಪ್ರಜ್ಞನು ಅಹಂಕಾರವನ್ನು ಬಿಡುತ್ತಾನೆ.

ದ್ವಂದ್ವಗಳನ್ನು ಮೀರಿರುವ ಸ್ಥಿತಿಯನ್ನು ವರ್ಣಿಸಲು ಭಾಷೆಗಳಲ್ಲಿ ಶಬ್ದಗಳ ಕೊರತೆ ಇದೆ. ಸ್ಥಿತಪ್ರಜ್ಞನು, ರಾಗರಹಿತನಾಗಿರುತ್ತಾನೆ ಎಂದು ಕೃಷ್ಣ ಹೇಳಿದಾಗ ಅವನು ವಿರಕ್ತಿಯ ಕಡೆಗೆ ಹೋಗುತ್ತಾನೆಂದು ಅರ್ಥವಲ್ಲ. ಅವೆರಡನ್ನು ಮೀರಿದ ಸ್ಥಿತಿ ಅದು.

ಸ್ಥಿತಿತಪ್ರಜ್ಞನು ಭಯ ಮತ್ತು ಕ್ರೋಧದಿಂದ ಮುಕ್ತನಾಗಿರುತ್ತಾನೆ ಎಂದಾಗ ಅವನು ಅವನ್ನು ಹತ್ತಿಕ್ಕುತ್ತಾನೆಂಬ ಅರ್ಥವಲ್ಲ.

ಅವು ತಮ್ಮ ಮಧ್ಯೆ ಯಾವುದೇ ಭಯ ಮತ್ತು ಕ್ರೋಧಕ್ಕೆ ಅವಕಾಶ ಕೊಡದೆ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ಇರುತ್ತವೆ. ಭಯ ಮತ್ತು ಕ್ರೋಧ ವರ್ತಮಾನದ ಮೇಲೆ ಭವಿಷ್ಯ ಅಥವಾ ಭೂತಕಾಲದ ಹೊರಹೊಮ್ಮಿಕೆಯಾಗಿದೆ. ಅಂತೆಯೇ ವರ್ತಮಾನದಲ್ಲಿ ಅವೆರಡಕ್ಕೂ ಯಾವುದೇ ಅವಕಾಶವಿಲ್ಲ. ಭಯ ಮತ್ತು ಕ್ರೋಧದಿಂದ ಸ್ಥಿತಪ್ರಜ್ಞನು ಮುಕ್ತನಾಗಿರುತ್ತಾನೆ ಎಂದು ಕೃಷ್ಣ ಹೇಳಿದಾಗ ಅವು ವರ್ತಮಾನದಲ್ಲಿ ಇರುತ್ತವೆ ಎಂಬ ಅರ್ಥ.

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ಪದಬಂಧ



ಎಡದಿಂದ ಬಲಕ್ಕೆ

1. ಪಾಲಿಗೆ ಬಂದ ಕಾಲು ರೂಪಾಯಿಯ ನಾಣ್ಯ (3)
3. ಸರಾಗ ಎಂದರ್ಥ (3)
5. ತಿನ್ನುವ ಪದಾರ್ಥದ ರುಚಿ (2)
6. ಕಿವಿಯಲ್ಲಿ ಹೇಳುವ ನುಡಿ (4)
8. ಕಾಡು ಅಥವಾ ಅರಣ್ಯ (2)
9. ಕತ್ತಲೆ ಅಥವಾ ಅಜ್ಞಾನ (2)
11. ಒತ್ತೊತ್ತಾಗಿರುವಿಕೆ ಅಥವಾ ನಿಬಿಡತೆ (3)
12. ದಿಕ್ಕು ತಪ್ಪಿಸಿ ಬಂದ ಹಾಡುಗಾರ (3)
14. ಎರಡಕ್ಷರದ ಕೈ ತಿರುಗಿ ಬಂದಿದೆ (2)
16. ಸಾಗುವ ಹಾದಿ (2)
17. ನಿಗದಿಪಡಿಸಿದ ಮೊತ್ತದೊಂದಿಗೆ ಬಂದಿರುವ ವಿಷ್ಣು (4)
19. ಸಣ್ಣ ದೇವಾಲಯ (2)
20. ಒರಟಲ್ಲದುದು ಅಥವಾ ನಯ (3)
21. ಅಗಲ ಬಾಯಿಯ ಲೋಹದ ಪಾತ್ರೆ (3)

ಎಡದಿಂದ ಬಲಕ್ಕೆ

1. ಚರಣಕ್ಕೆ ಇನ್ನೊಂದು ಹೆಸರು (2)
2. ಬರಹದ ಚಿನ್ಹೆ (2)
3. ಇದೊಂದು ಬಗೆಯ ಲೋಹ (2)
4. ಮಹಮ್ಮದೀಯರ ದೊರೆಯ ಹೆಸರು (3)
5. ಆದರದಿಂದ ಬರಮಾಡಿಕೊಳ್ಳುವಾಗ ಹೇಳುವ ಮಾತು (3)
7. ನೆಲ ಅಥವಾ ಬೆಟ್ಟವನ್ನು ಕೊರೆದು ಮಾಡುವ ದಾರಿ (3)
8. ಬಳೆಗಳನ್ನು ಮಾರುವವನು (4)
10. ಮನ್ಮಥನಿಗೆ ಹೀಗೊಂದು ಹೆಸರು (4)
13. ಅರ್ಜುನನು ಮದುವೆಯಾದ ನಾಗಕನ್ಯೆ (3)
15. ಕಪ್ಪು ಕೂದಲಿನ ಭಲ್ಲೂಕ (3)
16. ಶೇಖರಣೆ ಅಥವಾ ಸಂಗ್ರಹ (3)
17. ಒಳ್ಳೆಯ ಪರಿಮಳ, ಸುಗಂಧ (2)
18. ವಿಳಂಬ ಅಥವಾ ನಿಧಾನ (2)
19. ಉದ್ದೇಶ ಅಥವಾ ಲಕ್ಷ್ಯ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಪಕಳೆ 3. ಮಾರುತ್ತರ 5. ಇಬ್ಬನಿ 6. ಜಡಿಮಳೆ 8. ನಿವೇಶನ 11. ಕನಕದಾಸ 15. ಉಪಮಾನ 17. ಕಳವಳ 19. ಯಕ್ಷಿಣಿ 20. ಕಟಾಂಜನ 21. ಆಲಸ್ಯ

ಎಡದಿಂದ ಬಲಕ್ಕೆ: 2. ಕರಡಿ 3. ಮಾನಿನಿ 4. ರಸನ 5. ಇಳೆ 6. ಜರೂರು 9. ಶತ್ರು 10. ಬಿಕರಿ 12. ಸಪ್ಪಳ 13. ಧವಳ 14. ತಾಪ 15. ಉದಕ 16. ನಯನ 17. ಕಣಿ 18. ವರ್ತುಲ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಪುಟ್ಟ ಕತೆ!

● ಶ್ರೀಲಕ್ಷ್ಮಿ

ಅನಿರೀಕ್ಷಿತ

ಗುಡ್ಡಗಾಡು ಪ್ರದೇಶ ಒಂದರಿಂದ ದೇಶ ಕಾಯಲು ಹೊರಟ ಯೋಧನೊಬ್ಬನು 'ಈ ಭಾರಿ ಒಂದು ವಿಶೇಷ ಟಾಸ್ಕ್ ಫೋರ್ಸ್‌ಗೆ ನನ್ನನ್ನು ಆಯ್ಕೆ ಮಾಡಿದ್ದಾರೆ. ಅದನ್ನು ದಕ್ಷತೆಯಿಂದ ನಿಭಾಯಿಸಿ ಬರುವೆನು' ಎಂದು ಹೇಳಿ, ತಂದೆ ತಾಯಿಯರ ಆಶೀರ್ವಾದ ಪಡೆದು ಹೊರಟನು. ಅವನ ಪೋಷಕರು ಧೃತಿಗೆಡದೆ ಧೈರ್ಯದಿಂದ ಅವನನ್ನು ಕಳುಹಿಸಿಕೊಟ್ಟರೇ ಆದರೂ ಅವನು ಹೊರಟ ಮೇಲೆ ಅವನ ತಾಯಿಯು 'ಏಕೋ ಮನಸ್ಸು ಪ್ರಶ್ನಿಸುತ್ತಿದೆ... ಮತ್ತೆ ಅವನನ್ನು ನೋಡುವೆವಾ?' ಎಂದಳು. 'ಛೇ, ಛೇ!.. ಅವನಿಗೇನು ಆಗದು. ವಿಜಯಶಾಲಿಯಾಗಿ ಹಿಂತಿರುಗುವನು' ಎಂದು ಸಮಾಧಾನಗೊಳಿಸಿದರು. ಕೆಲವು ದಿನಗಳ ನಂತರ ಅತಿಯಾದ ಮಳೆ ಸುರಿಯಲು ಪ್ರಾರಂಭಿಸಿತು. ಇವರಿದ್ದ ಮನೆಯ ಗುಡ್ಡವು ಕುಸಿದು ಅಲ್ಲಿದ್ದವರೆಲ್ಲ ನೀರುಪಾಲಾದರು. ಅತ್ತ ಮಗನು ಫೋನ್ ಮಾಡಿ ತಾನಿದ್ದ ಕಾರ್ಯಚರಣೆ ಯಶಸ್ವಿಯಾಗಿ ಪೂರ್ಣಗೊಂಡಿದ್ದು ಮುಂದಿನ ವಾರ ಬರುವುದಾಗಿ ಹೇಳಲು ಪ್ರಯತ್ನಿಸುತ್ತಿದ್ದನು. ಆದರೆ ಆ ಕರೆ ಸ್ವೀಕೃತಗೊಳ್ಳಲಿಲ್ಲ.

ಹಾಸ್ಟೆಲ್

ಮೊಬೈಲ್ ಅಡಿಕ್ಟ್ ಆಗಿದ್ದ ಮಗನನ್ನು ಸುಧಾರಿಸಲು ಸಾಧ್ಯವಿಲ್ಲ! ಎಂದು ತೀರ್ಮಾನಿಸಿದ ಅವನ ತಂದೆ ತಾಯಿಯು ಅವನನ್ನು ಊರಿನ ಹೊರಗಿದ್ದ ಹಾಸ್ಟೆಲ್‌ಗೆ ಕರೆದುಕೊಂಡು ಹೊರಟರು. 'ಓದಿನಲ್ಲಿ ಪರ್ವಾಗಿಲ್ಲ, ಆದರೆ ಹೇಳಿದ ಮಾತು ಕೇಳೋಲ್ಲ, ಶಿಸ್ತಿನಿಂದ ಬೆಳೆಯುವನು ಎಂಬ ವಿಶ್ವಾಸದಿಂದ ಇಲ್ಲಿ ಸೇರಿಸಲು ಬಂದಿರುವೆವು' ಎಂದು ಹಾಸ್ಟೆಲ್ ಮುಖ್ಯಸ್ಥರ ಬಳಿ ಹೇಳಿದಾಗ ಅವರು ಕೌಂನ್ಸಲರ್ ಬಳಿ ಕಳುಹಿಸಿದರು. ಕೌಂನ್ಸಲರ್ ಹುಡುಗನಿಗೆ 'ನಿನಗೆ ಅಪ್ಪ ಅಮ್ಮನನ್ನು ಬಿಟ್ಟು, ಇಲ್ಲಿ ಸೇರುವ ಮನಸ್ಸಿದೆಯಾ?' ಎಂದು ಕೇಳಿದರು. 'ನಾನು ಮನೆಯಲ್ಲಿ ಇದ್ದರೂ ನನಗೆ ಕೊಡಲು ಅವರ ಬಳಿ ಸಮಯವಿಲ್ಲ. ಸೋ... ನನಗೇನು ವ್ಯತ್ಯಾಸವಾಗದು' ಎಂದನು. ಅವನ ತಂದೆ ತಾಯಿಯ ಬಳಿ ಬಂದ ಕೌಂನ್ಸಲರ್ 'ನೀವಿಬ್ಬರು ಅವನ ಸಂಗಡ ಪ್ರತಿನಿತ್ಯ ಎರಡು ಮೂರು ಗಂಟೆಗಳ ಕಾಲ ಸಂತೋಷದಿಂದ ಸಮಯ ಕಳೆಯಿರಿ. ಹಾಸ್ಟೆಲ್ ಮನೆಯ ಪರ್ಯಾಯವಾಗಲು ಸಾಧ್ಯವಿಲ್ಲ'. ಎಂದು ಹೇಳಿ ಕಳಿಸಿದರು. ನಂತರ ಊಟ ಮಾಡುತ್ತಾ ಕುಳಿತ ಹಾಸ್ಟೆಲ್ ಮುಖ್ಯಸ್ಥರ ಬಳಿ ಅಲ್ಲಿನ ಕೌನ್ಸಲರ್ ಹೇಳಿದಳು 'ಸರ್! ಈ ಬಿಲ್ಡಿಂಗ್‌ನಲ್ಲಿ ಒಂದು ಪೇರೆಂಟಿಂಗ್ ಕ್ಲಾಸ್ ತೆರೆದರೆ ಹೇಗೆ?' ಅಂತ.... ಅಂದರೆ 'ಪೇರೆಂಟ್ಸ್ ಹಾಸ್ಟೆಲ್ಲಾ?' ಎನ್ನುತ ನಕ್ಕರು ಅಲ್ಲಿನ ಮುಖ್ಯಸ್ಥರು.

ಭಗವಂತನ ಬಗೆಗಿನ ವಿಶ್ವಾಸ ಕಡಿಮೆಯಾಗದಿರಲಿ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಬಹಳಷ್ಟು ವರ್ಷಗಳ ಹಿಂದೆ ಒಂದು ಪುಟ್ಟ ಸುಭಿಕ್ಷ ರಾಜ್ಯದ ಮೇಲೆ ದೊಡ್ಡ ರಾಜ್ಯದ ರಾಜ ದಂಡೆತ್ತಿ ಬಂದ. ಎರಡು ಕಡೆಯವರಿಗೂ ಭೀಕರ ಯುದ್ಧ ಆರಂಭವಾಯಿತು. ಸಣ್ಣ ರಾಜ್ಯದ ಪ್ರಜೆಗಳಿಗೆ ತಮ್ಮ ರಾಜನ ಮೇಲೆ ಅತ್ಯಂತ ಪ್ರೀತಿ. ಆದರೆ ಆ ರಾಜ್ಯ ಸೋಲುವ ಸ್ಥಿತಿ ಉಂಟಾಯಿತು.

'ಇಲ್ಲೇ ಇದ್ದರೆ ಇನ್ನು ನನಗೆ ಉಳಿಗಾಲವಿಲ್ಲ, ಪ್ರಾಣವೇ ಹೋದ ಮೇಲೆ ಇನ್ನು ಇವರ ವಿರುದ್ಧ ಹೋರಾಡುವುದಾದರೂ ಹೇಗೆ? ಈಗ ಮೊದಲು ಪ್ರಾಣ ಉಳಿಸಿಕೊಂಡರೆ ಮುಂದೆಯಾದರೂ ಜಯ ಸಾಧಿಸಬಹುದು' ಎಂದುಕೊಂಡು ಸಣ್ಣ ರಾಜ್ಯದ ರಾಜ ಅಲ್ಲಿಂದ ಪಾರಾಗಲು ಓಡಿದ. ಶೌರ್ಯವಂತನಾದ ಅವನು ಮತ್ತೆ ಸೈನ್ಯವನ್ನು ಒಗ್ಗೂಡಿಸಿ ದೊಡ್ಡ ರಾಜನನ್ನು ಮಣಿಸಲೇಬೇಕು ಎಂದುಕೊಂಡು ಪರಾರಿಯಾಗುವ ನಿರ್ಧಾರಕ್ಕೆ ಬಂದಿದ್ದ. ಓಡುತ್ತಾ ಓಡುತ್ತಾ ಬೆಟ್ಟವೊಂದಕ್ಕೆ ಬಂದ ಅವನು, ಅಲ್ಲಿದ್ದ ಹಲವಾರು ಗುಹೆಗಳಲ್ಲಿ ಒಂದರ ಒಳಹೊಕ್ಕು ಬಚ್ಚಿಟ್ಟುಕೊಂಡ. ಆದರೆ ಇದು ಸುರಕ್ಷಿತವಾದ ತಾಣವಲ್ಲ, ಇನ್ನು ಕೆಲವೇ ಹೊತ್ತಿನಲ್ಲಿ ಶತ್ರು ಪಾಳಯ ತನ್ನನ್ನು ಹುಡುಕಿಕೊಂಡು ಬಂದೇ ಬರುತ್ತದೆ ಎಂಬುದು ಅವನಿಗೆ ತಿಳಿದಿತ್ತು.

ಆದರೂ ಏನು ಮಾಡಲೂ ತೋಚದೆ ದೇವರನ್ನು ನಂಬಿ ಅಪಾರವಾದ ಭಕ್ತಿಯಿಂದ ಕಣ್ಣುಮುಚ್ಚಿ ಪ್ರಾರ್ಥನೆ ಮಾಡಲು ಶುರು ಮಾಡಿದ. 'ದೇವರೇ ನನಗೆ ನನ್ನ ರಾಜ್ಯ ಬೇಕು.. ಅದಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧನಿದ್ದೇನೆ. ನನ್ನನ್ನು ಮತ್ತು ಆ ಮೂಲಕ ನನ್ನ ಪ್ರಜೆಗಳನ್ನು ರಕ್ಷಿಸುವ ಹೊಣೆ ನಿನ್ನದು' ಎಂದು ಮೊರೆಯಿಟ್ಟ.

ಅಷ್ಟರಲ್ಲಿ ಅಲ್ಲಿದ್ದ ಜೇಡವೊಂದು ಗುಹೆಯ ಬಾಗಿಲಲ್ಲಿ ಬಲೆ ಕಟ್ಟಲು ಶುರು ಮಾಡಿತು. ಅದನ್ನು ಕಂಡ ರಾಜ, 'ಅಯ್ಯೋ ದೇವರೇ ಇಲ್ಲೊಂದು ಕಲ್ಲಿನದೋ ಪೊದೆಯದೋ ಗೋಡೆ ಕಟ್ಟಿ ನನ್ನನ್ನು ಕಾಪಾಡುವೆ ಎಂದುಕೊಂಡರೆ, ಕೇವಲ ಕೈಯಲ್ಲಿ ಸರಿಸಿ ಒಳನುಗ್ಗಬಹುದಾದ ಬಲೆ ಸೃಷ್ಟಿಸುತ್ತಿರುವೆಯಲ್ಲ' ಎಂದು ಪೇಚಾಡಿಕೊಂಡ. ಅಷ್ಟರಲ್ಲಾಗಲೇ ಶತ್ರುಪಡೆಯ ಹೆಜ್ಜೆ ಸಪ್ಪಳ ಕೇಳಿಸಿತು. ಅವರು ಎಲ್ಲ ಗುಹೆಗಳನ್ನೂ ಹುಡುಕತೊಡಗಿದರು.

ಈ ಗುಹೆಯ ಬಳಿಗೂ ಬಂದರು. ಇನ್ನು ತನ್ನ ಗತಿ ಮುಗಿದೇಹೋಯಿತು ಎಂದು ಚಿಂತಾಕ್ರಾಂತನಾದ ರಾಜ ಉಸಿರು ಬಿಗಿಹಿಡಿದು ಕುಳಿತ. ಹೊರಗಿದ್ದವರು ಈ ಗುಹೆಯ ಒಳ ಹೋಗಲು ಅಡಿ ಇಡುತ್ತಿದ್ದಂತೆಯೇ ಅವರನ್ನು ತಡೆದ ಮುಖ್ಯಸ್ಥ 'ಏಯ್ ಈ ಗುಹೆಯ ಒಳಗೆ ಹೋಗಿ ಸುಮ್ಮನೆ ಕಾಲಹರಣ ಮಾಡಬೇಡಿ. ಇಲ್ಲಿ ಬಾಗಿಲಲ್ಲೇ ಜೇಡರ ಬಲೆ ಇದೆ ನೋಡಿ. ಯಾರಾದರೂ ಒಳಗೆ ಹೋಗಿದ್ದರೆ ಬಲೆಯನ್ನು ಸರಿಸಿ ಹೋಗುತ್ತಿದ್ದರು. ಹೀಗಾಗಿ ರಾಜನಿಗಾಗಿ ಬೇರೆ ಗುಹೆಗಳಲ್ಲಿ ಹುಡುಕಿ' ಎಂದು ಆದೇಶಿಸಿದ. ಹೀಗೆ ರಾಜನ ಪ್ರಾಣ ಉಳಿದಿತ್ತು.

ಆ ದೇವರು ನಾವು ಅಂದುಕೊಳ್ಳುವ ದಾರಿಯಲ್ಲಿ ನಮ್ಮನ್ನು ಕರೆದೊಯ್ಯದೇ ಇರಬಹುದು. ನಮಗೆ ಜೀವನಪಾಠ ಕಲಿಸುವ ಅಪೇಕ್ಷೆ ಇರಬಹುದು ಆತನಿಗೆ. ನಮ್ಮ ನಂಬಿಕೆ ಅಚಲವೂ, ದೃಢವಾದದ್ದೂ, ಗಾಢವಾದದ್ದೂ ಆಗಿದ್ದರೆ, ಕಾಯುವ ತಾಳ್ಮೆ ನಮಗಿದ್ದರೆ ನಮ್ಮ ನಂಬಿಕೆಯ ಮೇಲಿನ ನಂಬಿಕೆ ಹುಸಿಯಾಗಲಾರದು.

ಕೆಲವೊಮ್ಮೆ ನಾವು ಅಂದುಕೊಂಡಂತೆ ಎಲ್ಲವೂ ಆಗುವುದಿಲ್ಲ, ಆಗ ನಮಗೆ ನಮ್ಮ ಪ್ರಯತ್ನಗಳ ಬಗ್ಗೆ ವಿಶ್ವಾಸ ಕಡಿಮೆಯಾಗುತ್ತಾ ಹೋಗುತ್ತದೆ. ದೇವರು ನಿಜವಾಗಿ ನಮಗೆ ಸಹಾಯ ಮಾಡುತ್ತಾನೋ? ಎಂಬ ಹಲವಾರು ಗೊಂದಲಗಳು ಕೂಡ ಮನಸ್ಸಿನಲ್ಲಿ ಮೂಡುತ್ತವೆ. ಆದರೆ ಇಂತಹ ಗೊಂದಲಗಳ ಬೆನ್ನಲ್ಲೇ ಬೆಳಕು ಕಾಣುತ್ತಾ ಹೋಗುತ್ತದೆ. ಕಾಯುವ ತಾಳ್ಮೆ ನಮಗಿರಬೇಕು ಅಷ್ಟೇ. ಎಷ್ಟು ಬಾರಿ ಇನ್ನೇನು ಆ ಕೆಲಸ ಆಗಿಬಿಡುತ್ತದೆ ಎನ್ನುವ ಹಂತದಲ್ಲಿ ನಾವು ಅದನ್ನು ಬಿಟ್ಟು ಹೊರಟುಬಿಡುತ್ತೇವೆ. ಅಷ್ಟು ದಿನದ ನಮ್ಮ ಶ್ರಮ, ಕಾಯುವಿಕೆ ಗೆಲ್ಲವೂ ಒಂದು ಕ್ಷಣದ ನಿರಾಸೆಯಿಂದ ಕೈತಪ್ಪಿ ಹೋಗಿಬಿಡುತ್ತದೆ. ಆದ್ದರಿಂದಲೇ ಭಗವಂತನಲ್ಲಿ ಅಪರಿಮಿತ ವಿಶ್ವಾಸ, ನಮ್ಮ ಪ್ರಯತ್ನದಲ್ಲಿ ನಂಬಿಕೆ ಇದ್ದಾಗ, ತಾಳ್ಮೆಯನ್ನೂ ಮೈಗೂಡಿಸಿಕೊಂಡು ಮುಂದುವರೆದರೆ ಖಂಡಿತ ಕಾರ್ಯಸಿದ್ಧಿ ನಮ್ಮದು.

ಸಮಾಚಾರ ಸಣ್ಣದಲ್ಲ

ಸಿಂಧು ಕ್ವಾರ್ಟರ್ ಫೈನಲ್‌ಗೆ

ದೆಹಲಿ: ಭಾರತದ ಪಿ.ವಿ. ಸಿಂಧು ಮತ್ತು ಕಿರಣ್ ಜಾರ್ಜ್ ಅವರು ಇಲ್ಲಿ ನಡೆಯುತ್ತಿರುವ ಇಂಡಿಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ಸಿಂಗಲ್ಸ್‌ನ ಕ್ವಾಟರ್ ಫೈನಲ್ ಪ್ರವೇಶಿಸಿದರು. ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಗುರುವಾರ ನಡೆದ ಪ್ರಿ ಕ್ವಾಟರ್ ಫೈನಲ್‌ನಲ್ಲಿ 21-15, 21-13ರಿಂದ ಜಪಾನ್‌ನ ಮನಾಮಿ ಸುಯಿಜು ಅವರನ್ನು ಸೋಲಿಸಿದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಕಣದಲ್ಲಿ ಉಳಿದಿರುವ ಭಾರತದ ಏಕೈಕ ಸ್ಪರ್ಧಿಯಾಗಿರುವ 29 ವರ್ಷದ ವಯಸ್ಸಿನ ಸಿಂಧು ಅವರಿಗೆ ಕ್ವಾರ್ಟರ್ ಫೈನಲ್‌ನಲ್ಲಿ ಅಗ್ನಿಪರೀಕ್ಷೆ ಎದುರಾಗಿದೆ. ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಗ್ರೆಗೋರಿಯಾ ಮರಿಸ್ಕಾ ತುಂಜಂಗ್ (ಇಂಡೋನೇಷ್ಯಾ) ಅವರೊಂದಿಗೆ ಮುಖಾಮುಖಿಯಾಗಲಿದ್ದಾರೆ.

ಕ್ವಾರ್ಟರ್ ಫೈನಲ್‌ಗೆ ಕರ್ನಾಟಕದ ಕಿರಿಯರು

ತಿರುವನಂತಪುರ: ಸಲೋನಿ. ಪಿ (20ಕ್ಕೆ 4) ಮತ್ತು ಪೂಜಾ ಕುಮಾರಿ (13ಕ್ಕೆ 3) ಅವರ ಆಕ್ರಮಣಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ 23 ವರ್ಷದೊಳಗಿನ ಮಹಿಳೆಯರ ಟಿ20 ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು. ತಿರುವನಂತಪುರದ ಮಂಗಳಪುರಂನ ಕೆಸಿಎ ಕ್ರಿಕೆಟ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ರೋಷನಿ ಕಿರಣ್ ನೇತೃತ್ವದ ಕರ್ನಾಟಕ ಮಹಿಳೆಯರು 26 ರನ್‌ಗಳಿಂದ ಬರೋಡಾ ತಂಡವನ್ನು ಮಣಿಸಿತು. ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗೆ 126 ರನ್ ಗಳಿಸಿತು. ಗುರಿಯನ್ನು ಬೆನ್ನಟ್ಟಿದ ಬರೋಡಾ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗೆ 100 ರನ್ ಗಳಿಸಿ ಹೋರಾಟವನ್ನು ಅಂತ್ಯಗೊಳಿಸಿತು.

ವಿರಾಮ
ಪ್ರತಿ ಭಾನುವಾರ

7 ಇನ್ನಿಂಗ್ಸ್ 5 ಶತಕ 752 ರನ್-ಕನ್ನಡಿಗ ಕರುಣ್ ಅಬ್ಬರ

ಕರ್ನಾಟಕ VS ವಿದರ್ಭ ಫೈನಲ್ ಫೈಟ್

ವಡೋಧರಾ: ಇಲ್ಲಿ ನಡೆದ ವಿಜಯ್ ಹಜಾರೆ ಟೂರ್ನಿಯ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ವಿದರ್ಭ ತಂಡವು, ಮಹಾರಾಷ್ಟ್ರ ತಂಡವನ್ನು 69 ರನ್‌ಗಳಿಂದ ಮಣಿಸಿ ಫೈನಲ್‌ಗೆ ಪ್ರವೇಶಿಸಿದೆ. ಟೂರ್ನಿಯುದ್ದಕ್ಕೂ ಅಮೋಘ ಪ್ರದರ್ಶನ ನೀಡಿದ ವಿದರ್ಭ ತಂಡವು ಸೆಮಿಫೈನಲ್‌ನಲ್ಲಿ ಸಂಘಟಿತ ಆಟದ ಪ್ರದರ್ಶನ ನೀಡಿ ಅಬ್ಬರಿಸಿದೆ. ಫೈನಲ್ ಪಂದ್ಯದಲ್ಲಿ ಇದೇ ಶನಿವಾರದಂದು ವಿದರ್ಭ ತಂಡವು ಕರ್ನಾಟಕ ತಂಡದ ವಿರುದ್ಧ ಕಾದಾಟ ನಡೆಸಲಿದೆ.

ಟಾಸ್ ಸೋತರೂ ಮೊದಲು ಬ್ಯಾಟ್ ಮಾಡಿದ ವಿದರ್ಭ 50 ಓವರ್‌ಗಳಲ್ಲಿ 3 ವಿಕೆಟ್‌ಗೆ 380 ರನ್ ಸೇರಿಸಿತು. ಇದಕ್ಕುತ್ತರವಾಗಿ ಬ್ಯಾಟ್ ಮಾಡಿದ ಮಹಾರಾಷ್ಟ್ರ 50 ಓವರ್‌ಗಳಲ್ಲಿ 7 ವಿಕೆಟ್‌ಗೆ 311 ರನ್ ಪೇರಿಸಿ ಸೋಲು ಕಂಡಿತು.

ಭರ್ಜರಿ ಆರಂಭ ಮೊದಲು ಬ್ಯಾಟ್ ಮಾಡಿದ ವಿದರ್ಭ ತಂಡದ ಆರಂಭವು ಭರ್ಜರಿಯಾಗಿತ್ತು. ಆರಂಭಿಕರಾದ ಧ್ರುವ್ ಶೋರೆ ಹಾಗೂ ಯಶ್ ರಾಥೋಡ್ ಅಮೋಘ ಜೊತೆಯಾಟದ ಕಾಣಿಕೆ ನೀಡಿತು. ಈ ಜೋಡಿಯನ್ನು ಬೇರ್ಪಡಿಸಲು ಮಹಾರಾಷ್ಟ್ರ ಬೌಲರ್‌ಗಳ ವಿಫಲರಾದರು. ಈ ಜೋಡಿ ಮಹಾರಾಷ್ಟ್ರ ನಾಯಕನ ನಿರ್ಧಾರವನ್ನು ತಪ್ಪು ಎಂದು ಸಾಬೀತು ಮಾಡಿತು. ಹಂತ ಹಂತವಾಗಿ ಪಂದ್ಯದ ಮೇಲೆ ಹಿಡಿತ ಸಾಧಿಸಿದ ಆರಂಭಿಕ ಜೋಡಿ ರುತುರಾಜ್ ಗಾಯಕ್ವಾಡ್ ಅವರ ಮುಖದಲ್ಲಿ ಚಿಂತೆಯ ಗೆರೆಗಳನ್ನು ಮೂಡುವಂತೆ ಮಾಡಿತು.

ಆರಂಭಿಕರ ಶತಕದ ಆಟ: ಮೊದಲ ಪವರ್ ಪ್ಲೇನಲ್ಲಿ ಪವರ್‌ಫುಲ್ ಆಟವನ್ನು ಆಡಿದ ಧ್ರುವ್ ಶೋರೆ, ಯಶ್ ರಾಥೋಡ್ ಸೊಗಸಾದ ಆಟವನ್ನು ಆಡಿತು. ಆ ಜೋಡಿ ಮಿಡ್ಲ್ ಓವರ್‌ನಲ್ಲೂ ವಿಕೆಟ್ ಬೀಳದಂತೆ ಕಾಯ್ದುಕೊಂಡರು. ಮೊದಲ ವಿಕೆಟ್‌ಗೆ 34.4 ಓವರ್‌ಗಳಲ್ಲಿ 224 ರನ್ ಜೊತೆಯಾಟದ ಕಾಣಿಕೆ ನೀಡಿತು. ಯಶ್ ರಾಥೋಡ್ 14 ಬೌಂಡರಿ, 1 ಸಿಕ್ಸರ್ ಸಹಾಯದಿಂದ 116 ರನ್ ಬಾರಿಸಿ ಔಟ್ ಆದರು. ಇನ್ನೊಬ್ಬ ಆರಂಭಿಕ ಆಟಗಾರ ಧ್ರುವ್ ಶೋರೆ 114 ರನ್ ಸಿಡಿಸಿ ಔಟ್ ಆದರು. ಇವರು 14 ಬೌಂಡರಿ, 1 ಸಿಕ್ಸರ್ ಸಿಡಿಸಿದರು.

ಕರುಣ್ ನಾಯರ್ ಆರ್ಭಟ: ಟೂರ್ನಿಯುದ್ದಕ್ಕೂ ಅಮೋಘ ಬ್ಯಾಟಿಂಗ್ ಪ್ರದರ್ಶನ ನೀಡಿರುವ ಕರುಣ್ ನಾಯರ್ 44 ಎಸೆತಗಳಲ್ಲಿ ಅಜೇಯ 88 ರನ್ ಸಿಡಿಸಿ ತಂಡದ ಮೊತ್ತವನ್ನು ಹಿಗ್ಗಿಸಿದರು. ಇವರ ಇನಿಂಗ್ಸ್‌ನಲ್ಲಿ 9 ಬೌಂಡರಿ, 5 ಸಿಕ್ಸರ್ ಸೇರಿವೆ. ಇನ್ನು ಆರ್‌ಸಿಬಿ ತಂಡವನ್ನು ಸೇರಿರುವ ಜಿತೇಶ್ ಶರ್ಮಾ 33 ಎಸೆತಗಳಲ್ಲಿ 3 ಬೌಂಡರಿ, 3 ಸಿಕ್ಸರ್ ಸಹಾಯದಿಂದ 51 ರನ್ ಸಿಡಿಸಿದರು.

ಆಸರೆ ಆಗದ ಬ್ಯಾಟರ್ಸ್: ಮಹಾರಾಷ್ಟ್ರ ಪರ ಸ್ಟಾರ್ ಆಟಗಾರರು ಸ್ಥಿರ ಪ್ರದರ್ಶನ ನೀಡಲಿಲ್ಲ. ಅರ್ಶಿನ್ ಕುಲ್ಕರ್ಣಿ 90, ಅಂಕಿತ್ ಭಾವನೆ 50 ರನ್ ಬಾರಿಸಿ ತಂಡಕ್ಕೆ ಆಧಾರವಾದರು. ಉಳಿದಂತೆ ಸ್ಟಾರ್ ಆಟಗಾರರಾದ ರುತುರಾಜ್ ಗಾಯಕ್ವಾಡ್, ರಾಹುಲ್ ತ್ರಿಪಾಠಿ, ರನ್ ಕಲೆ ಹಾಕುವಲ್ಲಿ ವಿಫಲರಾದರು. ವಿದರ್ಭ ಪರ ದರ್ಶನ್ ನಲ್ಕಂಡೆ, ನಚಿಕೇತ್ ಭೂತೆ ತಲಾ ಮೂರು ವಿಕೆಟ್ ಕಬಳಿಸಿದರು, ಈ ಮೂಲಕ ವಿದರ್ಭ ಮೊದಲ ಬಾರಿಗೆ ಟೂರ್ನಿಯ ಫೈನಲ್ ಪ್ರವೇಶಿಸಿದೆ.

ರಣಜಿ ಟ್ರೋಫಿ: ರಿಷಭ್ ಡೆಲ್ಲಿ ನಾಯಕ

ದೆಹಲಿ: ಜನವರಿ 23ರಂದು ರಣಜಿ ಟ್ರೋಫಿಯ ಎರಡನೇ ಲೆಗ್ ಪಂದ್ಯಗಳು ಆರಂಭವಾಗಲಿವೆ. ಬಿಸಿಸಿಐ ನಿಯಮಗಳ ಪ್ರಕಾರ ಅಂತಾರಾಷ್ಟ್ರೀಯ ಕ್ರಿಕೆಟ್ ಇಲ್ಲದ ಸಂದರ್ಭದಲ್ಲಿ ಗುತ್ತಿಗೆಯಲ್ಲಿರುವ ಆಟಗಾರರು ರಣಜಿ ಟ್ರೋಫಿ ಆಡಬೇಕೆಂದು ನಿಯಮಗಳನ್ನು ಜಾರಿ ಮಾಡಿದೆ,

ಆದರೆ ಹಿರಿಯ ಆಟಗಾರರಿಗೆ ನಿಯಮದಲ್ಲಿ ಸಡಿಲಿಕೆ ಮಾಡಿತ್ತು. ಆದರೆ ಸತತ ಎರಡು ಸರಣಿಯಲ್ಲಿ ವೈಫಲ್ಯ ಅನುಭವಿಸುತ್ತಿರುವುದರಿಂದ ರಣಜಿಯಲ್ಲಿ ಆಡಲು ಸೂಚಿಸಲಾಗಿದೆ. ಈಗಾಗಲೇ ಪಂತ್, ಗಿಲ್ ಹಾಗೂ ಜೈಸ್ವಾಲ್‌ರಂತಹ ಯುವ ಆಟಗಾರರು ರಣಜಿಯಲ್ಲಿ ಆಡುವುದಕ್ಕೆ ಮುಂದಾಗಿದ್ದಾರೆ. ಆದರೆ ಹಿರಿಯ ಆಟಗಾರರಾದ ರೋಹಿತ್ ಹಾಗೂ ಕೊಹ್ಲಿ ಇನ್ನೂ ತಮ್ಮ ಲಭ್ಯತೆ ಬಗ್ಗೆ ಸ್ಪಷ್ಟತೆ ನೀಡಿಲ್ಲ ಎಂದು ತಿಳಿದುಬಂದಿದೆ.

ವಿರಾಟ್ ಕೊಹ್ಲಿ ದೇಶೀಯ ಕ್ರಿಕೆಟ್‌ನಲ್ಲಿ ಆಡುತ್ತಾರಾ? ಅಥವಾ ಇಲ್ಲವೇ? ಅವರು ರಣಜಿ ಟ್ರೋಫಿಯಲ್ಲಿ ದೆಹಲಿ ಪರ ಆಡುತ್ತಾರಾ? ಈ ಪ್ರಶ್ನೆಗಳಿಗೆ ಉತ್ತರಿಸಲು ದೆಹಲಿ ಮತ್ತು ಜಿಲ್ಲಾ ಕ್ರಿಕೆಟ್ ಸಂಘ (ಡಿಡಿಸಿಎ) ಸಿದ್ಧವಾಗಿದೆ. 2024-25ರ ರಣಜಿ ಟ್ರೋಫಿಯ ಎರಡನೇ ಲೆಗ್‌ನ ಭಾಗವಾಗಿ ಜನವರಿ 23ರಂದು ಪ್ರಾರಂಭವಾಗುವ ಪಂದ್ಯಕ್ಕೆ ಶುಕ್ರವಾರ ತಂಡವನ್ನು ಪ್ರಕಟಿಸಲಿದ್ದು, ಎಲ್ಲಾ ಕುತೂಹಲಕ್ಕೆ ತೆರೆ ಬೀಳಲಿದೆ. ಡಿಡಿಸಿಎ ಈ ಹಿಂದೆ ಇತ್ತೀಚಿನ ರಣಜಿ ಟ್ರೋಫಿ ಋತುವಿಗೆ 41 ಆಟಗಾರರ ಸಂಭಾವ್ಯ ತಂಡವನ್ನು ಪ್ರಕಟಿಸಿತ್ತು. ಅದರಲ್ಲಿ ಟೀಮ್ ಇಂಡಿಯಾ ತಾರೆಯರಾದ ವಿರಾಟ್ ಕೊಹ್ಲಿ, ರಿಷಭ್ ಪಂತ್ ಮತ್ತು ಹರ್ಷಿತ್ ರಾಣಾ ಅವರ ಹೆಸರುಗಳು ಸೇರಿತ್ತು. ಆದರೆ, ರಾಷ್ಟ್ರೀಯ ತಂಡದ ಕರ್ತವ್ಯಗಳಿಂ ದಾಗಿ, ಕೊಹ್ಲಿ ಮತ್ತು ಪಂತ್ ದೆಹಲಿ ಪರ ಆಡಲು ಸಾಧ್ಯವಾಗಲಿಲ್ಲ. ಆದರೆ ಇತ್ತೀಚೆಗೆ ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್-ಗವಾಸ್ಕರ್ ಟ್ರೋಫಿಯಲ್ಲಿ ಕೊಹ್ಲಿ ಮತ್ತು ಪಂತ್ ತೀವ್ರ ವೈಫಲ್ಯದ ನಂತರ ರಣಜಿಯನ್ನು ತಾತ್ಸಾರ ಮಾಡಿದ್ದಕ್ಕಾಗಿ ಟೀಕೆ ವ್ಯಕ್ತವಾಗಿತ್ತು.

ನಿರ್ದಿಷ್ಟವಾಗಿ ಹೇಳುವುದಾದರೆ, ಈ ಇಬ್ಬರು ದೆಹಲಿ ಬ್ಯಾಟ್ಸ್‌ಮನ್‌ಗಳ ಶಾಟ್ ಆಯ್ಕೆ ಮತ್ತು ವಿಕೆಟ್ ಕಳೆದುಕೊಳ್ಳುವ ಶೈಲಿ ಸಾಕಷ್ಟು ಟೀಕೆಗೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ, ರಣಜಿ ಟ್ರೋಫಿಯಲ್ಲಿ ಆಡುವ ಮೂಲಕ ಕೊಹ್ಲಿ ಮತ್ತು ಪಂತ್ ತಮ್ಮ ಹಿಂದಿನ ಫಾರ್ಮ್‌ಗೆ ಮರಳಬೇಕೆಂದು ಅನೇಕ ಮಾಜಿ ಕ್ರಿಕೆಟಿಗರು ಸೂಚಿಸಿದ್ದಾರೆ.

ರಣಜಿ ಟ್ರೋಫಿಯ ಎರಡನೇ ಲೆಗ್‌ಗೆ ರಿಷಭ್ ಪಂತ್ ಲಭ್ಯರಾಗುವುದಾಗಿ ಖಚಿತಪಡಿಸಿದ್ದಾರೆ. ಆದರೆ ಕೊಹ್ಲಿ ಇದುವರೆಗೂ ತಮ್ಮ ನಿರ್ಧಾರವನ್ನು ತಿಳಿಸಿಲ್ಲ. ಇದನ್ನು ಡಿಡಿಸಿಎ ಕಾರ್ಯದರ್ಶಿ ಅಶೋಕ್ ಶರ್ಮಾ ಅವರೇ ಬಹಿರಂಗಪಡಿಸಿದ್ದಾರೆ.

ನಾಯಕನಾಗಿ ರಿಷಭ್ ಪಂತ್ ಆಯ್ಕೆ: ಟೀಮ್ ಇಂಡಿಯಾ ನಾಯಕ ರೋಹಿತ್ ಶರ್ಮಾ ಮುಂಬೈ ಪರ ಆಡಲಿದ್ದಾರೆ ಎಂಬ ಸುದ್ದಿಯ ಹಿನ್ನೆಲೆಯಲ್ಲಿ, ಕೊಹ್ಲಿ ಮುಂಬೈ ಕ್ರಿಕೆಟಿಗರನ್ನು ನೋಡಿ ಕಲಿಯುವುದು ಬಹಳಷ್ಟಿದೆ ಎಂದು ಅಶೋಕ್ ತಿಳಿಸಿದ್ದರು. ಇದೀಗ ಡಿಡಿಸಿಎ ಶುಕ್ರವಾರ ತನ್ನ ತಂಡವನ್ನು ಘೋಷಿಸಲು ಸಿದ್ಧವಾಗಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಿದ ಡಿಡಿಸಿಎ ಅಧಿಕಾರಿಯೊಬ್ಬರು, ಶುಕ್ರವಾರ ಮಧ್ಯಾಹ್ನ ಆಯ್ಕೆ ಸಭೆ ನಡೆಯಲಿದೆ. ಸೌರಾಷ್ಟ್ರ ವಿರುದ್ಧದ ಪಂದ್ಯಕ್ಕೆ ರಿಷಭ್ ಪಂತ್ ನಾಯಕರಾಗುವ ಸಾಧ್ಯತೆಯಿದೆ ಎಂದು ಅವರು ಹೇಳಿದ್ದಾರೆ.

ಇಂಗ್ಲೆಂಡ್ ವಿರುದ್ಧ ಸರಣಿ: ಸೀತಾಂಶು ಬ್ಯಾಟಿಂಗ್ ಕೋಚ್

ದೆಹಲಿ: ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ (ಎನ್‌ಸಿಎ) ಸೀತಾಂಶು ಕೋಟಕ್ ಅವರನ್ನು ಇಂಗ್ಲೆಂಡ್ ವಿರುದ್ಧ ನಡೆಯಲಿರುವ ಸೀಮಿತ ಓವರ್‌ಗಳ ಕ್ರಿಕೆಟ್ ಸರಣಿಯಲ್ಲಿ ಆಡುವ ಭಾರತ ತಂಡಕ್ಕೆ ಬ್ಯಾಟಿಂಗ್ ಕೋಚ್ ಆಗಿ ನೇಮಕ ಮಾಡಲಾಗಿದೆ. ಸೌರಾಷ್ಟ್ರ ಕ್ರಿಕೆಟ್ ತಂಡದ ಮಾಜಿ ಬ್ಯಾಟರ್ ಆಗಿದ್ದ ಸೀತಾಂಶು, ದೀರ್ಘ ಸಮಯದಿಂದ ಎನ್‌ಸಿಎನಲ್ಲಿ ಕೋಚ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. 52 ವರ್ಷದ ಸೀತಾಂಶು ಅವರನ್ನು ನೇಮಕ ಮಾಡಿರುವುದರಿಂದ,

ಪ್ರಸ್ತುತ ಕೋಚ್ ಆಗಿರುವ ಅಭಿಷೇಕ್ ನಾಯರ್ ಅವರನು ಮುಂದುವರಿಸುವ ಬಗ್ಗೆ ಅನುಮಾನಗಳು ಮೂಡಿವೆ. ಇತ್ತೀಚೆಗೆ ಆಸ್ಟ್ರೇಲಿಯಾ ಎದುರು ಟೆಸ್ಟ್ ಸರಣಿ ಸೋತ ನಂತರದ ಬೆಳವಣಿಗೆಯಲ್ಲಿ ಅಭಿಷೇಕ್ ಅವರ ಕಾರ್ಯಕ್ಷಮತೆಯ ಬಗ್ಗೆ ಅವಲೋಕನ ನಡೆಸಲಾಗಿತ್ತು. ಸೀತಾಂಶುರವರು ಭಾರತದ ಸೀನಿಯರ್ ಮತ್ತು ಎ ತಂಡಗಳೊಂದಿಗೆ ಕಳೆದ ಕೆಲವು ವರ್ಷಗಳಿಂದ ಕಾರ್ಯನಿರ್ವಹಿಸಿದ್ದಾರೆ. ಸೀತಾಂಶುರವರು ದೇಶಿ ಕ್ರಿಕೆಟ್‌ನಲ್ಲಿ ಉತ್ತಮ ಬ್ಯಾಟರ್‌ಗಳಲ್ಲಿ ಒಬ್ಬರಾಗಿದ್ದರು. ಎಡಗೈ ಬ್ಯಾಟರ್ ಆಗಿದ್ದ ಅವರು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 8 ಸಾವಿರ ರನ್ ಪೇರಿಸಿದ್ದಾರೆ, ಅದರಲ್ಲಿ 15 ಶತಕಗಳಿವೆ. ಒಟ್ಟು 130 ಇನ್ನಿಂಗ್ಸ್‌ಗಳಲ್ಲಿ ಆಡಿದ್ದಾರೆ.

ಇರಾನ್ ವಿರುದ್ಧ ಏಕಪಕ್ಷೀಯ ಗೆಲುವು | ಗುಂಪಿನಲ್ಲಿ ಭಾರತ ಅಗ್ರಸ್ಥಾನಿ

ವಿಶ್ವಕಪ್ ಖೋಖೋ: ಭಾರತ ಕ್ವಾರ್ಟರ್ ಫೈನಲ್‌ಗೆ

ದೆಹಲಿ: ದಕ್ಷಿಣ ಕೊರಿಯಾ ತಂಡದ ಮೇಲೆ 175-18ರಲ್ಲಿ ಲೀಲಾಜಾಲವಾಗಿ ಜಯ ಗಳಿಸಿದ್ದ ಹುರುಪನ್ನು ಮುಂದುವರಿಸಿರುವ ಫೇವರಿಟ್ ಭಾರತ ಮಹಿಳಾ ತಂಡವು ವಿಶ್ವಕಪ್ ಖೋಖೋ ಟೂರ್ನಿಯ ಪಂದ್ಯದಲ್ಲಿ ಇರಾನ್ ತಂಡದ ವಿರುದ್ಧ 100-16 ಅಂತರದಲ್ಲಿ ಅತ್ಯಮೋಘ ಗೆಲುವನ್ನು ಪಡೆಯಿತಲ್ಲದೆ, ಎಂಟರ ಘಟ್ಟಕ್ಕೆ ಲಗ್ಗೆಯಿಟ್ಟಿತು.

ಇಲ್ಲಿನ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯ ಏಕಪಕ್ಷೀಯವಾಯಿತಲ್ಲದೆ, ಎ-ಗುಂಪಿನಲ್ಲಿ ಭಾರತವು ಅಗ್ರಸ್ಥಾನಿಯಾಯಿತು. ಅತಿಥೇಯರು ಕೇವಲ ಕೇವಲ 33 ಸೆಕೆಂಡುಗಳಲ್ಲಿ ಅಂಕಣದಿಂದ ಇರಾನಿನ ಮೊದಲ ಬ್ಯಾಚ್ ಆಟಗಾರ್ತಿಯರನ್ನು ಖಾಲಿ ಮಾಡಿಸಿತು.

ಅಶ್ವಿನಿ ದಾಳಿಯ ಮುಂಚೂಣಿಯಲ್ಲಿದ್ದರೆ, ಮೀನಾ ಅಮೋಘ ಫಾರ್ಮ್ ಮುಂದುವರಿಸಿ ಹಲವು ಟಚ್ ಪಾಯಿಂಟ್ಸ್ ಕಲೆ ಹಾಕಿ ಭಾರತ ತಂಡ ಒಂದನೇ ಸರದಿಯ ನಂತರ 50 ಪಾಯಿಂಟ್ ಕೂಡಿ ಹಾಕಲು ನೆರವಾದರು. ಉಳಿದ ಮೂರು ಸರದಿಗಳಲ್ಲೂ ಇದೇ ರೀತಿಯ ಆಟ ಮುಂದುವರಿಯಿತು.

ವಝೀರ್ ನಿರ್ಮಲಾ ಅವರ ಚಾಣಾಕ್ಷ್ಯತನ, ನಾಯಕಿ ಪ್ರಿಯಾಂಕ ಇಂಗ್ಲೆ, ನಿರ್ಮಲಾ ಭಾಟಿ ಮತ್ತು ನಕ್ರೀನ ಅವರ ಉಪಯುಕ್ತ ಕೊಡುಗೆಗಳಿಂದ ಭಾರತ ತಂಡವು ಗೆಲುವಿನ ಅಂತರವನ್ನು ಹಿಗ್ಗಿಸುತ್ತಾ ಹೋಯಿತು.

ಪುರುಷರ ತಂಡಕ್ಕೂ ಜಯ

ವಿಶ್ವಕಪ್ ಖೋಖೋ ಪುರುಷರ ವಿಭಾಗದಲ್ಲಿ ಭಾರತ 70-38ರಿಂದ ಪೆರು ತಂಡವನ್ನು ಸುಲಭವಾಗಿ ಸೋಲಿಸಿ, ಯಶಸ್ವಿನ ಓಟವನ್ನು ಮುಂದುವರಿಸಿತು. ಉತ್ತಮ ಹೋರಾಟದ ಇನ್ನೊಂದು ಪಂದ್ಯದಲ್ಲಿ ದಕ್ಷಿಣ ಕೊರಿಯಾ ತಂಡವು 50-44ರಿಂದ ಮಲೇಷ್ಯಾ ತಂಡವನ್ನು ಮಣಿಸಿ ತನ್ನ ಗೆಲುವಿನ ಅಭಿಯಾನವನ್ನು ಮುಂದುವರಿಸಿದೆ.

ಪಂದ್ಯದ ಉತ್ತಮ ದಾಳಿಗಾರ್ತಿಯಾಗಿ ಮೊಬಿನಾ, ರಕ್ಷಣೆ ಆಟಗಾರ್ತಿಯಾಗಿ ಮೀನಾ, ಪಂದ್ಯ ಆಟಗಾರ್ತಿಯಾಗಿ ಪ್ರಿಯಾಂಕ ಇಂಗ್ಲೆ ವೈಯಕ್ತಿಕ ಪುರಸ್ಕಾರಗಳನ್ನು ಪಡೆದರು.

ಇನ್ನೊಂದು ಪಂದ್ಯದಲ್ಲಿ ನೇಪಾಳ ತಂಡವು 134-8ರಿಂದ ಬ್ರೆಜಿಲ್ ತಂಡವನ್ನು ಸೋಲಿಸಿತು.

ಡಬ್ಲ್ಯೂಪಿಎಲ್: ಆರ್‌ಸಿಬಿ ತಂಡ ಮೊಲಿನೆಕ್ಸ್ ಜಾಗಕ್ಕೆ ಚಾರ್ಲಿ ಡೀನ್

ದೆಹಲಿ: ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿ ಎಲ್-2025) ಆರಂಭಕ್ಕೂ ಮೊದಲೇ ಆಸ್ಟ್ರೇಲಿಯಾದ ಆಲ್‌ರೌಂಡರ್

ಸೋಫಿ ಮೊಲಿನೆಕ್ಸ್ ರಾಯಲ್‌ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದಿಂದ ಹೊರಬಿದ್ದಿದ್ದಾರೆ. ಮೊಣಕಾಲಿನ ಗಾಯ ದಿಂದಾಗಿ ಮೋಲಿನೆಕ್ಸ್ ಐಪಿಎಲ್-2025 ಆವೃತ್ತಿಯಿಂದ ಹೊರಗುಳಿಯಲಿದ್ದಾರೆ. ಇದೀಗ ಅವರ ಸ್ಥಾನಕ್ಕೆ ಬದಲಿ ಪ್ಲೇಯರ್ ಆಗಿ ಇಂಗ್ಲೆಂಡ್‌ನ ಆಲ್‌ರೌಂಡರ್ ಚಾರ್ಲಿ ಡೀನ್ ಅವರನ್ನು ತಂಡಕ್ಕೆ ಆಯ್ಕೆ ಮಾಡಲಾಗಿದೆ. ಆರ್‌ಸಿಬಿ ತಂಡವು ಡೀನ್ ಅವರನ್ನು 30 ಲಕ್ಷಕ್ಕೆ ರು.ಗೆ ಖರೀದಿಸಿದೆ ಎಂದು ಸ್ವತಃ ಆರ್‌ಸಿಬಿ ಬಹಿರಂಗ ಪಡಿಸಿದೆ

ಮೊಲಿನೆಕ್ಸ್: ಎಡಗೈ ಆಫ್-ಸ್ಪಿನ್ ಬೌಲರ್ ಆಗಿರುವ ಮೊಲಿನೆಕ್ಸ್ ಆಸ್ಟ್ರೇಲಿಯಾ ಪರ ಒಟ್ಟು 44 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ. ಇದರಲ್ಲಿ 3 ಟೆಸ್ಟ್, 13 ಏಕದಿನ ಮತ್ತು 28 ಟಿ- 20 ಪಂದ್ಯಗಳು ಒಳಗೊಂಡಿದದೆ.

ಈ ಅವಧಿಯಲ್ಲಿ ಒಟ್ಟು 71 ವಿಕೆಟ್‌ಗಳನ್ನು ಪಡೆದಿದ್ದಾರೆ. ಇದರಲ್ಲಿ ಟೆಸ್ಟ್ ನಲ್ಲಿ 7, ಏಕದಿನದಲ್ಲಿ 23 ಮತ್ತು ಟಿ-20 ಗಳಲ್ಲಿ 41 ವಿಕೆಟ್ ಉರುಳಿಸಿದ್ದಾರೆ.

ಚಾರ್ಲಿ ಡೀನ್: ಬಲಗೈ ಬ್ಯಾಟರ್, ಆಲ್‌ರೌಂಡರ್ ಆಗಿರುವ ಚಾರ್ಲಿ ಡೀನ್, ಇಂಗ್ಲೆಂಡ್ ಪರ 78 ಪಂದ್ಯಗಳನ್ನು ಆಡಿದ್ದಾರೆ. ಇದರಲ್ಲಿ 3 ಟೆಸ್ಟ್, 39 ಏಕದಿನ ಮತ್ತು 36 ಟಿ20 ಪಂದ್ಯಗಳನ್ನು ಆಡಿದ್ದಾರೆ.

ಈ ಅವಧಿಯಲ್ಲಿ ಅವರು ಒಟ್ಟು 122 ವಿಕೆಟ್‌ಗಳನ್ನು ಪಡೆದಿದ್ದಾರೆ. ಟೆಸ್ಟ್‌ನಲ್ಲಿ 7, ಏಕದಿನಗಳಲ್ಲಿ 69 ಮತ್ತು ಟಿ-20ಗಳಲ್ಲಿ 46 ವಿಕೆಟ್‌ಗಳನ್ನು ಕಬಳಿಸಿದ್ದಾರೆ.



> ಸಂಜು ವೆಡ್ಸ್ ಗೀತ 2 ಈ ವಾರ ಕರ್ನಾಟಕದಲ್ಲಿ ಮಾತ್ರ ಬಿಡುಗಡೆ ಮಾಡುತ್ತಿದ್ದೇವೆ. ಮುಂದಿನ ವಾರ ವಿದೇಶಗಳಲ್ಲಿಯೂ ರಿಲೀಸ್ ಆಗಲಿದೆ. ಮೊದಲ ಭಾಗಕ್ಕಿಂತಲೂ ಅದ್ಭುತವಾಗಿ ಸಿನಿಮಾ ಮೂಡಿಬಂದಿದೆ. ಚಿತ್ರದ ಕಥೆ ಎಲ್ಲರಿಗೂ ಕನೆಕ್ಟ್ ಆಗಲಿದೆ, ಹಿಡಿಸಲಿದೆ. ಶಿಡ್ಲಘಟ್ಟದಿಂದ ಆರಂಭವಾಗುವ ಈ ಸ್ಟೋರಿ ಸ್ವಿಟ್ಜರ್‌ಲ್ಯಾಂಡ್ ವರೆಗೂ ಸಾಗುತ್ತದೆ.
>
> -ನಾಗಶೇಖರ್ ನಿರ್ದೇಶಕ

ರೇಷ್ಮೆ ಬೆಳೆಗಾರನ ಸುಂದರ ಪ್ರೇಮಕಥನ

ಹತ್ತು ವರ್ಷಗಳ ಹಿಂದೆ ತೆರೆಗೆ ಬಂದ ಸಂಜು ವೆಡ್ಸ್ ಗೀತ ನವಿರಾದ ಪ್ರೇಮಕಥೆಯನ್ನು ಹೊತ್ತುಬಂದಿತ್ತು. ಆ ಚಿತ್ರದ ಯಶಸ್ಸಿನ ಖುಷಿಯಲ್ಲಿ ಈಗ ಸಂಜು ವೆಡ್ಸ್ ಗೀತ 2 ನಿರ್ಮಾಣವಾಗಿದ್ದು, ಅದ್ದೂರಿಯಾಗಿ ತೆರೆಗೆ ಬಂದಿದೆ.

ಇಲ್ಲಿಯೂ ನವಿರಾದ ಪ್ರೇಮಕಥೆಯಿದೆ. ಅದಕ್ಕಿಂತ ಮಿಗಿಲಾಗಿ ರೇಷ್ಮೆ ಬೆಳೆಗಾರರ ಹೋರಾಟದ ರೋಚಕ ಕಥೆಯೂ ಬೆರೆತಿದೆ. ನಿರ್ದೇಶಕ ನಾಗಶೇಖರ್ ಈ ಚಿತ್ರಕ್ಕೂ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಶಿಡ್ಲಘಟ್ಟದ ರೇಷ್ಮೆ ಬೆಳೆಗಾರರ ಹೋರಾಟದ ಕಥೆ ಇಲ್ಲಿದ್ದು, ಅದು ಸ್ವಿಟ್ಜರ್‌ಲ್ಯಾಂಡ್‌ವರೆಗೂ ಸಾಗುತ್ತದೆ.

ಈ ಚಿತ್ರದಲ್ಲಿಯೂ ಶ್ರೀನಗರ ಕಿಟ್ಟಿ ನಾಯಕನಾಗಿ ನಟಿಸಿದ್ದು, ರೇಷ್ಮೆ ಬೆಳೆಗಾರನಾಗಿ ಕಾಣಿಸಿಕೊಂಡಿದ್ದಾರೆ. ಕಿಟ್ಟಿಯ ಲುಕ್ ಕೂಡ ಬಲು ವಿಭಿನ್ನವಾಗಿದೆ. ಇಲ್ಲಿ ರಮ್ಯಾ ಬದಲು ರಚ್ಚು ನಾಯಕಿಯಾಗಿ ನಟಿಸಿದ್ದಾರೆ. ಕಿಟ್ಟಿ ಲವ್, ಎಮೋಷನ್ಸ್ ಹೀಗೆ ಎಲ್ಲದರಲ್ಲೂ ಗಮನಸೆಳೆಯುತ್ತಾರೆ.ನಾಯಕಿಯ ಪಾತ್ರಕ್ಕೆ ಸಾಕಷ್ಟು ಸ್ಪೇಸ್ ಇದ್ದು ರಚಿತಾ ಮುದ್ದಾಗಿ ಕಂಗೊಳಿಸಿದ್ದಾರೆ. ಈ ಹಿಂದಿನ ಸಿನಿಮಾಗಳಿಗೆ ಹೋಲಿಸಿದರೆ ರಚ್ಚುಗೆ ಇಲ್ಲಿ ವಿಭಿನ್ನವಾದ ಪಾತ್ರವೇ ಸಿಕ್ಕಿದೆ. ಹಾಗಾಗಿ ಈ ಸಿನಿಮಾ ರಚಿತಾಗೆ ಬ್ರೇಕ್ ನೀಡುವುದು ಖಚಿತವಾಗಿದೆ. ಸಂಜು ವೆಡ್ಸ್ ಗೀತ 2 ಚಿತ್ರವೂ ಕೂಡ ಸುಂದರ ಹಾಡುಗಳ ಮೂಲಕವೇ ಸಿನಿಪ್ರಿಯರ ಮನಗೆದ್ದಿದೆ. ಕವಿರಾಜ್ ಸಾಹಿತ್ಯದಲ್ಲಿ ಮೂಡಿಬಂದಿರುವ ಹಾಡುಗಳು ಕೇಳಲು ಇಂಪಾಗಿವೆ. ವಿಶ್ಯುಯೆಲ್ ಟ್ರೀಟ್‌ಮೆಂಟ್, ಸಿನಿಮಾದ ಹೈಲೈಟ್ ಆಗಿದ್ದು, ಸತ್ಯ ಹೆಗ್ಡೆ ಅವರ ಅದ್ಭುತವಾದ ಛಾಯಾಗ್ರಹಣ ಪ್ರೇಕ್ಷಕರ ಮನಸೂರೆಗೊಳ್ಳುತ್ತದೆ.

> ಒಳ್ಳೆಯ ಸಿನಿಮಾ ನಿರ್ಮಾಣ ಮಾಡಿದ ಖುಷಿಯಿದೆ. ಮನರಂಜನೆಯ ಜತೆಗೆ ರೈತರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಮಾಡಲಾಗಿದೆ. ಸಂಜು ವೆಡ್ಸ್ ಗೀತ 2 ಅದ್ಭುತ ದೃಶ್ಯ ಕಾವ್ಯದ ಸಿನಿಮಾವಾಗಿದೆ.
>
> -ಚಲವಾದಿ ಕುಮಾರ್ ನಿರ್ಮಾಪಕ

ಬಲರಾಮನ ಬಳಗಕ್ಕೆ ಅತುಲ್

ಆ ದಿನಗಳು ಖ್ಯಾತಿಯ ಕೆ.ಎಂ. ಚೈತನ್ಯ ನಿರ್ದೇಶನದಲ್ಲಿ ಸಿದ್ಧವಾಗುತ್ತಿರುವ ಬಲರಾಮನ ದಿನಗಳು ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದೆ. ಮರಿ ಟೈಗರ್ ವಿನೋದ್ ಪ್ರಭಾಕರ್ ನಾಯಕರಾಗಿ ನಟಿಸುತ್ತಿರುವ ಬಲರಾಮನ ದಿನಗಳು ಚಿತ್ರದ ಶೂಟಿಂಗ್ ಮೈಸೂರಿನ ಸುತ್ತಮುತ್ತ ನಡೆಯುತ್ತಿದೆ. ಈಗ ಬಹುಭಾಷಾ ನಟ ಅತುಲ್ ಕುಲಕರ್ಣಿ, ಬಲರಾಮನ ಬಳಗ ಸೇರಿದ್ದು, ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಕನ್ನಡ, ತೆಲುಗು, ತಮಿಳು, ಹಿಂದಿ, ಮಲೆಯಾಳಂ, ಮರಾಠಿ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ನಟಿಸಿರುವ ಅತುಲ್ ಕುಲಕರ್ಣಿ, ಬಲರಾಮನ ತಂಡ ಸೇರಿರುವುದು ಚಿತ್ರದ ಬಗ್ಗೆ ಮತ್ತಷ್ಟು ಕುತೂಹಲ ಹೆಚ್ಚಲು ಕಾರಣವಾಗಿದೆ. ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಚಿತ್ರತಂಡ ಅತುಲ್ ಕುಲಕರ್ಣಿ ಅವರಿಗೆ ಸ್ವಾಗತ ಕೋರಿದೆ. ವಿನೋದ್ ಪ್ರಭಾಕರ್‌ಗೆ ನಾಯಕಿಯಾಗಿ ಪ್ರಿಯಾ ಆನಂದ್ ಬಣ್ಣಹಚ್ಚುತ್ತಿದ್ದಾರೆ. ಬಲರಾಮನ ದಿನಗಳು ಎಂಬತ್ತರ ಕಾಲಘಟ್ಟದ ಕಥೆಯಾಗಿದ್ದು, ಅಂಡರ್‌ವರ್ಲ್ಡ್ ಸ್ಟೋರಿ ಇಲ್ಲಿದೆ. ಖ್ಯಾತ ಸಂಗೀತ ನಿರ್ದೇಶಕ ಸಂತೋಷ್ ನಾರಾಯಣನ್ ಚಿತ್ರಕ್ಕೆ ಸಂಗೀತ ಸಂಯೋಜಿಸುತ್ತಿದ್ದಾರೆ. ಪದ್ಮಾವತಿ ಫಿಲಂಸ್ ಲಾಂಛನದಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ನಿರ್ಮಾಣ ಮಾಡುತ್ತಿದ್ದಾರೆ.